ಶ್ರೀ ಎಂ, ಎಸ್. ಕೃಷ್ಣನ್ :— ನನಗೆ ಈ ಸಂದರ್ಭದಲ್ಲಿ ಹುಬ್ಬಳ್ಳಿಯಿಂದ ಟೆಲಿಗ್ರಾಂ ಬಂದಿದೆ. ಪೋಲೀಸಿನವರು ಕೆಲವು ಕಡೆ ಲಾಟಿ ಚಾರ್ಜ್ ಮಾಡಿರುವುದಲ್ಲದೆ, ವಿದ್ಯಾರ್ಥಿಗಳ ಹಾಸ್ಟಲ್ಲಿನಲ್ಲಿ ನುಗ್ಗಿ ಹೊಡೆದಿದ್ದಾರೆ. ಆದರ ಪರಿಣಾಮವಾಗಿ ಸಂಗನಗೌಡ ಎನ್ನುವನು ಮೃತನಾದನು ಎಂದು ವರದಿ ಬಂದಿದೆ. ದಯವಿಟ್ಟು ಇದನ್ನು ಪುನಃ ತನಿಖೆ ಮಾಡುತ್ತೀರಾ ?

ಶ್ರೀ ವೀರೇಂದ್ರ, ಪಾಟೀಲ್ :— ಈ ಕಡೆಯಲ್ಲಿರುವ ಮಾನ್ಯ ಸದಸ್ಯರಾದ ಅಗ್ನಿಹೋತ್ರಿ, ಬೊಮ್ಮಾಯಿ ಮತ್ತು ದಾಸನಕೊಪ್ಪ ಮೊದಲಾದವರು ನಾಲ್ಕೈದು ದಿವಸಗಳ ಹಿಂದೆ ಒಬ್ಬ ಹುಡುಗನನ್ನು ಪೋಲೀಸರು ಲಾಟಿಯಿಂದ ಬಡಿದುದರಿಂದ ಸತ್ತುಹೋಗಿದ್ದಾನೆ ಎಂದು ವರ್ತಮಾನ ಕೊಟ್ಟರು. ನಾನು ಈ ಬಗ್ಗೆ ಎಷ್ಟು ಸಾಧ್ಯವೋ ಅಷ್ಟು ಇನ್‌ಫರ್‌ಮೇಷನ್ ಕಲೆಕ್ಟ್‌ಮಾಡುತ್ತಿದ್ದೇನೆ. ಕರ್ಣಾಟಕ ಯೂನಿವರ್ಸಿಟಿಯಲ್ಲಿ ಸಂಗನಗೌಡ ಎನ್ನುವ ವಿದ್ಯಾರ್ಥಿ ಓದುತ್ತಿದ್ದಾನೆಯೋ ಎಂದು ರಾಯಚೂರು ಎಸ್. ಪಿ. ಅವರನ್ನು ಕೇಳಿದ್ದೇನೆ. ಧಾರವಾಡ್ ಎಸ್. ಪಿ. ಅವರನ್ನು ಕೂಡ ವಿಚಾರಿಸಿ ಎಂದು ಹೇಳಿದ್ದೇನೆ ಕೆ. ಎಂ. ಸಿ. ಹಾಸ್ಪಿಟಲಿನಲ್ಲಿರುವವರನ್ನು ಯಾರಾದರೂ ಹುಡುಗ ಬಡಿದು ಇನಜೂರಿ ಆಗಿ ಸತ್ತಿದ್ದಾನೆಯೇ ಎಂದು ಕೇಳಿದ್ದೇವೆ. ಎಲ್ಲಾ ಕಡೆಯೂ ವಿಚಾರಿಸಿದ್ದೇವೆ. ರಾಯಚೂರು ಎಸ್. ಪಿ. ಯವರು ಆ ರೀತಿ ಸಂಗನಗೌಡ ಎನ್ನುವವನು ಇಲ್ಲವೆಂದು ಹೇಳಿದ್ದಾರೆ. ಭಾನಾಪುರ ಎಲಬುರ್ಗಿಯಲ್ಲಿರಬೇಕು ಎಂದು ಅನ್ನಿಸುತ್ತದೆ. ಆ ಹುಡುಗ ಫಸ್ಟ್ ಮಾರ್ಚಿನಿಂದ ಮಾರ್ಚಿ ೮ರವರೆಗೆ ಭಾನಾಪುರ ಜಿಲ್ಲೆಯಲ್ಲಿದ್ದಾನೆ. ಆತನು ಸಿರೂರು ವಿಲೇಜ್‌ನವನು, ಕಾಟನ್ ಜಿನ್ನಿಂಗ್ ಮಿಲ್ ಓನರ್ ಅಳಿಯ, ಮತ್ತು ಆತನು ಜವಳಿ ಬಿಲ್ಡಿಂಗ್‌ನಲ್ಲಿಯೇ ಇರುತ್ತಾನೆ ಎಂದು ಎಸ್. ಪಿ. ಅವರಿಂದ ರಿಪೋರ್ಟ್ ಬಂದಿದೆ. ಅವನು ಸತ್ತಿಲ್ಲ, ಹೇಲ್ ಅಂಡ ಹೆಲ್ತಿಯಾಗಿ ಇದ್ದಾನೆ ಎಂದು ಹೇಳಿದ್ದಾರೆ. ಮಾನ್ಯ ಸದಸ್ಯರು ಸತ್ತು ಹೋಗಿದ್ದಾನೆ ಎಂದು ಹೇಳುತ್ತಿದ್ದಾರೆ. ಆದರೆ ನಾನು ವಿಚಾರಿಸಿದಲ್ಲಿ ಯಾರೂ ಸತ್ತು ಹೋಗಿಲ್ಲ ಮತ್ತು ಮಾನ್ಯ ಸದಸ್ಯರು ಹೇಳಿದಂಥ ವಿದ್ಯಾರ್ಥಿ ಹೆಲ್ತಿಯಾಗಿ ಓಡಾಡಿಕೊಂಡಿದ್ದಾನೆ ಎಂದು ರಿಪೋರ್ಟ್ ಬಂದಿದೆ. ಇದರದ್ದು ಏನಾದರೂ ಡೀಟೇಲ್ಸ್ ಇದ್ದರೆ ಅದನ್ನು ಕೊಟ್ಟರೆ ನಾನು ವೆರಿಫೈ ಮಾಡುವುದಕ್ಕೆ ತಯಾರಿದ್ದೇನೆ.

SRI M. NAGAPPA :— I will furnish the information.

ಶ್ರೀ ವೀರೇಂದ್ರ ಪಾಟೀಲ್:—ನಾನು ಆಗಲೇ ಉತ್ತರ ಹೇಳಿದ್ದೇನೆ. ವೆರಿಫೈ ಮಾಡಿಸುವುದಕ್ಕೆ ತಯಾರಿದ್ದೇನೆ ಎಂದು. ಇಲ್ಲಿಯವರೆಗೆ ಯಾವ ತರಹ ವರ್ತಮಾನವೂ ಸಿಕ್ಕಿಲ್ಲ ಒಂದುವೇಳೆ ತಮ್ಮ ಹತ್ತಿರ ವರ್ತಮಾನ ಏನಾದರೂ ಇದ್ದರೆ ಅದನ್ನು ನನಗೆ ಕಳುಹಿಸಿಕೊಟ್ಟರೆ ಮತ್ತೆ ವೆರಿಫಿಕೇಷನ್ ಮಾಡಿ ಉತ್ತರ ಕೊಡುತ್ತೇನೆ.

BUDGET ESTIMTAES FOR 1970-71-DEMANDS FOR GRANTS

Demand No. 20, 22, 38 and 51 (Debate Contd) –

†ಶ್ರೀ ಹೆಚ್. ಎನ್. ನಂಜೇಗೌಡ, ಅರಕಲ್‌ಗೂಡು) —. ಮಾನ್ಯ ಅಧ್ಯಕ್ಷರೇ, ಈ ಹೊತ್ತು ನಮ್ಮ ಮುಂದೆ ಇಟ್ಟಿರತಕ್ಕ ಡಿಮ್ಯಾಂಡುಗಳ ಬಗ್ಗೆ ನನ್ನ ಕೆಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸಬೇಕೆಂದು ನಿಂತಿದ್ದೇನೆ. ರೈತರಿಗೆ ಕನಿಷ್ಟ ಆಗಬೇಕಾದ ಕಾರ್ಯಕ್ರಮಗಳು ಏನು ಎನ್ನುವುದನ್ನು ಈ ಸಭೆಯಲ್ಲಿ ಸೂಚನೆ ಕೊಡುವುದಕ್ಕೆ ಇಷ್ಟಪಡುತ್ತೇನೆ ಮತ್ತು ಆ ಕಾರ್ಯಕ್ರಮವನ್ನು ಸೌಜನ್ಯದಿಂದ ಪರಿಶೀಲಿಸಬೇಕೆಂದು ಪ್ರಪಂಚದಲ್ಲಿ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಟರ್ಫಲೈಜರ್ಸ್ ಮತ್ತು ಇನಸೆಕ್ಟಿಸೈಡ್ಸ್‌ನ ರೇಟು ನಮ್ಮ ದೇಶದಲ್ಲಿ ಇರುವಷ್ಟು ಎಲ್ಲಿಯೂ ಇಲ್ಲ ಎಂದು ನಾನು ಅರ್ಥಮಾಡಿಕೊಂಡಿದ್ದೇನೆ. ಇವುಗಳ ರೇಟನ್ನು ಸಬ್ಸಿಡಿಮಾಡಿಯೋ ಅಥವಾ ಇನ್ನಾವ ರೀತಿಯಲ್ಲಿಯೋ ಇಳಿಸದೇ ಹೋದರೆ ರೈತರಿಗೆ ಅನುಕೂಲವಾಗುವುದಿಲ್ಲ. ಫರ್ಟಿಲೈಜರ್ಸ್ ಮತ್ತು ಇನ್‌ಸೆಕ್ಟಿಸೈಡ್ಸ್ ಸಕಾಲದಲ್ಲಿ ರೈತರಿಗೆ ಸಿಕ್ಕದೆ ಬಹಳ ತೊಂದರೆ ಆಗಿದೆ. ಈಹೊತ್ತು ಕೇವಲ ಆಗ್ರಿಕಲ್‌ಚರಲ್ ಪ್ರಾಡ್ಯೂಸ್ ಸೊಸೈಟಿಗಳು ಏನಿವೆ ಅವುಗಳ ಮುಖಾಂತರ ರೈತರಿಗೆ ಗೊಬ್ಬರ ತಲುಪುವ ಏರ್ಪಾಡು ಮಾಡಿದ್ದಾರೆ. ಕೊ-ಅಪರೇಟೀವ್ ಸೊಸೈಟೀಸ್ ಡಿಫಾಲ್ಟರ್ಸ್ ಆದರೆ ಆಗ ಹಳ್ಳಿಗಳಲ್ಲಿರುವ ರೈತರಿಗೆ ಅಗ್ರಿಕಲ್‌ಚರಲ್ ಮಾರ್ಕೆಟಿಂಗ್ ಸೊಸೈಟಿಯವರು ಗೊಬ್ಬರ ತೆಗೆದುಕೊಂಡು ಹೋಗುವಹಾಗಿಲ್ಲ ಮತ್ತು ರೀಟೇಲ್ ಆಗಿ ಗೊಬ್ಬರವನ್ನು ರೈತರಿಗೆ ಕೊಡುವಹಾಗಿಲ್ಲ. ಹೀಗಾಗಿ ಗೊಬ್ಬರ ಮತ್ತು ಇನಸೆಕ್ಟಿಸೈಡ್ ರೈತರಿಗೆ ತಲುಪುವುದಕ್ಕೆ ತೊಂದರೆ ಆಗಿದೆ. ಆದುದರಿಂದ ಈ ಸಹಕಾರ ಇಲಾಖೆಗೆ ಸರ್ವಿಸ

ಕೊ-ಆಪರೇಟೀವ್ ಸೊಸೈಟಿಗಳನ್ನು ಮತ್ತು ತಾಲ್ಲೂಕು ಅಗ್ರಿಕಲಚರಲ್ ಸೊಸೈಟಿಗಳನ್ನು ಟಾಗಾನ್ ಮಾಡಿ ರೈತರಿಗೆ ಗೊಬ್ಬರವನ್ನು ತಲುಪಿಸಬೇಕು. ಈಗೀಗ ಗ್ರಾಮ ಸುಧಾರಕರ ತಂಡ ಎಲ್ಲೆಲ್ಲಿಯೂ ಇದೆ. ಅವರು ಬೀದಿ ಬೀದಿಗಳಲ್ಲಿ ಇಸ್ಪೀಟುಗಳನ್ನು ಆಡುತ್ತಿರುತ್ತಾರೆ. ಆದುದರಿಂದ ಅವರ ಸಹಾಯವನ್ನು ಪಡೆದು ಇನ್‌ಸೆಕ್ಟಿಸೈಡ್ಸ್ ಮತ್ತು ಫರ್ಟಿಲೈಜರ್ಸ್ ರೈತರಿಗೆ ತಲುಪುವಹಾಗೆ ಮಾಡಬೇಕು. ಇಲ್ಲದಿದ್ದರೆ ರೈತರಿಗೆ ತೊಂದರೆಯಾಗುತ್ತದೆ. ಇನ್ನು ಸೀಡ್ಸ್ ವಿಷಯ ಸಭೆಯ ಗಮನಕ್ಕೆ ತರಬೇಕೆಂದಿದ್ದೇನೆ. ಈಗ ಹೈ ಈಲ್ಡನ್ ವೆರೈಟಿ ಸೀಡ್ಸ್ ಸಪ್ಲೈ ಮಾಡುತ್ತಿದ್ದಾರೆ. ಹೈಈಲ್ಡಂಡ್‌ಮೇಜ್ ಬೆಂಗಳೂರಿನಲ್ಲಿ ೧೮ ರೂಪಾಯಿಗೆ ಸಿಕ್ಕುತ್ತದೆ. ಅದೇ ಹೈಬ್ರಿಡ್ ಮೇಜ ಸೊಸೈಟಿಯಲ್ಲಿ ೨೪ ೧/೨ರೂಪಾಯಿಗಳಷ್ಟು ಇದೆ, ಅಂದರೆ ಒಂದು ಕ್ವಿಂಟಾಲಿಗೆ ಮೂರು ರೂಪಾಯಿ ಜಾಸ್ತಿ ಆಯಿತು. ಅದು ಸರಿಯಲ್ಲ. ಕ್ವಾಲಿಟಿ ಬಗ್ಗೆ ನ್ಯಾಷನಲ ಸೀಡ್ ಕಾರ್ಪೋರೇಷನನ್ನಿವರು ಸರ್ಟಿಫೈ ಮಾಡಿ ಇದು ಸರಿಯಾಗಿ ಜರ್ಮಿನೇಷನ್ ಆಗುತ್ತದೆ ಉಪಯೋಗಿಸಬಹುದು ಎಂದು ಹೇಳುತ್ತಾರೆ. ಆದರೆ ಅದು ಬರೀ ಬೋಗಸ್ ಸರ್ಟಿಫಿಕೇಟ್ ಅಗ್ರಿಕಲಚರಲ್ ಸೊಸೈಟಿಗಳ ಮುಖಾಂತರ, ಅಗ್ರಿಕಲಚರಲ್ ಡಿಪಾರ್ಟಮೆಂಟ್ ಮುಖಾಂತರ ಪೆರಿಯಾ ಪಟ್ಟಣ, ಹುಣಸೂರು ಮತ್ತು ಅಕ್ಕಪಕ್ಕದ ತಾಲ್ಲೂಕಿನಲ್ಲಿ ಈ ರೀತಿ ಅಗ್ರಿಕಲಚರಲ್ ಸೊಸೈಟಿಗಳ ಮುಖಾಂತರ ಕೊಂಡುಕೊಂಡ ಸೀಡ್ಸ್ ಫೆಲ್ಯೂರ ಆಗಿದೆ ಇದರಿಂದ ರೈತರಿಗೆ ಅನೇಕ ವಿಧವಾದ ನಷ್ಟವಾಗಿದೆ ನ್ಯಾಷನಲ್ ಸೀಡ್ಸ್ ಕಾರ್ಪೋರೇಷನ್‌ನ್ನಿನವರು ಕೊಟ್ಟ ಈ ಬೋಗಸ್ ಸರ್ಟಿಫಿಕೇಟ್‌ನಿಂದ ರಾಜ್ಯದಲ್ಲಿ ಹೈಬ್ರಿಡ್ ಸೀಡ್ಸ್ ಸರಿಯಾಗಿ ಉತ್ಪತ್ತಿ ಆಗದೆ ರೈತರಿಗೆ ಲಕ್ಷಾಂತರ ರೂಪಾಯಿಗಳು ನಷ್ಟವಾಗಿದೆ ನಾನು ಅದನ್ನು ಪ್ರತ್ಯಕ್ಷವಾಗಿ ನೋಡಿದ್ದೇನೆ. ಆದುದರಿಂದ ಇವನ್ನು ಸರಿಯಾದ ಹದ್ದುಬಸ್ತಿನಲ್ಲಿ ಇಟ್ಟುಕೊಳ್ಳ ಬೇಕು. ಹೀಗೆ ಬೋಗಸ್ ಸರ್ಟಿಫಿಕೇಟ್ ಕೊಡದಹಾಗೆ ಸರಕಾರದವರು ಕ್ರಮ ಕೈಗೊಳ್ಳುತ್ತಾರೆಂದು ನಾನು ನಿರೀಕ್ಷೆಮಾಡುತ್ತೇನೆ.

ಸೊಸೈಟಿ ಮುಖಾಂತರ ರೈತರಿಗೆ ಗೊಬ್ಬರ ಬರಬೇಕು; ಬೀಜ ಬರಬೇಕು, ಸೊಸೈಟಿಯವರೇನಾದರೂ ಡಿಫಾಲ್ಟರ್ಸ್ ಆದರೆ ಅದೂ ಕೂಡ ಬರುವ ಹಾಗಿಲ್ಲ. ಇದಕ್ಕೆ ನಾನು ಹೇಳುವುದೇನೆಂದರೆ ಎರಡು ಗಂಡಂದಿರು ಬೇಡ, ನೇರವಾಗಿ ಒಬ್ಬರಿಂದ ಸಹಾಯ ಒದಗಿಸತಕ್ಕ ವ್ಯವಸ್ಥೆ ಮಾಡಬೇಕು ಎಂಬುದಾಗಿ. ಅಂತೂ ಯಾವುದಾದರೂ ಒಂದು ಕೋ ಆರ್ಡಿನೇಷನ್ ಇಟ್ಟುಕೊಂಡು ಕೆಲಸ ಮಾಡದಿದ್ದರೆ ಅಂತಹ ಸಮಯದಲ್ಲಿ ಈ ಸಮಸ್ಯೆ ಬಗೆಹರಿಸುವುದಕ್ಕೆ ಸರ್ಕಾರದವರು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಸೂಚನೆ ಕೊಡುವುದಕ್ಕೆ ಇಷ್ಟಪಡುತ್ತೇನೆ.

ವಿದ್ಯುಚ್ಛಕ್ತಿಯ ಮೇಲೆ ಶೇಕಡ ೫೦ ರಷ್ಟು ದರ ಹೆಚ್ಚಿಸುತ್ತೇವೆ ಎಂದು ಹಣಕಾಸಿನ ಮಂತ್ರಿಗಳು ಸೂಚನೆ ಮಾಡಿದ್ದಾರೆ. ಮೊದಲು ನಾವು ವಿರೋಧ ಮಾಡಲಿಲ್ಲ, ಆದರೆ ಇದರಿಂದ ರೈತರ ಪರಿಸ್ಥಿತಿ ಏನಾಗುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಹೋದ ಸಾರಿ ಇದೇ ರೀತಿ ಹೆಚ್ಚು ಮಾಡಿದರು. ಇದೇನೆ ತಾವು ರೈತರಿಗೆ ಕೊಡತಕ್ಕ ಇನ್‌ಸೆಂಟೀವು ಅಂತ ನಮ್ಮನ್ನು ಯಾರಾದರೂ ಕೇಳಿದರೆ ನನ್ನ ಹತ್ತಿರ ಯಾವ ಉತ್ತರವೂ ಇಲ್ಲ. ಕಬ್ಬು ಅರೆಯುವವರಿಗೂ ಕೂಡ ಬಹಳ ಕಷ್ಟವಾಗಿದೆ, ಇಷ್ಟು ಯೂನಿಟ್ ಆಗಿದೆ ಅಂತ ಲೆಕ್ಕ ಹಾಕಿ ಅವರಿಗೆ ಟ್ಯಾಕ್ಸ್ ಮಾಡುವುದಾದರೆ ದೇವರೇ ಗತಿ, ಅವರನ್ನು ದೇವರೇ ಕಾಪಾಡಬೇಕಾಗು ತ್ತದೆ. ಪ್ರಜಾಪ್ರಭುತ್ವದಲ್ಲಿ ತಾವು ಇಂತಹ ರೀತಿಯಲ್ಲಿ ಸರ್ಕಾರ ನಡೆಸುವುದಕ್ಕೆ ತಮಗೆ ಹಕ್ಕು ಇರುವುದಿಲ್ಲ ಅಂತ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಅಪ್ಲೈಡ್ ನ್ಯೂಟ್ರಿಷನ್ ಸ್ಕೀಂ ಅಂತ ಏನಿದೆ, ಇದು ರಾಜಕೀಯ ಸ್ಕೀಂ ಆಗುತ್ತಾ ಇದೆ. ಎಲ್ಲಿ ಫ್ಯಾಮಿನ್ ಇದೆ, ತೊಂದರೆಯಾಗುತ್ತಿದೆ, ಎಲ್ಲಿ ಬೆಳೆ ಕಮ್ಮಿಯಾಗಿ ರೈತರು ಕಷ್ಟದಲ್ಲಿ ಇದ್ದಾರೆ, ಆ ತಾಲ್ಲೂಕುಗಳನ್ನು ಬಿಟ್ಟು ನಿಮಗೆ ಬೇಕಾದ ತಾಲ್ಲೂಕುಗಳಲ್ಲಿ ರೈತರಿಗೆ ಈ ಸ್ಕೀಂ ಪ್ರಕಾರ ಸಹಾಯ ಮಾಡುವು ದಾದರೆ, ಇದನ್ನು ದುರುಪಯೋಗ ಮಾಡಿಕೊಂಡ ಹಾಗಾಗುತ್ತದೆ ಎಂದು ಹೇಳುತ್ತೇನೆ.

ಅನಿಮಲ್ ಹಸ್ಬೆಂಡರಿ ಮತ್ತು ವೆಟರ್ನರಿ ವಿಷಯದಲ್ಲಿ ಒಂದು ಮಾತು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ನಮ್ಮಲ್ಲಿ ಬಿಕ್ಷೆ ಬೇಡುವುದೇ ಜಾಸ್ತಿಯಾಗಿದೆ, ಸಬ್ಸಿಡಿಯಿಂದ ಆಗಲಿ, ಫ್ರೀಗ್ರಾಂಟ್‌ನಿಂದ ಆಗಲಿ ಏನೂ ಉಪಯೋಗವಾಗುವುದಿಲ್ಲ. ಕೋಳಿ ತೆಗೆದುಕೊಳ್ಳಿ, ಕುರಿ ತೆಗೆದುಕೊಳ್ಳಿ, ಟಗರು ತೆಗೆದು ಕೊಳ್ಳಿ, ಮತ್ತೆ ಯಾವುದೇ ತೆಗೆದುಕೊಳ್ಳಿ ಇದು ತಾಲ್ಲೂಕು ಬೋರ್ಡು ಅಧ್ಯಕ್ಷರಿಂದ ಪ್ರಾರಂಭವಾಗುತ್ತದೆ. ಇವತ್ತು ಪಂಚಾಯ್ತಿಯಲ್ಲಿ ಕೋಳಿ ಫಾರಂನಲ್ಲಿ ಕೋಳಿ ಸಾಗಾಣಿಕೆ ಮಾಡಿದರೆ ಏನಾಗುತ್ತದೆ ಅಂತ ಅನ್ನು ವುದು ಎಲ್ಲರಿಗೂ ಗೊತ್ತಿರುವ ವಿಚಾರ, ಇದಕ್ಕೆ ಶ್ರೀಮಾನ್ ಶಂಕರರಾವ್ ಅವರು ಗಮನ ಕೊಡುತ್ತಾರೆ ಅಂತ ತಿಳಿದುಕೊಂಡಿದ್ದೇನೆ. ನನಗೆ ಗೊತ್ತಿರುವ ಹಾಗೆ ಈ ಕೋಳಿಗಳನ್ನು ತಿಂದೇ ಪೂರೈಸುತ್ತಾರೆ. ಈ ತರಹ ಸಬ್ಸಿಡೈಸ್ ಮಾಡಿಕೊಡುವುದರಿಂದ ಪ್ರಯೋಜನವಿಲ್ಲ. ಕೊಟ್ಟಿರುವ ಹೋರಿ, ಟಗರು, ಕೋಳಿಗಳ

(ಶ್ರೀ ಹೆಚ್. ಎಸ್. ನಂಜೇಗೌಡ)

ಪೈಕಿ ಶೇಕಡ ಹತ್ತು ಭಾಗ ಕೂಡ ಸರಿಯಾದ ರೀತಿಯಲ್ಲಿ ಉಪಯೋಗವಾಗಿಲ್ಲ. ಬಿಕ್ಷೆ ಕೊಟ್ಟಹಾಗೆ ಕೊಟ್ಟು ಅವನ್ನು ತಿಂದು ಹಾಕುವುದು ಭಾರಿ ದುರ್‌ದೈವದ ಸಂಗತಿ, ಈ ರೀತಿ ಕೊಡುವುದನ್ನು ನಿಲ್ಲಿಸಬೇಕೆಂದು ಹೇಳುತ್ತೇನೆ.

ಇನ್ನು ಈ ಗೋಮಾಳಗಳನ್ನು ರೆವಿನ್ಯೂ ಇಲಾಖೆಯವರು ಡಿಸ್‌ಪೋಸ್ ಮಾಡಬೇಕೆಂದು ಕ್ರಮ ಕೈಕೊಳ್ಳುತ್ತಾ ಇದ್ದಾರೆ, ಇದು ಬಡವನ ಕ್ಯಾಟಲ್ ವೆಲ್ತ್‌ಗೆ ಸಹಾಯಕವಾಗಿ ಹಿಂದಿನಿಂದ ಬಂದಿರುವುದು, ಆದ್ದರಿಂದ ಅನಿಮಲ್ ಹಸ್ಬೆಂಡರಿ ಮಂತ್ರಿಗಳು ಸೂಕ್ತ ಕ್ರಮ ತೆಗೆದುಕೊಂಡು ರೆವಿನ್ಯೂ ಇಲಾಖೆಯವರ ಹಿಡಿತದಿಂದ ಇದನ್ನು ತಪ್ಪಿಸದಿದ್ದರೆ ಬಡ ರೈತರ ಕ್ಯಾಟಲ್ ವೆಲ್ತ್‌ಗೆ ಬಹಳ ಹಾನಿಯಾಗುತ್ತದೆ ಎಂದು ಹೇಳುತ್ತೇನೆ.

ಫಿಷರೀಸ್‌ಗೆ ಕೊಟ್ಟಿರುವ ಹಣ ಬಹಳ ಕಡಿಮೆ, ಮಲ್ಪೆಯಲ್ಲಿ ಒಂದು ಪ್ರಾಜೆಕ್ಟ್ ತಯಾರು ಮಾಡಿದ್ದೀರಿ. ೭-೮ ವರ್ಷಗಳಲ್ಲಿ ಮೀನುಗಳ ಅಭಾವದಿಂದ ಈ ಪ್ರಾಜೆಕ್ಟ್ ಅಂಡರ್ ಯುಟಿಲೈಸ್ ಆಗುತ್ತದೆ ಎಂದು ತಿಳಿದು ಬರುತ್ತಾ ಇದೆ, ಕೋಟ್ಯಾಂತರ ರೂಪಾಯಿಗಳ ಯೋಜನೆ ಮಾಡತಕ್ಕ ಕಾಲದಲ್ಲಿ ಹಣವನ್ನು ಕಣ್ಣುಮುಚ್ಚಿಕೊಂಡು ಹಾಕುವುದು ಬೇಡ, ತಜ್ಞರಿಂದ ಒಂದು ವರದಿಯನ್ನು ತೆಗೆದುಕೊಂಡು ನಮ್ಮ ಫಿಷರೀಸ್ ವೆಲ್ತ್ ಏನಿದೆ ಅದಕ್ಕೆ ತಕ್ಕ ಹಾಗೆ ಒಂದು ಪ್ರಾಜೆಕ್ಟನ್ನು ತಯಾರು ಮಾಡಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರ ಮೂಲಕ ಬಿನ್ನೈಸುತ್ತಾ ಇದ್ದೇನೆ,

ಅನಿಮಲ್ ಪ್ರೊಟೆಕ್ಷನ್ ಬಗ್ಗೆ ಪರದೇಶಗಳಲ್ಲಿ ಯಾವ ರೀತಿ ಪ್ರಚಾರ ಮಾಡುತ್ತಾರೆ ಅದೇ ರೀತಿ ನಮ್ಮ ಎ. ಐ. ಆರ್. ನಲ್ಲೂ ಕೂಡ – ಪ್ರಚಾರ ಮಾಡಿ ರೈತರಿಗೆ ತಿಳಿವಳಿಕೆ ಕೊಡಬೇಕೆಂದು ಹೇಳುತ್ತೇನೆ. ಇಷ್ಟು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ. ಎಸ್. ಗೌಡ.—(ದೇವನಹಳ್ಳಿ) ಮಾನ್ಯ ಸಭಾಪತಿಗಳೇ ಈ ದಿನ ಸಭೆಯ ಮುಂದೆ ಇರುವ ವ್ಯವಸಾಯ ಹಾಗೂ ಇತರ ಇಲಾಖೆಗಳ ಬೇಡಿಕೆಗಳನ್ನು ಸ್ವಾಗತಿಸುತ್ತಾ, ಈ ಎಲ್ಲ ಬೇಡಿಕೆಗಳನ್ನೂ ಅನುಮೋದಿಸುತ್ತೇನೆ. ಹಿಂದಿನ ದಶಕದಲ್ಲಿ ವ್ಯವಸಾಯ ಕ್ಷೇತ್ರ ಎಷ್ಟು ಪ್ರಗತಿಯನ್ನು ಸಾಧಿಸಬೇಕಾಗಿತ್ತೋ ಅಷ್ಟು ಪ್ರಗತಿಯನ್ನು ಸಾಧಿಸದೇ ಹೋದರೂ ಸಹ ಬಹುಶಃ ಈಗ ಸಾಧಿಸಿರತಕ್ಕ ಪ್ರಗತಿ ಅಷ್ಟೇನೂ ಕಡಿಮೆ ಇಲ್ಲ ಎಂಬ ಸಮಾಧಾನವನ್ನು ಪಡುವಂತಹ ವಿಷಯವಾಗಿದೆ. ಇದಕ್ಕೆ ನಿದರ್ಶನ ೧೯೬೬-೬೭ರಲ್ಲಿ ಅಧಿಕ ಇಳುವರಿ ಬೆಳೆಗಳನ್ನು ೧-೬೭ ಲಕ್ಷ ಎಕರೆಗಳಲ್ಲಿ ಬೆಳೆದಿದ್ದಾರೆ, ೬೮-೬೯ರಲ್ಲಿ ೭.೫೯ ಲಕ್ಷ ಎಕರೆಗಳಲ್ಲಿ ಅಧಿಕ ಇಳುವರಿ ಬೆಳೆಗಳನ್ನು ಬೆಳೆದಿದ್ದಾರೆ. ಹಾಗೂ ಇಂದಿನ ಅಂಕಿ ಅಂಶಗಳ ಪ್ರಕಾಗ ರಾಜ್ಯದ ಒಟ್ಟು ಆದಾಯದಲ್ಲಿ ಶೇಕಡ ೬೨ರಷ್ಟು ಗ್ರಾಮಾಂತರ ಪ್ರದೇಶ ಹಾಗೂ ವ್ಯವಸಾಯದಿಂದ ನಮಗೆ ಬರುತ್ತಾ ಇದೆ. ವ್ಯವಸಾಯ ಮತ್ತು ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಯಾಗಿದೆ ಎಂದು ಮಾತನ್ನು ಹೇಳುತ್ತಾ ಸಾಧಿಸಬೇಕಾಗಿದ್ದು ಕೂಡ ಬಹಳ ಇದೆ ಎಂದು ಹೇಳುತ್ತೇನೆ. ಪುರಾತನ ಕಾಲದಿಂದಲೂ ಈ ದೇಶ ವ್ಯವಸಾಯದ ದೇಶ ಅನ್ನುವಂತಹ ಮಾತು ಎಲ್ಲರಿಗೂ ಗೊತ್ತಿದೆ. ಅಸೆಂಬ್ಲಿ ಮತ್ತು ಪಾರ್ಲಿಮೆಂಟುಗಳಲ್ಲಿ ವ್ಯವಸಾಯದ ಪ್ರಗತಿ, ವ್ಯವಸಾಯದಲ್ಲಿ ಸಾಕಾದಷ್ಟು ಅಭಿವೃದ್ಧಿ ಆಗಿಲ್ಲ ಎಂಬ ಮಾತನ್ನು ಎಲ್ಲ ಸದಸ್ಯರೂ ಕೂಡ ಹೇಳುತ್ತಾ ಬಂದಿದ್ದೇವೆ. ಏನು ಇದರಲ್ಲಿ ನ್ಯೂನತೆ ಇದೆಯೋ ತಿಳಿಯದು. ಪ್ರಕೃತಿಯ ದೋಷ ಏನಿದೆಯೋ ಅದನ್ನು ಸರಿಯಾದ ರೀತಿಯಲ್ಲಿ ಸಂಶೋಧನೆ ನಡೆಸಿ ಸೂಕ್ತ ಕ್ರಮ ಕೈಕೊಳ್ಳಲು ಯೋಚನೆ ಮಾಡಬೇಕು. ವ್ಯವಸಾಯಗಾರರಲ್ಲಿ ಹೊಸ ಇಳುವರಿ ಬೆಳೆಗಳನ್ನು ಬೆಳೆಯಬೇಕು ಮತ್ತು ವ್ಯವಸಾಯದಲ್ಲಿ ಅಧಿಕ ಉತ್ಪಾದನೆ ಮಾಡಬೇಕೆಂಬ ಒಂದು ಹೊಸ ಚೈತನ್ಯ, ಕ್ರಿಯಾ ಶಕ್ತಿ ಈಗ ಉಂಟಾಗಿದೆ. ಹತ್ತಾರು ವರ್ಷಗಳ ಕಾಲದಿಂದ ಸಾಧಿಸಿದಂತಹ ಕಾರ್ಯದಿಂದ ಇವತ್ತು ರೈತನಲ್ಲಿ ಇಂತಹ ಒಂದು ಶಕ್ತಿ ಉಂಟಾಗಿದೆ.

2-30 P.M.

ಏನೇ ಆಗಿರಲಿ ಇಂದು ಕೆಲವು ರೈತರಲ್ಲಿ ಚೇತನವಿದೆ, ಅವರಲ್ಲಿರುವ ಚೇತನ ಕ್ರಿಯಾಶಕ್ತಿ ಕುಂಠಿತ ವಾಗಬಾರದು. ಮಳೆ ಬರದಿದ್ದರೆ ಬೆಳೆಯುವುದಕ್ಕಾಗದೆ ರೈತರ ಆರ್ಥಿಕ ಪರಿಸ್ಥಿತಿ ಕುಂಠಿತವಾಗಬಹುದು, ಅದರಿಂದ ದೇಶದ ಆರ್ಥಿಕ ಪರಿಸ್ಥಿತಿಯೂ ಕುಂಠಿತವಾಗಬಹುದು. ಇದನ್ನು ಗಮನಿಸಬೇಕು. ಮತ್ತು ಬೆಲೆ ಇಳಿದು ಹೋದರೆ ಹೆಚ್ಚಾಗಿ ಬೆಳೆಯಬೇಕೆಂಬ ಉತ್ತೇಜನ ರೈತನಿಗೆ ಏನಿದೆ ಅದು ಕುಂಠಿತ ವಾಗುವುದು. ಹಾಗಾದರೆ ಇಡೀ ಸಮಾಜದ ಮತ್ತು ದೇಶದ ಆರ್ಥಿಕ ಪರಿಸ್ಥಿತಿ ಏರುಪೇರಾಗುವುದು

ಇದನ್ನು ಬಹಳ ತೀವ್ರವಾಗಿ ಗಮನಿಸಿ ಇದಕ್ಕೇನು ಮಾಡಬೇಕು ಎಂಬುದನ್ನು ಯೋಚನೆಮಾಡಬೇಕು. ರಾಜ್ಯ ಸರ್ಕಾರ ಮತ್ತು ಕೇಂದ್ರ ಸರಕಾರ ವ್ಯವಸಾಯಕ್ಕೆ ಪ್ರಾಮುಖ್ಯತೆ ಕೊಡುತ್ತಿವೆ. ಆದರೆ ನಮ್ಮ ಸರ್ಕಾರ ವ್ಯವಸಾಯ ಇಲಾಖೆಗೆ ಹೋದ ಸಾರಿ ಕೊಟ್ಟ ಹಣಕ್ಕಿಂತ ಒಂದು ಕೋಟಿ ರೂಪಾಯಿಗಳನ್ನು ಕಡಿಮೆ ಕೊಟ್ಟಿದೆ. ನಮ್ಮಲ್ಲಿ ೪ ವಿಶ್ವವಿದ್ಯಾನಿಲಯಗಳಿವೆ, ಇದರಲ್ಲಿ ವ್ಯವಸಾಯ ವಿಶ್ವವಿದ್ಯಾನಿಲಯವೂ ಸೇರಿದೆ, ಬೇರೆ ೩ ವಿಶ್ವವಿದ್ಯಾನಿಲಯಗಳಿಗೆ ಕೊಟ್ಟಿರುವ ಹಣಕ್ಕಿಂತ ಕಡಿಮೆ ಹಣವನ್ನು ವ್ಯವಸಾಯ ವಿಶ್ವವಿದ್ಯಾನಿಲಯಕ್ಕೆ ಕೊಡಲಾಗಿದೆ. ಹೇಳುವುದಕ್ಕೂ ಮಾಡುವುದಕ್ಕೂ ಹೊಂದಾಣಿಕೆ ಇಲ್ಲ, ದೇಶದಲ್ಲಿ ವ್ಯವಸಾಯ ಮುಂದುವರೆಯಬೇಕು,ವ್ಯವಸಾಯಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕು, ಎಂದು ಹೇಳುವುದಕ್ಕೆ ಅನುಗುಣವಾಗಿ ಕಾರ್ಯರೂಪದಲ್ಲಿ ಮಾಡಲಾಗುತ್ತಿಯೇ ? ಎಟ್ಟು ಮಟ್ಟಿಗೆ ಕಾರ್ಯರೂಪಕ್ಕೆ ತರಲಾಗುತ್ತಿದೆ ಎಂಬುದನ್ನು ಯೋಚನೆಮಾಡಬೇಕು, ಇದು ಬಹಳ ಅವಶ್ಯಕ. ಅಲ್ಲದೆ ವ್ಯವಸಾಯಗಾರರಿಗಿರುವ ನ್ಯೂನತೆಗಳೇನು ಎಂಬುದನ್ನು ಯೋಚನೆಮಾಡಬೇಕಾಗಿದೆ, ಸಮಾಜದ ಎಲ್ಲ ವರ್ಗಗಳಿಗೂ ರಕ್ಷಣೆ ಇದೆ. ಆದರೆ ವ್ಯವಸಾಯಗಾರರಿಗೆ ರಕ್ಷಣೆ ಇಲ್ಲ, ವ್ಯವಸಾಯಕ್ಕೆ ಉತ್ತೇಜನ ಹೆಚ್ಚಬೇಕು, ಹೆಚ್ಚು ಬೆಳೆಯಬೇಕು ಎಂದು ಹೇಳುವಾಗ ಬೆಳೆದಂಥ ಪದಾರ್ಥಗಳಿಗೆ ಸರಿಯಾದ ಬೆಲೆ ದೊರೆಯದಿದ್ದರೆ ಹೇಗೆ ? ಬೆಲೆಯನ್ನು ನಿಯಂತ್ರಣ ಮಾಡಲಾಗಿದೆಯೋ ಎಂಬುದನ್ನು ಸಹಾ ಯೋಚನೆ ಮಾಡಬೇಕು, ವ್ಯವಸಾಯದಲ್ಲಿ ತೊಡಗಿ ಹೆಚ್ಚು ಉತ್ಪತ್ತಿ ಮಾಡುವವರಿಗೆ ಸರಿಯಾದ ಬೆಲೆ ಸಿಗದೆ ಅದನ್ನು ಬಿಟ್ಟು ಕೈಗಾರಿಕೆಯನ್ನವಲಂಬಿಸಬಹುದು ಅಥವಾ ಸರಕಾರಿ ನೌಕರಿ ಹುಡುಕಬಹುದು. ಹಳ್ಳಿಗಾಡಿನಲ್ಲಿ ಈ ಒಂದು ಪರಿಸ್ಥಿತಿ ಬರಬಹುದು. ಕ್ವಿಂಟಾಲಿಗಿಷ್ಟು ಬೆಲೆ ಎಂದು ನಿಗದಿ ಮಾಡದಿದ್ದರೆ, ನಿಯಂತ್ರಣ ಮಾಡದಿದ್ದರೆ ಬೆಳೆಗಾರರು ನಿರಾಶರಾಗಬಹುದು. ಬೇರೆ ಸರಕಾರಗಳು ಈ ದಿಶೆಯಲ್ಲೇನು ಮಾಡಿವೆ ಎಂಬುದನ್ನು ನಮ್ಮ ಸರ್ಕಾರ ನೋಡಬೇಕು, ಅಮೇರಿಕ ದೇಶವನ್ನು ನೋಡುವುದು ಬೇಡ, ಮಾದರಿ ದೇಶವಾದ ಜಪಾನು ದೇಶವನ್ನು ನೋಡಿ, ಅಲ್ಲಿ ಬೆಲೆ ನಿಯಂತ್ರಣ ಮಾಡುತ್ತಾರೆ. ಅದಕ್ಕೆ ಅಡಚಣೆ ಬಂದರೆ ಅದನ್ನು ಸರಕಾರ ಪರಿಶೀಲಿಸುವುದು ಮತ್ತು ಬೆಳೆ ಹೆಚ್ಚಿದಾಗ ಅದನ್ನು ಸರಕಾರ ಸಮುದ್ರಕ್ಕೆ ಹಾಕುವುದು, ಹೀಗೆ ಮಾಡುವುದಕ್ಕೆ ಕೂಡ ಹಿಂಜರಿಯುವುದಿಲ್ಲ, ಹೀಗೆ ಅಲ್ಲಿ ಅನೇಕ ಕ್ರಮಗಳನ್ನು ಕೈಕೊಂಡಿದ್ದಾರೆ. ನಮ್ಮಲ್ಲಿ ಹೀಗೆ ಮಾಡದಿದ್ದರೆ ವ್ಯವಸಾಯಗಾರರಿಗೆ ಕೆಡುಕಾಗುವುದು.

ಕೇಂದ್ರ ಸರಕಾರ ಅಥವಾ ರಾಜ್ಯ ಸರಕಾರ ಅಗ್ರಿಕಲ್ಚರಲ್ ಇನ್‌ಕಂಟಾಕ್ಸ್ ವಿಧಿಸಬೇಕೆಂದಿದೆ. ಇದಕ್ಕೆ ಸ್ವಾಗತವಿದೆ. ಆದರೆ ಒಂದು ವಿಚಾರ ಗಮನಿಸಬೇಕು. ಏನೆಂದರೆ ವ್ಯವಸಾಯಗಾರರಿಗೆ ತೊಂದರೆಯೇನಿದೆ ಎಂಬುದನ್ನು ಗಮನಿಸಬೇಕು, ಇತರ ಕ್ಷೇತ್ರಗಳಲ್ಲಿ ಕೇಂದ್ರ ಸರಕಾರದವರು ಅಥವಾ ರಾಜ್ಯ ಸರಕಾರದವರು ಸಹಾಯಮಾಡುತ್ತಿದ್ದಾರೆ, ಅದರಂತೆ ರೈತರಿಗೂ ಸಹಾಯ ಮಾಡಬೇಕು ಹಾಗೆ ಮಾಡಿ ರೈತರ ಆರ್ಥಿಕ ಸ್ಥಿತಿಯನ್ನು ೧೦ ವರ್ಷದ ನಂತರ ನೋಡಿ, ವ್ಯವಸಾಯದ ಮೇಲೆ ತೆರಿಗೆ ಹಾಕುವುದನ್ನು ಯೋಚನೆಮಾಡಬೇಕು. ಈ ದಿಶೆಯಲ್ಲಿ, ಟ್ಯಾಕ್ಸ್ ಹಾಕುವುದನ್ನು ಕೈಬಿಡಬೇಕು ಮತ್ತು ರೈತರಿಗೆ ನಾನಾ ವಿಧವಾದ ಸಾಲ ಮತ್ತು ಉತ್ತೇಜನ ಕೊಡಬೇಕು, ಬ್ಯಾಂಕುಗಳ ಮೂಲಕ ಸಹಾಯ ನೀಡುವುದು ಒಳ್ಳೆಯದು, ಆದರೆ ರೈತರಿಗೆ ಉತ್ತೇಜನ ಕೊಟ್ಟರೂ ಅದೆಲ್ಲವೂ ದೊಡ್ಡ ರೈತರಿಗೇ ಹೋಗುವುದು, ಸಣ್ಣ ಹಿಡುವಳಿದಾರರಿಗೆ ದೊರೆಯುವುದಿಲ್ಲ, ಇದನ್ನು ಗಮನಿಸಬೇಕು. ನಮ್ಮಲ್ಲಿ ಸುಮಾರು ಶೇಕಡ ೭೦–೮೦ ಮಂದಿಗೆ ಒಂದರಿಂದ ೫ ಎಕರೆಗಳಷ್ಟು ಮಾತ್ರ ಜಮೀನು ಇದೆ. ಅಂತ ರೈತರು ಇಂದು ಶೇಕಡ ೯ ರಷ್ಟು ಬಡ್ಡಿ ಕೊಟ್ಟು ಬ್ಯಾಂಕುಗಳಿಂದ ಸಹಾಯ ಪಡೆದು ಫರ್ಟಿಲೈಜರು, ಮುಂತಾದ ಉಪಕರಣಗಳನ್ನು ಕೊಳ್ಳಲು ಶಕ್ತರಾಗಿಲ್ಲ. ಅಂಥವರಿಗೆ ಸಬ್ಸಿಡಿ ಕೊಡುವುದರಲ್ಲಿ ತೊಂದರೆಯೇನು ? ಮುಖ್ಯವಾಗಿ ರೈತರಿಗೆ ಉತ್ತೇಜನ ಕೊಡಬೇಕು. ಶೇಕಡ ೬೨ ರಷ್ಟು ಆದಾಯ ಗ್ರಾಮಾಂತರಗಳಿಂದ ಬರುವುದು. ಆದರೆ ವ್ಯವಸಾಯ ಲಾಭದಾಯಕವಾಗಿಲ್ಲ, ಮಳೆ ಬಾರದಿದ್ದರೂ ನಷ್ಟ ಹೆಚ್ಚು; ಬೆಳೆದರೂ ನಷ್ಟ ಸರಿಯಾದ ಬೆಲೆ ದೊರೆಯುವುದಿಲ್ಲ, ರೈತನ ಜೀವನ ಪರಿಸ್ಥಿತಿಗನುಗುಣವಾಗಿ ಆತನಿಗೆ ರಕ್ಷಣೆ ಕೊಡಬೇಕು, ಇತರ ದೇಶಗಳಲ್ಲಿ ಕ್ರಾಪ್ ಇನ್‌ಷ್ಯೂರೆನ್ಸ್ ಜಾರಿಯಲ್ಲಿದೆ. ನಮ್ಮಲ್ಲೂ ಅದನ್ನು ಜಾರಿಗೆ ತರಬಹುದು, ಹೀಗೆ ನಾನಾ ಅನುಕೂಲ ಕಲ್ಪಿಸಬಹುದು. ಮತ್ತು ತಾಲ್ಲೂಕುಗಳಲ್ಲಿ ಅಥವಾ ಜಿಲ್ಲಾ ಕೇಂದ್ರಗಳಲ್ಲಿ ಶಿಕ್ಷಣ ಕೇಂದ್ರಗಳನ್ನು ತೆರೆದು ಟ್ರೈನಿಂಗ್ ಕೊಟ್ಟು ರೈತರು ಹೊಸ ವಿಧಾನವನ್ನು ಅನುಸರಿಸಲು ಅವಕಾಶ ಮಾಡಬೇಕು. ಹೊಸ ಗೊಬ್ಬರವನ್ನು ಉಪಯೋಗಿಸಿ ಹೊಸ ವಿಧಾನಗಳಲ್ಲಿ ಬೆಳೆಯಲು ಅವಕಾಶ ಮಾಡಬೇಕು, ಹೊಸ ಇಂಪ್ಲಿಮೆಂಟ್ಸ್ ಉಪಯೋಗಿಸಲು ಅವಕಾಶ ಕಲ್ಪಿಸಬೇಕು. ಈಗ ವ್ಯವಸಾಯದ ಉಪಕರಣಗಳ ರಿಪೇರಿಗೆ ತೊಂದರೆಯಾಗಿದೆ, ಅದಕ್ಕಾಗಿ ತಾಲ್ಲೂಕು ಕೇಂದ್ರಗಳಲ್ಲಿ ಅಗ್ರಿಕಲ್ಚರಲ್ ಮೆಷಿನರಿ ರಿಪೇರಿಮಾಡಲು ಸರ್ವಿಸ್ ಸ್ಟೇಷನ್ ಮುಂತಾದ ಸೌಲಭ್ಯ ಕಲ್ಪಿಸುವುದು ಅವಶ್ಯಕ. ಹಾಗೆ ಮಾಡಿದರೆ ಉಪಯೋಗವಾಗುವುದು.

ಕಡೆಯದಾಗಿ ಡೈರಿ ಮತ್ತು ಪಶುಸಂಗೋಪನೆ ವಿಚಾರ. ಹೆಚ್ಚು ಹಾಲನ್ನು ಉತ್ಪತ್ತಿಮಾಡಬೇಕು, ಒಳ್ಳೆಯ ಹಸುಗಳನು ಸಾಕಬೇಕು ಎಂದು ಸರ್ಕಾರದವರು ಹೇಳುತ್ತಿದ್ದಾರೆ. ರಾಜ್ಯದ ಆರ್ಥಿಕಸ್ಥಿತಿ

(ಶ್ರೀ ಡಿ. ಎಸ್. ಗೌಡ)

ಮತ್ತು ಆಹಾರದ ಅಭಾವ ಇವುಗಳ ದೃಷ್ಟಿಯಿಂದ ಇದು ಒಳ್ಳೆಯದು. ಆದರೆ ಇದನ್ನು ಹೆಚ್ಚಿನ ರೀತಿಯಲ್ಲಿ ಬೆಳೆಸಬೇಕಾದ್ದು, ಹೊಸಹೊಸ ಸಂಶೋಧನೆ ಮಾಡಿ ಹೆಚ್ಚು ಹಾಲು ಉತ್ಪತ್ತಿಯಾಗಲು ಅವಕಾಶವಾಗುವಂತೆ ಮಾಡುವುದು ಅವಶ್ಯಕ ಮತ್ತು ಉತ್ಪತ್ತಿಯಾದುದು ಮಾರಾಟವಾಗಲು ಅವಕಾಶ ಕಲ್ಪಿಸಬೇಕಾದ್ದೂ ಅವಶ್ಯಕ. ಇದನ್ನು ಸಂಬಂಧಪಟ್ಟ ಇಲಾಖೆ ಗಮನಿಸಬೇಕು.

ಫಾರಂ ಪಾಲಿಸಿ ವಿಷಯದಲ್ಲಿ ಇಲಾಖೆಯವರು ಹೆಚ್ಚು ಮುತವರ್ಜಿ ವಹಿಸಿ ಉತ್ತೇಜನ ಕೊಟ್ಟು ಅದು ಯಶಸ್ವಿಯಾಗುವಂತೆ ಮಾಡಬೇಕು. ಮೂರು ಪಂಚವಾರ್ಷಿಕ ಯೋಜನೆಗಳಲ್ಲಿ ದೇಶದ ಉತ್ಪತ್ತಿ ಅಲ್ಪಸ್ವಲ್ಪ ಹೆಚ್ಚಬಹುದು ಎಂಬ ನಿರೀಕ್ಷೆ ಇತ್ತು, ಈಗ ನಾಲ್ಕನೆ ಯೋಜನೆಯಲ್ಲಾದರೂ ದೇಶದ ಆರ್ಥಿಕ ಪ್ರಗತಿಯಾಗಲೆಂದು ಹಾರೈಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎನ್. ಎ. ಚನ್ನೇಗೌಡ (ಪಾಂಡವಪುರ) :—ಸನ್ಮಾನ್ಯ ಅಧ್ಯಕ್ಷರೇ ಕೃಷಿ ವಿಚಾರದಲ್ಲಿ ಸಭೆಯ ಮುಂದಿಟ್ಟಿರುವ ಬೇಡಿಕೆಯನ್ನು ವಿರೋಧಿಸುತ್ತಾ ಕೆಲವು ವಿಚಾರಗಳನ್ನು ಹೇಳುತ್ತೇನೆ. ಮೈಸೂರು ರಾಜ್ಯದಲ್ಲಿರುವ ೪ ವಿಶ್ವವಿದ್ಯಾನಿಲಯಗಳಲ್ಲಿ ಕೃಷಿ ವಿಶ್ವವಿದ್ಯಾನಿಲಯ ಅತ್ಯಂತ ಕಿರಿಯದು. ಅದರಲ್ಲಿರುವ ತಜ್ಞರು ಹೆಚ್ಚು ಹೆಚ್ಚು ಪ್ರಯೋಗಗಳನ್ನು ನಡೆಸಬೇಕು. ನಮ್ಮದು ಕೃಷಿ ರಾಜ್ಯವಾದುದರಿಂದ ಕೃಷಿಗೆ ಸಂಬಂಧಪಟ್ಟ ಸಂಶೋಧನೆ ನಡೆಸುವುದಕ್ಕೆ ಎಲ್ಲಾ ಅವಕಾಶವನ್ನೂ ಮಾಡಿ ಕೊಡಬೇಕು ಎಂದು ತಿಳಿಸುತ್ತೇನೆ. ಸಂಶೋದನೆ ಪ್ರಾಧಾನ್ಯವಾದ ಯಾವುದೇ ವಿದ್ಯಾ ಸಂಸ್ಥೆಗಳಲ್ಲಿ ರಾಜಕೀಯ ಇರಬಾರದು.

ಅದರಲ್ಲೂ ಒಂದು ವಿದ್ಯಾ ಸಂಸ್ಥೆಯಲ್ಲಿ ಯಾವ ವಿಧವಾದ ರಾಜಕೀಯವನ್ನೂ ಸರ್ಕಾರದವರು ಮಾಡಬಾರದು. ಈಗ ಇಂಡಿಕೇಟ್ ಮತ್ತು ಸಿಂಡಿಕೇಟ್ ವ್ಯವಹಾರಗಳಲ್ಲಿ ಕೆಲವು ಕಾರ್ಪೊರೇಷನ್ಸ್ ರಚನೆ ಮಾಡಿ ತಮಗೆ ಬೇಕಾದವರನ್ನು ಆ ಕಾರ್ಪೊರೇಷನ್‌ಗಳಲ್ಲಿ ಪದಾಧಿಕಾರಿಗಳನ್ನಾಗಿ ಹಾಕಿ, ತಮ್ಮ ಪಕ್ಷವನ್ನು ಬೆಳೆಸಿಕೊಳುವ ಮನೋಭಾವ ಇರುವ ಈ ಸರ್ಕಾರ ವಿಶ್ವವಿದ್ಯಾಲಯ ಕ್ಷೇತ್ರಕ್ಕೂ ಕೈ ಹಾಕುವ ಸೂಚನೆ ಕಂಡುಬರುತ್ತಿದೆ. ನನಗೆ ತಿಳಿದುಬಂದಿರುವಂತೆ ಒಬ್ಬ ರಾಜಕಾರಣಿಯನ್ನು ಸದ್ಯದಲ್ಲಿಯೇ ನಿವೃತ್ತರಾಗುವ ಉಪಕುಲಪತಿಗಳ ಸ್ಥಾನದಲ್ಲಿ ನೇಮಿಸುತ್ತಾರೆಂದು ಪ್ರಬಲವಾದ ವದಂತಿಬಂದಿದೆ. ಆ ವದಂತಿ ವದಂತಿಯಾಗಿಯೇ ಉಳಿಯಲಿ ಎಂದು ನನ್ನ ಆಶಯ. ವಿದ್ಯಾ ಕ್ಷೇತ್ರದಲ್ಲಿ ಈಗಾಗಲೇ ರಾಜಕಾರಣಿಗಳ ಕೈವಾಡದಿಂದ ಆಗಿರತಕ್ಕ ಅಗಾಧವಾದ ನಷ್ಟವನ್ನು ತಪ್ಪಿಸುವುದಕ್ಕೆ ನಮ್ಮ ಕೃಷಿ ಸಚಿವರು ಮನಸ್ಸುಮಾಡಿ, ಕೇವಲ ಪ್ರಾಜ್ಞರನ್ನು ಸಂಶೋಧನೆಯಲ್ಲಿ ಮನಸ್ಸು ಉಳ್ಳಂಥ ವಿದ್ಯಾಪರಿಣತರನ್ನು ತಜ್ಞರನ್ನು ಆಡಳಿತಾನುಭವಿಗಳನ್ನು ಕೃಷಿ ವಿಶ್ವವಿದ್ಯಾಲಯಕ್ಕೆ ಉಪಕುಲಪತಿಗಳನ್ನಾಗಿ ನೇಮಿಸಬೇಕು ಮತ್ತು ಸ್ವಜನ ಪಕ್ಷಪಾತ, ಸ್ವಪಕ್ಷಪಾತ ನಿಲ್ಲಿಸಲಿ ಎಂದು ಅವರಲ್ಲಿ ಬಿನ್ನೈಸಿಕೊಳ್ಳುತ್ತೇನೆ.

ಕೃಷಿ ಪ್ರಬುದ್ಧಮಾನಕ್ಕೆ ಬರಬೇಕಾದರೆ ಒಳ್ಳೆಯ ವಿದ್ಯೆ ಬೇಕು. ಒಬ್ಬ ವ್ಯವಸಾಯಗಾರನ ಮನೆಯಲ್ಲಿ ಹುಟ್ಟುತ್ತಾನೆ. ಅದೇ ಅವನ ಅರ್ಹತೆ ಇಂದಿನ ರೈತ ಹುಟ್ಟಿನಿಂದಲೇ ವ್ಯವಸಾಯಗಾರನಾಗುತ್ತಾನೆ. ಈ ರೀತಿಯಾಗಿ ಪರಿಗಣಿಸಿದ್ದಾರೆ. ಅವರಿಗೆ ಯಾವ ವಿಧವಾದ ಟ್ರೇನಿಂಗ್ ಕೂಡ ಬೇಕಾಗಿಲ್ಲ. ಆದರೆ ಒಬ್ಬ ಕ್ಲಾರ್ಕ್ ಆಗಬೇಕಾದರೆ, ಒಬ್ಬ ಅಪ್ರೆಂಟಿಸ್ ಆಗಿ ಕೆಲಸ ಮಾಡಬೇಕಾದರೆ, ಟೆಕ್ನಿಕಲ್ ಕ್ವಾಲಿಫಿಕೇಷನ್ಸ್ ಹಾಕುತ್ತಾರೆ. ಹಾಗೆಯೇ ಕೃಷಿ ಕ್ಷೇತ್ರದಲ್ಲಿಕೂಡ ವ್ಯವಸಾಯ ಮಾಡಬೇಕಾದರೆ ಅವನಿಗೆ ಇಂತಿಷ್ಟು ಟೆಕ್ನಿಕಲ್‌ನಾಲೆಡ್ಜ್ ಇರಬೇಕು ಎನ್ನುವ ಒಂದು ಕ್ವಾಲಿಫಿಕೇಷನ್ ನಮ್ಮ ಸರ್ಕಾರ ನಿಗದಿ ಮಾಡಿಲ್ಲ, ಅದನ್ನು ಮಾಡುವುದಕ್ಕೆ ಸಾಧ್ಯವೂ ಆಗುವುದಿಲ್ಲವೆಂದು ಭಾವಿಸಿದ್ದಾರೆ. ಈ ಕೊರತೆಯನ್ನು ತುಂಬಿಸಲು ಸರ್ಕಾರ ಪಾಲಿಟೆಕ್ನಿಕ್‌ಗಳನ್ನು ಹೆಚ್ಚು ಸಂಖ್ಯೆಯಲ್ಲಿ ರಾಜ್ಯದಲ್ಲಿ ಸ್ಥಾಪನೆಮಾಡಬೇಕು ಕೇಂದ್ರ ಸರ್ಕಾರದವರು ಕೆಲವು ರಾಜ್ಯಗಳಲ್ಲಿ ಕೃಷಿ ಪಾಲಿಟೆಕ್ನಿಕ್‌ಗಳನ್ನು ಸ್ಥಾಪಿಸಬೇಕೆಂದು ತೀರ್ಮಾನ ಮಾಡಿದ್ದಾರೆ. ಅಂಥ ಪಾಲಿಟೆಕ್ನಿಕ್‌ಗಳನ್ನು ಮೈಸೂರು ರಾಜ್ಯದಲ್ಲಿಯೂ ಒಂದೆರಡು ಸ್ಥಾಪನೆ ಮಾಡುವುದಕ್ಕೆ ನಮ್ಮ ಕೃಷಿ ಸಚಿವರು ಪ್ರಯತ್ನಪಡುತ್ತಾರೆಂದು ತಿಳಿದುಕೊಂಡಿದ್ದೇನೆ.

ಹಿಂದೆ ಮಾತನಾಡಿದ ಮಾನ್ಯ ಸದಸ್ಯರೆಲ್ಲರೂ ಧಾನ್ಯಗಳ ಬೆಲೆಗಳು ಇಳಿಯುತ್ತಿವೆ, ವ್ಯವಸಾಯ ಕ್ಷೇತ್ರ ಅಧೋಗತಿಗೆ ಇಳಿಯುತ್ತಿದೆ ಎಂದು ಹೇಳಿದರು ಇದಕ್ಕೆ ಕಾರಣ ಸರ್ಕಾರದವರು, ಸರ್ಕಾರದವರು ಸಮತೋಲನವಾದ ಉತ್ಪನ್ನದ ಗುರಿಗಳನ್ನು ಹಾಕಿಲ್ಲ. ವೈಯಕ್ತಿಕವಾಗಿ ವ್ಯವಸಾಯಗಾರರೇ ಮಾಡತಕ್ಕ ಕೆಲಸ ಇದಲ್ಲ, ಸರ್ಕಾರ ಇಡೀ ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ಯಾವ ಯಾವ ಬೆಳೆಗಳನ್ನು ಎಷ್ಟೆಷ್ಟು ಪ್ರಮಾಣದಲ್ಲಿ ಬೆಳೆಯಬೇಕು ಎಂದು ನಿಗದಿ ಮಾಡಿದರೆ ಆಗ ಬೆಲೆಗಳಲ್ಲಿನ ಏರಿಳಿತಗಳನ್ನು ಕೂಡ ಸೀಮಿತಗೊಳಿಸಬಹುದು. ಕಬ್ಬಿನ ಬೆಳೆ ತೆಗೆದುಕೊಂಡರೆ ಈ ವರ್ಷ ಕಬ್ಬಿನ ಬೆಳೆಗಾರರಿಗೆ ವಿಪರೀತವಾದ ನಷ್ಟವಾಗಿದೆ.

ಹೋದ ಸಲ ಹೆಚ್ಚಿನ ಬೆಲೆ ಇದ್ದುದರಿಂದ ರೈತರು ಹೆಚ್ಚು ಕಬ್ಬು ಬೆಳೆದರು. ಹೆಚ್ಚು ಬೆಳೆಯಿಂದ ಈ ವರ್ಷ ಬೆಲೆಗಳು ಇಳಿದಿರುವುದರಿಂದ ರೈತರು ಬಹಳ ಕಷ್ಟವನ್ನು ಅನುಭವಿಸುತ್ತಿದ್ದಾರೆ. ಹೋದ ಸಲ ಮುಸುಕಿನ ಜೋಳವನ್ನು ೨ ಲಕ್ಷ ಎಕರೆಗಳಲ್ಲಿ ಹಾಕಿದ್ದರು. ಬೆಲೆ ಇಳಿಮುಖವಾಗಿ ನಷ್ಟವಾಗುವುದರಿಂದ ಈ ವರ್ಷ ಒಂದು ಲಕ್ಷ ಎಕರೆಯಲ್ಲಿ ಮಾತ್ರ ಹಾಕಿದ್ದಾರೆ. ಇದಕ್ಕೆ ಕಾರಣ ಇಷ್ಟೆ. ಆ ಒಂದು ನಿರ್ದಿಷ್ಟವಾದ ಉತ್ಪನ್ನದ ಗುರಿಯನ್ನು ಸರ್ಕಾರ ಹಾಕಿಕೊಟ್ಟಿಲ್ಲ. ವೈಯಕ್ತಿಕವಾಗಿ ರೈತರೇ ಈ ಕೆಲಸವನ್ನು ಮಾಡುವುದಕ್ಕೆ ಅಸಾಧ್ಯವಾದುದು. ಆದುದರಿಂದ ಸರ್ಕಾರದವರು ಎಲ್ಲಾ ಬೆಳೆಗಳಿಗೂ ರಾಜ್ಯದ ಅವಶ್ಯಕತೆ ಮತ್ತು ಮಾರುಕಟ್ಟೆ ಅನುಕೂಲತೆ ಆಧಾರದ ಮೇಲೆ ಉತ್ಪನ್ನದ ಗುರಿಯನ್ನು ನಿಗದಿ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಎಲ್ಲಕ್ಕಿಂತಲೂ ರೈತರಿಗೆ ಹೆಚ್ಚು ಪರಿಣಾಮವಾಗಿರುವ ಸನ್ನಿವೇಶವೆಂದರೆ ವ್ಯವಸಾಯಕ್ಕೆ ಬೇಕಾದ ಇನ್‌ಪುಟ್ಸ್ ಬೆಲೆ ಏರಿರುವುದು. ಪ್ರತಿಯೊಂದು ಇನ್‌ಪುಟ್ಸ್ ಬೆಲೆಗಳೂ ಸಹ ಬಹಳವಾಗಿ ಏರಿವೆ. ಉದಾಹರಣೆಗೆ ರಾಸಾಯನಿಕ ಗೊಬ್ಬರಗಳ ಬೆಲೆ ವಿಪುಲವಾಗಿ ಏರಿದೆ. ಈ ಬಗ್ಗೆ ಸರ್ಕಾರದವರು ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆಂದು ಕೇಳುತ್ತೇನೆ. ರಾಜ್ಯದಲ್ಲಿ ಅಥವಾ ರಾಷ್ಟ್ರದಲ್ಲಿ ಗೊಬ್ಬರದ ಡಿಮಾಂಡ್ ಅಂಡ್ ಸಪ್ಲೈ ಏನಿದೆ ಅದನ್ನು ರೀಕನ್‌ಸೈಲ್ ಮಾಡಬೇಕು. ಇಲ್ಲದೆ ಇದ್ದರೆ, ಬೆಲೆಗಳು ಏರುವುದು ಅನಿವಾರ್ಯ. ಹೊರಗಡೆಯಿಂದ ಬರತಕ್ಕ ಸೀಮೆಗೊಬ್ಬರವನ್ನು ಹೆಚ್ಚಾಗಿ ಬಳಸುತ್ತಿದ್ದೇವೆ. ಸ್ಥಳೀಯವಾಗಿ ಸಿಕ್ಕತಕ್ಕ ಕಚ್ಚಾ ಮಾಲುಗಳನ್ನು ಉಪಯೋಗಿಸಿ ಹೆಚ್ಚು ಹೆಚ್ಚು ರಾಸಾಯನಿಕ ಗೊಬ್ಬರವನ್ನು ತಯಾರುಮಾಡತಕ್ಕ ಸಂಶೋಧನೆಗೆ ಹೆಚ್ಚು ನಿಗಾ ಕೊಡಬೇಕು ಎಂದು ಸೂಚಿಸುತ್ತೇನೆ.

ನಮ್ಮ ರಾಜ್ಯದಲ್ಲಿ ಬೆಳಗೊಳದಲ್ಲಿ ಹಿಂದಿನ ಬೇಜವಾಬ್ದಾರಿ ಸರ್ಕಾರದವರು ಒಂದು ಗೊಬ್ಬರದ ಕಾರ್ಖಾನೆಯನ್ನು ಸ್ಥಾಪನೆ ಮಾಡಿದ್ದರು, ಈಗ ಜವಾಬ್ದಾರಿ ಸರ್ಕಾರದವರು ಅದರ ಕೆಲಸವನ್ನು ನಿಲ್ಲಿಸಿದ್ದಾರೆ. ಹಿಂದಿನ ರಾಜರ ಕಾಲದಲ್ಲಿ ಆಗಿನ ಸರ್ಕಾರ ರಾಜ್ಯದ ಗೊಬ್ಬರದ ಬೇಡಿಕೆಯನ್ನು ಅರಿತು ಒಂದು ಸಣ್ಣ ಕಾರ್ಖಾನೆಯನ್ನು ಸ್ಥಾಪನೆ ಮಾಡಿ ಅದು ಸಾಕಷ್ಟು ಪ್ರಮಾಣದಲ್ಲಿ ಲಾಭದಾಯಕವಾಗಿ ಕೆಲಸ ಮಾಡುತ್ತಿತ್ತು. ಈಗ ಕಾರ್ಖಾನೆಯನ್ನು ಮುಚ್ಚಿರುವುದಲ್ಲದೆ ಯಾವ ವಿಧವಾದ ಹೊಸ ಕಾರ್ಖಾನೆಯನ್ನು ಸ್ಥಾಪಿಸುವುದಕ್ಕೆ ಪ್ರಯತ್ನಮಾಡಿಲ್ಲ. ಮಂಗಳೂರಿನಲ್ಲಿ ಒಂದು ಕಾರ್ಖಾನೆ ಬರುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅಲ್ಲಿ ಕೂಡ ಮ್ಯಾನ್ಯುಫ್ಯಾಕ್ಚರಿಂಗ್ ಕಾಸ್ಟ್ ತುಂಬ ಜಾಸ್ತಿಯಾಗುತ್ತದೆ. ನಮ್ಮ ರಾಷ್ಟ್ರದಲ್ಲಿ ಕೂಡ ರಾಸಾಯನಿಕ ಗೊಬ್ಬರಗಳನ್ನು ತಯಾರುಮಾಡುವುದರ ಬೆಲೆ ಬಹಳ ದುಬಾರಿಯ ವ್ಯವಸ್ಥೆಯಾಗಿದೆ. ಸರ್ಕಾರ ಇನ್‌ಪುಟ್ಸ್ ಬಗೆ ಹೆಚ್ಚಿನ ಗಮನಕೊಟ್ಟು, ಸ್ಥಳೀಯ ಕಚ್ಚಾ ಸಾಮಾನುಗಳಿಂದ ಗೊಬ್ಬರವನ್ನು ತಯಾರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಕ್ರಿಮಿನಾಶಕಗಳ ಬಗ್ಗೆ ಒಂದೆರಡು ಮಾತು. ಕ್ರಿಮಿನಾಶಕಗಳ ಬೆಲೆ ವಿಪರೀತವಾಗಿದೆ. ನಮ್ಮ ರಾಜ್ಯದಲ್ಲಿ ಒಂದು ಕೆ.ಜಿ. ಡಿ.ಡಿ.ಟಿ ಬೆಲೆ ೪.೯೦ ರೂಪಾಯಿ ಇದ್ದರೆ, ಅಮೇರಿಕಾದಲ್ಲಿ ಅದರ ಬೆಲೆ ೨.೫೦ ರೂಪಾಯಿ ಇದೆ. ಅಲ್ಲದೆ ಸಕಾಲದಲ್ಲಿ ಅದು ದೊರೆಯುವುದಿಲ್ಲ, ಒಂದು ವೇಳೆ ದೊರೆತರೂ ಔಟ್‌ಡೇಟ್ ಆಗಿರುವಂಥದ್ದು ಸಿಕ್ಕುತ್ತದೆ. ಸಂಚಾರಿ ಸಿಂಪಡಿಕೆ ಪಡೆಯನ್ನು ಏರ್ಪಾಡು ಮಾಡಿ, ಎಲ್ಲೆಲ್ಲಿ ಅದರ ಅವಶ್ಯಕತೆ ಇದೆಯೋ ಅಲ್ಲಿ ಕ್ರಿಮಿನಾಶಕಗಳನ್ನು ಸಿಂಪಡಿಸುವುದಕ್ಕೆ ವ್ಯವಸ್ಥೆ ಮಾಡಿ ತಕ್ಷಣ ರೈತರಿಗೆ ಪರಿಹಾರ ಕೊಡ ಕೊಡಬೇಕು. ಕಂಪಲ್ಸರಿ ಕಾಂಟಿ ಬ್ಯೂಷನ್ ಪ್ಲಾಂಟ್ ಪ್ರೊಟೆಕ್ಷನ್ ಸರ್ವಿಸಸ್ ಸ್ಥಾಪನೆ ಕೂಡ ಆಗಬೇಕಾಗಿದೆ. ಹಾಗೆ ಮಾಡದೆ ಇದ್ದರೆ ರೈತನಿಗೆ ನಿಜವಾಗಿ ಸಹಾಯ ಮಾಡಿದಂತಾಗುವುದಿಲ್ಲ. ಬಾಯಿ ಮಾತಿನಲ್ಲಿ ಅವನಿಗೆ ಮೆಚ್ಚುಗೆಯನ್ನು ಸೂಚಿಸಿದ ಹಾಗಾಗುತ್ತದೆ.

ಬುಲ್‌ಡೋಜರ್ಸ್, ಟ್ರಾಕ್ಟರ್ ಮುಂತಾದುವುಗಳಿಗೆ ಕೊಡಬೇಕಾಗಿರುವ ಬಾಡಿಗೆಯನ್ನು ಪುನರ್ವಿಮರ್ಶೆ ಮಾಡಬೇಕು. ಈಗ ಒಂದು ಗಂಟೆ ಬುಲ್‌ಡೋಜರ್ ಉಪಯೋಗಿಸಿಕೊಳ್ಳಲು ೪೫ ರೂಪಾಯಿ ಕೊಡಬೇಕು, ಒಂದು ಎಕರೆಗೆ ಟ್ರಾಕ್ಟರಿಂದ ಉಳುವುದಕ್ಕೆ ೨೪ ರೂಪಾಯಿ ಕೊಡಬೇಕು. ರೈತರ ದೃಷ್ಟಿಯಿಂದ ನೋಡಿದರೆ ಇದು ಬಹಳ ದುಬಾರಿಯಾಗಿದೆ. ಈ ದಿನ ಪ್ರಶ್ನೋತ್ತರ ಕಾಲದಲ್ಲಿ ಕೃಷಿ ಸಚಿವರು ಹೇಳಿದರು, ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿಗೆ ಇದನ್ನೆಲ್ಲ ವಹಿಸುತ್ತೇವೆ ಎಂಬುದಾಗಿ ಅಲ್ಲಿ ಬಾಡಿಗೆಯನ್ನು ಸ್ವಲ್ಪ ಏರಿಸುತ್ತಾರೆ ಎನ್ನುವ ಅರ್ಥ ಬರುವ ರೀತಿಯಲ್ಲಿ ಹೇಳಿದರು. ಈಗಿರುವ ಬಾಡಿಗೆಯೇ ದುಬಾರಿಯಾಗಿರುವಾಗ, ಅಗ್ರೊ ಇಂಡಸ್ಟ್ರೀಸ್ ಕಾರ್ಪೊರೇಷನ್ನಿಗೆ ವಹಿಸಿದರೆ, ಕಾರ್ಪೊರೇಷನ್ ಸ್ವಲ್ಪವಾದರೂ ಬಾಡಿಗೆಯನ್ನು ಏರಿಸಿದರೆ ಒಂಟೆಯ ಬೆನ್ನು ಮುರಿಯತಕ್ಕ ಲಾಸ್ಟ್ ಸ್ಟ್ರಾ ಹಾಕಿದಂತೆ ಆಗುತ್ತದೆ. ಟ್ರಾಕ್ಟರ್ ಮತ್ತು ಬುಲ್‌ಡೋಜರ್‌ಗಳಿರುವ ರೈತರ ಜಮೀನುಗಳಿಗೆ ಹೋಗಿ ಯಾವ ರೀತಿ

(ಶ್ರೀ ಎನ್. ಎ. ಚನ್ನೇಗೌಡ)

ಕೆಲಸ ಮಾಡುತ್ತವೆ ಎನ್ನುವುದನ್ನು ಮಾನ್ಯ ಕೃಷಿ ಸಚಿವರು ಅನಿರೀಕ್ಷಿತವಾಗಿ ಭೇಟಿಕೊಟ್ಟು ನೋಡಿದರೆ ಗೊತ್ತಾಗುತ್ತದೆ. ಅವರು ಒಂದು ಗಂಟೆ ಕೆಲಸ ಮಾಡಿದರೆ ಇನ್ನೊಂದು ಗಂಟೆ ನಿಲ್ಲಿಸುತ್ತಾರೆ. ಇದರಿಂದ ರೈತನಿಗೆ ಬಹಳ ತೊಂದರೆಯಾಗುತ್ತದೆ. ಇಂಥ ತೊಂದರೆಯನ್ನು ಪರಿಹಾರ ಮಾಡುವ ಬಗ್ಗೆ ಸರ್ಕಾರ ಗಮನಕೊಡಬೇಕು.

ನಮ್ಮ ರಾಜ್ಯ ಇಡೀ ರಾಷ್ಟ್ರದಲ್ಲಿ ಕಬ್ಬುಬೆಳೆಯುವುದರಲ್ಲಿ ಎರಡನೆಯ ಸ್ಥಾನವನ್ನು ಪಡೆದಿದೆ. ಪ್ರತಿಯೊಂದು ಸಲವೂ ಕೂಡ ನಾವು ಕೊಯಮತ್ತೂರಿನಲ್ಲಿರುವ ಬ್ರೀಡಿಂಗ್ ಸ್ಟೇಷನ್ ಕಡೆ ನೋಡ ಬೇಕಾಗಿದೆ. ಸಾಮಾನ್ಯವಾಗಿ ಒಂದು ಒಳ್ಳೆಯ ಕಬ್ಬಿನ ಬಿತ್ತನೆಯನ್ನು ತಯಾರುಮಾಡುವುದಕ್ಕೆ ೧೪–೧೫ ವರ್ಷಬೇಕು. ಅದು ೧೫–೨೦ ವರ್ಷಗಳ ತನಕ ಚಾರಿಯಲ್ಲಿರುತ್ತದೆ. ಆದರೆ ೩೦ ವರ್ಷಗಳಾದರೂ ಹೊಸ ಬಿತ್ತನೆ ಬಂದಿಲ್ಲ. ಕಬ್ಬಿನಬೆಳೆಯಲ್ಲಿ ಎರಡನೇ ರಾಜ್ಯವಾಗಿದ್ದರೂ, ಸಕ್ಕರೆಯ ಉತ್ಪತ್ತಿ ಮಾಡುವುದರಲ್ಲಿ ಕೂಡ ಎರಡನೇ ರಾಜ್ಯವಾಗಿದ್ದರೂ, ಕೂಡ ನಮ್ಮದೇ ಆದ ಬ್ರೀಡಿಂಗ್ ಸ್ಟೇಷನ್ ಪಡೆಯುವುದಕ್ಕೆ ಇನ್ನೂ ಪ್ರಯತ್ನ ಪಡದೇ ಇರುವುದು ನಮ್ಮ ಹಿಂದುಳಿದಿರುವಿಕೆಗೆ ಒಂದು ಹೆಗ್ಗುರುತು ಎಂದು ಹೇಳುತ್ತೇನೆ.

ಸರ್ಕಾರ ಸಾಮಾನ್ಯವಾಗಿ ವ್ಯವಸಾಯ ಭಾಗದಲ್ಲಿ ಎರಡು ವಿಷಯಗಳಲ್ಲಿ ಹಸ್ತಕ್ಷೇಪ ಮಾಡಬಹುದು. ಒಂದು ವರಮಾನ ನಿಷ್ಕರ್ಷೆ ಬಗ್ಗೆ, ಎರಡನೆಯದು ಸ್ಟ್ರಕ್ಚರಲ್ ಪಾಲಿಸಿ ಬಗ್ಗೆ. ಮೊದಲನೆಯದಾಗಿ ಲೋ ಇನ್‌ಕಂ ಮತ್ತು ಫ್ಲಕ್ಚುಯೇಟಿಂಗ್ ಇನ್‌ಕಂ ಸಾಮಾನ್ಯವಾಗಿ ರೈತನಿಗೆ ಬರತಕ್ಕ ವಿಪತ್ತು. ರೈತರ ವರಮಾನ ಯಾವತ್ತಿಗೂ ಕೂಡ ಸ್ಥಿಮಿತದಲ್ಲಿ ಇರುವುದಿಲ್ಲ. ಅಂಥ ಸಮಯದಲ್ಲಿ ಸರ್ಕಾರ ಪ್ರೈಸ್‌ಸ್ಟೆಬಿಲೈಸೇಷನ್ ಮಾಡಬೇಕು ಮತ್ತು ಅವರಿಗೆ ಪ್ರೈಸ್ ಇನ್‌ಷೂರೆನ್ಸ್ ಸ್ಕೀಂ ಜಾರಿಗೆ ತಂದು ಬೆಲೆಗಳು ವಿಪರೀತವಾಗಿ ಇಳಿಯುವುದರಿಂದ ಆಗತಕ್ಕ ತೊಂದರೆಗಳನ್ನು ನಿವಾರಿಸಬೇಕು.

ಡಚ್ ರಾಷ್ಟ್ರದಲ್ಲಿ ಪ್ರೈಸ್ ಇನ್ಶೂರೆನ್ಸ್ ಸ್ಕೀಂ ಜಾರಿಯಲ್ಲಿದೆ. ಸರಕಾರ ಈ ಯೋಜನೆ ತಯಾರ್ಮಾಡಿ ರೈತರಿಗೆ ಉಂಟಾಗುವ ತೊಂದರೆ ಪರಿಹಾರ ಮಾಡಬೇಕು ಮತ್ತು ಆರ್ಥಿಕ ಹಿಡುವಳಿಯಲ್ಲಿ ಕನ್‌ಸಾಲಿಡೇಶನ್ ಹಾಗೂ ಅಮಾಲ್ಗಮೇಶನ್ ಸರಕಾರ ಮಾಡಬೇಕು. ನನ್ನ ಕ್ಷೇತ್ರದಲ್ಲಿ ೭೨೦ ಎಕರೆ ವಿಲೇಜ್ ಫಾರೆಸ್ಟ್ ಇದೆ ಅರಣ್ಯ ಬೆಳಸುವುದಕ್ಕೆ ಒಂದು ಎಕರೆಗೆ ೨೫ ರೂಪಾಯಿ ಸಬ್‌ಸಿಡಿ ಕೊಡುತ್ತಾರೆ. ಇದರಲ್ಲಿ ೫ ರೂ. ಟೆಕ್ನಿಕಲ್ ಸಲಹೆಗೆ ಹೋಗುವುದರಿಂದ ಉಳಿದ ೨೦ ರೂ. ಮಾತ್ರ ಒಂದು ಎಕರೆಗೆ ಕೊಟ್ಟ ಹಾಗೆ ಆಗುವುದು. ಈ ರೀತಿ ಅರಣ್ಯ ಬೆಳವಣಿಗೆ ನಗೆಪಾಟಲು ಆಗಿದೆ. ದುಡ್ಡು ಯಾರ ಹೆಸರಿನಲ್ಲಿಯೋ ಕೊಡುತ್ತಾರೆ. ಇದನ್ನು ತೀವ್ರವಾಗಿ ಯೋಚನೆ ಮಾಡಿ ಸರಕಾರ ಸರಿಪಡಿಸಬೇಕು ಎಂದು ಹೇಳುತ್ತೇನೆ. ಇದರಿಂದ ಬಡವರಿಗೆ ಹೊಟ್ಟೆಗೆ ಹಿಟ್ಟು ಮೈಗೆ ಬಟ್ಟೆಯಾದರೂ ಸಿಕ್ಕುವ ಯೋಜನೆಗಳಲ್ಲಿ ಹಣ ವೆಚ್ಚವಾಗಲಿ. ಇಷ್ಟು ಮಾತನಾಡಲು ಅವಕಾಶ ಕೊಟ್ಟದ್ದಕ್ಕೆ ಅಧ್ಯಕ್ಷರನ್ನು ವಂದಿಸಿ ನನ್ನ ಭಾಷಣ ಮುಗಿಸುತ್ತೇನೆ.

ಶ್ರೀ ಎ ಆರ್. ಬದ್ರೀನಾರಾಯಣ (ಶಿವಮೊಗ್ಗ) : ಮಾನ್ಯ ಸಭಾಪತಿಗಳೇ, ವ್ಯವಸಾಯ, ಪಶು ಸಂಗೋಪನೆ, ಅರಣ್ಯ ಖಾತೆಗಳ ಬೇಡಿಕೆಗಳನ್ನು ವಿರೋಧಿಸುತ್ತಾ ನಾಲ್ಕು ಮಾತು ಹೇಳಬೇಕೆಂದು ನಾನು ನಿಂತಿದ್ದೇನೆ. ನಾನು ಕೆಲವು ಖೋತಾ ನಿರ್ಣಯಗಳನ್ನು ಕಳಿಸಿದ್ದೇನೆ. ಅದರಲ್ಲಿ ನನ್ನ ಹೆಸರು ಬರೆಯುವುದರಲ್ಲಿ ತಪ್ಪು ಮಾಡಿದ್ದಾರೆ. ಬದ್ರೀನಾರಾಯಣ ಎಂದು ಬರೆಯುವ ಹೆಸರಿನಲ್ಲಿ ಬಿ. ಎಚ್. ಎಂದು ಸ್ಪೆಲ್ಲಿಂಗ್‌ನಲ್ಲಿ ತಪ್ಪು ಇರುವುದನ್ನು ಸರಿಮಾಡಿಕೊಳ್ಳಬೇಕು. ಇದಲ್ಲದೆ ಕಟ್ ಮೋಷನ್ಸ್‌ನಲ್ಲಿ ಕೂಡ ತಪ್ಪುಗಳನ್ನು ಮಾಡಿದ್ದಾರೆ. ಡ್ರೈ ಫಾರ್ಮಿಂಗ್, ಎಂದು ಇರಬೇಕಾದುದು ಡೈರಿ ಫಾರ್ಮಿಂಗ್ ಎಂದು ಬರೆದಿದ್ದಾರೆ. ಈ ತಪ್ಪುಗಳನ್ನು ದಯವಿಟ್ಟು ತಿದ್ದಿಕೊಳ್ಳಬೇಕು.

ಮಾನ್ಯ ಅಧ್ಯಕ್ಷರೇ, ನನಗೆ ಮಾತನಾಡಲು ಕೊಟ್ಟಿರತಕ್ಕಂಥ ಹತ್ತು ನಿಮಿಷ ಕಾಲ ಸಾಲದು, ದಯವಿಟ್ಟು ಐದು ನಿಮಿಷ ಹೆಚ್ಚಿಗೆ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ನಮ್ಮ ವ್ಯವಸಾಯ ಮಂತ್ರಿಗಳು ಶಿವಮೊಗ್ಗ ಜಿಲ್ಲೆಯಲ್ಲಿ ಪ್ರವಾಸ ಮಾಡಿದಾಗ ಅನೇಕ ವ್ಯವಸಾಯ ಕ್ಷೇತ್ರಗಳಿಗೆ ಹೋಗಿ ನೋಡಿಕೊಂಡು ಬಂದಿದ್ದಾರೆ. ಇಂದು ಹಸಿರು ಕ್ರಾಂತಿ ಎಂದು ಏನು ಪ್ರಚಾರವಾಗುತ್ತಾ ಇದೆಯೋ ಇದನ್ನು ಶಿವಮೊಗ್ಗ ಜಿಲ್ಲೆಯಲ್ಲಿ ನೋಡಬಹುದಾಗಿದೆ. ಅನೇಕ ವಿದ್ಯಾವಂತರಾದ ಯುವಕರು ವ್ಯವಸಾಯದಲ್ಲಿ ನಿರತರಾಗಿ ಚೆನ್ನಾಗಿ ಕೆಲಸ ಮಾಡುತ್ತಾ ಇದ್ದಾರೆ. ಇಡೀ ಭಾರತದಲ್ಲಿ ಶಿವಮೊಗ್ಗ ಜಿಲ್ಲೆಯು ಪ್ರಥಮ ಸ್ಥಾನವನ್ನು ವ್ಯವಸಾಯದಲ್ಲಿ ಪಡೆದಿದೆ ಎಂದು ಹೇಳಬಹುದು. ಭತ್ತದ ಕಣಜವಾದ ಮಲೆನಾಡಿನಲ್ಲಿ ಇಷ್ಟು ಪ್ರಗತಿಯಾಗಿದ್ದರೂ ಕೂಡ ಇದುವರೆಗೆ ಶಿವಮೊಗ್ಗ ಜಿಲ್ಲೆಗೆ ಒಂದು ಅಗ್ರಿಕಲ್ಚರಲ್ ಕಾಲೇಜು ಕೊಟ್ಟಿಲ್ಲ. ಅನೇಕ

ವರ್ಷಗಳಿಂದ ಈ ಬೇಡಿಕೆಯನ್ನು ಸರಕಾರದಲ್ಲಿ ತಿಳಿಸುತ್ತಾ ಬಂದಿದ್ದೇವೆ. ಈ ಬೇಡಿಕೆಯನ್ನು ಗಮನಿಸಿ ಶಿವಮೊಗ್ಗ ಜಿಲ್ಲೆಯಲ್ಲಿ ಒಂದು ಅಗ್ರಿಕಲ್ಚರಲ್ ಕಾಲೇಜ ಸ್ಥಾಪನೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ನಮ್ಮ ಜಿಲ್ಲೆಯ ಯುವಕರು ಬೇರೆ ಕಾಲೇಜುಗಳಿಗೆ ಹೋಗದೆ ಇಲ್ಲಿ ಪ್ರಾರಂಭವಾಗುವ ಅಗ್ರಿಕಲ್ಚರಲ್ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಪರಿಶ್ರಮ ಪಡೆಯಬಹುದಾಗಿದೆ. ಆದ್ದರಿಂದ ಈ ಕಾಲೇಜನ್ನು ಕೂಡಲೇ ಕೊಡಬೇಕು ಎಂದು ಒತ್ತಾಯ ಮಾಡುತ್ತೇನೆ.

ಮೈಸೂರು ರಾಜ್ಯದಲ್ಲಿ ಅನೇಕ ಕಡೆ ಪೈಲೆಟ್ ಅಗ್ರಿಕಲ್ಚರಲ್ ಪ್ರೋಗ್ರಾಂ ಕೊಟ್ಟಿದ್ದಾರೆ. ಶಿವಮೊಗ್ಗ ಜಿಲ್ಲೆಗೆ ಅದನ್ನು ಕೊಟ್ಟಿಲ್ಲ, ಅದನ್ನು ಕೊಡಬೇಕು ಎಂದು ಹೇಳುತ್ತೇನೆ. ಇದಲ್ಲದೆ ಸಾಯಿಲ್ ಟೆಸ್ಟಿಂಗ್ ಲ್ಯಾಬರೋಟರಿ ಒಂದನ್ನು ಕೊಡಬೇಕು. ಅದನ್ನು ಸಹ ಇದುವರೆಗೆ ಕೊಟ್ಟಿಲ್ಲ. ಸರಕಾರ ಇದನ್ನು ಗಮನಿಸಿ ಮಂತ್ರಿಗಳು ಬೇಡಿಕೆಯ ಮೇಲೀನ ಚರ್ಚೆಗೆ ಉತ್ತರ ಕೊಡುವಾಗ ಸರಕಾರದ ನೀತಿ ಇದರ ಬಗ್ಗೆ ಏನು ಇದೆ ಹೇಳಬೇಕು ಎಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ.

ಟ್ರ್ಯಾಕ್ಟರ ಬಗ್ಗೆ ಸಾಲ ಕೇಳಿದರೆ ಬ್ಯಾಂಕಿನಲ್ಲಿ ಸ್ಟಾಂಪ್ ಪೇಪರನಲ್ಲಿ ಬರೆದು ಕೊಡಬೇಕು ಎಂದು ಮಾಡಿದ್ದಾರೆ. ಆಸ್ತಿ ಆಧಾರ ಇರುವಾಗ ಸ್ಟಾಂಪ್ ಪೇಪರ್ ಖರ್ಚು ಬಡವರಿಗೆ ಹೊರೆಯಾಗುತ್ತದೆ. ಆದುದರಿಂದ ಸ್ಟಾಂಪ್ ಪೇಪರಿನಲ್ಲಿ ಬರೆದು ಕೊಡಬೇಕು ಎಂದು ಇರುವುದಕ್ಕೆ ಎಗ್ಸೆಂಪ್ಷನ್ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇಡೀ ಭಾರತದಲ್ಲಿ ಶೇಕಡ ೭೫ ರಷ್ಟು ಜನ ವ್ಯವಸಾಯದಲ್ಲಿ ನಿರತರಾಗಿದ್ದಾರೆ. ಮಲೆನಾಡು ಬಿಟ್ಟು ಮಿಕ್ಕ ಭಾಗದಲ್ಲಿ ಜನ ಡ್ರೈಫಾರ್ಮಿಂಗ್ ಅಂದರೆ ಖುಷ್ಕಿ ವ್ಯವಸಾಯದಲ್ಲಿ ಇರುವುದರಿಂದ ಅದಕ್ಕೆ ಬೇಕಾದಂಥ ತಾಂತ್ರಿಕ ಸಹಾಯ ಮುಂದುವರಿಸಬೇಕು. ಅಲ್ಲಿ ಲೆವೆಲ್ಲಿಂಗ್ ಮಾಡುವುದು ಕಾಂಟೂರ್ ಬಂಡಿಗ್ ಮಾಡಬೇಕು ಹಾಗು ಯಾವ ಜಮೀನಿನಲ್ಲಿ ಯಾವ ಬೆಳೆ ಬೆಳೆದರೆ ಚೆನ್ನಾಗಿ ಬೆಳೆಯಬಹುದು ಇದನ್ನು ತಿಳಿಯ ಪಡಿಸಿದರೆ ರೈತನ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳುತ್ತದೆ. ಇದಲ್ಲದೆ ಎಕ್ಸ್‌ಪೇರಿಮೆಂಟಲ್ ಫಾರಮ್ಸ್ ಮಾಡಬೇಕು. ಈ ಬಗ್ಗೆ ಕಟ್ ಮೋಷನ್ಸ್ ನಾನು ಕೊಟ್ಟಿದ್ದೇನೆ. ಇದನ್ನು ಸರಕಾರ ಗಮನಿಸಬೇಕು ಎಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ರಾಯಚೂರು ಜಿಲ್ಲೆಯಲ್ಲಿ ಮಾಡಿದಹಾಗೆ ಮಲೆನಾಡಿನಲ್ಲಿ ಸಹ ಮಾಡಬೇಕು. ಮಲೆನಾಡಿನಲ್ಲಿ ಬೇಕಾದಷ್ಟು ಜಮೀನು ಇದೆ. ಅಲ್ಲಿ ಎಕ್ಸ್‌ಟೆನ್ಸಿವ್ ಅಗ್ರಿಕಲ್ಚರಲ್ ಫಾರ್ಮಿಂಗ್ ಎಂದು ಮಾಡಿದ್ದಾರೆ. ಮಲೆನಾಡಿನಲ್ಲಿ ಸಾವಿರಾರು ಎಕರೆಯಲ್ಲಿ ಮಾಡಿದರೆ, ಮಲೆನಾಡಿನ ಜನರು ಪರಿಸ್ಥಿತಿಗೆ ಹೊಂದಿಕೊಂಡು ವ್ಯವಸಾಯ ಮಾಡವುದಕ್ಕೆ ಒಂದು ದಾರಿ ತೋರಿಸಿಕೊಟ್ಟ ಹಾಗೆ ಆಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಲು ಇಚ್ಛಿಸುತ್ತೇನೆ.

ಇದಲ್ಲದೆ ಪಶು ಸಂಗೋಪನೆ ವಿಚಾರದಲ್ಲಿ ಮಲೆನಾಡಿನಲ್ಲಿ ತಳಿ ಅಭಿವೃದ್ಧಿಯಾಗಿಲ್ಲ. ಈ ವಿಚಾರದಲ್ಲಿ ಮಂತ್ರಿಗಳಾದ ಶ್ರೀ ಶಂಕರ್‌ರಾವ್ ಅವರು ಹೆಚ್ಚು ಆಸಕ್ತಿ ವಹಿಸಿದ್ದಾರೆ ಮಲೆನಾಡಿನ ವಿಚಾರದಲ್ಲಿ ಉತ್ತಮ ತಳಿ ತಯಾರಿಸಬೇಕು. ಅದಕ್ಕಾಗಿ ಏನು ಮಾಡಬೇಕೋ ಅದನ್ನು ಮಾಡಿ ಕೊಟ್ಟಿಲ್ಲ. ಆದುದರಿಂದ ಕೂಡಲೇ ಮಲೆನಾಡಿನಲ್ಲಿ ಒಂದು ಬ್ರೀಗ್‌ಡಿಂಸೆಂಟರ್ ಸ್ಥಾಪನೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ನಮ್ಮ ಮಲೆನಾಡಿನಲ್ಲಿ ಇರತಕ್ಕಂಥ ಹಿಲ್ ಟ್ರೈಬ್ಸ್ ಜನರು ಕಾಡಿನಲ್ಲಿ ಎಮ್ಮೆಗಳನ್ನು ಇಟ್ಟುಕೊಂಡು ಹಾಲು ಉತ್ಪಾದನೆ ಮಾಡಿ ಅದರಿಂದ ಜೀವನ ಮಾಡುತ್ತಾರೆ. ಅವರು ನೂರಾರು ಲೀಟರ್ ಹಾಲು ತಯಾರು ಮಾಡುತ್ತಾರೆ. ಹಾಲು ಉತ್ಪಾದನೆಗೆ ಹೆಚ್ಚಿನ ಶ್ರಮ ವಹಿಸುತ್ತಾರೆ. ಅವರಿಗೆ ಬೇಕಾದ ಸಹಾಯ ಸೌಕರ್ಯ ಒದಗಿಸಿ ಕೊಟ್ಟರೆ ಬಹುಶಃ ಅವರು ಇನ್ನೂ ಹೆಚ್ಚಿನ ರೀತಿಯಲ್ಲಿ ಈ ಡೈರಿ ಫಾರ್ಮಿಂಗ್ ಯೋಜನೆ ಏನು ಇದೆ ಅದು ಚೆನ್ನಾಗಿ ಯಶಸ್ವಿಯಾಗಬಹುದು ಎಂದು ನನಗೆ ಅನಿಸುತ್ತದೆ.

ಇನ್ನು ಅರಣ್ಯ ಇಲಾಖೆಗೆ ಸಂಬಂಧಪಟ್ಟ ವಿಷಯದ ಬಗ್ಗೆ ಎರಡು ಮಾತು ಹೇಳುವುದಕ್ಕೆ ಮುಂಚೆ ಈ ಕಚ್ಚೆಗೌಳಿಗರ ಬಗ್ಗೆ ಹೇಳುತ್ತೇನೆ. ಅವರು ಕಾಡಿನಲ್ಲಿ ಗುಡಿಸಲು ಕಟ್ಟಿಕೊಂಡು ಇರುತ್ತಾರೆ. ಅವರು ಎಮ್ಮೆಗಳನ್ನು ಮೇಯಿಸಿಕೊಂಡು, ಅಲ್ಲಿ ಗೊಬ್ಬರ ಜಮಾಯಿಸಿಕೊಂಡು ಅದರಿಂದ ಬರುವ ಉತ್ಪತ್ತಿಯಿಂದ ಜೀವನ ಮಾಡುತ್ತಾರೆ. ಅವರು ಚೆನ್ನಾಗಿ ಹಾಲನ್ನು ಉತ್ಪಾದನೆ ಮಾಡುತ್ತಾರೆ.

ಇಂಥ ಜನರಿಗೆ ಅರಣ್ಯ ಇಲಾಖೆಯವರು ಬಹಳ ಕಿರುಕುಳ ಕೊಡುತ್ತಿದ್ದಾರೆ. ಅವರಿಗೆ ಕಾಡಿನಲ್ಲಿ ಇರುವುದಕ್ಕೆ ಜಾಗ ಇಲ್ಲದಂತಾಗಿದೆ. ಅವರಿಗೆ ಗ್ರೇಜಿಂಗ್ ಫೀಯನ್ನು ಕೂಡ ಮಾಫಿ ಮಾಡಬೇಕೆಂದು ಹೇಳುತ್ತೇನೆ. ಕಚ್ಚೇಗೌಳಿಗರು ಹಿಲ್ ಟ್ರೈಬಿಗೆ ಸೇರಿದ ಜನರು. ಇವರಿಗೆ ಎಲ್ಲ ರೀತಿಯರಿಯಾಯಿತಿಗಳನ್ನೂ ಕೊಟ್ಟು ಅವರಿಗೆ ಅನುಕೂಲಮಾಡಬೇಕೆಂದು ಹೇಳುತ್ತೇನೆ. ಈ ದಿವಸ ಸರ್ಕಾರದವರು ಬೆಂಗಳೂರಿನ

(ಶ್ರೀ ಎ. ಆರ್. ಬದ್ರೀನಾರಾಯಣ)

ಪಕ್ಕದಲ್ಲಿರುವ ಹೆಸರುಘಟ್ಟದಲ್ಲಿ ಇಂಡೋಡೇನಿಷ್ ಡೈರಿಫಾರ್ಮಿಂಗ್ ಮಾಡಿರುವಂತೆ ನಮ್ಮ ಮಲೆನಾಡಿನಲ್ಲೂ ಒಂದು ಇಂಡೋಡೇನಿಷ್ ಡೈರಿಫಾರ್ಮಿಂಗ್ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ ಆದರೆ ನಮ್ಮ ಮಲೆನಾಡಿನಲ್ಲಿರತಕ್ಕ ಪಶುಸಂಗೋಪನ ಇಲಾಖೆಯವರು ಸರಿಯಾಗಿ ಕೆಲಸ ಮಾಡುತ್ತಿಲ್ಲ ಆ ಇಲಾಖೆಯವರಿಂದ ಜನರಿಗೆ ಎಷ್ಟು ಸಹಾಯ ದೊರೆಯಬೇಕಾಗಿತ್ತೋ ಅಷ್ಟು ಸಹಾಯ ದೊರೆಯುತ್ತಿಲ್ಲ. ಆ ಇಲಾಖೆಯವರು ಹೆಚ್ಚಿನ ದಕ್ಷತೆಯಿಂದ ಕೆಲಸ ಮಾಡುವಂತೆ ಮಾಡುವುದಕ್ಕೆ ಸರ್ಕಾರದವರು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂದು ಹೇಳುತ್ತೇನೆ.

3-00 P. M.

ಇನ್ನೊಂದು ಪ್ರಾಮುಖ್ಯವಾದ ವಿಚಾರ ಎಂದರೆ ಅದು ಮಲೆನಾಡಿನಲ್ಲಿ ಅಂದರೆ ಉತ್ತರ ಕನ್ನಡ ದಕ್ಷಿಣ ಕನ್ನಡ ಜಿಲ್ಲೆಗಳಲ್ಲೂ ಮತ್ತು ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಹೇರಳವಾಗಿ ದೊರೆಯುತ್ತಿರುವ ಹಾಲುಮಡ್ಡಿಗೆ ಸಂಬಂಧಪಟ್ಟ ವಿಷಯ ಅದು ಈ ಹಾಲುಮಡ್ಡಿಯನ್ನು ತೆಗೆಯತಕ್ಕ ಗಿಡಗಳೇನಿವೆ ಅವುಗಳನ್ನು ಮಾರ್ಕ್ ಮಾಡಿ ಇಂಥ ಗಿಡಗಳಲ್ಲೇ ಆ ಹಾಲನ್ನು ತೆಗೆಯಬೇಕೆಂದು ಕಂಡೀಷನ್ ಹಾಕಿದ್ದರೂ ಅವರು ಮಾರ್ಕ್ ಮಾಡದೆ ಇರತಕ್ಕ ಎಳೆಯ ಪ್ರಾಯದ ಗಿಡಗಳನ್ನು ಟ್ಯಾಪ್ ಮಾಡುತ್ತಿರುವುದರಿಂದ ಅರಣ್ಯ ಬಹಳ ಬೇಗ ನಾಶವಾಗುವುದಕ್ಕೆ ಹತ್ತಿದೆ. ಅಲ್ಲದೆ ಈ ಹಾಲುಮಡ್ಡಿಯ ಕಂಟ್ರಾಕ್ಟ್ ಕೂಡ ಒಂದೇ ಸಂಸಾರದ ಜನರು ಅಲ್ಲಲ್ಲೆ ಹಂಚಿಕೊಂಡು ಹರಾಜಿಗೆ ನಿಲ್ಲುತ್ತಿರುವುದರಿಂದ ಸರ್ಕಾರಕ್ಕೆ ಬರತಕ್ಕ ಆದಾಯ ಕೂಡ ಕಡಿಮೆಯಾಗುತ್ತಿದೆ. ಅಲ್ಲದೆ ಈ ಜನ ನಂಬರ್ ಹಾಕದೆ ಇರತಕ್ಕ ಮರಗಳನ್ನು ಟ್ಯಾಪ್ ಮಾಡಿದ್ದರಿಂದ ಅವರಿಗೆ ಜುಲ್ಮಾನೆಯನ್ನು ಹಾಕಿದ್ದರೂ ಅದನ್ನು ಅವರಿಂದ ವಸೂಲ್ಮಾಡುವುದಕ್ಕಾಗಿಲ್ಲ ಹಾಗಿದ್ದರೂ ಮತ್ತೆ ಅವರಿಗೇ ಕಂಟ್ರಾಕ್ಟನ್ನು ಕೊಟ್ಟಿದ್ದಾರೆ. ಈ ವಿಚಾರಕ್ಕೆ ಸರ್ಕಾರದವರು ಹೆಚ್ಚಿನ ಗಮನ ಕೊಡಬೇಕು. ಮತ್ತು ಈ ವಿಚಾರದಲ್ಲಿ ಸೂಕ್ತ ವಿಚಾರಣೆ ನಡೆಸುವುದಕ್ಕೆ ಸರ್ಕಾರದವರು ಸ್ಪೆಷಲ್ ಅಧಿಕಾರಿಗಳನ್ನು ನೇಮಕ ಮಾಡುವುದಾದರೆ ನಾನು ಅವರಿಗೆ ಅಗತ್ಯವಾಗಿ ಬೇಕಾದ ವಿಷಯಗಳನ್ನು ಮತ್ತು ಎಲ್ಲೆಲ್ಲಿ ಏನೇನು ಅನ್ಯಾಯಗಳು ನಡೆದಿರುತ್ತವೆಂಬುದನ್ನೂ ತಿಳಿಸುವುದಕ್ಕೆ ತಯಾರಾಗಿದ್ದೇನೆ ಆ ಬಗ್ಗೆ ಸಾಕ್ಷ್ಯ ಒದಗಿಸುವುದಕ್ಕೆ ಒಬ್ಬ ಆಸಾಮಿಯನ್ನು ಬೇಕಾದರೂ ಕೊಡುತ್ತೇನೆ. ನಾನು ಇದೇ ವಿಚಾರದಲ್ಲಿ ಒಂದು ಪ್ರಶ್ನೆಯನ್ನೂ ಕೂಡ ಕಳುಹಿಸಿದ್ದೇನೆ. ಇನ್ನು ಕೆಲಕೆಲವು ಕಡೇ ಅರಣ್ಯ ಇಲಾಖೆಯವರು ಕಾಡನ್ನು ಕಡಿದು ಅಲ್ಲಿ ಯೂಕ್ಲಿಪ್ಟಸ್ ಮರಗಳನ್ನು ಬೆಳೆಸುತ್ತಿದ್ದಾರೆ. ಅಂಥ ಕಡೆಗಳಲ್ಲಿ ವನ್ಯ ಮೃಗಗಳೂ ಇರುವುದಿಲ್ಲ ಹುಲ್ಲು ಕೂಡ ಅಲ್ಲಿ ಬೆಳೆಯುವುದಿಲ್ಲ ಅದರಿಂದ ಕಾಡು ಹಾಳಾಗುತ್ತಿದ ಅದಕ್ಕೆ ಬದಲಾಗಿ ಇರತಕ್ಕ ಕಾಡನ್ನು ನಾಶಮಾಡದೆ ಎಲ್ಲಿ ಮರಗಳು ಇಲ್ಲದೆ ಬಯಲು ಪ್ರದೇಶವಿರುತ್ತದೋ ಅಲ್ಲಿ ಯೂಕ್ಲಿಪ್ಟಸ್ ಮರಗಳನ್ನು ಬೆಳೆಸಬೇಕೆಂದು ಹೇಳುತ್ತೇನೆ.

ಇನ್ನು ಅರಣ್ಯವನ್ನು ರಕ್ಷಣೆ ಮಾಡತಕ್ಕ ಬಗ್ಗೆ ಗಾರ್ಡುಗಳನ್ನು ನೇಮಕ ಮಾಡಿದ್ದಾರೆ. ಅವರಿಗೆ ಯಾವ ವಿದ್ಯಾ ಅರ್ಹತೆಯೂ ಇರುವುದಿಲ್ಲ ಅವರಿಗೆ ಟೆಕ್ನಿಕಲ್ ನೋಹೌ ಕೂಡ ಅವರಿಗೆ ಅರಿವಿರುವುದಿಲ್ಲ ಆದ್ದರಿಂದ ಇಂಥ ವಿಚಾರಗಳಲ್ಲಿ ಯಾರಿಗೆ ಹೆಚ್ಚಿನ ಪರಿಜ್ಞಾನವಿರುತ್ತದೋ ಅಂಥ ಜನರನ್ನು ನೇಮಕ ಮಾಡಿಕೊಳ್ಳಬೇಕೆಂದು ಹೇಳುತ್ತೇನೆ. ನಮ್ಮ ಅರಣ್ಯಗಳಲ್ಲಿ ಈಗಾಗಲೆ ಬಿದಿರು ಮಳೆಗಳ ವಂಶವೇ ಕ್ಷೀಣಿಸುತ್ತಾ ಬಂದಿದೆ. ಇದು ದೇಶದ ಒಂದು ಐಶ್ವರ್ಯ ಇಂಥವುಗಳನ್ನು ಹೆಚ್ಚು ಬೆಳೆಸುವುದಕ್ಕೆ ಪ್ರಯತ್ನ ನಡೆಸಿಲ್ಲ. ಈ ದಿವಸ ಜಪಾನಿನ ಜನರು ಬಿದಿರನ್ನು ಬೆಳೆಯತಕ್ಕ ವಿಚಾರದಲ್ಲಿ ಬಹಳ ಮುಂದುವರೆದಿದ್ದಾರೆ ಅವರು ಅಲ್ಲಿ ಯಾವ ಬಣ್ಣದ ಬಿದಿರನ್ನು ಬೇಕಾದರೆ ಅಂಥ ಬಣ್ಣದ ಬಿದಿರನ್ನೇ ಬೆಳೆಯುತ್ತಾರಂತೆ. ಅಷ್ಟೇ ಅಲ್ಲ ಅವರು ಯಾವ ಸೈಜಿನ ಬಿದಿರು ಬೇಕೆಂದರೆ ಆ ಸೈಜಿನ ಬಿದಿರನ್ನೇ ಬೆಳೆಯುತ್ತಾರಂತೆ. ನಾನು ಹೇಳಬೇಕಾಗಿದ್ದ ವಿಷಯಗಳಿನ್ನೂ ಬಹಳವಾಗಿದ್ದವು ಆದರೆ ಅಧ್ಯಕ್ಷರು ಗಂಟೆಯನ್ನು ಬಾರಿಸುತ್ತಿರುವುದರಿಂದ, ನನ್ನ ಮಾತುಗಳನ್ನು ಇಷ್ಟಕ್ಕೇ ಮುಗಿಸುತ್ತೇನೆ. ಆದರೆ ನಾನು ಇಲ್ಲಿಯವರೆಗೂ ಪ್ರಸ್ತಾಪಿಸಿರತಕ್ಕ ವಿಷಯಗಳಿಗೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡಬೇಕೆಂದು ಪ್ರಾರ್ಥಿಸಿ ನನ್ನ ಮಾತುಗಳನು ಮುಗಿಸುತ್ತೇನೆ.

†ಶ್ರೀ ಬಾಪೂಗೌಡ (ಷಹಪೂರ್) :— ಮಾನ್ಯ ಸಭಾಪತಿಯವರೇ ವ್ಯವಸಾಯ ಅರಣ್ಯ ಮತ್ತು ಪಶು ಸಂಗೋಪನ ಶಾಖೆಯ ಮಂತ್ರಿಗಳು ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ನಾನು ಸಮರ್ಥಿಸುತ್ತ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಚ್ಛಿಸುತ್ತೇನೆ.

ನಮ್ಮ ರಾಜ್ಯದಲ್ಲಿ ಮುಕ್ಕಾಲು ಮೂರುವೀಸೆ ಪಾಲಿನ ಜನರು ಭೂಮಿಯನ್ನು ಅವಲಂಬಿಸಿ ಒಕ್ಕಲುತನದಿಂದ ಜೀವನ ಮಾಡತಕ್ಕ ಜನರಾಗಿದ್ದಾರೆ ಇಂಥ ಜನರು ನಮ್ಮ ರಾಜ್ಯದಲ್ಲಿ ಶೇ. ೭೦ ರಷ್ಟು ಇದ್ದಾರೆ

ನಾವು ಈ ಜನತೆಯು ಅಭಿವೃದ್ಧಿಗೆ ನಮ್ಮ ಆಯವ್ಯಯದಲ್ಲಿ ಎಷ್ಟರ ಮಟ್ಟಿಗೆ ಹಣವನ್ನು ಒದಗಿಸಬೇಕಾಗಿತೋ ಅಷ್ಟರ ಮಟ್ಟಿಗೆ ಹಣವನ್ನು ಒದಗಿಸುವುದಕ್ಕಾಗಿಲ್ಲ ರಾಜ್ಯಕ್ಕೆ ಬರತಕ್ಕ ವರಮಾನದಲ್ಲಿ ಶೆಕಡ ೬೦ ರಷ್ಟು ವರಮಾನ ಒಕ್ಕಲುತನದವರಿಂದ ಬರುತ್ತಿದೆ ನಮ್ಮ ರಾಜ್ಯದ ವರಮಾನ ೧೩೮೦ ಕೋಟಿ ರೂಪಾಯಿಗಳಿದ್ದರೂ ನಾವು ಈ ದಿವಸ ಒಕ್ಕಲುತನದಿಂದ ಜೀವನ ಮಾಡತಕ್ಕ ಜನರಿಗೆ ಸಾಕಷ್ಟು ಹಣವನ್ನು ಒದಗಿಸುವುದಕ್ಕಾಗಿಲ್ಲ ಇವರಲ್ಲಿ ಶೇ. ೪೦ ರಷ್ಟನ್ನಾದರೂ ಒದಗಿಸಬೇಕಾಗಿತ್ತೆಂದು ನಸಗನಿಸುತ್ತಿದೆ. ಇನ್ನಾದರೂ ನಾವು ಈ ಒಕ್ಕಲುತನದವರಿಗೆ ಅವರ ಅಭಿವೃದ್ಧಿಗೆ ಹೆಚ್ಚಿನ ಗಮನ ಕೊಡಬೇಕು. ಆದರೆ ಈ ದಿವಸ ಸರ್ಕಾರದವರಿಂದ ದೊರೆಯತಕ್ಕ ಸಹಾಯ ಸೌಲಭ್ಯಗಳೇನಿವೆ? ಅವುಗಳೆಲ್ಲಾ ದೊಡ್ಡ ದೊಡ್ಡ ಭೂ ಮಾಲೀಕರುಗಳಿಗೆ ಅಂದರೆ ೧೦-೧೫ ಎಕರೆಗಳಿಗೆ ಮೇಲ್ಪಟ್ಟು ಏನು ಭೂಮಿಯನ್ನಿಟ್ಟುಕೊಂಡು ಇದ್ದಾರೆ ಅಂಥವರಿಗೆ ಮಾತ್ರ ಅನುಕೂಲವಾಗುತ್ತಿದೆಯೇ ವಿನಾ ಚಿಕ್ಕಪುಟ್ಟ ರೈತರಿಗೆ ಯಾವ ಅನುಕೂಲವಾಗಿಲ್ಲ. ಹೀಗಾಗಿ ಅವರು ಆರ್ಥಿಕ ಸ್ಥಿತಿಯಲ್ಲಿ ಬಹಳ ಹಿಂದುಳಿದಿದ್ದಾರೆ. ಆದ್ದರಿಂದ ಅವರಿಗೆ ಇಂದಿನ ತಾಂತ್ರಿಕ ಯುಗದಲ್ಲಿ ಅವರಿಗೆ ಸಾಕಷ್ಟು ಮಾಹಿತಿದೊರಕಿಸಿಕೊಟ್ಟು ಅನುಕೂಲ ಮಾಡಿಕೊಡಬೇಕಾಗಿದೆ ಈ ಅನುಕೂಲಗಳನ್ನು ಸರ್ಕಾರದವರು ಸಣ್ಣ ಪುಟ್ಟ ರೈತರಿಗೆ ಒದಗಿಸದೇ ಇರುವುದರಿಂದ ಬಡವರಿನ್ನೂ ಬಡವರಾಗಿ ಸ್ಥಿತಿವಂತರಿನೂ ಹೆಚ್ಚಿನ ಸ್ಥಿತಿವಂತರಾಗುತ್ತಿದ್ದಾರೆ. ಈ ಅಂತರವನ್ನು ತಪ್ಪಿಸುವುದಕ್ಕೆ ಸರ್ಕಾರದವರು ಕಳೆದ ೧೨ ವರ್ಷಗಳಿಂದ ಪ್ರಯತ್ನ ಮಾಡುತ್ತಿದ್ದರೂ ಅದು ಸಾಧ್ಯವಾಗಿಲ್ಲ. ಕಳೆದ ಹತ್ತು ವರ್ಷಗಳಲ್ಲಿಸರ್ಕಾರದವರು ರೈತರಿಗೆ ಹೆಚ್ಚಿನ ಪ್ರಮಾಣದಲ್ಲಿ ಉತ್ತಮ ತಳಿಯ ಬಿತ್ತನೆ ಬೀಜಗಳು ಮತ್ತು ಗೊಬ್ಬರ ಹಾಗೂ ಪೆಸ್ಟಿಸೈಡುಗಳನ್ನು ಒದಗಿಸುತ್ತಿದ್ದಾಗ್ಯೂ ಸಣ್ಣ ಪುಟ್ಟ ರೈತರಿಗೆ ಅವುಗಳ ಅನುಕೂಲ ಸರಿಯಾಗಿ ಲಭಿಸುತ್ತಿಲ್ಲ. ಆದರೆ ಸರ್ಕಾರದವರು ಇತ್ತೀಚೆಗೆ ರೇಡಿಯೋ ಪ್ರಸಾರದ ಮೂಲಕ ರೈತರಿಗೆ ಒಂದು ಹೆಚ್ಚಿನ ಜ್ಞಾನೋದಯವಾಗುವುಕ್ಕೆ ಅವಕಾಶ ಮಾಡಿದ್ದಾರೆ. ಅದಕ್ಕಾಗಿ ನಾನು ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ ಈ ಪ್ರಯತ್ನಗಳಿನ್ನೂ ಸಾಲವು. ಆದರೆ ಈ ದಿವಸ ನಮ್ಮ ರೈತರಿಗೆ ಇನ್ನೂ ಹೊಸ ಹೊಸ ನಮೂನೆಯ ಪೆಸ್ಟಿ ಸೈಡುಗಳ ಹೆಸರು ಅಥವಾ ಹೊಸ ನಮೂನೆಯ ಗೊಬ್ಬರ ಹೆಸರು ಕೂಡ ಗೊತ್ತಿಲ್ಲ ಅದನ್ನು ನಾವು ಅವರಿಗೆ ಮನವರಿಕೆ ಮಾಡಿಕೊಡಬೇಕಾಗಿದೆ. ಆದುಃದರಿಂದ ನಮ್ಮ ರೈತರುಗಳಿಗೆ ಬೇಸಿಗೆಯ ಕಾಲದಲ್ಲಾದರೂ ಒಂದೆರಡು ತಿಂಗಳು ಕಾಲ ಒಂದು ಇಂಟೆನ್ಸೀವ್ ಟ್ರೈನಿಂಗನ್ನು ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕಾದ್ದು ಅತ್ಯಗತ್ಯ.

ರಾತ್ರಿ ಸ್ಕೂಲ್‌ಗಳನ್ನು ಅಡಲ್ಟ್ಸ್‌ಗೋಸ್ಕರ ನಡೆಸುತ್ತಿದ್ದಾರೆ. ಇದನ್ನು ಇನ್ನೂಹೆಚ್ಚಿನ ಪ್ರಮಾಣದಲ್ಲಿ ನಡೆಸಿದರೆ ಹೊಸರೀತಿಯ ಪದ್ಧತಿಗಳನ್ನೂ ಮತ್ತು ಹೊಸರೀತಿಯಲ್ಲಿ ಆಗತಕ್ಕಂಥ ಕ್ರಾಂತಿಯನ್ನೂ ಅವರು ಅರಿತುಕೊಂಡು ಮುಂದೆ ಅವರ ಜಮೀನನ್ನು ಅಭಿವೃದ್ಧಿ ಮಾಡಿಕೊಳ್ಳುವ ಪರಿಸ್ಥಿತಿ ಉಂಟಾಗುತ್ತದೆ. ಆದುದರಿಂದ ಈ ಟ್ರೈನಿಂಗ್ ಸೆಂಟರ್ಸ್‌ನ್ನು ಆದಷ್ಟು ಹೆಚ್ಚು ಮಾಡಬೇಕು ಎಂದು ಹೇಳುತ್ತೇನೆ. ಇದನ್ನು ಕೇವಲ ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಮಾಡಿದರೆ ಲಾಭವಾಗುವುದಿಲ್ಲ. ನಮ್ಮ ರಾಜ್ಯದಲ್ಲಿ ಶೇಕಡ ೮೦ ರಷ್ಟು ಡ್ರೈ ಕಲ್ಟಿವೇಷನ್ ಇದೆ. ಸರ್ಕಾರದವರು ಪ್ರಯತ್ನಮಾಡಿದರೆ ೨೦ ರಷ್ಟು ಭೂಮಿಯಲ್ಲಿ ವ್ಯವಸಾಯ ಮಾಡಬಹುದು. ಹೆಡ್ ಡ್ರೈ ಲ್ಯಾಂಡ್‌ನಲ್ಲಿ ಯಾವರೀತಿ ಕ್ರಾಂತಿ ಆಗಬೇಕಾಗಿತ್ತೋ ಆರೀತಿ ಇನ್ನೂ ಆಗಿಲ್ಲ. ಎಲ್ಲಿ ನೀರಿನ ಅನುಕೂಲತೆ ಇರುತ್ತದೊ ಎಲ್ಲಿ ಅಪ್ರೋಚ್ ಕ್ರಾಪ್ ಇರುತ್ತದೋ ಎಲ್ಲಿ ಇನ್‌ಕಂ ಇರುತ್ತದೋ ಅಲ್ಲಿ ಅನುಕೂಲತೆ ಇರುತ್ತದೆ, ಹಸಿರು ಕ್ರಾಂತಿ ಡ್ರೈಲ್ಯಾಂಡ್‌ನಲ್ಲಿ ಆಗುವುದು ಕಷ್ಟ, ಡ್ರೈಲ್ಯಾಂಡ್‌ನಲ್ಲಿ ರೈತ ಭೂಮಿ. ಆಕಾಶ ನೋಡುತ್ತಿರುತ್ತಾನೆ. ಅಲ್ಲಿ ಮಳೆ ಬಂದರೆ ಬೆಳೆಯುಬೇಕು ಇಲ್ಲದಿದ್ದರೆ ಇಲ್ಲ. ಪ್ರಾಜೆಕ್ಟ್ ಇರುವಂಥ ಕಡೆಯ ಹಸಿರು ಕ್ರಾಂತಿ ಕಾಣುತ್ತದೆ. ಇದಕ್ಕೆ ಹೊಸರೀತಿಯ ಪೆಸ್ಟಿಸೈಡ್‌ಗಳನ್ನು, ಗೊಬ್ಬರಗಳನ್ನು ಉಪಯೋಗ ಮಾಡಿಕೊಳ್ಳಬೇಕೆಂದು ಹೇಳಿದರು. ಆದರೆ ಆದನ್ನು ಉಪಯೋಗ ಮಾಡಿಕೊಳ್ಳಲು ಒಕ್ಕಲಿಗನಿಗೆ ಭಯ ಬಂದಿದೆ. ಆದ್ದರಿಂದ ರೈತರಿಗೆ ಹೆಚ್ಚಿನ ಮಟ್ಟದಲ್ಲಿ ಟ್ರೈನಿಂಗ್ ಕೊಡಬೇಕು. ಪ್ರತಿ ತಾಲ್ಲೂಕಿನ ಮಟ್ಟದಲ್ಲೂ ರೈತರಿಗೆ ಅನುಕೂಲ ಮಾಡಿಕೊಡಬೇಕು. ಈವತ್ತು ಪಂಚಾಯಿತಿ ಬಗ್ಗೆ ವಿವಿಧ ಯೋಜನೆಗಳನ್ನು ತಯಾರು ಮಾಡುತ್ತಾರೆ. ಅಲ್ಲಿಯ ಗ್ರಾಮ ಸೇವಕರಾಗಲಿ, ಎಕ್ಸಟೆನಷನ್ ಆಫೀಸರ್ ಆಗಲಿ ಸರ್ಕಾರಕ್ಕೆ ಕೊಡುವ ವರದಿಯೆಲ್ಲಾ ಬರೀ ಕಾಗದದಲ್ಲಿಯೇ ಇರುತ್ತದೆ. ಎಲ್ಲಾ ಪ್ಲಾನುಗಳು ಹಾಗೆಯೇ ಇದೆ, ಆದರೆ ಯಾವುದೂ ಕಾರ್ಯಗತ ಆಗುತ್ತಾ ಇಲ್ಲ. ಈವೊತ್ತು ಹೊಸದಾಗಿ ವ್ಯವಸಾಯ ಕಾಲೇಜುಗಳನ್ನು ತೆರೆಯುತ್ತಾ ಇದ್ದೀರಿ. ರಾಯಚೂರುನಲ್ಲೂ ಕಾಲೇಜು ಮಾಡಿದ್ದೀರಿ, ಈ ಕಾಲೇಜುಗಳನ್ನು ಏನೊ ವೇಗದಿಂದ ತೆರೆಯುತ್ತಾ ಇದ್ದೀರಿ ಆ ಕಾಲೇಜಿನಿಂದ ಬರತಕ್ಕಂಥ ಒಕ್ಕಲಿಗ ಹುಡುಗರಿಗೆ ಏನು ಮಾಡುತ್ತಾ ಇದ್ದೀರಿ. ಆ ಹುಡುಗರಿಗೆ ಆದಷ್ಟು ಮಟ್ಟಿಗೆ ನಿರಾಶೆಯಾಗುತ್ತಾ ಇದೆ. ಈವೊತ್ತು ೧೩೮೦ ಕೋಟಿ ರೂಪಾಯಿಗಳು ವರಮಾನದಲ್ಲಿ, ಅರ್ಧದಷ್ಟಾದರೂ ಈ ವ್ಯವಸಾಯಕ್ಕೆ ಕೊಡಬೇಕಾಗಿತ್ತು, ೧೦೦ ಕೋಟಿ ರೂಪಾಯಿಗಳನ್ನು ಸಾಲದ ಮುಖಾಂತರ ಕೊಡಬೇಕಾಗಿತ್ತು. ೧೧ ಕೋಟಿ ರೂಪಾಯಿಗಳನ್ನು ಈ ಒಂದು ಮೈನರ್ ಇರ್ರಿಗೇಷನ್‌ಗೆ ಕೊಟ್ಟಿದ್ದೀರಿ,

(ಶ್ರೀ ಬಾಪೂಗೌಡ)

ಲಿಫ್ಟ್ ಇರಿಗೇಶನ್ ಪಂಪ್ ಸೆಟ್ಟುಗಳು ಮೊದಲಾದವುಗಳಿಗೆ ೨೦೦ ಕೋಟಿ ರೂಪಾಯಿಗಳನ್ನು ಕೊಡುವಂತೆ ಮಾಡಿಕೊಂಡಿದ್ದೇವೆ ಎಂದು ಹೇಳಿದ್ದಾರೆ. ಇದು ಬಹಳ ಕಡಿಮೆ ಹಣ ಇನ್ನು ವರ್ಷ ವರ್ಷಕ್ಕೆ ಅಗ್ರಿಕಲ್‌ಚರಲ್ ಗ್ರಾಜುಯೇಟ್ಸ್ ಏನು ಬರುತ್ತಿದಾಲೋ ಅವರನ್ನು ಗ್ರಾಮಸೇವಕರು ಇರುವ ಕಡೆ ೧೦-೧೦ ಹಳ್ಳಿಗೆ ಒಬ್ಬೊಬ ಗ್ರಾಜುಯೇಟ್ಸ್ ಇಟ್ಟು ಆ ವಕ್ಕಲಿಗರಿಗೆ ತಿಳುವಳಿಕೆ ಕೊಡುವಂತೆ ಅವಕಾಶ ಮಾಡಿಕೊಟ್ಟರೆ ಹೊಸ ಕ್ರಾಂತಿಯಾಗುತ್ತದೆ. ಮತ್ತು ಹೆಚ್ಚಿನ ರೀತಿಯಲ್ಲಿ ಹೊಸನಮೂನೆ ಗೊಬ್ಬರ ಉಪಯೋಗಿಸುವ ಅದಕಾಶ ವಕ್ಕಲಿಗನಿಗೆ ಸಿಕ್ಕುತ್ತದೆ. ಸರ್ಕಾರ ಈ ಒಂದು ಅವಕಾಶವನ್ನು ಮುಂದಿನ ಅವಧಿಯಲ್ಲಾದರು ರೈತರಿಗೆ ಕಲ್ಪಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತೇನೆ. ಏತಕ್ಕೆಂದರೆ ದೇಶದಲ್ಲಿ ಈವೊತ್ತಿನ ದಿವಸ ಜನಸಂಖ್ಯೆ ಬೆಳೆಯುತ್ತಾಇದೆ. ವಕ್ಕಲುತನದ ಒಡುವಳಿದಾರರಿಗೆ ಹೆಚ್ಚಿನ ಪ್ರಮಾಣದಲ್ಲಿ ಒಂದು ಪ್ರೋತ್ಸಾಹವನ್ನು ಕೊಡದೇ ಹೋದರೆ ನನಗೆ ಅನಿಸುತ್ತದೆ ೧೯೯೦ ರಲ್ಲಿ ಏನಾಗುತ್ತದೆ ಎಂದರೆ ದೇಶದಲ್ಲಿ ಹಾಹಾಕಾರ ಆಗುವ ಪರಿಸ್ಥಿತಿ ಬರುತ್ತದೆ. ಎತಕ್ಕೆಂದರೆ ನಮ್ಮ ಹಿಂದೂಸ್ಥಾನದಲ್ಲಿ ಜನಸಂಖ್ಯೆ ಬಗ್ಗೆ ವಿಚಾರ ಮಾಡುವುದಾದರೆ ಪ್ರತಿಯೊಂದ ತಾಸಿಗೂ ೨೫೦೦ ಮಕ್ಕಳು ಹುಟ್ಟುತ್ತಿವೆ. ಅಂದರೆ ಪ್ರತಿ ದಿವಸ ೫೦ ಸಾವಿರ ಮಕ್ಕಳು ಹುಟ್ಟುತ್ತಿವೆ. ತಜ್ಞರು ಪ್ರಕಾರ ಹೇಳುವ ಪ್ರಕಾರ ೨೦ನೇ ಶತಮಾನದ ಒಳಗೆ ಆಗುವ ಪರಿಸ್ಥಿತಿ ನೋಡಿದರೆ ೧೦೦ ಕೋಟಿ ಜನಸಂಖ್ಯೆ ಆಗುತ್ತದೆ. ಆದುದರಿಂದ ಅದಕ್ಕೆ ತಕ್ಕಂತೆ ಆಹಾರವನ್ನು ಬೆಳೆಸುವ ಕಡೆ ಆ ಗಮನ ಕೊಡಬೇಕು. ಈ ಸಂದರ್ಭದಲ್ಲಿ ನಾನು ಹೇಳುವುದು ಏಕೆಂದರೆ ನೀವು ವಕ್ಕಲುತನಕ್ಕೆ ಎಷ್ಟೋ ಅನೂಕೂಲ ಮಾಡಿಕೊಡುತ್ತಿದ್ದೀರಿ ಅಲ್ಲದೆ ವೀಕರ್ ಸೆಕ್ಷನ್‌ಗೂ ಅನುಕೂಲ ಮಾಡಿಕೊಡುತ್ತೇವೆ ಎಂದು ಹೇಳುತ್ತೀರಾ. ಆದರೆ ರೈತರಿಗೆ ನೀವು ಕೊಟ್ಟಿರುವ ಭೂಮಿಯ ಮೇಲೆ ಪ್ರಾಣಇದೆ. ಎಷ್ಟೋ ರೈತರು ಬಾವಿ ತೆಗೆಯಬೇಕೆಂದು ತಕಾವಿ ಸಾಲ ತೆಗೆದುಕೊಂಡಿದ್ದಾರೆ. ಕೆಲವುಕಡೆ ಆ ಬಾವಿಯ ಕೆಲಸ ಪೂರ್ತಿಯಾಗದೆ ಹಾಗೆಯೇ ಇದೆ. ಈ ತರಹ ಪರಿಸ್ಥಿತಿ ಇರುವುದರಿಂದ ಸಾರ್ಕಾರ ದವರು ತಾವೆ ಸ್ವಂತವಾಗಿ ೫ ಎಕರೆ ೧೦ ಎಕರೆ, ಜಮೀನು ಇರುವಂಥ ಒಡುವಳಿದಾರರ ಜಮೀನುಗಳಲ್ಲಿ ಬಾವಿ ತೆಗೆಸಿಕೊಟ್ಟರೆ ಒಳ್ಳೆಯದು. ಆಮೇಲೆ ಐ. ಪಿ. ಸೆಟ್ಸ್ ಹಾಕಿ ನೀರುಕೊಡುವ ಪ್ರಯತ್ನ ಮಾಡಿದರೆ ಅನುಕೂಲವಾದೀತು. ಈ ರೀತಿ ಮಾಡಿದರೆ ಒಳ್ಳೆಯ ಕಾರ್ಯ ಮಾಡಿದ ಹಾಗಾಗುತ್ತದೆ ಎಂದು ಹೇಳುತ್ತೇನೆ.

ಇನ್ನು ಮೊಬೈಲ್ ಟೆಸ್ಟಿಂಗ್ ಲ್ಯಾಬೊರೇಟರಿ ಉಪಯೋಗ ಪ್ರತಿಯೆಂದು ಜಿಲ್ಲೆಯಲ್ಲೂ ಕೊಡ ಸಿಗುವುದಕ್ಕೆ ಅವಕಾಶ ಮಾಡಿಕೊಡುತ್ತಿದ್ದೀರಿ. ಅದು ಸರಿಯಾಗಿ ನಡೆಯಬೇಕಾದರೆ ಆಡಳಿತ ಸರಿಯಾಗಿ ಇರಬೇಕು. ಆ ಆಡಳಿತ ಏನಾದರೂ ಅಸಂತೋಷ ಬೆಳೆದರೆ ಅದು ಸರಿಯಾಗಿ ನಡೆಯುವುದಿಲ್ಲ. ಈ ರೀತಿ ಇದ್ದರೆ ಪ್ರಜಾಪ್ರಭುತ್ವದಲ್ಲಿ ಜನರು ಯಾವ ಅಭಿವೃದ್ಧಿ ಪರಿಸ್ಥಿತಿಗೂ ಬರುವುದಿಲ್ಲ ಎಲ್ಲಿಯವರೆಗೆ ಪ್ರಜಾಪ್ರಭುತ್ವದಲ್ಲಿ ಆಡಳಿತದ ಮೆಷಿನರಿಯಲ್ಲಿ ಒಂದುರೀತಿಯ ತೃಪ್ತಿ ಶಾಂತಿ ಮತ್ತು ಸರಿಯಾದ ವಾತಾವರಣ ಇರುವುದಿಲ್ಲವೊ ಅಲ್ಲಿಯವರೆಗೆ ಈ ಪ್ರಜಾಪ್ರಭುತ್ವ ಬೆಳೆಯುವುದಕ್ಕೆ ಅವಕಾಶವಾಗುವುದಿಲ್ಲ ಪ್ರತಿಯೊಂದು ಇಲಾಖೆಯಲ್ಲೂ ನೌಕರರು ತಮ್ಮ ಸೀನಿಯಾರಿಟಿ ಪ್ರಶ್ನೆ ಇತ್ಯರ್ಥವಾಗಿಲ್ಲ, ನಮಗೆ ಬರಬೇಕಾದ ಪ್ರಮೋಷನ್ ಸಿಕ್ಕಿಲ್ಲ ಎಂಬ ಕೂಗು ಎಬ್ಬಿಸಿದ್ದಾರೆ. ಪ್ರತಿಯೊಂದು ಡಿಪಾರ್ಟ್‌ಮೆಂಟ್‌ನಲ್ಲೂ ಅಫಿಷಿಯಲ್ ಆಗಲಿ ನಾನ್ ಅಫಿಷಿಯಲ್ ಆಗಲಿ ತಮ್ಮ ಸ್ವಾರ್ಥದ ಸಲುವಾಗಿ ತಮಗೆ ಬೇಕಾದಂಥ ವ್ಯಕಿಗೆ ಅನುಕೂಲಗಳನ್ನು ಮಾಡಿಕೊಟ್ಟಿದ್ದಾರೆ. ಈ ರೀತಿ ತಪ್ಪುಗಳನ್ನು ಮಾಡಿರುವುದರಿಂದ ಅನೇಕರ ಹೈಕೋರ್ಟಿಗೆ ರಿಟ್ ಹೋಗುವ ಪ್ರಸಂಗ ಬರುತ್ತದೆ. ಮಂತ್ರಿಗಳಿಗೆ ಬೇಕಾದವರೆ ಇರಲಿ ಸೆಕ್ರೆಟರಿಗಳಿಗೆ ಬೇಕಾದವರೆ ಇರಲಿ ಡೈರಕ್ಟರಿಗೆ ಬೇಕಾದವರೇ ಇರಲಿ ತಮಗೆ ಬೇಕಾದಂಥ ವ್ಯಕ್ತಿಗಳಿಗೆ ಅನೂಕೂಲ ಮಾಡುವ ಒಂದು ಪ್ರಯತ್ನ ಮಾಡಬಾರದು ಹೀಗೆಮಾಡಿದರೆ ಏನಾಗುತ್ತದೆ ಎಂದರೆ ಪ್ರಜಾಪ್ರಭುತ್ವದಲ್ಲಿ ಹಾಕತಕ್ಕಂಥ ಕಾರ್ಯಕ್ರಮಗಳು ಮತ್ತು ಯೋಜನೆಗಳು ತೃಪ್ತಿಕರವಾಗಿ ಜನರನ್ನು ಮುಟ್ಟುವುದಿಲ್ಲ. ಈಗ ಅಗ್ರಿಕಲ್‌ಚರಲ್ ಡಿಪಾರ್ಟ್‌ಮೆಂಟ್‌ನಲ್ಲಿ ಡೆಮಾನಸ್ಟ್ರೇಟರ್ಸ್ ಏನಿದ್ದಾರೆ, ಅವರ ಪ್ರಮೋಷನ್‌ಲಿಸ್ಟ್ ಸೆಂಟ್ರಲ್ ಗೌರ್ನಮೆಂಟ್‌ಗೆ ಹೋಗಿ ಅಲ್ಲಿಂದ ಒಪ್ಪಿಗೆ ಪಡೆದು ರಾಜ್ಯ ಸರ್ಕಾರಕ್ಕೆ ಬಂತು ಎಂದು ಕೇಳಿದೆ ಅದು ಬಂದನಂತರ ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಅದಕ್ಕೆ ಒಪ್ಪಿಗೆಯೂ ಆಗಿದೆ ಎಂದು ಕೇಳಿದ್ದೇನೆ. ಹೀಗೆ ಒಪ್ಪಿಗೆ ಪಡೆದ ನಂತರವು ಆ ಲಿಸ್ಟನ್ನು ಇನ್ನೂ ಕಾರ್ಯಗತ ಮಾಡುವ ಪರಿಸ್ಥಿತಿ ಬರಲಿಲ್ಲ. ಇಂತಹ ಒಂದು ಪರಿಸ್ಥಿತಿ ಎಲ್ಲಾ ಡಿಪಾರ್ಟುಮೆಂಟ್‌ನಲ್ಲೂ ಕೂಡ ಇದೆ. ಈರೀತಿ ಮಾಡುತ್ತಾಹೋದರೆ ಆಡಳಿತ ವರ್ಗ ಸರಿಯಗಿ ಇರುವುದಿಲ್ಲ. ನೌಕರರು ಎಂ. ಎಲ್. ಎ. ಹತ್ತಿರ ಬರುತ್ತಾರೆ. ನನಗೆ ಸೀನಿಯಾರಿಟಿ ಇದ್ದರೂ ಪ್ರಮೋಷನ್ ಸಿಕ್ಕಿಲ್ಲ. ನನಗೆ ಅನ್ಯಾಯ ಮಾಡಿದ್ದಾರೆ. ನೀವು ಬಂದು ನನಗೆ ಸ್ವಲ್ಪ ರೆಕಮಂಡ್ ಮಾಡುತ್ತೀರಾ ಎಂದ ಕೇಳುತ್ತಾರೆ. ತಪ್ಪುಗಳು ಬೇಕಾದಷ್ಟು ಆಗುತ್ತಿವೆ. ಇದನ್ನು ಆದಷ್ಟೂ ಕಡಿಮೆ ಮಾಡಲು ಸರಕಾರ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ನಮ್ಮ ರಾಜ್ಯದಲ್ಲಿ ಮೀನುಗಾರಿಕೆ ಹಾಗೂ ಅರಣ್ಯಗಳನ್ನು ಅಭಿವೃದ್ಧಿ ಮಾಡಲು ಇದಕ್ಕೆ ಪ್ರತ್ಯೇಕವಾಗಿ ಒಬ್ಬರು ಮಂತ್ರಿಗಳು ಇದ್ದಾರೆ. ಈಗ ಮೀನುಗಾರಿಕೆಗಾಗಿ ಒಬ್ಬರು ಮಂತ್ರಿಗಳು ಪ್ರತ್ಯೇಕವಾಗಿ ಮಾಡಿರುವುದರಿಂದ ಇವರು ಸಾಕಷ್ಟು ಕೆಲಸಗಳನ್ನು ಮಾಡಿದ್ದಾರೆ ಮತ್ತು ಒಂದು ರೀತಿಯಲ್ಲಿ ಕ್ರಾಂತಿಕಾರಕವಾದ ಕೆಲಸಗಳನ್ನು ಮಾಡಿದ್ದಾರೆ. ಇವರು ಮಾಡಿರುವ ಕೆಲಸಗಳೆಲ್ಲಾ ಕೇವಲ ದಕ್ಷಿಣ ಕನ್ನಡ ಹಾಗೂ ಉತ್ತರಕನ್ನಡ ಜಿಲ್ಲೆಯಲ್ಲಿ ಹೆಚ್ಚು ಕೆಲಸಗಳನ್ನು ಮಾಡಿರುವುದು ಕಂಡು ಬರುತ್ತದೆ. ನಮ್ಮ ಹೈದರಾಬಾದು ಕರ್ನಾಟಕದ ಭಾಗದಲ್ಲಿ ಹೆಚ್ಚು ಕೆಲಸಗಳನ್ನು ಮಾಡಿಲ್ಲ. ನಮ್ಮ ಭಾಗದಲ್ಲೂ ಕೂಡ ಕೃಷ್ಣಾ ಹಾಗೂ ಭೀಮಾ ನದಿಗಳ ದಂಡೆಯಲ್ಲಿ ಮೀನುಗಾರಿಕೆ ಕಸಬು ಉಳ್ಳ ಜನರಿದ್ದಾರೆ. ಇವರಿಗೂ ಸಾಕಷ್ಟು ಮಾಹಿತಿ ಕೊಟ್ಟು ತಿಳುವಳಿಕೆ ಕೊಟ್ಟು ಉತ್ತೇಜನ ಕೊಟ್ಟಿದ್ದರೆ ಇವರೂ ಮುಂದೆ ಬರಬಹುದಾಗಿತ್ತು. ಮಂತ್ರಿಗಳ ಗಮನ ಸಾಕಷ್ಟು ನಮ್ಮ ಕಡೆ ಇನ್ನೂ ಬರಲಿಲ್ಲ. ಇಲ್ಲಿಗೂ ಕೂಡ ಈಗಲಾದರೂ ಲಕ್ಷ್ಯ ಕೊಡಬೇಕು ಎಂದು ಸಲಹೆ ಮಾಡುತ್ತೇನೆ. ನಮ್ಮ ಕಡೆ ಅರಣ್ಯದ ಅಭಿವೃದ್ಧಿಯೂ ಸಾಕಷ್ಟು ಆಗಿಲ್ಲ. ಇಲ್ಲಿಗೆ ಕೇವಲ ಒಂದು ಸಾವಿರ ರೂಪಾಯಿನಷ್ಟು ಹಣವನ್ನು ಅಫ್ಫೋರ್‌ಸ್ಟೇಷನ್ ಸ್ಕೀಂಗಾಗಿ ಇಲ್ಲಿ ನಾನ್ ಪ್ಲಾನ್‌ಡ್ ಬಾಬುಗಳಲ್ಲಿ ಖರ್ಚು ಮಾಡಲು ಸರಕಾರ ಕೊಡುತ್ತಿದ್ದರೂ, ಇದರ ಬಗ್ಗೆ ಸಾಕಷ್ಟು ಕೆಲಸಗಳಾಗದೇ ಕೆಲವು ವೇಳೆ ಹಣ ಕೂಡ ಲ್ಯಾಪ್ಸ್ ಆಗುವ ಸಂಭವವೂ ಉಂಟು. ನಮ್ಮ ಕಡೆ ಸಾಕಷ್ಟು ಹೈದರಾಬಾದು ಕರ್ನಾಟಕ ಪ್ರದೇಶದ ಅರಣ್ಯ ಬೆಳೆದಿಲ್ಲ. ಆದುದರಿಂದ ನಮ್ಮ ಮೀನುಗಾರಿಕೆ ಮಂತ್ರಿಗಳು ಹಾಗೂ ಅರಣ್ಯ ಇಲಾಖೆ ಮಂತ್ರಿಗಳು ಕಡೆಗೆ ಹೆಚ್ಚು ಗಮನ ಕೊಡಬೇಕೆಂದು ಹೇಳಿ ಅಧ್ಯಕ್ಷರು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ) :— ಮಾನ್ಯ ಅಧ್ಯಕ್ಷರೇ, ನಮ್ಮ ರಾಷ್ಟ್ರದಲ್ಲಿ ಎಲ್ಲಾ ಕಡೆಯಲ್ಲೂ ವ್ಯವಸಾಯವೇ ಮುಖ್ಯ ಕಸಬಾಗಿದೆ. ನೂರಕ್ಕೆ ಎಪ್ಪತ್ತೈದು ಭಾಗ ಜನರ ಜೀವನವು ವ್ಯವಸಾಯವನ್ನು ಅವಲಂಬಿಸಿದೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ವ್ಯವಸಾಯದಲ್ಲಿ ಕ್ರಾಂತಿಕಾರವಾದ ಬದಲಾವಣೆಗಳೇನೂ ಆಗದಿದ್ದರೂ ವ್ಯವಸಾಯದ ಅಭಿವೃದ್ಧಿಯ ಬಗ್ಗೆ ಕೆಲವು ಕಡೆಗಳಲ್ಲಿ ಮಾಡುತ್ತಿರುವ ಭಾಷಣಗಳಿಗೇನೂ ಕಡಿಮೆ ಇಲ್ಲ. ೨೩ ವರ್ಷಗಳಾದ ನಂತರವೂ ವ್ಯವಸಾಯ ಕ್ಷೇತ್ರದಲ್ಲಿ ಸಾಧಿಸಿರುವ ಪ್ರಗತಿ ಎಷ್ಟು ಎನ್ನುವುದನ್ನು ನಾವು ಇಲ್ಲಿ ಸ್ವಲ್ಪ ಯೋಚನೆ ಮಾಡೋಣ. ಸ್ವತಂತ್ರ ಬಂದು ೨೩ ವರ್ಷಗಳಾದರೂ ಕೂಡ ರಾಷ್ಟ್ರ ಮಟ್ಟದಲ್ಲಿ ಆಗಲೀ ರಾಜ್ಯ ಮಟ್ಟದಲ್ಲಿ ಆಗಲಿ ಆಹಾರದ ವಿಚಾರದಲ್ಲಿ ಸ್ವಯಂ ಪರಿಪೂರ್ಣತೆಯನ್ನು ಮಾಡಿದ್ದಾರೆಯೇ ಎಂದು ನೋಡಿದರೆ ಖಂಡಿತವಾಗಿಯೂ ಮಾಡಿಲ್ಲ ಎನ್ನುವುದು ಕಂಡು ಬರುತ್ತದೆ. ಪ್ರತಿವರ್ಷವೂ ಈ ವಿಚಾರವನ್ನು ಈ ಸಭೆಯಲ್ಲಿ ಹಾಗೂ ಹೊರಗಡೆ ಸರಕಾರದವರು ಇನ್ನೊಂದೆರಡು ವರ್ಷಗಳಲ್ಲಿ ಆಹಾರದ ಪರಿಸ್ಥಿತಿ ಸುಧಾರಿಸುತ್ತದೆ ಮತ್ತು ಪ್ರತಿ ವರ್ಷವೂ ಸುಮಾರು ೫೦ ಲಕ್ಷ ಟನ್ನುಗಳಷ್ಟು ಬೆಳೆ ಜಾಸ್ತಿಯಾಗುತ್ತದೆ ಇದರಿಂದ ಮುಂದೆ ಎಲ್ಲಾ ಸರಿಹೋಗುತ್ತದೆ ಎಂದು ಹೇಳುತ್ತಾರೆಯೇ ವಿನಃ ಆಹಾರದ ವಿಚಾರದಲ್ಲಿ ಇನ್ನೂ ಸ್ವಯಂ ಪರಿಪೂರ್ಣತೆಯನ್ನು ಸಾಧಿಸಲು ಆಗಲಿಲ್ಲ. ಆಹಾರದ ಸ್ವಯಂ ಪರಿಪೂರ್ಣತೆ ಸಾಧಿಸಬೇಕಾದರೆ ಇದು ಹೆಚ್ಚು ನೀರಾವರಿ ಪ್ರದೇಶಗಳನ್ನು ಹೆಚ್ಚು ಮಾಡುವುದರ ಮೇಲೆ ಅವಲಂಬಿಸಿರುತ್ತದೆ. ಈ ದಿನ ತುಂಗಭದ್ರಾ ಹಾಗೂ ಇನ್ನೂ ಅನೇಕ ಭಾರಿ ನೀರಾವರಿ ಯೋಜನೆಗಳನ್ನು ನಿರ್ಮಿಸಲು ಕೆಲವು ಕಡೆ ಅಸ್ತಿಭಾರದ ಕಲ್ಲುಗಳನ್ನು ಹಾಕಿದ್ದಾರೆ ಮತ್ತೆ ಇನ್ನೂ ಕೆಲವು ಕಡೆ ಅಸ್ತಿಭಾರದ ಕಲ್ಲುಗಳನ್ನು ಹಾಕುವುದರಲ್ಲಿದ್ದಾರೆ. ಇವುಗಳನ್ನು ಇನ್ನೂ ಮಾಡುತ್ತಿರುವುದರಿಂದ ನೀರಾವರಿ ಪ್ರದೇಶವನ್ನು ಇನ್ನೂ ಹೆಚ್ಚು ಮಾಡಲು ಆಗಲಿಲ್ಲ. ನಮ್ಮ ದೇಶದಲ್ಲಿ ನೀರಾವರಿ ಶೇಕಡಾವಾರು ಹತ್ತರಷ್ಟು ಮಾತ್ರ ಇದೆ ಎಂದು ಕೇಳಿ ಬಹಳ ವ್ಯಸನಪಡಬೇಕಾಗಿದೆ. ನಮ್ಮ ಪಕ್ಕದ ರಾಜ್ಯಗಳಾದ ಆಂಧ್ರ ಪದೇಶ ಹಾಗೂ ತಮಿಳುನಾಡು ರಾಜ್ಯಗಳಲ್ಲಿ ನೀರಾವರಿ ಅಭಿವೃದ್ಧಿ ಸಾಕಷ್ಟು ಆಗಿದೆ. ಆದರೆ ನಮ್ಮ ರಾಜ್ಯದಲ್ಲಿ ಕೇವಲ ಶೇಕಡಾ ಹತ್ತರಷ್ಟು ಮಾತ್ರ ನೀರಾವರಿ ಪ್ರದೇಶ ಇದೆ ಎಂದು ಕೇಳಿದರೆ ಖಂಡಿತವಾಗಿಯೂ ನಮಗೆ ಇದು ದುಃಖವಾಗುತ್ತದೆ. ನಾಲ್ಕನೇ ಯೋಜನೆಯಲ್ಲಿ ಇರುವ ಕರಡು ಪತ್ರದಲ್ಲಿ ಒಂದು ಕಡೆ ಅವರು ಹೀಗೆ ತಿಳಿಸಿದ್ದಾರೆ :

> " Whatever the long-term aspects of the problem, the recent experience of the State underscores the supreme importance of stepping up food production in the State on an urgent and immediate basis and of minimising the dependence of the farmer on the erratic monsoon. Any plan of development will

(ಶ್ರೀ ಪಿ. ವೆಂಕಟಗಿರಿಯಪ್ಪ)

"therefore have to outline a programme of action designed to increase productivity by an increase in the supply of inputs particularly irrigation."

ಆಹಾರದ ಉತ್ಪತ್ತಿ ಹೆಚ್ಚು ಮಾಡಬೇಕಾದರೆ ನೀರಾವರಿ ಇಲ್ಲದೇ ಅವಕಾಶವೇ ಇಲ್ಲ ಎಂದು ಅವರೂ ಹೇಳಿದ್ದಾರೆ. ವಾಸ್ತವವಾಗಿ ಕಾರ್ಯತಃ ಇಲ್ಲಿ ನೋಡುತ್ತಿರುವುದಾದರೂ ಏನು ಎಂದರೆ ಯಾವುದೋ ಕೆಲವು ಯೋಜನೆಗಳನ್ನು ಎಂದರೆ ಕೃಷ್ಣಾ ಪ್ರಾಜೆಕ್ಟ್ ಕಟ್ಟಲು ಹಣ ಬೇಕು, ಹೇಮಾವತಿಗೆ ಹಣ ಬೇಕು ಮತ್ತು ಕಾವೇರಿ ಯೋಜನೆಗೆ ಹಣ ಬೇಕು ಎಂದು ಇದಕ್ಕಾಗಿ ಬಡ್ಜೆಟ್ಟಿನಲ್ಲಿ ಹಣ ಒದಗಿಸಿದ್ದಾರೆ. ಆದರೆ ಹಳೆಯ ಮೈಸೂರಿನ ಭಾಗದಲ್ಲಿರುವ ಬಯಲುಸೀಮೆ ಪ್ರದೇಶಗಳಾದ ಕೋಲಾರ ತುಮಕೂರು ಚಿತ್ರದುರ್ಗ ಹಾಗೂ ಬಿದರೆ ಈ ಪ್ರದೇಶಗಳಲ್ಲಿ ಭಾರಿ ನೀರಾವರಿ ಯೋಜನೆಗಳನ್ನು ಮಾಡಲು ಇಲ್ಲವೇ ಮಿನಿಮಂ ಇರಿಗೇಷನ್ ಮಾಡಲು ಕೂಡ ಇಲ್ಲಿ ಅವಕಾಶ ಇಲ್ಲ. ಇಲ್ಲಿರುವ ಸಣ್ಣ ಕೆರೆಗಳಲ್ಲಿ ಮಣ್ಣು ಹೂತು ಅದರಲ್ಲಿ ನೀರೇ ನಿಲ್ಲುವುದಿಲ್ಲ. ಇಲ್ಲಿ ಬಾವಿಗಳನ್ನು ಮಾತ್ರ ತೋಡಿಸಲು ಅವಕಾಶ ಇವೆ. ಸಣ್ಣ ನೀರಾವರಿ ಬಾವಿಗಳನ್ನು ಇಲ್ಲಿ ಮಾಡಿಸಿಕೊಟ್ಟರೆ ಇಲ್ಲಿನ ಜನ ವ್ಯವಸಾಯ ಮಾಡಲು ಅನುಕೂಲವಾಗುತ್ತದೆ. ನಮ್ಮ ಕೋಲಾರ ಹಾಗೂ ಇನ್ನಿತರ ಬಯಲು ಸೀಮೆಯ ಬಗ್ಗೆ ಹಿಂದೆ ಇದೇ ಸಭೆಯಲ್ಲಿ ಮಂತ್ರಿಗಳಾಗಿದ್ದ ಶ್ರೀಮಾನ್ ಎಂ. ವಿ. ಕೃಷ್ಣಪ್ಪನವರು ಸುಮಾರು ೪೮೦ ಕೋಟಿ ರೂಪಾಯಿಗಳ ಒಂದು ಯೋಜನೆ ಮಾಡಿ ಇದನ್ನು ರಾಜ್ಯದ ಎಲ್ಲಾ ಬಯಲು ಸೀಮೆ ಪ್ರದೇಶಗಳಲ್ಲಿ ಇರುವ ಜನರಿಗೆ ಅನುಕೂಲವಾಗುವಂತೆ ಕಾರ್ಯಗತ ಮಾಡುತ್ತೇವೆ ಎಂದು ಹೇಳಿದರು. ಆದರೆ ಅವರು ಹೇಳಿ ಒಂದೆರಡು ವರ್ಷಗಳಾದರೂ ಕಾರ್ಯತಃ ಯಾವುದೂ ಆಗಲಿಲ್ಲ. ಈಚೆಗೆ ಅವರ ಜಾಗದಲ್ಲಿ ಬಂದ ಮಂತ್ರಿಗಳು ಇದರ ಕಡೆಗೆ ಗಮನ ಕೊಡಲಿಲ್ಲ. ಇವೊತ್ತು ಕಾಂಗ್ರೆಸ್ಸು ಪಕ್ಷದಲ್ಲಿ ಸಿಂಡಿಕೇಟು ಹಾಗೂ ಇಂಡಿಕೇಟು ಎಂದಾಗಿ, ಇದರಲ್ಲಿ ಶ್ರೀ ಕೃಷ್ಣಪ್ಪನವರು ಇಂದು ಇಂಡಿಕೇಟಿನಲ್ಲಿದ್ದಾರೆ. ಸರಕಾರದ ಪರವಾಗಿ ಯಾರಾದರೂ ಒಬ್ಬರು ಮಂತ್ರಿಗಳು ಒಂದು ಆಶ್ವಾಸನೆಯನ್ನು ಈ ಸಭೆಯಲ್ಲಿ ಕೊಟ್ಟರೆ ಆಡಳಿತದಲ್ಲಿ ಇರುವ ಯಾವ ಮಂತ್ರಿಗಳೇ ಆಗಲೀ ಅದು ಕಾರ್ಯಗತವಾಗುವಂತೆ ಕೆಲಸ ಮಾಡಬೇಕು. ಇದರಲ್ಲಿ ರಾಜ್ಯದ ಹಿತ ಮುಖ್ಯವೇ ಹೊರತು ಯಾವುದೇ ಒಂದು ಕ್ಷೇತ್ರ ಮುಖ್ಯವಲ್ಲ ಎಂದು ನಾನು ಇಲ್ಲಿ ಹೇಳಬಯಸುತ್ತೇನೆ. ಮುಖ್ಯವಾಗಿ ಕೋಲಾರ, ತುಮಕೂರು ಹಾಗೂ ಇನ್ನಿತರ ಬಯಲುಸೀಮೆಯ ಪ್ರದೇಶಗಳಲ್ಲಿ ಇರುವ ಜನ ಬಾವಿಗಳ ನೀರನ್ನು ಪಡೆದೇ ನೀರಾವರಿ ಕೆಲಸಗಳನ್ನು ಮಾಡಬೇಕಾಗುತ್ತದೆ. ಇಲ್ಲಿ ಹೆಚ್ಚು ಬಾವಿಗಳನ್ನು ತೆಗೆಸುವ ವ್ಯವಸ್ಥೆ ಮಾಡಿದರೆ ಅನುಕೂಲವಾಗುತ್ತದೆ ಮತ್ತು ಇದನ್ನು ಮಾಡಲೂ ಸಾಧ್ಯವಿದೆ. ನಾನು ಸುಮಾರು ಎರಡು ಮೂರು ವರ್ಷಗಳಿಂದಲೂ ಲ್ಯಾಂಡ್ ಡೆವಲಪ್‌ಮೆಂಟು ಬ್ಯಾಂಕುಗಳ ಮೂಲಕ ಜನರಿಗೆ ಸಾಲ ಸಿಗಬೇಕು ಎಂದು ಕೇಳುತ್ತಿದ್ದೇನೆ ಮತ್ತು ಈ ಬ್ಯಾಂಕುಗಳಿಂದ ಸ್ವಲ್ಪಮಟ್ಟಿಗೆ ಜನರಿಗೆ ಸಾಲ ಸಿಗುತ್ತಿತ್ತು. ಆದರೆ ಇತ್ತೀಚೆಗೆ ಸೊಸೈಟಿಗಳ ಮೂಲಕ ಸಾಲವನ್ನು ಕೊಡಬೇಕೆಂದು ಮಾಡಿ ಇದರಲ್ಲಿ ಜನ ಮೊದಲು ತೆಗೆದುಕೊಂಡಿರುವ ಸಾಲದ ಹಣದಲ್ಲಿ ಶೇಕಡಾ ೯೦ ರಷ್ಟು ವಸೂಲು ಆಗಿರಬೇಕು ಇಲ್ಲದಿದ್ದರೆ ಕೊಡುವುದಿಲ್ಲ ಎಂದು ಮಾಡಿದ್ದಾರೆ. ಇದನ್ನು ಮಾಡಿ ಸುಮಾರು ಎರಡು ವರ್ಷಗಳಿಂದಲೂ ಜನರಿಗೆ ಸುಲಭವಾಗಿ ಸಾಲ ಸಿಗುತ್ತಿಲ್ಲ. ಇಲ್ಲಿರುವ ಸುಮಾರು ೭೦ ಜನರೂ ಸೇರಿಕೊಂಡು ಮುಖ್ಯ ಮಂತ್ರಿಗಳಲ್ಲಿಗೆ ಹೋಗಿ ಇದರ ಬಗ್ಗೆ ವಿವರಗಳನ್ನು ಹೇಳಿ ಜನರಿಗೆ ಸುಲಭವಾಗಿ ಹಣ ಸಿಗುವ ವ್ಯವಸ್ಥೆ ಮಾಡಬೇಕೆಂದು ಕೇಳಿದೆವು. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಆಸಕ್ತಿ ವಹಿಸಿ ರಿಸರ್ವ್ ಬ್ಯಾಂಕಿನವರೊಡನೆ ಹಾಗೂ ಕೇಂದ್ರದವರೊಡನೆ ವ್ಯವಹಾರ ಮಾಡಿ ಯಾರು ಶೇಕಡಾ ಐವತ್ತರಷ್ಟು ಹಣವನ್ನು ವಾಪಸು ಕೊಟ್ಟಿರುತ್ತಾರೋ ಅಂತಹವರಿಗೆ ಸಾಲಗಳನ್ನು ಕೊಡಬಹುದು ಎಂದು ಮಾಡಿದರೂ ಇದರಲ್ಲಿ ಶೇಕಡಾ ಐದು ಜನರು ಕೂಡ ಸಾಲ ತೆಗೆದುಕೊಳ್ಳಲು ಆಗುತ್ತಿಲ್ಲ ಮತ್ತು ಹಳೆಯ ಮೈಸೂರಿನಲ್ಲಿ ಈಗ ಇರತಕ್ಕಂತಹ ಪದ್ಧತಿ ಕಳೆದ ೩೦–೪೦ ವರ್ಷಗಳಿಂದಲೂ ಇರಲೇ ಇಲ್ಲ. ಹಿಂದೆ ಯೋಜನೆಗಳಿಗೋಸ್ಕರ ಸಾಲವನ್ನು ಕೊಡುವಾಗ ಸ್ವಲ್ಪ ಹೆಚ್ಚು ಕಂತುಗಳಲ್ಲಿ ಕೊಟ್ಟಿದ್ದರೂ ಅದನ್ನು ವಸೂಲು ಮಾಡುವುದಕ್ಕೆ ಆಗುತ್ತಿರಲಿಲ್ಲ. ಇಂದಿನ ಗ್ರಾಮಾಂತರ ಜನಗಳ ಪರಿಸ್ಥಿತಿಯನ್ನು ಸರಿಯಾಗಿ ತಿಳಿದುಕೊಂಡಿಲ್ಲ. ಈಗ ಮಾಡಿರುವ ನಿಯಮಗಳಂತೆ ನಮ್ಮ ದೇಶದ ಜನರಿಗೆ ಹೆಚ್ಚು ಪ್ರಯೋಜನವಾಗುತ್ತಿಲ್ಲ. ಹಿಂದಿನ ಕಾಲದಿಂದಲೂ ಒಂದು ರೀತಿಯಾದ ಪದ್ಧತಿಗೆ ಹಳ್ಳಿಗಾಡಿನ ಜನರು ಹೊಂದಿಕೊಂಡು ಬರುತ್ತಿದ್ದರು. ಆದರೆ ಇಂದು ಬದಲಾಗುತ್ತಿರುವ ಪರಿಸ್ಥಿತಿಯಲ್ಲಿ ಜನಕ್ಕೆ ಅವರ ಕೆಲಸ ಕಾರ್ಯಗಳನ್ನು ಮಾಡಿಕೊಳ್ಳಲು ಸರಕಾರದಿಂದ ಸಾಕಷ್ಟು ನೆರವು ಬೇಕೆಂದು ಕೇಳುತ್ತಿದ್ದರೂ ಅವು ಸಿಗುತ್ತಿಲ್ಲ, ಸಾಲ ಕೇಳಿದರೆ ಅದೂ ಸರಿಯಾಗಿ ಸಿಗುತ್ತಿಲ್ಲ. ಹಳೆಯ ಮೈಸೂರಿನಲ್ಲಿ ಇರುವ ಕೆಲವು ಕ್ಷೇತ್ರಗಳಲ್ಲಿರುವವರಿಗೇನೇ ಎಲ್ಲ ಸೌಕರ್ಯಗಳೂ ಸಿಗುತ್ತಿವೆ ಮತ್ತು ಈ ರೀತಿಯಾಗಿ ಪ್ರಾದೇಶಿಕ ಅನ್ಯಾಯವಾಗುತ್ತಿದೆ ಎನ್ನುವುದು ಇದರಿಂದ ಖಚಿತವಾಗುತ್ತದೆ.

3-30 P.M.

ಆದರೆ ಒಂದು ವೇಳೆ ಆ ತರಹ ಇಲ್ಲದೇ ಹೋದರೆ ಇಷ್ಟು ನ್ಯಾಯವಾದ ವಿಷಯದ ಬಗ್ಗೆ ಏತಕ್ಕೆ ಕ್ರಮ ತೆಗೆದುಕೊಳ್ಳಬಾರದು. ನಾವು ೨೦ ಜನರು ರುಜು ಹಾಕಿ ಕೊಟ್ಟಿದ್ದೇವೆ. ಈ ಬಗ್ಗೆ ಕ್ರಮ ತೆಗೆದುಕೊಳ್ಳದಿರುವುದನ್ನು ನೋಡಿದರೆ ಇದು ನಿಜವಾಗಿಯೂ ಪ್ರಜಾ ಪ್ರಭುತ್ವವೇ ಅಥವಾ ಜನರ ಸರ್ಕಾರವೇ ಎಂದು ಈ ಸಂದರ್ಭದಲ್ಲಿ ಕೇಳಬೇಕಾಗಿದೆ. ನಮ್ಮ ಭಾಗದ ಮಂತ್ರಿಗಳು ಈ ಬಗ್ಗೆ ಯಾವ ಆಸಕ್ತಿಯನ್ನೂ ಸಹ ತೋರಿಸುತ್ತಿಲ್ಲ, ಆ ರೀತಿ ಆಸಕ್ತಿ ತೋರಿಸಿದರೆ ಎಲ್ಲಿ ಮಂತ್ರಿ ಪದವಿ ಹೋಗುತ್ತದೋ ಎಂಬ ಕಾರಣದಿಂದ ಅವರು ಈ ಬಗ್ಗೆ ಗಮನ ಕೊಡುತ್ತಿಲ್ಲ. ಅವರಿಗೆ ಮಂತ್ರಿ ಪದವಿ ಇದ್ದರೆ ಸಾಕು. ವ್ಯವಸಾಯ ಮಂತ್ರಿಗಳು ಇರುವುದು ಇಡೀ ರಾಜ್ಯಕ್ಕೆ. ಅವರು ಕೇವಲ ಒಂದು ಜಿಲ್ಲೆಯ ಅಭಿವೃದ್ಧಿಯನ್ನು ನೋಡಿಕೊಂಡರೆ ಆಗುವುದಿಲ್ಲ. ಇಡೀ ರಾಜ್ಯದ ಅಭಿವೃದ್ಧಿಯನ್ನು ನೋಡಿಕೊಳ್ಳಬೇಕು. ಹಳೆಯ ಮೈಸೂರಿನ ಬೈಲು ಪ್ರದೇಶಗಳಲ್ಲಿ ದೊಡ್ಡ ನೀರಾವರಿ ಯೋಜನೆಗಳನಾಗಲೀ, ಸಣ್ಣ ನೀರಾವರಿ ಯೋಜನೆಗಳನ್ನಾಗಲೀ ಕೈಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲವಾದ್ದರಿಂದ ಬಾವಿಗಳನ್ನು ತೋಡಿಸುವುದಕ್ಕೆ ಅಗ್ರ ಪ್ರಾಶಸ್ತ್ಯ ಕೊಡಬೇಕು. ನಮ್ಮ ಜಿಲ್ಲೆಯಲ್ಲಿ ಯಾವ ಸೊಸೈಟಿಗಳು ೫೦ ಪರಸೆಂಟ್ ಬಾಕಿಯನ್ನು ಕೊಟ್ಟಿವೆಯೋ ಆ ಸೊಸೈಟಿಗಳಿಗೆ ಮತ್ತೆ ಹಣವನ್ನು ಒದಗಿಸಬೇಕು. ಇಲ್ಲದಿದ್ದರೆ ರಾಜಕೀಯ ಇದೆ ಎಂಬ ಅನುಮಾನ ನಮಗೆ ಬರುತ್ತದೆ. ಇವತ್ತು ರೈತರಿಗೆ ಬ್ಯಾಂಕ್‌ಗಳ ಮೂಲಕ ಸಾಲ ಕೊಡಿಸುತ್ತೇವೆಂದು ಸರ್ಕಾರದವರು ಹೇಳುತ್ತಿದ್ದಾಗ್ಗೆ. ಆದರೆ ಇವತ್ತು ೫–೧೦ ಎಕರೆ ಜಮೀನು ಇರತಕ್ಕಂಥ ಭೂ ಮಾಲೀಕರಿಗೆ ಮಾತ್ರ ಬ್ಯಾಂಕುಗಳಿಂದ ಸಾಲ ಸಿಗುತ್ತಿದೆ. ಒಂದು ಎಕರೆ, ಅರ್ಧಎಕರೆ ಇರುವ ರೈತರನ್ನು ಬ್ಯಾಂಕ್‌ನವರು ಮಾತೂ ಕೂಡ ಆಡಿಸುತ್ತಿಲ್ಲ. ಇಂತಹ ಸಣ್ಣ ಸಣ್ಣ ರೈತರಿಗೂ ಕೂಡ ಬ್ಯಾಂಕ್‌ಗಳಿಂದ ಸಾಲ ಸಿಗುವಂತಹ ಏರ್ಪಾಡನ್ನು ಸರ್ಕಾರದವರು ಮಾಡಬೇಕು. ಇವತ್ತು ರೈತರಿಗೆ ಪಂಪ್‌ಸೆಟ್ಟು ಹಾಕಿಸಿಕೊಳ್ಳಲು ತಕಾವಿ ಸಾಲ ಮುಂತಾದ ಅನೇಕ ರೀತಿಯ ಸಾಲಗಳನ್ನು ಕೊಡಲಾಗುತ್ತಿದೆ. ಇದರ ಬದಲು ರೈತರಿಗೆ ಬೇಕಾದ ಎಲ್ಲಾ ಅನುಕೂಲಗಳನ್ನು ಒಂದೇ ಸಲ ಸರ್ಕಾರದವರು ಮಾಡಿಕೊಟ್ಟು ಆ ಹಣವನ್ನು ಕಂತುಗಳ ಮೂಲಕ ಪಡೆದುಕೊಳ್ಳುವುದು ಒಳ್ಳೆಯದೆಂದು ನಾನು ಸಲಹೆ ಮಾಡುತ್ತೇನೆ. ಕಂತನ್ನು ಕಟ್ಟದಿದ್ದರೆ ಅಂತಹ ಜಮೀನನ್ನು ಬೇಕಾದರೆ ಹರಾಜು ಮಾಡಿ ಇನ್ನೊಬ್ಬರಿಗೆ ಕೊಡಿ. ಆದರೆ ಎಲ್ಲ ಅನುಕೂಲಗಳನ್ನು ಒಂದೇ ಸಲ ಮಾಡಿಕೊಳ್ಳುವುದು ಒಳ್ಳೆಯದು. ಇವತ್ತು ಹೌಸಿಂಗ್ ಬೋರ್ಡಿನವರು ಮನೆಗಳನ್ನು ಕಟ್ಟಿಸಿ ಕಂತುಗಳ ಮೇಲೆ ಕೊಡುತ್ತಿರುವಂತೆ ಇವರಿಗೂ ಅದೇ ರೀತಿ ಎಲ್ಲಾ ಅನುಕೂಲಗಳನ್ನು ಮಾಡಿಕೊಟ್ಟು ಕಂತುಗಳ ಮೇಲೆ ಹಣ ವಸೂಲಿ ಮಾಡಬೇಕು. ಈ ಬಗ್ಗೆ ಒಂದು ಸಮಗ್ರ ಯೋಜನೆಯನ್ನು ತಯಾರು ಮಾಡಿ ರೈತರಿಗೆ ಏನೇನು ಅನುಕೂಲಗಳು ಬೇಕೋ ಅದನ್ನೆಲ್ಲಾ ಒದಗಿಸಿಕೊಡುವುದಕ್ಕೆ ಏರ್ಪಾಡು ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ ಇತ್ತೀಚೆಗೆ ಹೌಸಿಂಗ್ ಬೋರ್ಡಿನವರು ದೊಡ್ಡ ದೊಡ್ಡ ಮನೆಗಳನ್ನು ಕಟ್ಟಿಸಿ ದೊಡ್ಡವರಿಗೆ ಕಂತುಗಳ ಮೂಲಕ ಕೊಡುತ್ತಿದ್ದಾರೆ. ಈ ಪ್ರಕಾರ ದೊಡ್ಡ ದೊಡ್ಡ ಭೂ ಮಾಲೀಕರಿಗೆ ಮಾತ್ರ ಅನುಕೂಲಗಳು ಸಿಗುವಂತೆ ಏರ್ಪಾಡು ಮಾಡದೇ ಸಣ್ಣ ಸಣ್ಣ ರೈತರಿಗೆ ಅನುಕೂಲವಾಗುವಂತೆ ನೋಡಿಕೊಳ್ಳಬೇಕು. ಇವತ್ತು ವಿದ್ಯುಚ್ಛಕ್ತಿ ಮಂಡಲಿ ಅಸ್ತಿತ್ವಕ್ಕೆ ಬಂದ ಮೇಲೆ ಒಂದು ಉದಾತ್ತವಾದ ತತ್ವದ ಮೇಲೆ ಮಂಡಲಿ ಕೆಲಸ ಮಾಡುತ್ತಿದೆ. ಎಂದು ಹೇಳುತ್ತಿದ್ದಾಗ್ಗೆ. ಇವತ್ತು ಒಂದು ಹಳ್ಳಿಯಿಂದ ಇನ್ನೊಂದು ಹಳ್ಳಿಗೆ ವಿದ್ಯುಚ್ಛಕ್ತಿ ಕೊಡಬೇಕಾದರೆ ಅದಕ್ಕೆ ತಗಲುವ ಖರ್ಚಿನ ಬಡ್ಡಿ ಬಂದರೆ ವಿದ್ಯುಚ್ಛಕ್ತಿ ಕೊಡುತ್ತೇವೆಂದು ಹೇಳುತ್ತಾರೆ. ಈ ಒಂದು ವಿಚಿತ್ರವಾದ ಕಾನೂನಿನಿಂದ ಹೊಸ ಪ್ರದೇಶಗಳಿಗೆ ವಿದ್ಯುಚ್ಛಕ್ತಿ ಸಿಗುವುದೇ ಕಷ್ಟವಾಗಿದೆ. ಈ ಬಗ್ಗೆ ಒಂದು ಉದಾರವಾದ ನೀತಿಯನ್ನು ಅನುಸರಿಸುವಂತೆ ಬೋರ್ಡಿನವರಿಗೆ ಸರ್ಕಾರದವರು ಒತ್ತಾಯಪಡಿಸಬೇಕೆಂದು ಹೇಳುತ್ತೇನೆ. ಇವತ್ತು ಅನೇಕ ರೈತರಿಗೆ ತಮ್ಮ ಜಮೀನಿನಲ್ಲಿ ಯಾವ ಬೆಳೆ ಬೆಳೆಯಬೇಕು ಎಂಬುದು ಗೊತ್ತಿಲ್ಲ. ಯಾವಯಾವುದೋ ಬೆಳೆ ಬೆಳೆದು ನಷ್ಟ ಮಾಡಿಕೊಳ್ಳುತ್ತಿದ್ದಾರೆ. ಇದಕ್ಕಾಗಿ ಸರ್ಕಾರದವರು ಇತ್ತೀಚೆಗೆ ಸಾಯಿಲ್ ಟೆಸ್ಟಿಂಗ್ ಲ್ಯಾಬರೋಟರಿಯನ್ನು ಅಲ್ಲಲ್ಲೇ ಸ್ಥಾಪನೆ ಮಾಡುತ್ತಿದ್ದಾರೆ ಪ್ರತಿ ಜಿಲ್ಲೆಯಲ್ಲಿಯೂ ಕೂಡ ಈ ಕೇಂದ್ರಗಳನ್ನು ಸ್ಥಾಪನೆ ಮಾಡಿ ಆ ಭಾಗದ ಎಲ್ಲ ರೈತರು ತರುವ ಮಣ್ಣನ್ನು ಒಂದು ವಾರದೊಳಗೆ ಟೆಸ್ಟು ಮಾಡಿಕೊಡುವಂತಹ ಏರ್ಪಾಡು ಮಾಡಬೇಕು. ನಮ್ಮ ಕೋಲಾರ ಜಿಲ್ಲೆಯಲ್ಲಿ ಒಂದು ಮಣ್ಣಿನ ಪರೀಕ್ಷಾ ಕೇಂದ್ರವನ್ನು ಕೂಡಲೇ ಸ್ಥಾಪನೆ ಮಾಡಬೇಕೆಂದು ಹೇಳುತ್ತೇನೆ. ಇವತ್ತು ಗೊಬ್ಬರದ ಬೆಲೆ ದಿನೇ ದಿನೇ ಜಾಸ್ತಿಯಾಗುತ್ತಿದೆ. ಕಳೆದ ಒಂದೆರಡು ವರ್ಷಗಳಲ್ಲಿ ಗೊಬ್ಬರದ ಬೆಲೆ ವಿಪರೀತ ಹೆಚ್ಚಿದೆ. ಇದರಿಂದ ರೈತರಿಗೆ ಬಹಳ ತೊಂದರೆಯಾಗುತ್ತದೆ. ಗೊಬ್ಬರದ ಬೆಲೆಯನ್ನು ಹೆಚ್ಚು ಮಾಡುವುದು ಸರಿಯಲ್ಲ ಎಂದು ಕೇಂದ್ರ ಸರ್ಕಾರಕ್ಕೆ ನಮ್ಮ ಸರ್ಕಾರದವರು ಹೇಳಬೇಕು. ವ್ಯವಸಾಯ ಇಲಾಖೆಯಲ್ಲಿರುವ ವ್ಯವಸಾಯ ಇಂಜಿನಿಯರಿಂಗ್ ವಿಭಾಗದವರು ರೈತರಿಗೆ ಬುಲ್‌ಡೋಜರ್ ಒದಗಿಸುತ್ತಿದ್ದರು, ಬಾವಿ ತೋಡಲು ಬೋರಿಂಗ್ ರಿಗ್ಸ್‌ನ ಅನುಕೂಲವನ್ನು ಒದಗಿಸುತ್ತಿದ್ದರು. ಕಡಿಮೆದರದಲ್ಲಿ ಈ ಅನುಕೂಲಗಳನ್ನು ರೈತರಿಗೆ ಒದಗಿಸಲಾಗುತ್ತಿತ್ತು. ಇತ್ತೀಚೆಗೆ ಈ ವಿಭಾಗವನ್ನು ಕೃಷಿ ಉದ್ಯಮ

(ಶ್ರೀ ಪಿ. ವೆಂಕಟಗಿರಿಯಪ್ಪ)

ಸಂಸ್ಥೆಗೆ ವರ್ಗಾಯಿಸುವುದಕ್ಕೆ ತೀರ್ಮಾನ ಕೈಕೊಂಡಿದ್ದಾರೆ. ಈ ಸಂಸ್ಥೆಗೆ ಶ್ರೀಮಾನ್ ಸಿದ್ದಯ್ಯನವರೇ ಚೇರ್‌ಮನ್. ಈ ಒಂದು ವರ್ಗಾವಣೆಗೆ ಶ್ರೀ ಮಾನ್ ಸಿದ್ದಯ್ಯನವರು ಕಾರಣರೋ ಅಥವಾ ವ್ಯವಸಾಯ ಇಲಾಖೆಯ ಮಂತ್ರಿಗಳು ಕಾರಣರೋ ಗೊತ್ತಿಲ್ಲ. ಈ ಒಂದು ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ರಾಜಕೀಯ ಮಂಡಲಿ ಆಗಬಾರದು ಎಂಬುದೇ ನನ್ನ ಅಭಿಪ್ರಾಯ. ಅಧಿಕಾರಿಗಳ ಮತ್ತು ಡೈರೆಕ್ಟರ್‌ಗಳ ಮಧ್ಯೆ ಹೊಂದಾಣಿಕೆ ಇಲ್ಲದೆ ಈ ರೀತಿ ಮಾಡಿದರೊ ಏನೋ ಗೊತ್ತಿಲ್ಲ. ಈ ರೀತಿ ಮಾಡಿದ್ದು ಸರಿಯಲ್ಲ. ವ್ಯವಸಾಯ ಇಂಜಿನಿಯರಿಂಗ್ ವಿಭಾಗವನ್ನು ಅಗ್ರೋ ಇಂಡಿಸ್ಟ್ರೀಸ್ ಕಾರ್ಪೊರೇಷನ್‌ಗೆ ಸೇರಿಸಿದರೆ ಅವರು ಸರ್ಕಾರದವರು ಕೊಡುತ್ತಿದ್ದ ರಿಯಾಯಿತಿಗಳನ್ನು ಮತ್ತು ಸಬ್ಸಿಡಿಯನ್ನು ಕೊಡುವುದಿಲ್ಲ. ಅವರು ಕಮರ್ಷಿಯಲ್ ಬೇಸಿಸ್ ಮೇಲೆ ತಮ್ಮ ವ್ಯವಹಾರ ನಡೆಸುತ್ತಾರೆ. ಒಂದು ಅಡಿ ಬೊರಿಂಗ್ ಮಾಡಲು ಸರ್ಕಾರದವರು ೭ ರೂಪಾಯಿ ಚಾರ್ಜು ಮಾಡುತ್ತಿದ್ದರೆ ಅವರು ೨೫ ರೂಪಾಯಿ ಚಾರ್ಜು ಮಾಡಬಹುದು. ರೈತರಿಗೆ ತೊಂದರೆ ಮಾಡಲು ಮಾನ್ಯ ಮಂತ್ರಿಗಳು ಈ ರೀತಿ ಮಾಡಿದ್ದಾರೆಂದು ಕಾಣುತ್ತದೆ. ಈ ವಿಭಾಗವನ್ನು ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ಗೆ ವಹಿಸಿದ ಮೇಲೂ ಕೂಡ ದರಗಳನ್ನು ಜಾಸ್ತಿ ಮಾಡುವುದಿಲ್ಲ ಎಂಬ ಭರವಸೆಯನ್ನು ಮಾನ್ಯ ಮಂತ್ರಿಗಳು ಈ ಸಭೆಗೆ ಕೊಡಬೇಕೆಂದು ಹೇಳುತ್ತೇನೆ. ವ್ಯವಸಾಯ ವಿಶ್ವ ವಿದ್ಯಾನಿಲಯದಲ್ಲಿ ಅನೇಕ ಸಂಶೋಧನಾ ಕೇಂದ್ರಗಳು ಇವೆ. ಈ ಕೇಂದ್ರಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ವ್ಯವಸಾಯ ವಿಶ್ವವಿದ್ಯಾನಿಲಯಕ್ಕೂ ವ್ಯವಸಾಯ ಇಲಾಖೆಗೂ ಹೊಂದಾಣಿಕೆ ಇಲ್ಲವಾಗಿದೆ. ಒಬ್ಬೊಬ್ಬರು ಒಂದೊಂದು ರೀತಿಯ ಸಲಹೆಗಳನ್ನು ರೈತರಿಗೆ ಬೆಳೆಯ ಬಗ್ಗೆ ರೇಡಿಯೋ ಮೂಲಕ ಕೊಡುತ್ತಿದ್ದಾರೆ. ಇವೆರಡೂ ಕೂಡ ಸರ್ಕಾರದ ಹಣದಿಂದಲೇ ನಡೆಯುತ್ತಿರುವುದರಿಂದ ಒಂದು ಹೊಂದಾಣಿಕೆ ಇರುವುದು ಅಗತ್ಯ. ಸಂಶೋಧನೆಯ ಬಗ್ಗೆ ಹೊಂದಾಣಿಕೆ ಇರುವುದು ಒಳ್ಳೆಯದು. ಈ ಬಗ್ಗೆ ಒಂದು ಕಮಿಟಿ ಮಾಡಿ ಯಾವ ವಿಷಯದಲ್ಲಿಯೂ ಕೂಡ ಎರಡು ಅಭಿಪ್ರಾಯಗಳು ಬರದಂತೆ ನೋಡಿ ಕೊಳ್ಳಬೇಕು. ಇಲ್ಲದಿದ್ದರೆ ರೈತರಿಗೆ ಬಹಳ ಕಷ್ಟವಾಗುತ್ತದೆ. ವ್ಯವಸಾಯ ವಿಶ್ವವಿದ್ಯಾನಿಲಯದಲ್ಲಿ ವ್ಯವಸಾಯಗಾರರ ಮಕ್ಕಳಿಗೆ ಹೆಚ್ಚಿನ ಪ್ರವೇಶಾವಕಾಶದ ಸೌಲಭ್ಯ ಸಿಗುವಂತೆ ಈಗಿನ ಕಾನೂನನ್ನು ಬದಲಾವಣೆ ಮಾಡಬೇಕೆಂದು ಸರ್ಕಾರದವರನ್ನು ಒತ್ತಾಯ ಪಡಿಸಿ ನನ್ನ ಮಾತುಗಳನ್ನು ಮುಗಿಸ ತ್ತೇನೆ.

ಶ್ರೀ ಎಸ್. ಕೆ. ಅಮೀನ್ (ಉಡುಪಿ) ;—ಮಾನ್ಯ ಸಭಾಧ್ಯಕ್ಷರೇ ಇವೊತ್ತು ಈ ಸದನದ ಮುಂದೆ ವ್ಯವಸಾಯ, ಪಶು ಸಂಗೋಪನ, ಅರಣ್ಯ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳನ್ನು ಮೂರು ಜನ ಮಾನ್ಯ ಮಂತ್ರಿಗಳು ನಮ್ಮ ಮುಂದೆ ಇಟ್ಟಿದ್ದಾರೆ. ನಾನು ಈ ಬೇಡಿಕೆಗಳನ್ನು ಸಮರ್ಥಿಸುತ್ತಾ ಒಂದೆರಡು ವಿಷ ಯಗಳನ್ನು ತಮ್ಮ ಮುಂದೆ ಹೇಳ ಬಯಸುತ್ತೇನೆ. ವ್ಯವಸಾಯ, ಪಶುಸಂಗೋಪನೆ ಮತ್ತು ಅರಣ್ಯ ಈ ವಿಷಯಗಳ ಬಗ್ಗೆ ಈ ಸದನದ ಸದಸ್ಯರನೇಕರು ಅನೇಕ ವಿಚಾರಗಳನ್ನು ಹೇಳಿದ್ದಾರೆ ಇನ್ನೂ ಮಾತನಾ ಡುವವರು ಇದ್ದಾರೆ. ಇದರಲ್ಲಿ ವ್ಯವಸಾಯದಲ್ಲಿ ಹೊಂದಿಕೊಂಡಿರುವ ಮೀನುಗಾರಿಕೆಯನ್ನು ಕುರಿತು ನಾನು ಸ್ವಲ್ಪ ವಿಷಯಗಳನ್ನು ಹೇಳಲು ಇಚ್ಛಿಸುತ್ತೇನೆ. ಇಂದು ನಮ್ಮ ದೇಶದಲ್ಲಿರತಕ್ಕ ರಾಜಕೀಯ ವಾತಾವ ರಣದಲ್ಲಿ ದೇಶದ ಸಂಸ್ಕೃತಿ, ರಾಜ್ಯದ ಸಂಸ್ಕೃತಿ, ಜನಸಾಮಾನ್ಯರ ಸಂಸ್ಕೃತಿ ಕೂಡ ಚಿತ್ರ ವಿಚಿತ್ರವಾ ಗಿದೆ ಇಂಥಾ ಕಾಲದಲ್ಲಿ ನಾವು ಈ ಬೇಡಿಕೆಗಳನ್ನು ಈ ಸಭೆಯ ಮುಂದಿಟ್ಟುಕೊಂಡು ಸಾಮಾನ್ಯ ಚರ್ಚೆ ಯನ್ನು ಮಾಡುತ್ತಿದ್ದೇವೆ. ಇದರ ಪರಿಣಾಮ ಎಷ್ಟರಮಟ್ಟಿಗೆ ಆಗುತ್ತದೆ ಎಂಬುದು ನನಗೆ ಸ್ಪಷ್ಟವಾಗಿ ಗೊತ್ತಿಲ್ಲ. ಆದಾಗ್ಯೂ ನಾನು ಮೀನುಗಾರಿಕೆಯನ್ನು ಕುರಿತು ಸ್ವಲ್ಪ ಹೇಳಬಯಸುತ್ತೇನೆ. ಇತ್ತೀಚಿಗೆ ಮೀನು ಮತ್ತು ಮೀನುಗಾರಿಕೆ ಜನರ ಹೆಚ್ಚಿನ ಗಮನವನ್ನು ಸೆಳೆಯುತ್ತಿದೆ. ಇದಕ್ಕೆ ಪತ್ರಿಕೆಗಳು, ಪತ್ರಿಕಾ ಕರ್ತರು ಮತ್ತು ತಮ್ಮೆಲ್ಲರ ಅನುಕಂಪ ದೊರತು ಆ ವಿಷಯ ಹೆಚ್ಚಿನ ಪ್ರಚಾರವಾಗಿರುವುದು ಕಾರಣವಾಗಿ ರಬಹುದು ನಮ್ಮ ದೇಶದಲ್ಲಿ ಮೀನುಗಾರಿಕೆಯನ್ನು ಅಭಿವೃದ್ಧಿ ಮಾಡತಕ್ಕದ್ದು ಮತ್ತು ಮೀನುಗಾರಿಕೆ ಯನ್ನು ಬೆಳೆಸುವಂಥಾದ್ದು ಅವಶ್ಯಕ. ನಮ್ಮ ದೇಶದ ಮಟ್ಟದಲ್ಲಿ ಮತ್ತು ನ್ಯಾಷನಲ್ ಲೆವೆಲ್‌ನಲ್ಲಿ ನಮ್ಮ ರಾಜ್ಯದ ಮಟ್ಟದಲ್ಲಿ ಮೀನುಗಾರಿಕೆಯ ಅಭಿವೃದ್ಧಿ ಬಗ್ಗೆ ಎಷ್ಟು ಗಮನಾರ್ಹವಾದ ಯೋಜನೆಯನ್ನು ಮಾಡಿದ್ದೇವೆ ಎಂದು ಹೇಳುವುದಕ್ಕೆ ಕಷ್ಟವಾಗುತ್ತದೆ. ಈ ಬೇಡಿಕೆಗೆ ಇನ್ನೂ ಹೆಚ್ಚಿನ ಹಣವನ್ನು ಒದ ಗಿಸಿ ನಮ್ಮ ರಾಜ್ಯದ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳಬಹುದು. ನಮ್ಮ ರಾಜ್ಯದ ಕರಾವಳಿ ಪ್ರದೇಶದ ಮೀನುಗಾರಿಕೆಗೆ ಇನ್ನೂ ಹೆಚ್ಚಿನ ಹಣವನ್ನು ಒದಗಿಸಿ ಅದಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ಕೊಟ್ಟು ನಮ್ಮ ರಾಜ್ಯದ ಸಂಪನ್ಮೂಲಗಳನ್ನು ಇನ್ನೂ ಹೆಚ್ಚಿಸಿಕೊಳ್ಳುವುದಕ್ಕೆ ಅವಕಾಶ ಇದೆ. ಆದರೆ ಇವೊತ್ತು ಈ ಒಂದು ನಮ್ಮ ಸಂಪನ್ಮೂಲಗಳನ್ನು ಹೆಚ್ಚಿಸುವುದಕ್ಕೆ ಈ ಬೇಡಿಕೆಯಲ್ಲಿ ಒದಗಿಸಿರುವಂಥಾ ಆರ್ಥಿಕ ವ್ಯವಸ್ಥೆ ಸಾಕಾಗುತ್ತದೆಯೇ ಎಂದು ಚೆನ್ನಾಗಿ ಆಲೋಚನೆ ಮಾಡಬೇಕಾಗಿದೆ. ಈಗ ನಾವು ಇಲ್ಲಿ ನೋಡುವಂತೆ ಮೀನುಗಾರಿಕೆಯನ್ನು ವ್ಯವಸಾಯ ಇಲಾಖೆಯಲ್ಲಿ ಸೇರಿಸಿಕೊಂಡಿದ್ದಾರೆ. ವ್ಯವಸಾಯ ಎಂದರೆ ನೆಲದ

ಬೇಸಾಯ, ಕಡಲಿನ ಬೇಸಾಯ ಎಂದು ಹೇಳುವವರು ಇದ್ದಾರೆ. ನೆಲದ ಬೇಸಾಯ ಎಂದರೆ ಒಂದು ಸೀಮಿತವಾದ ಸ್ಥಳದಲ್ಲಿ ಬೀಜವನ್ನು ಬಿತ್ತಿ ಬೆಳೆಯನ್ನು ತೆಗೆಯುವುದು ಎಂದು ನಿಶ್ಚಯ ಮಾಡಿದ್ದಾರೆ. ಆ ರೀತಿ ಮಾಡುವುದಕ್ಕೆ ಸಾಧ್ಯವಿದೆ. ಅದ್ದರಿಂದ ನಮಗೆ ಸಿಕ್ಕುವ ಸಂಪತ್ತು ಎಷ್ಟು, ಎಂಬುದನ್ನು ನಿಗದಿ ಮಾಡುವುದಕ್ಕೆ ಬರುತ್ತದೆ. ಆದರೆ ಕಡಲಿನಲ್ಲಿ ಬರುವ ಸಂಪತ್ತು ಎಷ್ಟು, ಎಷ್ಟು ಉತ್ಪತ್ತಿಯನ್ನು ನಾವು ಅದರಲ್ಲಿ ತೆಗೆಯಬಹುದು, ಎಂಬುದನ್ನು ಊಹೆ ಮಾಡುವುದಕ್ಕೆ ಸಾಧ್ಯವಿಲ್ಲ. ಈ ಮೀನುಗಾರಿಕೆಯ ಅಭಿವೃದ್ಧಿಯನ್ನು ಯೋಚಿಸುವ ಯೋಜನಾಕಾರರು ನಮ್ಮ ರಾಜ್ಯದ ಈ ಇಲಾಖೆಯ ಅಧಿಕಾರಿಗಳಾಗಲೀ ಮತ್ತು ಈ ಇಲಾಖೆಯನ್ನು ವಹಿಸಿಕೊಂಡಿರತಕ್ಕ ಸಚಿವರಾಗಲೀ ವಿದೇಶ ಪ್ರವಾಸ ಮಾಡಿರುವಷ್ಟು ಬೇರೆ ಯಾವ ಇಲಾಖೆಯ ಸಚಿವರೂ, ಅಧಿಕಾರಿಗಳೂ ಹೋಗಿಲ್ಲ. ಈ ಇಲಾಖೆಗೆ ಸಂಬಂಧಪಟ್ಟ ಅಧಿಕಾರಿಗಳು ವಿದೇಶ ಪ್ರವಾಸ ಹೋಗಿ ತರಪೇತಿ ಪಡೆದಷ್ಟು ಬೇರೆ ಯಾವ ಇಲಾಖೆಯವರೂ ಪಡೆದಿಲ್ಲ; ಇಂಥಾ ಸೌಲಭ್ಯವನ್ನು ಈ ಇಲಾಖೆಯವರು ಪಡೆದಿದ್ದಾರೆ. ಪಾಶ್ಚಾತ್ಯದೇಶದಲ್ಲಿ ಮೀನುಗಾರಿಕೆಯ ಅವಶ್ಯಕತೆಯನ್ನು ಮನಗಂಡಂತೆ ನಮ್ಮ ದೇಶದಲ್ಲಿ ಇಷ್ಟರವರೆಗೂ ಮನಗಂಡಿಲ್ಲ ಎಂದು ಸ್ಪಷ್ಟವಾಗಿ ಗೊತ್ತಾಗುತ್ತದೆ ಇವೊತ್ತು ಮೀನುಗಾರರು ಶೋಷಕವರ್ಗವಾಗಿದ್ದಾರೆ. ಇವರ ಅಭಿವೃದ್ಧಿ ಮತ್ತು ಅವರ ಬೆಳವಣಿಗೆ ಇನ್ನೂ ಸಾಕಷ್ಟು ಆಗಿಲ್ಲ. ಸರ್ಕಾರದವರು ಇವರಿಗೆ ಇನ್ನೂ ಹೆಚ್ಚಿನ ಪ್ರೋತ್ಸಾಹವನ್ನು ಕೊಡುವುದು ಅವಶ್ಯಕ. ಮೀನು ಸಾಕಾಣಿಕೆಗೆ ಫಿಷಿಕಲ್‌ಚರ್ ಎಂದು ಹೇಳುತ್ತಾರೆ. ಆಳವಾದ ಸಮುದ್ರದ ಮೀನುಗಾರಿಕೆಗೆ ಮೆರೀನ್ ಫಿಷರೀಸ್ ಎಂದು ಹೇಳುತ್ತಾರೆ. ಮೀನು ಸಾಕಾಣಿಕೆ, ಸಮುದ್ರ ಮತ್ತು ಸಾಗರದ ಮೀನುಗಾರಿಕೆ ಎಂದು ಬೇರೆ ಬೇರೆ ವಿಷಯವಾಗಿದೆ. ಮೆರೀನ್ ಫಿಷರೀಸ್ ಒಂದು ಉದ್ಯಮ ಎಂದು ಪರಿಗಣಿಸಿ ಅದಕ್ಕೆ ಬೇಕಾದ ಸೌಲಭ್ಯಗಳನ್ನು ಸರ್ಕಾರದವರು ಕೊಡದಿದ್ದರೆ ಮೀನುಗಾರಿಕೆ ಅಭಿವೃದ್ಧಿಯಾಗುವುದು ಕಷ್ಟವಾಗುತ್ತದೆ. ಮೀನನ್ನು ಬೆಳೆಸುವುದಕ್ಕೆ ಫಿಷಿಕಲ್‌ಚರ್ ಎಂದು ಹೇಳುತ್ತಾರೆ. ರೆ ತರಂ ಬೇಸಾಯ ಮಾಡುವ ಕಾಲವನ್ನು ಬಿಟ್ಟು ಉಳಿದ ಸಮಯದಲ್ಲಿ ಸ್ವಲ್ಪ ಮೀನನ್ನು ಬೆಳೆಸುವುದಾದರೆ ಅದು ರೈತರಿಗೆ ತಮ್ಮ ಉಪಯೋಗಕ್ಕಾಗಿಯೂ ಬರುತ್ತದೆ, ಮತ್ತು ಅವರು ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳುವುದಕ್ಕೂ ಅನುಕೂಲವಾಗುತ್ತದೆ. ಆಳವಾದ ಕಡಲಿನ ಮೀನುಗಾರಿಕೆಯೇ ಬೇರೆ. ಮೀನು ಸಾಗಾಣಿಕೆಯೇ ಬೇರೆ. ಇವೊತ್ತು ಪಾಶ್ಚಿಮಾತ್ಯ ದೇಶಗಳಲ್ಲಿ ಮೀನಿನ ಸೇವನೆ ಒಂದು ದಿಲಿಕೆಸಿಯಾಗಿದೆ ಅವರು ಅಲ್ಲಿ ಮೀನುಗಾರಿಕೆಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಮೀನುಗಾರಿಕೆಗೆ ಹೆಚ್ಚಿನ ಗಮನವನ್ನು ಕೊಟ್ಟರೂ ಕೂಡ ವಿಶೇಷವಾಗಿ ಇದರ ಸ್ಥೂಲ ಪರಿಚಯವನ್ನು ಮಾಡಿಕೊಂಡಿಲ್ಲ. ಈಗ ಉದಾಹರಣೆಗೆ ಹೇಳುವುದಾದರೆ ಆಳವಾದ ಸಮುದ್ರದಲ್ಲಿ ಮೀನುಗಾರಿಕೆಯನ್ನು ಮಾಡಬೇಕಾಗಿದ್ದರೆ ಟ್ರಾಲರ್‌ಗಳು ಬೇಕಾಗಿವೆ. ಒಂದು ಟ್ರಾಲರ್‌ಗೆ ೮ ಲಕ್ಷ ರೂಪಾಯಿಗಳಾಗುತ್ತದೆ. ಈ ಮೀನುಗಾರಿಕೆ ಬೇಡಿಕೆಗೆ ಬಡ್ಜೆಟ್ಟಿನಲ್ಲಿ ಒದಗಿಸಿರತಕ್ಕ ೩೨ ಲಕ್ಷ ರೂಪಾಯಿಗಳಿಗೆ ೪ ಟ್ರಾಲರ್‌ಗಳು ಬರುವುದಕ್ಕೆ ಸಾಧ್ಯವಿಲ್ಲ. ಬರೀ ಟ್ರಾಲರ್‌ಗಳನ್ನು ತೆಗೆದುಕೊಂಡರೆ ಇನ್ನುಳಿದ ಮೀನುಗಾರಿಕೆಯ ಕೆಲಸ ಹೇಗೆ ಆಗುತ್ತದೆ, ನಾನು ತಮಗೆ ಜಪಾನ್ ದೇಶದ ಒಂದು ಉದಾಹರಣೆಯನ್ನು ಹೇಳುವುದಾದರೆ ಅಲ್ಲಿ ಮೀನುಗಾರಿಕೆಗೆ ಒದಗಿಸಿರುವಂಥ ಸೌಲಭ್ಯವನ್ನು ನೋಡಿದರೆ ನಮ್ಮ ದೇಶದಲ್ಲಿ ಮೀನುಗಾರಿಕೆಗೆ ಒದಗಿಸಿರುವ ಸೌಲಭ್ಯ ಏನೇನು ಸಾಲದು. ನಮ್ಮ ರಾಜ್ಯಕ್ಕೆ ಟ್ರಾಲರ್‌ಗಳನ್ನು ತಂದರೂ ಕೂಡ ಅವುಗಳನ್ನು ನಡೆಸುವಂಥಾ ಸೌಲಭ್ಯ ಏನಿದೆ ಅದನ್ನು ಕಂಡುಕೊಂಡಿಲ್ಲ. ಫಿಷರೀಸ್ ಹಾರ್‌ಬರ್ ವ್ಯವಸ್ಥೆ ಇಲ್ಲ. ಹಡಗುಗಳು ಬಂದರೆ ಅವುಗಳನ್ನು ನಡೆಸುವಂಥಾ ತರಬೇತಿಯನ್ನು ಮೀನುಗಾರರಿಗೆ ನಮ್ಮ ರಾಜ್ಯದಲ್ಲಿ ಕೊಡುತ್ತಿಲ್ಲ. ಒಂದು ವೇಳೆ ಟ್ರಾಲರ್ಸ್ ಕೆಟ್ಟು ಹೋದರೆ ಅದನ್ನು ರಿಪೇರಿ ಮಾಡಿಸುವುದಕ್ಕೆ ಡ್ರೈ ಡಾಕ್ ಫೆಸಿಲಿಟೀಸ್ ಇಲ್ಲ. ಫಿಷರೀಸ್ ಹಾರ್‌ಬರ್ ಇಲ್ಲ. ಹಾರ್ಬರ್ ಕಟ್ಟುವಮಾತಾದ್ದು ಇನ್ನೂ ಯಾವ ರೂಪಕ್ಕೂ ಬಂದಿಲ್ಲ. ಅದು ಕಾರ್ಯರೂಪಕ್ಕೆ ಬರುವಂತಹ ನಿರೀಕ್ಷಣೆ ಸಮೀಪದಲ್ಲಿ ಇಲ್ಲ. ಆದ್ದರಿಂದ ಇದನ್ನು ಜಾಗ್ರತೆಯಾಗಿ ಸರ್ಕಾರದವರು ಆಲೋಚನೆ ಮಾಡಬೇಕು ಇಂಡಿಯನ್ ಪೋರ್ಟ್ ಅಡ್ವೈಜರಿ ಬೋರ್ಡಿನಲ್ಲಿ ಕರಾವಳಿ ಮೀನುಗಾರಿಕೆಯ ವಿಷಯದಲ್ಲಿ ಬಹಳ ವಿತರ್ಕವುಂಟಾಗಿದೆ. ಗಳನಾಡಿನ ಮೀನುಗಾರಿಕೆ ಎಂದರೆ ಮೀನು ಸಾಕಾಣಿಕೆ. ಕರಾವಳಿ ಮೀನುಗಾರಿಕೆಯು ಒಳನಾಡಿನ ಮೀನುಗಾರಿಕೆಗಿಂತ ವಿಭಿನ್ನವಾಗಿದೆ. ಆದ್ದರಿಂದ ಕರಾವಳಿ ಮೀನುಗಾರಿಕೆಯನ್ನು ಒಂದು ಉದ್ಯಮ ಎಂದು ಪರಿಗಣಿಸಿ ಅದಕ್ಕೆ ಬೇಕಾದ ಸೌಲಭ್ಯಗಳನ್ನು ಒದಗಿಸಿಕೊಟ್ಟು ಅದನ್ನು ರೂಢಿಸಿಕೊಂಡು ಬೆಳೆಸಬೇಕು ಬರೀ ಅಂಕಿ ಅಂಶಗಳನ್ನು ಕೊಟ್ಟು ಮಾತನಾಡುವುದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಇವೊತ್ತು ನಮ್ಮ ರಾಜ್ಯದಲ್ಲಿ ಉಪಯೋಗ ಮಾಡುತ್ತಾ ಇರುವಂಥಾ ಈ ವ್ಯವಸ್ಥೆಯಲ್ಲಿ ಮೀನುಗಾರಿಕೆಯ ಅಭಿವೃದ್ಧಿ ಎಂದಿಗೂ ಸಾಧ್ಯವಾಗುವುದಿಲ್ಲ. ಆಳವಾದ ಸಮುದ್ರದ ಮೀನುಗಾರಿಕೆಯನ್ನು ಬೆಳೆಸಬೇಕಾದರೆ ಫಿಷರೀಸ್ ಹಾರ್ಬರ್ ಆಗಬೇಕು. ಟ್ರಾಲರ್ಸ್‌ಗಳನ್ನು ತರಿಸಿಕೊಡಬೇಕು. ಕೇರಳದಲ್ಲಿ ಸಾಧಾರಣವಾಗಿ ೪ ಫಿಷರೀಸ್ ಹಾರ್ಬರ್ ಕೆಲಸವನ್ನು ತೆಗೆದುಕೊಂಡು ಅದಕ್ಕೆ ಸಾಧಾರಣವಾಗಿ ೧೬ ಕೋಟಿ ರೂಪಾಯಿಗಳನ್ನು ಅವರು ವೆಚ್ಚ ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ಇದನ್ನು ಹಾಳುಮಾತುತಿ ದ್ವಾರೆಯೋ ವಿನಾ

(ಶ್ರೀ ಎಸ್. ಕೆ. ಅಮೀನ್)

ನಾವು ಯಾವ ಹೆಚ್ಚಿನ ಸಾಧನೆಯನ್ನೂ ಸಾಧಿಸಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಆದಷ್ಟು ತೀವ್ರವಾಗಿ ಪ್ರಯತ್ನ ಮಾಡಿ ಫಿಷರೀಸ್ ಹಾರ್ಬರ್‌ಗಳನ್ನು ಮಾಡಬೇಕು. ಆಳವಾದ ಮೀನುಗಾರಿಕೆಯನ್ನು ಅಭಿವೃದ್ಧಿ ಮಾಡದೆ ಹೋದರೆ ಯಾವ ಪ್ರಯೋಜನವೂ ಆಗುವುದಿಲ್ಲ. ಬೇರೆ ದೇಶಗಳಲ್ಲಿ ಮೀನುಗಾರಿಕೆಯ ಪ್ರಗತಿಯನ್ನು ನೋಡುವುದಾದರೆ ಜಪಾನ್‌ನಲ್ಲಿ ಒಂದು ಮಾರ್ಕೆಟ್‌ನಲ್ಲಿ ಒಂದು ದಿವಸಕ್ಕೆ ೫ ಕೋಟಿ ರೂಪಾಯಿಗಳ ಮೀನು ವ್ಯಾಪಾರವಾಗುತ್ತಿದೆ ಎಂದು ತಿಳಿದು ಬಂದಿದೆ. ಅಲ್ಲಿ ಒಂದು ದಿವಸಕ್ಕೆ ಒಂದು ಕಡೆ ೫ ಕೋಟಿ ರೂಪಾಯಿಗಳ ಮೀನಿನ ವ್ಯಾಪಾರ, ಮೀನಿನ ವಿತರಣೆ ಆದರೆ, ಇಡೀ ಜಪಾನ್ ದೇಶದಲ್ಲಿ ಒಂದು ದಿವಸಕ್ಕೆ ಎಷ್ಟು ಮೀನು ವ್ಯಾಪಾರವಾಗಬಹುದು ಎಂಬುದನ್ನು ನಾವು ಊಹೆ ಮಾಡಬಹುದು. ದಕ್ಷಿಣ ಕನ್ನಡ ಜಿಲ್ಲೆಯನ್ನು ತೆಗೆದುಕೊಂಡರೆ ಒಂದು ವರ್ಷದಲ್ಲಿ ಮೂರು ಕೋಟಿ ರೂಪಾಯಿಗಳಿಗಿಂತ ಜಾಸ್ತಿ ವ್ಯಾಪಾರವಾಗುವುದಿಲ್ಲ.

ಆದ್ದರಿಂದ ನಮಗೆ ಇರುವಂತಹ ಅನುಕೂಲಗಳು ಯಾವುದು, ನಮ್ಮ ಮಿತಿ ಏನು, ನಮ್ಮ ಗುರಿ ಯಾವುದು ಎಂಬುದನ್ನು ನಿರ್ದಿಷ್ಟವಾಗಿಟ್ಟುಕೊಂಡು ಮುಂದುವರಿಯಬೇಕಾಗುತ್ತದೆ. ಇಲ್ಲದಿದ್ದರೆ ನಮ್ಮ ಗುರಿಯನ್ನು ಮುಟ್ಟುವುದಕ್ಕಾಗುವುದಿಲ್ಲ. ನಾವು ಕಾರ್ಯತ: ಮಾಡದೆ, ಕೇವಲ ಕಾಲ್ಪನಿಕ ಅಂಕೆ ಸಂಖ್ಯೆಗಳನ್ನು ಹಾಕಿಕೊಂಡು ಅಭಿವೃದ್ಧಿಯನ್ನು ಮಾಡಲು ಹೋದರೆ, ಅದು ಸಾಧ್ಯವಾಗಲಿಕ್ಕಿಲ್ಲ. ಹೆಚ್ಚು ಕಾಲ ಇಲ್ಲದಿರುವುದರಿಂದ ನಾನು ಇಷ್ಟು ಮಾತ್ರ ಹೇಳುತ್ತೇನೆ. ನಮ್ಮ ರಾಜ್ಯದ ಮೀನುಗಾರಿಕೆ ಇಲಾಖೆಯನ್ನು ಪ್ರತ್ಯೇಕಗೊಳಿಸಿ, ಮೈರೀನ್ ಫಿಷರೀಸ್ ಅಭಿವೃದ್ಧಿಯನ್ನು ನಾವು ಪ್ರತ್ಯೇಕವಾಗಿಟ್ಟುಕೊಂಡು, ರಾಜ್ಯದ ಸಂಪನ್ಮೂಲಗಳನ್ನು ನಿಶ್ಚಿತ ರೂಪದಲ್ಲಿ ಹೆಚ್ಚಿಸುವುದಕ್ಕೆ ಅವಕಾಶ ಇದೆ. ಅದನ್ನು ನಮ್ಮ ಸರ್ಕಾರದವರು ಅವಶ್ಯವಾಗಿ ಉಪಯೋಗಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕೆಂದು ಸೂಚನೆ ಮಾಡುತ್ತೇನೆ. ಈ ಮೀನುಗಾರಿಕೆಯಲ್ಲಿ ಒಂದು ವಿಷಯವನ್ನು ಗಮನದಲ್ಲಿಟ್ಟುಕೊಳ್ಳತಕ್ಕದ್ದು ಮುಖ್ಯವಾಗಿದೆ. ಇದು ಯಾವ ರೀತಿಯಲ್ಲಿ ದೊರಕಬಹುದೆಂಬುದನ್ನು ಹೇಳಲಿಕ್ಕೆ ಬರುವುದಿಲ್ಲ. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಮೀನನ್ನು ಬಹಳ ಪೌಷ್ಟಿಕ ಆಹಾರವನ್ನಾಗಿ ಉಪಯೋಗಿಸುತ್ತಿದ್ದಾರೆಂದು ನಮ್ಮ ರಾಜ್ಯದಲ್ಲಿ ಪ್ರಚಾರ ಮಾಡಿದರೆ ಪ್ರಯೋಜನವಿಲ್ಲ ಮೀನನ್ನು ಪಡೆಯುವಲ್ಲಿ ಮನುಷ್ಯನು ತನ್ನ ಯೋಗ್ಯತೆ, ಸಾಹಸ, ಮತ್ತು ಜೀವನದ ಹಂಗು ತೊರೆದು ಸಂಪಾದಿಸಬೇಕಾಗಿದೆ. ನಮ್ಮ ರಾಜ್ಯದ ಮಂತ್ರಿಯವರು ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಹೋಗಿದ್ದಾರೆ; ಮತ್ತು ಎಲ್ಲವನ್ನೂ ನೋಡಿಕೊಂಡು ಬಂದಿದ್ದಾರೆ. ಅಲ್ಲಿ ಇದಕ್ಕೆ ಗೌರ್ನ್‌ಮೆಂಟ್ ಗ್ರಾಂಟ್ ಕೊಟ್ಟು ನಡೆಸುತ್ತಿದ್ದಾರೆ. ಆದರ ಇಲ್ಲಿ ಈ ಹೊತ್ತು ಮೀನುಗಾರರ ಪರಿಸ್ಥಿತಿ ಬಹಳ ಚೆನ್ನಾಗಿದೆ. ಅವರಿಗೆ ಸಂಪಾದನೆ ಚೆನ್ನಾಗಿ ಸಿಗುತ್ತದೆ ಎಂಬ ಭಾವನೆ ಇಟ್ಟುಕೊಂಡು, ಅವನಿಗೆ ಕೊಡುವ ಸವಲತ್ತುಗಳನ್ನು ಹಿಂದೆಗೆಯುವ ಪ್ರಯತ್ನವನ್ನು ಸರ್ಕಾರದವರು ಮಾಡಬಾರದು. ನಾವು ಇವತ್ತು ಈ ಮೀನುಗಾರಿಕೆಯ ಅಭಿವೃದ್ಧಿಯಲ್ಲಿ ಪ್ರಥಮ ಹೆಜ್ಜೆಯಲ್ಲಿದ್ದೇವೆ. ಇನ್ನೂ ಮುಂದೆ ಬರಲು ತುಂಬಾ ಇದೆ. ಇದನ್ನು ಮನಸ್ಸಿನಲ್ಲಿಟ್ಟುಕೊಂಡು ಮೀನುಗಾರಿಕೆಯನ್ನು ಅಭಿವೃದ್ಧಿ ಮಾಡಬೇಕೆಂದು ಸೂಚಿಸಿ, ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ. ರಾಮೇಗೌಡ (ದೊಡ್ಡಬಳ್ಳಾಪುರ) :— ಮಾನ್ಯ ಅಧ್ಯಕ್ಷರೇ, ನಮ್ಮ ಮುಂದಿರತಕ್ಕಂತಹ ಬೇಡಿಕೆಗಳಲ್ಲಿ ಪಶುಸಂಗೋಪನಾ ಇಲಾಖೆಗೆ ಸಂಬಂಧಪಟ್ಟ ಒಂದೆರಡು ವಿಚಾರಗಳನ್ನು ಹೇಳುತ್ತೇನೆ. ರಾಜ್ಯದಲ್ಲಿರತಕ್ಕಂತಹ ಈ ಪಶುಸಂಪತ್ತನ್ನು ಹೆಚ್ಚಿಸಲು ರಾಜ್ಯ ಸರ್ಕಾರದವರು ಕೊಟ್ಟಿರತಕ್ಕಂತಹ ಹಣ ಬಹಳ ಕನಿಷ್ಟ ಮಟ್ಟದಲ್ಲಿದೆ ಎಂದು ಹೇಳುತ್ತೇನೆ. ಎಷ್ಟು ಪ್ರಾಮುಖ್ಯತೆಯನ್ನು ನಾವು ಪಶುಸಂಪತ್ತಿಗೆ ಕೊಡುತ್ತಿದ್ದೇವೆ, ಅದಕ್ಕೆ ತಕ್ಕಂತೆ ಈ ಹಣದ ಸಹಾಯ ಮತ್ತು ಯೋಜನೆಗಳ ವಿಧಾನ ಏನೂ ಸಾಲದು ಎಂದು ಹೇಳುತ್ತೇನೆ. ಈಗಲಾದರೂ ಮಾನ್ಯ ಮಂತ್ರಿಯವರು ಇದಕ್ಕೆ ಹೆಚ್ಚಿನ ಹಣವನ್ನು ಒದಗಿಸಬೇಕು ಮತ್ತು ಅದಕ್ಕೆ ತಕ್ಕ ಕಾರ್ಯಕ್ರಮಗಳನ್ನು ಇಟ್ಟುಕೊಂಡು ಈ ಪಶು ಸಂಪತ್ತನ್ನು ಹೆಚ್ಚು ಹೆಚ್ಚಾಗಿ ಬೆಳೆಸಬೇಕೆಂದು ಕೇಳಿಕೊಳ್ಳುತ್ತೇನೆ. ಈ ಪಶು ಸಂಗೋಪನೆಯಲ್ಲಿ ಹಾಲು ಕರೆಯುವ ಹಸುಗಳ ಅಭಿವೃದ್ಧಿ ಬಗ್ಗೆ ಬಹಳ ಪ್ರಚಾರವನ್ನು ಮಾನ್ಯ ಮಂತ್ರಿಯವರು ಮಾಡುತ್ತಿದ್ದಾರೆ. ಆದರೆ ಅದಕ್ಕೆ ತಕ್ಕ ವ್ಯವಸ್ಥೆ ಮಾಡಿರತಕ್ಕುದ್ದು ಬಹಳ ಕಡಿಮೆ. ಈ ಕ್ರಾಸ್ ಬ್ರೀಡಿಂಗ್ ಪ್ರೋಗ್ರಾಂಗೋಸ್ಕರ ಏರ್ಪಾಡು ಮಾಡಿರತಕ್ಕ ಆರ್ಟಿಫಿಯಲ್ ಇನ್‌ಸಿಮಿನೇಶನ್ ಸೆಂಟರುಗಳು ಬಹಳ ಕಡಿಮೆ ಇದೆ. ಇದು ಪ್ರತಿಯೊಂದು ಜಿಲ್ಲೆಯ ಕೇಂದ್ರಗಳಲ್ಲೂ ಇರಬೇಕಾದುದು ಆವಶ್ಯಕ ಮತ್ತು ಈ ಸೇವೆಯನ್ನು ಹಳ್ಳಿಗಳಲ್ಲಿ ಹೆಚ್ಚಾಗಿ ಬೇಕಾಗಿರತಕ್ಕ ಪ್ರದೇಶಗಳಲ್ಲಿ ಅಂದರೆ, ಎಲ್ಲಿ ಡೈರಿ ಡೆವಲಪ್‌ಮೆಂಟ್ ಪ್ರೋಗ್ರಾಂ ವಿಸ್ತರಿಸಿದ್ದಾರೋ ಅಲ್ಲಿ ಇನ್ನೂ ಹೆಚ್ಚಾಗಿ ಇಟ್ಟು, ಇದು ಬಹಳ ಸುಲಭವಾಗಿ ಜನರಿಗೆ ಸಿಗುವಂತೆ ಮಾಡಬೇಕು ಈಗ ಮಾಡಿರುವ ಯೋಜನೆ ಖಂಡಿತವಾಗಿಯೂ ಸಾದುವಾದುದಲ್ಲ; ಮತ್ತು ಇದರಿಂದ ಜನರಿಗೆ ಉಪಕಾರವು

ಆಗುತ್ತಾ ಇಲ್ಲ. ಈ ಕ್ರಾಸ್ ಬ್ರೀಡಿಂಗ್ ಯೋಜನೆ ಕಾಗದದಲ್ಲಿದೆಯೇ ಹೊರತು, ಕಾರ್ಯರೂಪದಲ್ಲಿ ಇಲ್ಲವೆಂದು ನಾನು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ೭೫೦ ಚಿಲ್ಲರೆ ಆಸ್ಪತ್ರೆಗಳಿವೆ ಎಂದು ಉತ್ತರ ಹೇಳು-ವಾಗ ಹೇಳಿದ್ದಾರೆ. ಆದರೆ ಈ ಆಸ್ಪತ್ರೆಗಳನ್ನು ಇವರು ನೋಡಿದ್ದಾರೋ, ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಇವುಗಳಲ್ಲಿ ಶೇಕಡಾ ೯೦ ರಷ್ಟು ಆಸ್ಪತ್ರೆಗಳನ್ನು ನೋಡಿದರೆ, ಬಹಳ ಅಸಹ್ಯಕರವಾಗಿದೆ ಅಲ್ಲಿ ರಾಸುಗಳ ಚಿಕಿತ್ಸೆಗೆ ಯೋಗ್ಯವಾದ ಯಾವ ಸೌಕರ್ಯವೂ ಇಲ್ಲವೆಂದು ಹೇಳುತ್ತೇನೆ. ಉದಾಹರಣೆಗೆ ಮಲ್ಲೇಶ್ವರಂನಲ್ಲಿ ಒಂದು ಆಸ್ಪತ್ರೆ ಇದೆ ಅದು ಗಾಂಧಿ ಕುಟೀರ ಇದ್ದ ಹಾಗೆ ಇದೆ. ಅಲ್ಲಿ ದಿನಕ್ಕೆ ನೂರಾರು ರಾಸುಗಳು ಬರುತ್ತವೆ. ಅವಕ್ಕೆ ಬೇಕಾದ ಅನುಕೂಲ, ಸೌಕರ್ಯ, ಯಾವುದೂ ಇಲ್ಲ. ಅಲ್ಲಿಗೆ ೫-೬ ಸಾವಿರ ಬೆಲೆ ಬಾಳುವಂತಹ ೫೦ ಸಾವಿರ ರಾಸುಗಳು ಒಂದು ವರ್ಷಕ್ಕೆ ಬರುವಂತಹ ಸ್ಥಳ, ಅಂಥ ಪ್ರದೇಶದಲ್ಲಿ ಕೂಡ ಆಸ್ಪತ್ರೆ ಹೀಗೆ ಇದ್ದರೆ ಹೇಗೆ? ಇದನ್ನು ನೋಡಿದರೆ, ಪಶು ಸಂಪತ್ತನ್ನು ಅಭಿವೃದ್ಧಿ ಪಡಿಸುವುದಕ್ಕೆ ಏನು ಅವಕಾಶವಿದೆ ಎಂಬುದನ್ನು ನಾವು ಪ್ರತ್ಯಕ್ಷವಾಗಿ ತಿಳಿದುಕೊಳ್ಳಬಹುದು. ಇದರ ವ್ಯವಸ್ಥೆ ಈ ರೀತಿಯಾದರೆ, ಇಷ್ಟು ಸಂಖ್ಯೆಯಲ್ಲಿ ಆಸ್ಪತ್ರೆಗಳಿದ್ದರೂ ಪ್ರಯೋಜನವೇನು ? ಈಗ ತುಮಕೂರು, ಬೆಂಗಳೂರು, ಕೋಲಾರ ಜಿಲ್ಲೆಗಳಲ್ಲಿ ಇರುವಂತಹ ಆಸ್ಪತ್ರೆಗಳಲ್ಲಿ ಔಷಧಿಗಳು ಏನಿವೆ, ಮತ್ತು ಅವುಗಳ ಬೆಲೆ ಏನೆಂಬುದನ್ನು ತಾವು ಹೇಳಬೇಕು. ಅಲ್ಲಿ ಹೋದರೆ, ರಾಸುಗಳಿಗೆ ನೀರು ಕೂಡ ಸಿಗುತ್ತಾ ಇಲ್ಲ. ಆದ್ದರಿಂದ ಪ್ರತಿಯೊಂದು ಆಸ್ಪತ್ರೆಯನ್ನೂ ಅಪ್‌ಗ್ರೇಡ್ ಮಾಡತಕ್ಕ ವ್ಯವಸ್ಥೆಯನ್ನು ಮಾಡಬೇಕು; ಮತ್ತು ಅದಕ್ಕೆ ಹೆಚ್ಚಿನ ಹಣವನ್ನು ಒದಗಿಸಬೇಕು.

ಇನ್ನು ಹಸುಗಳನ್ನು ಬೆಂಗಳೂರಿನಲ್ಲಿ ಸಾಕುವುದಕ್ಕಿಂತಲೂ ಹೊರಗಡೆ ಸಾಕುವುದು ಒಳ್ಳೇಯದು ಎಂದು ಮಂತ್ರಿಯವರು ಅಭಿಪ್ರಾಯವನ್ನು ಕೊಟ್ಟಿದ್ದಾರೆ, ಪಟ್ಟಣದ ಸುತ್ತಲೂ ಕಾಲೊನಿಗಳನ್ನು ಮಾಡಿ, ಅಲ್ಲಿ ಸಿಗತಕ್ಕ ಹಾಲನ್ನು ಡೈರಿಗಳಿಗೆ ಉಪಯೋಗಮಾಡಬಹುದೆಂದು ಹೇಳುತ್ತಿದ್ದಾರೆ. ಇನ್ನು ಲೈಸೆನ್ಸ್ ತೆಗೆದುಕೊಳ್ಳುವ ಒಂದು ಪದ್ಧತಿಯನ್ನು ತಂದರೆ ನಿಜವಾಗಿಯೂ ಇದರಿಂದ ಪ್ರಯೋಜನ ವಾಗಲಾರದು. ಈ ಕಾಲೋನಿಗಳಲ್ಲಿ ಕೂಡ ಎಲ್ಲಾ ಹಸಿರು ಹುಲ್ಲು, ಬ್ಯಾಲೆನ್ಸ್‌ಡ್ ಫುಡ್ ಎಲ್ಲಾ ಕೊಟ್ಟರೆ ಸರಿಯಾಗಿ ನಡೆಯುತ್ತದೆ ಹೊರತು, ಈಗಿರತಕ್ಕ ಪರಿಸ್ಥಿತಿಯ ಹಾಗೆ ಕಣ್ಣೀರು ಒರೆಸುವದರೆ ಮಾಡಬಾರದು.

ಇದರ ಜೊತೆಗೆ ಪೌಲ್ಟ್ರಿ ಬಗ್ಗೆಯೂ ಸ್ವಲ್ಪ ಹೇಳುತ್ತೇನೆ. ಪೌಲ್ಟ್ರಿಗೆ ಬೇಕಾದ ಔಷಧಿಗಳನ್ನು ಬೇಗನೆ ಒದಗಿಸದಿದ್ದರೆ, ಅವುಗಳಿಗೆ ಒಂದು ಗಂಟೆಯೊಳಗೆ ಚಿಕಿತ್ಸೆ ಮಾಡದಿದ್ದರೆ, ಕೋಳಿಗಳು ಬದುಕುವುದಿಲ್ಲ. ಆದ್ದರಿಂದ ಇದಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡಬೇಕು. ಇನ್ನು ಈ ಇಲಾಖೆಯಲ್ಲಿ ೫೦ ಸಾವಿರ ರೂಪಾಯಿ ಖರ್ಚು ಮಾಡಿ ಒಂದು ಮೆಷಿನರಿಯನ್ನು ತಯಾರು ಮಾಡಿದ್ದಾರೆ. ಆ ಮೆಷಿನರಿ ಕಳೆದ ನಾಲ್ಕು ವರ್ಷಗಳಿಂದಲೂ ಕೆಲಸ ಮಾಡುತ್ತಿಲ್ಲ. ಇದಕ್ಕೆ ಇಷ್ಟು ವರ್ಷಗಳಾದರೂ ರಿಪೇರಿ ಮಾಡಿಲ್ಲವೆಂದರೆ, ಅದು ಆಶ್ಚರ್ಯಕರವಾದ ವಿಚಾರ. ಇದಕ್ಕೆ ಸರಿಯಾದ ಗಮನ ಕೊಡುತ್ತಾ ಇಲ್ಲ ಅಂದರೆ, ಅನುಮಾನ ಬರುತ್ತದೆ. ಇದಕ್ಕೆ ಇರತಕ್ಕ ತೊಂದರೆ ಏನು? ಅದನ್ನು ಸುಧಾರಿಸಲು ಸಾಧ್ಯವಿಲ್ಲದಿರತಕ್ಕ ತೊಂದರೆಗಳು ಯಾವುವು? ಇದನ್ನು ಖಂಡಿತವಾಗಿಯೂ ಉತ್ತಮಪಡಿಸಬೇಕು. ಮತ್ತು ಇವರಲ್ಲಿ ಮುಖ್ಯವಾಗಿ ಬೇಕಾದ ರಾಣಿಕಿಂಟನ್ ಔಷಧಿ ಇಲ್ಲ. ಮತ್ತು ಈ ಹಾಲು ಕರೆಯುವ ಹಸುಗಳಿಗೆ ಬಾಯಿ ಮತ್ತು ಕಾಲು ಜ್ವರವೆಂಬ ಕಾಯಿಲೆ ಬರುತ್ತದೆ. ಅದಕ್ಕೆ ಬೇಕಾದ ಔಷಧಿಯನ್ನು ತಯಾರು ಮಾಡತಕ್ಕ ಯೋಜನೆ ನಮ್ಮಲ್ಲಿ ಇಲ್ಲ. ಇವರು ಬಡ್ಜೆಟ್ಟಿನಲ್ಲಿ ಹೇಳುವುದು ಒಂದು ಮಾತು, ಮತ್ತೆ ಮಾಡುವುದು ಇನ್ನೊಂದು. ಇದಕ್ಕೆ ಸಂಬಂಧಪಟ್ಟ ಮಂತ್ರಿಯವರು ಇದರ ಬಗ್ಗೆ ಏನು ಕಾರ್ಯಕ್ರಮಗಳನ್ನು ಹಾಕಿ ಕೊಳ್ಳುತ್ತಾರೆಂಬ ನಂಬಿಕೆ ನನಗೆ ೮ ವರ್ಷಗಳಿಂದಲೂ ಬಂದಿಲ್ಲ.

೪-೦೦ P.M.

ಈಗ ಹೇಳಿದ್ದಾರೆ, ಔಷಧಿ ತಯಾರು ಮಾಡುವುದಕ್ಕೆ ಸ್ಥಳ ಹುಡುಕಿದ್ದೇವೆಂದು. ಈ ವರ್ಷ ಸ್ಥಳ ಹುಡುಕುವುದು, ಮುಂದಿನ ವರ್ಷ ಯಾರನ್ನಾದರೂ ನೇಮಕ ಮಾಡುವುದು, ಆಮೇಲೆ ಮೆಷಿನರಿ ತರಿಸುವುದು, ಅದರಲ್ಲಿ ಯಾವುದಾದರೂ ಒಂದು ಭಾಗ ಕೆಟ್ಟು ಹೋದರೆ ಪಶು ಸಂಪತ್ತು ಯೋಜನೆ ಏನಿದೆ ಅದು ಖಂಡಿತವಾಗಿ ಯಶಸ್ವಿಯಾಗುವುದಿಲ್ಲ. ಆದ್ದರಿಂದ ಏನಾದರೂ ಮಾಡುವುದು ಇದ್ದರೆ ನೀವೇ ಜವಾಬ್ದಾರಿ ವಹಿಸಿಕೊಂಡು ಮಾಡಿ, ಇಲ್ಲದೇ ಹೋದರೆ ಬೇರೆ ಏನಾದರೂ ಏರ್ಪಾಡು ಮಾಡಿಯೆಂಬುದಾಗಿ ಜನತೆಗೆ ಹೇಳುವುದು ಬಹಳ ಒಳ್ಳೆಯದು. ಒಂದೊಂದು ಕಾರ್ಖಾನೆಯಲ್ಲಿಯೂ ಸುಮಾರು ೩ ಕೋಟಿ ರೂಪಾಯಿಗಳವರೆಗೂ ನಷ್ಟವಾಗಿರುವ ಕಾರ್ಖಾನೆಗಳು ಈಗ ಇವೆ. ಅಂದಮೇಲೆ ನಮ್ಮ ವ್ಯವಸಾಯ ಗಾರರಿಗೆ ಬೇಕಾದ ಉಪಕರಣಗಳಿಗೆ ಲಕ್ಷಾಂತರ ರೂಪಾಯಿಗಳಷ್ಟು ಹಣ ಖರ್ಚುಮಾಡುವುದರಲ್ಲಿ ಕಣ್ಣು ಕೆಂಪು ಆದರೆ, ಇನ್ನು ಯಾವ್ಯಾವ ರೀತಿಯಲ್ಲಿ ರೈತರಿಗೆ ಸಹಾಯ ಮಾಡುತ್ತೀರಿ? ಕಾರ್ಯತಃ ಕೆಲಸಕಾರ

(ಶ್ರೀ ಜಿ ರಾಮೇಗೌಡ)

ಗಳನ್ನು ಏನು ಮಾಡುತ್ತೀರೆಂದು ಹೇಳುವುದೇ ನಮಗೆ ಅಸಾಧ್ಯವಾಗಿ ಕಾಣುತ್ತಿದೆ. ಮೂರು ಸಾವಿರ ಹಸುಗಳಿಗೆ ಏನಾದರೂ ಕಾಯಿಲೆ ಬಂದರೆ ಅದಕ್ಕೆ ಬೇಕಾದ ಔಷಧಿಗಳನ್ನು ಉತ್ತರ ಪ್ರದೇಶದಲ್ಲಿ ತಯಾರಿಸುತ್ತಾರೆಂದು ಹೇಳುತ್ತಾರೆಯೇ ಹೊರತು ನಮ್ಮ ರಾಜ್ಯದಲ್ಲಿ ತಯಾರುಮಾಡುತ್ತಾ ಇಲ್ಲ. ಯಾವ ಒಂದು ರೀತಿಯ ವ್ಯಾಕ್ಸಿನ್ ಸಹ ಅದಕ್ಕೆ ಸಂಬಂಧಪಟ್ಟ ಹಾಗೆ ತಯಾರುಮಾಡುತ್ತಾ ಇಲ್ಲ. ಅದ್ಯಾವುದನ್ನು ಇದುವರೆಗೆ ಇವರು ಆಲೋಚನೆ ಮಾಡಲಿಲ್ಲ, ಮಾಡುತ್ತೇವೆಂಬ ಭರವಸೆಯನ್ನೂ ಸಹ ಕೊಟ್ಟಿಲ್ಲ. ನಮ್ಮ ರೈತರ ಮೇಲೆ ಅಭಿಮಾನವಿರುವ ಮಂತ್ರಿಗಳು ಇದ್ದಾರೆಂದು ನಾನು ಭಾವಿಸಿದ್ದೆ, ಆದರೆ ಇವರ ಕಾರ್ಯಕ್ರಮ ನೋಡಿದರೆ ಯಾವುದೂ ಆಶಾದಾಯಕವಾಗಿಲ್ಲ. ಏಕೆಂದರೆ ಇವರನ್ನು ಕಂಡಾಗಲೆಲ್ಲಾ ಆ ವಿಚಾರವನ್ನು ಕಾರ್ಯಗತಮಾಡುತ್ತೇನೆ ಎಂಬುದಾಗಿ ಹೇಳಿದ್ದಾರೆ. ಒಂದು ಸಾಕ್ಷೀಭೂತವಾದ ಕಾರ್ಯಕ್ರಮ ನಮ್ಮಲ್ಲಿಲ್ಲ, ಪದೇ ಪದೇ ನಾವು ಹೇಳುತ್ತಿದ್ದೇವೆ. ಹಳ್ಳಿಕಾರ್ ಜಾತಿ ಎತ್ತುಗಳು ಬಹಳ ಒಳ್ಳೆಯ ಜಾತಿ ಎತ್ತುಗಳು ಎಂದು, ರೈತರಿಗೆ ಅಂತಹ ಒಂದು ಒಳ್ಳೆಯ ಜಾತಿ ಎತ್ತುಗಳು ಇದ್ದರೆ ಸಾಕು ಭೂ ಸಂಪತ್ತು ವೃದ್ಧಿ ಮಾಡುತ್ತಾರೆ. ಆದ್ದರಿಂದ ಅಂತಹ ಜಾತಿಯ ಎತ್ತುಗಳನ್ನು ಕಳೆಯಬೇಡಿ ಎಂದು ಮೊದಲಿನಿಂದಲೂ ಹೇಳಿದ್ದೇವೆ. ಹಳ್ಳೀಕಾರ್ ಜಾತಿಯ ಎತ್ತುಗಳನ್ನು ಉಳಿಸುವುದಕ್ಕೋಸ್ಕರ ಸರ್ಕಾರದವರು ಏನೇನು ಮಾಡಿದ್ದೀರಿ ವರ್ಷೇವರ್ಷೇ ನೋಡಿದರೆ, ಈಗ ಅಂತಹ ಜಾತಿಯ ಎತ್ತುಗಳ ಸಂಖ್ಯೆ ಕಡಿಮೆಯಾಗಿದೆ. ಇನ್ನು ಸರ್ಕಾರದವರು ಪ್ರತಿಯೊಬ್ಬ ರೈತನಿಗೂ ಟ್ರಾಕ್ಟರ್ ಕೊಡುವುದೇನಾದರೂ ಇದ್ದರೆ ಅದಕ್ಕೆ ಬದಲಾಗಿ ಒಳ್ಳೆಯ ಹಳ್ಳಿಕಾರ್ ಜಾತಿಯ ಮತ್ತು ಅಮೃತಮಹಲ್ ಜಾತಿಯ ದನಗಳನ್ನು ವ್ಯವಸಾಯಕ್ಕೆ ಕೊಡಬೇಕು. ಉಪಯುಕ್ತವಾದ ಹೋರಿಗಳು ಸಿಕ್ಕಿದರೆ ಅವನ್ನೂ ಸಹ ಉಳಿಸಿಕೊಂಡು ಬರಬೇಕು. ಏಕೆಂದರೆ ಅಂತಹ ಒಳ್ಳೆಯ ಜಾತಿಯ ದನಗಳನ್ನು ಉಳಿಸಿಕೊಂಡು ಬರುವುದಕ್ಕೆ ಆಗುತ್ತಾ ಇಲ್ಲ. ಈಗ ಅತ್ಯವಶ್ಯಕವಾಗಿ ಉತ್ತಮ ಜಾತಿಯ ದನಗಳಿಗೆ ಬೇಕಾದ ಔಷಧಿ ಬೇಕು. ಏಕೆಂದರೆ ರೋಗರುಜಿನಗಳು ಬಹಳ ಜಾಸ್ತಿಯಾಗುತ್ತಾ ಇವೆ. ಹಿಂದೆ ಜನರು ಇವನ್ನು ಪೂಜೆ ಮಾಡುವ ಸ್ಥಿತಿಯಲ್ಲಿದ್ದರು. ಈಗ ಅವುಗಳನ್ನು ಪೋಷಣೆಮಾಡಬೇಕಾಗಿದೆ. ದನಗಳಿಗೆ ಬರತಕ್ಕ ರೋಗರುಜಿನಗಳನ್ನು ಪಾರು ಮಾಡುವ ವಿಧಾನಗಳನ್ನು ಸರ್ಕಾರ ಮಾಡದಿದ್ದರೆ ರೈತರ ಉಳಿಗಾಲಕ್ಕೆ ಇನ್ನು ಯಾವ ಒಂದು ಒಳ್ಳೆಯ ಕಾಲ ಬಂದಿಲ್ಲವೆಂದು ನಾನು ಬಹಳ ದುಃಖಪಡಬೇಕಾಗಿದೆ. ಆದ್ದರಿಂದ ಮಾನ್ಯ ಸಚಿವರು ಈ ವಿಚಾರವನ್ನು ಚೆನ್ನಾಗಿ ಗಮನದಲ್ಲಿಟ್ಟುಕೊಂಡು, ಈಗ ಪಶುಸಂಪತ್ತು ಏನಿದೆಯೋ ಅದನ್ನು ಚೆನ್ನಾಗಿ ಕಾಪಾಡಿಕೊಂಡು ಬರಬೇಕಾಗಿದೆ. ಎಲ್ಲಿ ಅಗತ್ಯವಾಗಿ ಬೇಕಾಗಿದೆಯೋ ಅಲ್ಲಿ ಔಷಧಿಗಳನ್ನು ಸರಬರಾಜು ಮಾಡಬೇಕು. ಇನ್‌ಸೆಮಿನೇಷನ್ ಸೆಂಟರುಗಳನ್ನು ಅಗತ್ಯವಾದ ಕಡೆಗಳಲ್ಲಿ ತೆರೆಯಲು ನೀತಿನಿಯಮವನ್ನು ಹಾಕಿಕೊಂಡು ಕಾರ್ಯಗತಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ (ಮಂಗಳೂರು (೨)):—ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ವ್ಯವಸಾಯ ಸಚಿವರು, ಪಶುಸಂಗೋಪನ ಸಚಿವರು ಮತ್ತು ಅರಣ್ಯ ಸಚಿವರು ಮಂಡಿಸಿರತಕ್ಕ ಡಿಮ್ಯಾಂಡ್‌ಗಳನ್ನು ಅನುಮೋದಿಸಿ ನಾಲ್ಕು ಮಾತುಗಳನ್ನು ಹೇಳುತ್ತೇನೆ. ಇವತ್ತು ನಾವು ಭಾರತದೇಶದಲ್ಲಿ ಮತ್ತು ನಮ್ಮ ಮೈಸೂರು ರಾಜ್ಯದಲ್ಲಿ ಆಹಾರದ ಮಟ್ಟಿಗೆ ಸ್ವಾವಲಂಬಿಗಳಾಗಬೇಕೆಂದು ಬಹಳ ವರ್ಷಗಳಿಂದ ಹೇಳುತ್ತಿದ್ದೇವೆ. ಸ್ವಾವಲಂಬನೆ ಎಂದು ಹೇಳಿದರೆ ಮಾತ್ರ ಸ್ವಾವಲಂಬಿಗಳಾಗುವುದಿಲ್ಲ. ಒಳ್ಳೆಯ ರೀತಿಯಲ್ಲಿ ಕೃಷಿ ಉತ್ಪತ್ತಿಮಾಡಿ ಆಹಾರವನ್ನು ಹೆಚ್ಚಿಗೆ ಬೆಳೆದರೆ ಮಾತ್ರ ನಾವು ಸ್ವಾವಲಂಬಿಗಳಾಗಬಹುದು. ಕಾರಣವೇನೆಂದರೆ, ನಮ್ಮ ಜನಸಂಖ್ಯೆ ದಿನೇದಿನೇ ಬೆಳೆಯುತ್ತಿದೆ. ಹೀಗೆ ಬೆಳೆಯುವ ಜನಸಂಖ್ಯೆಗೆ ಅನ್ನ ಕೊಡಬೇಕಾದರೆ, ಸರ್ಕಾರದವರು ಹೆಚ್ಚು ಶ್ರಮವಹಿಸಬೇಕು. ರೈತರು ಜೋಳವಾಗಲೀ, ಅಕ್ಕಿಯಾಗಲೀ, ರಾಗಿಯಾಗಲೀ ಎಷ್ಟೇ ಬೆಳೆಯಲಿ ಅದು ಒಳ್ಳೆಯದು ನಾಲ್ಕೈದು ವರ್ಷಗಳ ಹಿಂದೆ ವ್ಯವಸಾಯದಲ್ಲಿ ಹೆಚ್ಚು ಮುತುವರ್ಜಿ ವಹಿಸಲು ಪ್ರಾರಂಭಿಸಲಾಯಿತು. ನಮ್ಮ ಸರ್ಕಾರದವರೂ ಮತ್ತು ರೈತರು ಹಾಗೆಯೇ ಇತ್ತೀಚೆಗೆ ಕೆಲಸಮಾಡುತ್ತಾರೆ. ಅದು ಬಹಳ ಸಂತೋಷದ ವಿಷಯ. ಭಾರತ ದೇಶದ ಹೊರಗಡೆಯಿಂದ ಆಹಾರವನ್ನು ತರಿಸುವುದನ್ನು ಕೂಡಲೇ ಬಿಡಬೇಕು. ಆ ರೀತಿ ಹೇಳುವ ಕಾಲದಲ್ಲಿ ನಮ್ಮ ರೈತರಿಗೆ ಹೆಚ್ಚಿನ ಸವಲತ್ತುಗಳನ್ನು ಸರ್ಕಾರದವರು ಕೊಡಬೇಕು. ಸುಮ್ಮನೆ ಸರ್ಕಾರದವರು ಸಹಾಯ ಅವನಿಗೆ ಕೊಡುತ್ತೇವೆಂದು ಹೇಳಿದರೆ ಮಾತ್ರ ಅದು ಅವನ ಮನೆ ಮುಟ್ಟುವುದಿಲ್ಲ. ಅವನು ವಿದ್ಯುತ್‌ಗಾಗಲೀ, ಪಂಪುಸೆಟ್ಟುಗಳಿಗಾಗಲೀ ಬೇರೆ ಬೇರೆ ಆಫೀಸುಗಳ ಬಾಗಿಲಿಗೆ ಆಗಾಗ್ಗೆ ಹೋಗುವ ಪರಿಸ್ಥಿತಿ ಕೂಡಲೇ ತಪ್ಪಬೇಕು. ವ್ಯವಸಾಯ ಹೆಚ್ಚಾಗಬೇಕು, ಆಹಾರ ಹೆಚ್ಚಾಗಬೇಕೆಂದು ಹೇಳುವ ಕಾಲದಲ್ಲಿ ಅವನ ಮನೆಯ ಬಾಗಿಲಿಗೆ ಎಲ್ಲಾ ಸಲಕರಣೆಗಳು ಸಿಗುವ ಹಾಗೆ ವ್ಯವಸ್ಥೆ ಮಾಡಬೇಕು.

ಇನ್ನು ಭೂಮಿ ಕೊಡುವ ವಿಷಯದಲ್ಲಿ ಹೇಳುವುದಾದರೆ. ಬೇಸಾಯ ಈಗ ಚೆನ್ನಾಗಿ ಆಗಬೇಕು. ಭೂಮಿ ಇಲ್ಲದವರಿಗೆ ಭೂಮಿ ಕೊಟ್ಟು ಏನೂ ಫಲವಿಲ್ಲ. ಹರಿಜನರಿಗೆ ಭೂಮಿ ಕೊಡುವುದು ಸಮಾಜ ವಿಕಾಸ ಯೋಜನೆಗಳಲ್ಲಿ ಒಂದಾಗಿದೆ. ಆದರೆ ಅವರಿಗೆ ಕೊಡುವ ಭೂಮಿ ಎಲ್ಲೂ ಗುಡ್ಡದಲ್ಲಿ ವ್ಯವಸಾಯಕ್ಕೆ ಉಪಯೋಗವಿಲ್ಲದೇ ಇರುವ ಕಡೆ ಕೊಡುವುದು ಸರಿಯಲ್ಲ. ಅಂತಃಕರಣ ರೀತಿಯಲ್ಲಿ ಒಳ್ಳೆಯ ಭೂಮಿಯನ್ನು ಕೊಟ್ಟು ನೀವು ವ್ಯವಸಾಯಮಾಡಿ ಎಂದು ಹೇಳಿದರೆ ಒಳ್ಳೆಯದು. ಆದ್ದರಿಂದ ಹರಿಜನರಿಗೆ ಕೊಡುವ ಭೂಮಿಯನ್ನು ಪರೀಕ್ಷಿಸಿ ಅವರೂ ಕೂಡ ಬೇಸಾಯದಲ್ಲಿ ಮುಂದೆಬರುವುದಕ್ಕೆ ಸಾಧ್ಯವಾಗುವಂತ ಕಡೆ ಕೊಡಬೇಕು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಕಷ್ಟು ಭೂಮಿ ವ್ಯವಸಾಯಕ್ಕೆ ಸಿಗುವ ಹಾಗೆ ಮಾಡಿದರೆ ಬೇಕಾದಷ್ಟು ಅಹಾರ ಬೆಳೆಯಲಿಕ್ಕೆ ಸಾಧ್ಯವಿದೆ. ನಮ್ಮ ಜಿಲ್ಲೆಯಲ್ಲಿ ಬೇಕಾದಷ್ಟು ನದಿಗಳು ಇರುವುದರಿಂದ ಪಂಪುಸೆಟ್ಟುಗಳನ್ನು ಕೇಳಿದವರಿಗೆಲ್ಲಾ ಕೊಡಬೇಕು. ಏಕೆಂದರೆ ಅಲ್ಲಿ ಹೆಚ್ಚಿನ ಜನರಿಗೆ ಅವು ಸಿಗಲಿಲ್ಲ. ವಿದ್ಯುತ್ ಪೂರೈಕೆಯಾಗಿಲ್ಲ. ಆದ್ದರಿಂದ ಈಗ ಯಾರ್‍ಯಾರು ಆ ರೀತಿ ಪಂಪುಸೆಟ್ಟುಗಳನ್ನು ಕೇಳಿದ್ದಾರೋ ಅವರಿಗೆ ಪಂಪುಸೆಟ್ಟುಗಳನ್ನು ಕೊಟ್ಟು ಬೇಕಾದಷ್ಟು ವಿದ್ಯುತ್ತನ್ನು ಒದಗಿಸಬೇಕು.

ಇನ್ನು ಮೀನುಗಾರಿಕೆಯ ವಿಷಯದಲ್ಲಿ ಹೇಳಬೇಕಾದರೆ ನಾವು ಕರಾವಳಿಯಲ್ಲಿ ಇರತಕ್ಕವರು. ಇದು ಬಹಳ ಪ್ರಾಮುಖ್ಯವಾದ ವಿಚಾರ. ಮಾನ್ಯ ಶ್ರೀ ಅಮೀನ್ ಅವರು ಇದರ ಬಗ್ಗೆ ಬಹಳ ಚೆನ್ನಾಗಿ ಹೇಳಿದ್ದಾರೆ. ಮೀನುಗಳನ್ನು ಧರ್ಮಾರ್ಥವಾಗಿ ಮತ್ತು ಕಡಿಮೆ ದರದಲ್ಲಿ ಸಿಗುವ ಹಾಗೆ ವ್ಯವಸ್ಥೆ ಮಾಡಲು ತಕ್ಕ ಸೌಕರ್ಯಗಳು ಅಲ್ಲಿರುವುದರಿಂದ ಆರ್ಥಿಕ ಸಂಪತ್ತನ್ನು ಹೆಚ್ಚುಮಾಡುವ ಸನ್ನಿವೇಶ ಅಲ್ಲಿದ್ದರೂ ಅದರ ಕಡೆಗೆ ಸರ್ಕಾರದವರು ಇನ್ನೂ ಗಮನಕೊಟ್ಟಿಲ್ಲ. ಒಳನಾಡಿನಲ್ಲಿ ಮಾಡುವುದು ಬರೀ ಸಾಕುವಿಕೆ ಇವೊತ್ತು ಮೀನುಗಾರಿಕೆ ಅಭಿವೃದ್ಧಿಯಾಗಬೇಕಾಗಿದೆ. ಇದರಿಂದ ನಮ್ಮ ಸಂಪತ್ತೂ ಸಹ ಹೆಚ್ಚುತ್ತದೆ. ಮೀನುಗಾರಿಕೆ ಇಲಾಖೆಗೆ ಬಡ್ಜೆಟ್ಟಿನಲ್ಲಿ ಇಷ್ಟು ಕಡಿಮೆ ಹಣವನ್ನು ಇಡಬಾರದು. ಹೆಚ್ಚಿಗೆ ಹಣವನ್ನು ಈ ಬಾಬಿಗೆ ಇಟ್ಟಷ್ಟೂ ಹೆಚ್ಚಿಗೆ ಕೆಲಸಮಾಡಬಹುದು. ಈ ಶಾಖೆಯನ್ನು ವಹಿಸಿರತಕ್ಕ ಮಾನ್ಯ ಶ್ರೀ ಲಿಂಗಾರೆಡ್ಡಿಯವರು ಬಹಳ ಹೆಚ್ಚಿಗೆ ಶ್ರಮವಹಿಸಿ ಕೆಲಸಮಾಡುತ್ತಿದ್ದಾರೆ. ಕಾಪು ಕ್ಷೇತ್ರದ ಮಾನ್ಯ ಶ್ರೀ ಭಾಸ್ಕರಶೆಟ್ಟಿಯವರು ಹೇಳಿದರು, ಅವರು ಕರಾವಳಿ ಪ್ರದೇಶಕ್ಕೆ ಪ್ರವಾಸ ಮಾಡುತ್ತಾರೆ ಎಂಬುದಾಗಿ ಮತ್ತೊಬ್ಬ ಚಿಕ್ಕಬಳ್ಳಾಪುರದ ಸದಸ್ಯರು ಹೇಳಿದರು, ಸಚಿವರು ಹೇಳಿದರು. ಸಚಿವರು ಕೋಲಾರ ಜಿಲ್ಲೆಯ ಒಳನಾಡಿಗೆ ಹೋಗುತ್ತಾರೆಂದು. ಕರಾವಳಿ ಎಲ್ಲಿ ಇದೆಯೋ ಅಲ್ಲಿ ಮೀನು ಅಭಿವೃದ್ಧಿಯಾಗಬೇಕು. ಒಳನಾಡಿನಲ್ಲಿ ಕೂಡ ಮೀನು ಅಭಿವೃದ್ಧಿಯಾಗಬೇಕಾಗಿದೆ. ಆದ್ದರಿಂದ ಮಂತ್ರಿಗಳು ಎಲ್ಲಾ ಕಡೆಯೂ ಪ್ರವಾಸ ಮಾಡಬೇಕು. ಅವರು ಮೀನುಗಾರರು ಇರುವ ಕಡೆಗಳಲ್ಲಿ ಹೋಗದಿದ್ದರೆ ಅದು ಬಹಳ ತಪ್ಪಾಗುತ್ತದೆ. ಕರಾವಳಿಗೆ ಹೋದರೂ ತಪ್ಪು, ಒಳನಾಡಿಗೆ ಹೋದರೂ ತಪ್ಪು ಎಂಬುದಾಗಿ ಹೇಳಿದರೆ, ಅದು ಸರಿಹೋಗುವುದಿಲ್ಲ. ಮಾನ್ಯ ಶ್ರೀ ಲಿಂಗಾರೆಡ್ಡಿಯವರು ಈ ಖಾತೆಯನ್ನು ವಹಿಸಿಕೊಂಡ ಮೇಲೆ ಬಹಳ ಕಷ್ಟಪಟ್ಟು ಕೆಲಸ ಮಾಡಿದ್ದಾರೆ. ದೆಹಲಿಗೆ ಹೋಗಿ ಬೇಕಾದಷ್ಟು ಮಾಹಿತಿಯನ್ನು ಪಡೆದುಕೊಂಡು ಬಂದಿದ್ದಾರೆ. ಇನ್ನೂ ಮಲ್ಪೆ ಬಂದರು ಅಭಿವೃದ್ಧಿ ಆಗಬೇಕು. ಅದರ ಬಗ್ಗೆ ಕೇಂದ್ರ ಸರ್ಕಾರದವರಲ್ಲಿ ಈಗಾಗಲೇ ಅನೇಕ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಅದನ್ನು ಒಳ್ಳೆಯ ಬಂದರನ್ನಾಗಿ ಮಾಡಬೇಕೆಂದು ಅವರೇ ಹೇಳುತ್ತಿದ್ದಾರೆ. ಆದರೂ ಕೆಲಸ ಸಾಗುತ್ತಿಲ್ಲವೆಂದೂ ಹೇಳಿದ್ದಾರೆ. ಅವರು ಒಳ್ಳೆಯ ಉತ್ಸಾಹದಿಂದ ಕೆಲಸಮಾಡುತ್ತಾ ಇರುವಾಗ ಅವರಿಗೆ ಕೊಟ್ಟಿರುವ ಹಣ ಕಡಿಮೆಯಾಗಿದೆಯೆಂದು ಹೇಳಬಹುದು.

ಅವರಿಗೆ ಬೇಕಾದ ಎಲ್ಲಾ ಏರ್ಪಾಡು ಮತ್ತು ಎಲ್ಲಾ ಅನುಕೂಲಗಳನ್ನು ಮಾಡಬೇಕು. ಅವರು ಕಾರ್ಯಕ್ರಮವನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಬಡ್ಜೆಟ್ಟಿನಲ್ಲಿ ಕೂಡ ಕಡಿಮೆ ಹಣ ಒದಗಿಸಿರು-ವುದರಿಂದ ನಾವು ನಾಗರೀಕರ ಬೇಡಿಕೆಗಳನ್ನು ಪೂರೈಸಲಿಕ್ಕೆ ಇನ್ನೂ ಸ್ವಲ್ಪ ಸಮಯ ಬೇಕಾಗುತ್ತದೆ. ಆದ್ದರಿಂದ ಹೆಚ್ಚು ಹಣ ಒದಗಿಸುವುದಕ್ಕೆ ಏರ್ಪಾಡು ಮಾಡಬೇಕು. ಇನ್ನು ಫಿಷರಿ ಕಾಲೇಜು ಇಡೀ ಏಷ್ಯಾ-ದಲ್ಲೇ ಪ್ರ ಪ್ರಥಮವಾಗಿ ನಮ್ಮ ರಾಜ್ಯದಲ್ಲಿ ಪ್ರಾರಂಭವಾಗುವಂಥದ್ದು ಇದೆ. ರಾಜ್ಯದ ಮಂತ್ರಿಗಳಾದ ಲಿಂಗಾರೆಡ್ಡಿಯವರು ಸಮುದ್ರ ಕರಾವಳಿಯಲ್ಲಿ ಕಂಕನಾಡಿಯನ್ನು ಅದಕ್ಕಾಗಿ ಆರಿಸಿಕೊಂಡಿದ್ದಾರೆ. ಅಲ್ಲಿಂದ ಮೀನುಗಾರಿಕೆ ನಿಪುಣರು ತರಪೇತು ಆಗುವ ಸಂದರ್ಭ ಇದೆ. ಈ ಫಿಷರೀ ಕಾಲೇಜಿನಲ್ಲಿ ಮೀನುಗಾರರ ಮಕ್ಕಳನ್ನು ತೆಗೆದುಕೊಳ್ಳುವ ಏರ್ಪಾಡು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಲು ಅಪೇಕ್ಷೆ ಪಡುತ್ತೇನೆ ಅನೇಕ ಮೀನುಗಾರರಿಗೆ ಹೆಚ್ಚಿನ ಯಂತ್ರಿಕ ದೋಣಿಗಳನ್ನು ಒದಗಿಸಿಕೊಂಡಬೇಕು ಆಗ ಅವರಿಗೆ ಹೆಚ್ಚು ಮೀನು ಹಿಡಿದು ಅವರ ಸಂಪತ್ತನ್ನು ಹೆಚ್ಚಿಸಲು ಸಾಧ್ಯವಾಗುತ್ತದೆ. ಅದರ ಜೊತೆಗೆ ಫಿಷರೀಸ್ ರೋಡ್ಸ್, ಮೀನು ಸಾಗಿಸುವುದಕ್ಕೆ ಬೇಕಾದ ವಾಹನಗಳನ್ನು ಮತ್ತು ಅದನ್ನು 'ಏಲಂ ಮಾಡತಕ್ಕ ಕಟ್ಟಡಗಳನ್ನು' ಒದಗಿಸಿ ಕೊಟ್ಟರೆ ಮೀನುಗಾರಿಕೆಯಲ್ಲಿ ನಮ್ಮ ರಾಜ್ಯ ಮಾದರಿ ರಾಜ್ಯವಾಗುವುದಕ್ಕೆ ಸಾಧ್ಯಉಂಟು ಕೇಂದ್ರದ ದುಡ್ಡಾಗಲಿ, ಅಥವಾ ರಾಜ್ಯದ ದುಡ್ಡಾಗಲಿ, ಹೆಚ್ಚು ಹಣ ಒದಗಿಸಿಕೊಟ್ಟರೆ ನಮ್ಮ ಮಂತ್ರಿಗಳು

(ಶ್ರೀ ಎಂ. ಇದಿನಬ್ಬ)

ಉತ್ಸಾಹದಿಂದ ಒಳ್ಳೆಯ ಅಭಿವೃದ್ಧಿ ಕೆಲಸ ಮಾಡಲು ಸಾಧ್ಯ ಆಗುತ್ತವೆ ಎಂದು ಹೇಳುತ್ತೇನೆ. ಮೀನು-ಗಾರಿಕೆ ಮಂತ್ರಿಗಳು ಏನು ಮಾಡಲಿಲ್ಲ ಎಂದು ಹೇಳುವುದು ಸತ್ಯಕ್ಕೆ ದೂರವಾದದ್ದು. ಅವರಿಗೆ ಕೊಟ್ಟ ಕೆಲಸ ಮಾಡಿದ್ದಾರೆ. ಇನ್ನು ಹೆಚ್ಚು ಕೆಲಸವನ್ನು ಅವರಿಂದ ಮಾಡಿಸಿಕೊಳ್ಳುವುದು ನಮ್ಮ ಕರ್ತವ್ಯ ಎಂದು ಈ ಸಂದರ್ಭದಲ್ಲಿ ಹೇಳಲು ಅಪೇಕ್ಷೆಪಡುತ್ತೇನೆ. ಇನ್ನು ಮೀನುಗಾರಿಕೆ ಮಂತ್ರಿಗಳು ಬೇರೆ ಬೇರೆ ಸಮಾರಂಭ-ಗಳಿಗೆ ಬರುತ್ತಾರೆ. ಎಂದು ಆಪಾದನೆ ಮಾಡುತ್ತಾರೆ. ಅವರನ್ನು ಎಲ್ಲಿ ಕರೆಯುತ್ತಾರೋ ಅಲ್ಲಿಗೆ ಬರಲೇ ಬೇಕಾಗುತ್ತದೆ. ಆದ್ದರಿಂದ ಒಳನಾಡಿನಲ್ಲಿ ಆಗಲಿ ಕರಾವಳಿಯಲ್ಲಿ ಆಗಲಿ ಅವರು ಎಲ್ಲಾ ಕಡೆಯೂ ಈ ಮೀನುಗಾರಿಕೆ ಅಭಿವೃದ್ಧಿ ಕೆಲಸವನ್ನು ಸರಿಯಾಗಿ ಮಾಡುತ್ತಿದ್ದಾರೆಂದು ಇಷ್ಟು ಮಾತ್ರ ಹೇಳುತ್ತೇನೆ.

ಇನ್ನು ಪಶು ಸಂಗೋಪನೆ ಬಗ್ಗೆ ಎರಡು ಮಾತು ಹೇಳಬಯಸುತ್ತೇನೆ. ಮಂಗಳೂರಿನಲ್ಲಿ ಹಾಲಿನ ಡೈರಿ ಸ್ಥಾಪನೆ ಮಾಡಲು ಬೇಕಾದಂಥ ಯಂತ್ರಗಳು ಬಂದಿವೆ ಅದು ಇನ್ನೂ ಕಾರ್ಯ ರೂಪಕ್ಕೆ ಬರಲಿಲ್ಲ. ಬೆಂಗಳೂರು ಬಿಟ್ಟರೆ ಎರಡನೆಯ ಸ್ಥಾನ ಪಡೆದಿರುವ ಸ್ಥಳ ಮಂಗಳೂರು ಅದು ಜನ ನಿಬಿಡವಾದ ಸ್ಥಳ ಆದಷ್ಟು ಶೀಘ್ರವಾಗಿ ಅಲ್ಲಿ ಹಾಲಿನ ಡೈರಿಯನ್ನು ಮಾಡಿಕೊಡಬೇಕು. ಇನ್ನು ಕೊಯಿಲಾದಲ್ಲಿ ಕ್ಯಾಟಲ್ ಫಾರಂ ಇದೆ. ಅಲ್ಲಿಯ ಕಾರ್ಯಾಡಳಿತದ ವಿಚಾರದಲ್ಲಿ ಅನೇಕರು ನಮ್ಮಲ್ಲಿ ದೂರು ಹೇಳುತ್ತಿದ್ದಾರೆ. ಅಲ್ಲಿ ಅಧಿಕಾರಿಗಳು ಸರಿಯಾದ ರೀತಿಯಲ್ಲಿ ಕೆಲಸ ಮಾಡದೆ ಸುತ್ತ ಮುತ್ತಲಿನ ಬೇಸಾಯಗಾರರಿಗೆ ಬೇರೆ ರೀತಿಯಲ್ಲಿ ಕಿರುಕುಳ ಕೊಡುತ್ತಿದ್ದಾರೆ ಅಲ್ಲಿ ಒಂದು ರೀತಿಯ ರಾಜಕೀಯ ನಡೆಯುತ್ತಿದೆ ಸರಿಯಾಗಿ ಕೆಲಸಗಳು ನಡೆಯುವುದಿಲ್ಲ ಎಂದು ಅನೇಕ ಜನರು ನನ್ನಲ್ಲಿ ಹೇಳಿದ್ದಾರೆ. ಅದು ಕೂಡ ಹೆಚ್ಚು ನಷ್ಟದಲ್ಲಿ ನಡೆಯುತ್ತಿದೆ ಎಂದು ಕೇಳಿದ್ದೇನೆ. ಅದು ಯಾಕೆ ನಷ್ಟದಲ್ಲಿ ನಡೆಯುತ್ತಿದೆ ಎಂದು ತನಿಖೆ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಅರಣ್ಯ ಸಂಪತ್ತಿನ ವಿಷಯ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಬ್ರಿಟಿಷರು ಬಿಟ್ಟು ಹೋಗುವಾಗ ಅರಣ್ಯ ಸಂಪತ್ತು ವಿಚಾರ ಹೇಳಿದ್ದಾರೆ. ರಾಜ್ಯಭಾರವನ್ನು ಅರಣ್ಯ ಸಂಪತ್ತಿನಿಂದ ೫೦ ವರ್ಷಗಳು ಬೇಕಾದರೂ ಮಾಡಬಹುದು ಎಂದು ಹೇಳಿದ್ದಾರೆ. ಮೈಸೂರು ಅರಣ್ಯ ಸಂಪತ್ತು ಇರುವ ಪ್ರದೇಶ. ಆ ಅರಣ್ಯ ಸಂಪತ್ತನ್ನು ನಾವು ಕಾಪಾಡಿಕೊಳ್ಳಬೇಕಾಗಿದೆ. ಕೆಲವರು ಅರಣ್ಯದಲ್ಲಿರುವ ಮರಗಳನ್ನು ಕಡಿದು ಕಾಳ ಸಂತೆಯಲ್ಲಿ ಮಾರಾಟ ಮಾಡುತ್ತಿದ್ದಾರೆ ಎಂದು ದೂರು ಬಂದಿದೆ. ಆದ ಕಡೆಗೆ ಅರಣ್ಯ ಮಂತ್ರಿಗಳು ಹೆಚ್ಚು ಗಮನ ಕೊಡ-ಬೇಕೆಂದು ಹೇಳುತ್ತೇನೆ. ಈಗ ಬಿದಿರು ಸಂಪೂರ್ಣವಾಗಿ ನಾಶವಾಗುತ್ತಿದೆ. ಅದನ್ನು ಹೆಚ್ಚಾಗಿ ಬೆಳಸಬೇಕು. ಈಗ ಉತ್ತರ ಕರ್ನಾಟಕದಲ್ಲಿ ತಾಲ್ಲೂಕು ಬೋರ್ಡು ಮತ್ತು ಪಂಚಾಯಿತಿಗಳಿಗೆ ಅರಣ್ಯ ಸಂಪತ್ತಿನಿಂದ ಬರುವ ಆದಾಯದಲ್ಲಿ ಒಂದು ಪಾಲು ಕೊಡುತ್ತಿದ್ದಾರೆ. ಅದೇ ರೀತಿ ದಕ್ಷಿಣ ಕನ್ನಡ ಜಿಲ್ಲೆಗೂ, ಮಲೆನಾಡು ಪ್ರದೇಶವಾದ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗೂ ಈ ಅರಣ್ಯದಿಂದ ಬರುವ ಆದಾಯದಲ್ಲಿ ಒಂದು ಭಾಗ ಕೊಟ್ಟರೆ ಒಳ್ಳೆಯ ರೀತಿಯಲ್ಲಿ ತಾಲ್ಲೂಕು ಬೋರ್ಡು ಮತ್ತು ಪಂಚಾಯಿತಿಗಳು ಕೆಲಸ ಮಾಡಲು ಸಾಧ್ಯವಾಗುತ್ತದೆ. ಈ ರೀತಿ ಮಂತ್ರಿಗಳು ಮಾಡಬೇಕು ಎಂದು ಹೇಳಿ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಂಥ ಮಾನ್ಯ ಅಧ್ಯಕ್ಷರಿಗೆ ವಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ,

ಶ್ರೀ. ಎನ್. ಲೋಕಯ್ಯ ನಾಯಕ್ (ವಿರಾಜಪೇಟೆ) :— ಮಾನ್ಯ ಸಭಾಧ್ಯಕ್ಷರೇ ನಮ್ಮ ಮುಂದೆ ಇರತಕ್ಕ ವ್ಯವಸಾಯ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಹಾಗೂ ಅರಣ್ಯಕ್ಕೆ ಸಂಬಂಧಪಟ್ಟ ಬೇಡಿಕೆಗಳನ್ನು ವಿರೋಧಿಸುತ್ತಾ ಕೆಲವು ಸೂಚನೆಗಳನ್ನು ಕೊಡಬಯಸುತ್ತೇನೆ. ಮೊದಲು ಅರಣ್ಯ ಇಲಾಖೆಗೆ ಸಂಬಂಧಪಟ್ಟ ಕೆಲವು ವಿಚಾರಗಳನ್ನು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಹೆಚ್ಚು ಕಡಿಮೆ ೧೨ ಸಾವಿರ ೧೧೦೫ ಚದುರ ಮೈಲಿಗಳಷ್ಟು ಅರಣ್ಯ ಇದೆ. ಇದು ಅರಣ್ಯ ಇಲಾಖೆಯ ಸ್ವಾಧೀನದಲ್ಲಿ ಇದೆ. ಅಂದರೆ ೧೪೪೬. ೬೬ ಚದುರ ಮೈಲಿಗಳಷ್ಟು ರೆವಿನ್ಯೂ ಇಲಾಖೆಯಲ್ಲಿ ಇದೆ. ಇದು ಯಾವರೀತಿ ಅಂದರೆ ದೇವರ ಕಾಡುಗಳು ಮತ್ತು ವಿಲೇಜ್ ಫಾರೆಸ್ಟ್ ಏನಿದೆಯೋ ಅದು ಎಲ್ಲಾ ರೆವಿನ್ಯೂ ಇಲಾಖೆಯಲ್ಲಿ ಇದೆ. ಈವೊತ್ತು ನಮ್ಮ ರಾಜ್ಯದಲ್ಲಿ ಮೀನುಗಾರಿಕೆಯಿಂದ ಸುಲಭದಲ್ಲಿ ನಮ್ಮ ರಾಜ್ಯ ಬೊಕ್ಕಸಕ್ಕೆ ಯಾವ ರೀತಿ ಲಾಭ ಬರುವುದು ಇದೆಯೋ ಅದೇ ರೀತಿ ನಮ್ಮ ರಾಜ್ಯದಲ್ಲಿ ಬರುವಂಥ ಎರಡನೆಯ ಆದಾಯ ಎಂದರೆ ಅರಣ್ಯ ಇಲಾಖೆ ಎಂದು ಹೇಳಿದರೆ ತಪ್ಪಾಗಲಾರದು. ಪ್ರಕೃತಿಯಿಂದ ಬೆಳೆಯುತಕ್ಕ ಮರಗಳಿಗೆ ಗೊಬ್ಬರವಾಗಲೀ ಅಥವಾ ನೀರಾಗಲೀ ಹಾಕಬೇಕಾಗಿಲ್ಲ ಅಂತಹ ದೊಡ್ಡ ಸಂಪತ್ತನ್ನು ನಮ್ಮ ಸರಕಾರ-ದವರು ರಕ್ಷಿಸಿಕೊಂಡು ಬರಬೇಕಾಗಿದೆ. ನಮ್ಮ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ ೨ ಲಕ್ಷ ೬೭೯ ಎಕರೆಗಳಷ್ಟು ಅರಣ್ಯ ಇದೆ. ಎಷ್ಟೋ ಲಕ್ಷಾಂತರ ರೂಪಾಯಿ ಬೆಲೆ ಬಾಳುವ ಅರಣ್ಯ ಸಂಪತ್ತು ಕಳ್ಳತನದಿಂದ ಹಾಳಾಗಿ

ಹೋಗುತ್ತಾ ಇದೆ. ಇದನ್ನು ಸರಿಯಾದ ರೀತಿಯಲ್ಲಿ ರಕ್ಷಿಸಿಕೊಂಡು ಬರುವ ಸಲುವಾಗಿ ತುರ್ತು ಕಾರ್ಯ-ಕ್ರಮಗಳನ್ನು ಹಾಕತಕ್ಕದ್ದು ಆವಶ್ಯಕ ಕೋಟ್ಯಾಂತರ ರೂಪಾಯಿಯ ಗಂಧದ ಮರ ಮತ್ತು ಬೀಟೆ ಮರ ಪ್ರತಿ ನಿತ್ಯವು ಹೊರಗಡೆ ಹೋಗುತ್ತಾ ಇವೆ. ಅದನ್ನು ತಡೆಗಟ್ಟುವ ಕಾರ್ಯದಲ್ಲಿ ನಿಮ್ಮ ಅಧಿಕಾರಿಗಳ ಕೈವಾಡವೂ ಇದೆ. ಅಧಿಕಾರಿಗಳು ಅನೇಕ ರೀತಿಯಲ್ಲಿ ಕಳ್ಳಸಾಗಣಿಕೆಗೆ ಪ್ರೋತ್ಸಾಹ ಕೊಡುತ್ತಿದ್ದಾರೆ. ಮತ್ತು ಈ ಸಂಬಂಧದಲ್ಲಿ ಅನೇಕ ಅಧಿಕಾರಿಗಳು ಸಿಕ್ಕಿಹಾಕಿಕೊಂಡಿದ್ದಾರೆ. ನಮ್ಮ ರಾಜ್ಯದಲ್ಲಿ ಅರಣ್ಯ ಸಂಪತ್ತು ಒಳ್ಳೆಯ ರೀತಿಯಲ್ಲಿ ಬೆಳೆದುಕೊಂಡು ಬರುವುದಕ್ಕೆ ಯಾವ ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲ. ಭಾಗಮಂಡಲ ರೇಂಜಿನಲ್ಲಿ ನೀಲಗಿರಿ ಗಿಡಗಳನ್ನು ಹಾಕಬೇಕೆಂದು ಪ್ರಯತ್ನ ಪಟ್ಟರು. ಆ ಬೆಟ್ಟದ ಮೇಲೆ ಒಂದು ಗಿಡವು ಬೆಳೆಯುವುದಿಲ್ಲ. ಕೂದಲು ಇಲ್ಲದೆ ತಲೆಯಲ್ಲಿ ಕೂದಲು ಯೋಜನೆ ಮಾಡುತ್ತಿದ್ದಾರೆ. ಈ ರೀತಿ ಇರುವಂಥ ೧೨೦೦ ಎಕರೆಗಳಷ್ಟು ಪ್ರದೇಶದಲ್ಲಿ ಒಂದು ಲಕ್ಷ ೨೫ ಸಾವಿರ ರೂಪಾಯಿ ಖರ್ಚು ಮಾಡಿ ನೀಲಗಿರಿ ಗಿಡಗಳನ್ನು ಹಾಕಿದರು. ಮತ್ತು ಕೆಲವು ಕಡೆ ಹೊಂಡಗಳನ್ನು ತೆಗೆದಿದ್ದರೂ ಗಿಡಗಳನ್ನು ನೆಟ್ಟಿಲ್ಲ. ಇನ್ನು ಕೆಲವು ಕಡೆ ನೆಟ್ಟಿದ್ದ ಗಿಡಗಳು ಒಂದೂ ಉಳಿಯಲಿಲ್ಲ.

ಯಾವ ಅಧಿಕಾರಿಗಳು ಈ ರೀತಿ ಬೆಳೆಯುದೇ ಇರತಕ್ಕ ಜಾಗದಲ್ಲಿ ಒಂದು ಸಾವಿರ ಎಕರೆಯಷ್ಟು ಪ್ರದೇಶದಲ್ಲಿ ಇಷ್ಟೊಂದು ದುಡ್ಡನ್ನು ಖರ್ಚು ಮಾಡಿ ನೀಲಗಿರಿ ಗಿಡವನ್ನು ಹಾಕಿದರೋ ಗೊತ್ತಿಲ್ಲ. ಪ್ರಯೋಗಕ್ಕಾಗಿ ೧೦—೨೦ ಎಕರೆಗಳಲ್ಲಿ ಮಾಡಿದ್ದರೆ ಉತ್ತಮವಾಗುತ್ತಾ ಇತ್ತು. ಈ ರೀತಿ ಅರಣ್ಯ ರಕ್ಷಣೆಯನ್ನು ಮಾಡುವುದರಲ್ಲಿ ವಿಫಲರಾಗಿದ್ದಾರೆ ಎಂದು ಹೇಳಬಯಸುತ್ತೇನೆ.

ವೆಸ್ಟ್ರನ್ ಇಂಡಿಯಾ ಪ್ಲೈವುಡ್ ಫ್ಯಾಕ್ಟರಿ ಲಿಮಿಟೆಡ್ ಅಂತ ಹೇಳಿ ಕೇರಳದ ಒಬ್ಬ ದೊಡ್ಡ ಮನುಷ್ಯರಿಗೆ ಫ್ಯಾಕ್ಟರಿಗಾಗಿ ಕೊಡಗಿನಲ್ಲಿ ಲೈಸೆನ್ಸ್ ಕೊಡುತ್ತಾ ಇದ್ದೀರಿ. ಸುಮಾರು ೨೮ ಕೋಟಿ ರೂಪಾಯಿಗಳ ಬೆಲೆ ಬಾಳತಕ್ಕ ಮರಗಳನ್ನು ಕನ್‌ಸೆಷನ್ ರೇಟ್‌ನಲ್ಲಿ ೨೦ ವರ್ಷಗಳ ಲೀಸ್ ಮೇಲೆ ಹೆಚ್ಚು ಕಡಿಮೆ ೧೦ ಕೋಟಿರೂಪಾಯಿಗಳಿಗೆ ಆತನಿಗೆ ಕೊಡಲಿಕ್ಕೆ ನಿರ್ಧಾರ ಮಾಡಿದ್ದೀರಿ ಇದು ಎಲ್ಲರಿಗೂ ಕೂಡ ಗೊತ್ತಾಗಿದೆ. ಈ ಒಂದು ದುರ್ವ್ಯವಹಾರ ಏನಿದೆ ಇದನ್ನು ಖಂಡಿತ ಕೈ ಬಿಡಬೇಕು. ಇಲ್ಲದೇ ಹೋದರೆ ಈ ಫ್ಯಾಕ್ಟರಿ ಪ್ರಾರಂಭವಾದ ಕೂಡಲೇ ಅಲ್ಲಿರುವ ಮರಗಳೆಲ್ಲಾ ನಾಶವಾಗಿ, ಅಲ್ಲಿನ ಕಾಡು ಎಲ್ಲಾ ಹೋಗಿ ಮಳೆ ಕೂಡ ಬರದೇ ಕಾವೇರಿ ಜಲಾನಯನ ಭೂಮಿಯಿಂದ ಹಿಡಿದು ತಮಿಳು ನಾಡಿನವರೆಗೆ ಎಷ್ಟು ಪ್ರದೇಶ ಇದೆಯೋ ಅದೆಲ್ಲಾ ಬರಗಾಲಕ್ಕೆ ಈಡಾಗಬಹುದು ಎಂಬ ಎಚ್ಚರಿಕೆಯನ್ನು ಕೊಡುತ್ತಾ ಇದ್ದೇನೆ. ಇದೇ ತಿಂಗಳ ೧೭ನೇ ತಾರೀಖು ಮಾನ್ಯ ರಾಜಶೇಖರ ಮೂರ್ತಿಯವರ ಚೇಂಬರ್‌ನಲ್ಲಿ ಈ ಮರಗಳನ್ನು ಅವನಿಗೆ ಕೊಡಬೇಕೇ ಬೇಡವೇ ಎಂಬ ವಿಚಾರದಲ್ಲಿ ಒಂದು ಮೀಟಿಂಗ್ ಕೂಡ ಕರೆದಿದ್ದರು. ಈ ಮರವನ್ನು ಕೊಡಗಿನಲ್ಲಿ ಕೊಡಬೇಕಾಗಿದ್ದರೆ ಎಲ್ಲಿಂದ ಕೊಡುತ್ತೀರಿ? ಅಲ್ಲಿ ಸುಮಾರು ೭೦೦ ಗೇಣಿಮನೆತನದವರು ವಾಸ ಇದ್ದಾರೆ. ಅವರು ಯಾಲಕ್ಕಿ ಬೆಳೆಸುವರು, ಅವರು ತಮ್ಮ ಪ್ರತಿಭಟನೆಯನ್ನು ಇದಕ್ಕೆ ಮಾಡಿದ್ದಾರೆ. ಅವರಿಗೆ ಕೊಟ್ಟಿರತಕ್ಕ ಲೀಸ್ ಏನಿದೆ ಅದು ಈಗಾಗಲೇ ಮುಗಿ-ಯುತ್ತಾ ಬಂದಿದೆ. ಅವರಿಗೆ ಕೊಟ್ಟದ್ದನ್ನು ಇಲ್ಲಿಗೆ ನಿಲ್ಲಿಸಿ ಅಲ್ಲಿರತಕ್ಕ ಮರಗಳನ್ನು ಇವನಿಗೆ ಕೊಡಲಿಕ್ಕೂ ಕೂಡ ಯೋಚನೆ ಮಾಡಿದ್ದೀರಿ ಎಂದು ಗೊತ್ತಾಗಿದೆ. ಯಾಲಕ್ಕಿ ಬೆಳೆಯಿಂದ ಸುಮಾರು ಒಂದು ಒಂದೂವರೆ ಕೋಟಿ ರೂಪಾಯಿಗಳಷ್ಟು ವಿದೇಶೀ ವಿನಿಮಯ ನಮಗೆ ಸಿಕ್ಕುತ್ತಾ ಇದೆ. ಇದನ್ನು ಅಭಿವೃದ್ಧಿಪಡಿಸುವುದಕ್ಕೆ ಆ ಮರಗಳನ್ನು ಉಳಿಸಿಕೊಳ್ಳಬೇಕು ಎಂದು ಹೇಳುತ್ತಾ ಇದ್ದೇನೆ. ಇಲ್ಲದೇ ಹೋದರೆ ಕಾಡಿಗೂ ನಷ್ಟವಾಗುತ್ತದೆ, ಅದರ ಪರಿಣಾಮವಾಗಿ ಮಳೆ ಕೂಡ ಕಡಿಮೆಯಾಗುತ್ತದೆ, ಮಳೆ ಕಡಿಮೆಯಾದರೆ ಇಡೀ ರಾಜ್ಯಕ್ಕೂ ಕೂಡ ಅದರಿಂದ ಗಂಡಾಂತರವಾಗುತ್ತದೆಂದು ಸರ್ಕಾರದವರಿಗೆ ಎಚ್ಚರಿಕೆ ಕೊಡಬಯಸುತ್ತೇನೆ. ಆದ್ದರಿಂದ ಈ ಫ್ಯಾಕ್ಟರಿಗೆ ಮರ ಕೊಡುವ ಯೋಜನೆಯನ್ನು ಏನು ಹಾಕಿಕೊಂಡಿದ್ದೀರಿ ಇದನ್ನು ಕೈ ಬಿಡಬೇಕು, ಇದಕ್ಕೆ ಜನರ ವಿರೋಧ, ಪ್ರತಿಭಟನೆ ಇದೆ ಮತ್ತು ಈ ರೀತಿ ಕೊಡುವುದರಿಂದ ರಾಜ್ಯಕ್ಕೂ ಗಂಡಾಂತರಕಾರಿ ಎಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಮಂಚೇಗೌಡ (ಮದ್ದೂರು):—

ಸನ್ಮಾನ್ಯ ಸಭಾಧ್ಯಕ್ಷರೆ, ಈ ದಿವಸ ಈ ಸಭೆಯ ಮುಂದೆ ಇಟ್ಟಿರತಕ್ಕ ವ್ಯವಸಾಯದ ಇಲಾಖೆ, ಅರಣ್ಯದ ಇಲಾಖೆ, ಮೀನುಗಾರಿಕೆ ಹಾಗೂ ಪಶುಪಾಲನಾ ಇಲಾಖೆಗಳ ಬೇಡಿಕೆಗಳನ್ನು ವಿಮರ್ಶಿಸುತ್ತಾ ನನಗೆ ಕೊಟ್ಟಿರತಕ್ಕ ಅತ್ಯಲ್ಪವೇಳೆಯಲ್ಲಿ ಕೆಲವಂಶಗಳನ್ನು ಈ ಸಭೆಯ ಮುಂದೆ ಇಡಲಿಕ್ಕೆ ಇಚ್ಛಿಸಿದ್ದೇನೆ. ಅನೇಕ ಮಂದಿ ಸದಸ್ಯರುಗಳು ಸೂಕ್ಷ್ಮವಾಗಿ ರೈತಾಪಿ ಜನರ ಸಮಸ್ಯೆಗಳು ಹಾಗೂ ಅವುಗಳ ಪರಿಹಾರಕ್ಕೆ ಕೆಲವು ಸೂಚನೆಗಳನ್ನು ಮಾಡಿದ್ದಾರೆ. ಕೃಷಿ ಕ್ಷೇತ್ರದಲ್ಲಿ ಅಭಿವೃದ್ಧಿಯಾಗಿದಾಗ್ಯೂ ಕೂಡ ಎಷ್ಟು ಅಭಿವೃದ್ಧಿಯಾಗಬೇಕಾಗಿತ್ತೋ ಅಷ್ಟು ಆಗಿಲ್ಲ. ಕೃಷಿ ಇಲಾಖೆಯವರು ಅನೇಕ ಸಂಶೋಧನೆಗಳನ್ನು

(ಶ್ರೀ ಎಂ. ಮಂಚೇಗೌಡ)

ನಡೆಸಿ ತರೀ ಜಮೀನಿನಲ್ಲಿ ಉತ್ಪಾದನೆಯನ್ನು ಹೆಚ್ಚು ಮಾಡುವುದಕ್ಕೆ ಹೆಚ್ಚು ಇಳುವರಿ ಬೆಳೆಗಳಿಗೆ ಬಹಳವಾಗಿ ಉತ್ತೇಜನ ಕೊಟ್ಟಿದ್ದಾರೆ. ಆದರಿಂದ ಆಹಾರ ಸಮಸ್ಯೆ ಎಷ್ಟೊಂದು ಕಠಿಣವಾಗಿತ್ತೊ ಅದು ತಕ್ಕಮಟ್ಟಿಗೆ ಬಗೆಹರಿದಿದೆ. ಅಷ್ಟೇ ತೃಪ್ತಿಯಾದಲ್ಲಿ ನಮ್ಮ ರಾಜ್ಯದ ಬಹುತೇಕ ಮಂದಿಯ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿದಂತೆ ಆಯಿತೇ ಎನ್ನುವುದನ್ನು ಯೋಚನೆ ಮಾಡಲೇಬೇಕಾಗಿದೆ. ನಮ್ಮ ರಾಜ್ಯಕ್ಕೆ ಸಂಬಂಧಪಟ್ಟಂತೆ ರೈತಾಪಿಜನರನ್ನು ಎರಡು ಭಾಗ ಮಾಡಬಹುದು. ಒಣ ಬೆಳೆ ಬೆಳೆಯುತಕ್ಕ ಜನ ಒಂದು ಕಡೆ, ನೀರಾವರಿ ಸೌಕರ್ಯ ಇದ್ದು ಆಧುನಿಕ ಪದ್ಧತಿಗಳನ್ನು ಸರಿಯಾಗಿ ಅನುಸರಿಸಿ ಬೇಸಾಯ ಮಾಡತಕ್ಕ ಜನ ಇನ್ನೊಂದು ಕಡೆ. ಈ ರೀತಿ ಎರಡು ಗುಂಪಿನ ಜನಗಳಿಗೂ ಕೂಡ ಸಂತುಷ್ಟಿ ಇದೆಯೇ ಅಂತ ಯೋಚನೆ ಮಾಡಿದ್ದೇ ಆದರೆ ಒಂದು ಗುಂಪಿನವರಲ್ಲಿ ಸಂತುಷ್ಟಿ ಕಡಮೆಯಾಗುತ್ತಾ ಇದೆ ಒಣ ಬೆಳೆ ಬೆಳೆಯುತಕ್ಕ ಜನ ಅನೇಕ ವರ್ಷಗಳಿಂದ ವ್ಯವಸಾಯಕ್ಕೆ ಹಣವನ್ನು ವೆಚ್ಚ ಮಾಡಿ ಎಲ್ಲೆಲ್ಲಿ ಸಾಲ ದೊರೆಯುಬಹುದೋ ಅಲ್ಲೆಲ್ಲಾ ಸಾಲವನ್ನು ತೆಗೆದುಕೊಂಡು, ಆಧಾರ ಮಾಡಲಿಕ್ಕೆ ಅವರಿಗೆ ಏನು ಆಸ್ತಿ ಇದೆಯೋ ಅದೆಲ್ಲವನ್ನೂ ಆಧಾರವಾಗಿಟ್ಟು ಸಾಲ ಪಡೆದು ಸಾಲಗಾರರಾಗಿದ್ದಾರೆ. ಅವರಲ್ಲಿ ಅತೃಪ್ತಿ ಬಹಳವಾಗಿ ಬೆಳೆದಿದೆ. ಇಂತಹ ಜನಗಳ ಅತೃಪ್ತಿಯನ್ನು ಪೂರ್ಣವಾಗಿ ಹೋಗಲಾಡಿಸಬೇಕಾದರೆ ಏನೇನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದಕ್ಕನುಗುಣವಾಗಿ ನಾವು ರಚನೆ ಮಾಡತಕ್ಕ ಯೋಜನೆಗಳು ಮತ್ತು ಮಂಡಿಸತಕ್ಕ ಬಡ್ಜೆಟ್ಟುಗಳು ಸಹಕಾರಿಯಾಗಿರಬೇಕು. ಈಗ ರೂಪಿಸಿರತಕ್ಕ ಚತುರ್ಥ ಯೋಜನೆ, ಈ ಸಾರಿ ಮಂಡಿಸಿರತಕ್ಕ ಬಡ್ಜೆಟ್ಟು ಏನಿದೆ ಇದು ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಎಷ್ಟು ಪಾಲು ಉಪಕಾರಿಯಾಗಿದೆ ಎಂಬುದನು ಯೋಚನೆ ಮಾಡಿದ್ದೇ ಆದರೆ ಬಹುಶಃ ನಿರಾಶೆಯಾಗುತ್ತದೆ.

4-30 P.M.

ಒಣ ಫಸಲನ್ನವಲಂಬಿಸಿರುವ ಜನರ ಪರಿಸ್ಥಿತಿಯನ್ನು ಸುಧಾರಿಸಲು ಏನು ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೆಂದು ಹೇಳಲು ಕಾಲಾವಕಾಶವಿಲ್ಲ, ಅನೇಕ ಮಿತ್ರರು ಈ ವಿಚಾರದಲ್ಲಿ ಸಲಹೆ ಮಾಡಿದ್ದಾರೆ. ಅದಷ್ಟು ಜಾಗ್ರತೆ ಅವರ ಪರಿಸ್ಥಿತಿಯನ್ನು ಸುಧಾರಿಸಬೇಕು ಈ ಬಗೆಯ ಜನರಲ್ಲಿ ಅಶಾಂತಿಯುತವಾದ ವಾತಾವರಣವಿದೆ, ಪ್ರಜಾಪ್ರಭುತ್ವ ನಿಜವಾಗಿಯೂ ಉಳಿಯಬೇಕಾದರೆ ಯಾರು ಇದುವರೆಗೆ ಆಧಾರಸ್ಥಂಭದ ಹಾಗಿದ್ದಾರೆ, ಯಾರು ಮೂಕ ಪ್ರಾಣಿಗಳಂತಿದ್ದಾರೆ, ಅವರ ಪರಿಸ್ಥಿತಿಯನ್ನು ಉತ್ತಮಪಡಿಸಬೇಕು. ಅವರ ಪರಿಸ್ಥಿತಿ ಇನ್ನೂ ಹದಗೆಟ್ಟರೆ ಈ ಸಭೆ ಉಳಿಯಲಾರದು, ನಾವೂ ಉಳಿಯುವುದಿಲ್ಲ, ಶಾಂತಿಯೂ ಇರುವುದಿಲ್ಲ. ಈ ಬಗ್ಗೆ ತೀವ್ರವಾಗಿ ಯೋಚನೆ ಮಾಡದಿದ್ದರೆ ತಪ್ಪಾಗಬಹುದು. ಮತ್ತೊಂದು ಗುಂಪು ನೀರಾವರಿ ಭಾಗದಲ್ಲಿರುವ ರೈತರು. ಕಳೆದ ಸಾಲಿನವರೆಗೂ ಅವರ ಸ್ಥಿತಿ ಸ್ವಲ್ಪ ಚೆನ್ನಾಗಿತ್ತು, ಧಾರಣೆವಾಸಿ ಚೆನ್ನಾಗಿತ್ತು, ಧಾರಣೆ ಹೆಚ್ಚಿದ್ದರಿಂದ ಹೆಚ್ಚು ಉತ್ಪತ್ತಿ ಮಾಡಬಹುದು ಎಂದು ಕಾತುರತೆಯಿಂದ ಸಾಲ ಸಿಕ್ಕುವ ಕಡೆಯಲ್ಲೆಲ್ಲಾ ಸಾಲ ತೆಗೆದುಕೊಂಡು ಬೆಳೆಗಾಗಿ ವೆಚ್ಚ ಮಾಡಿದ್ದಾರೆ. ಆ ಹಣಕ್ಕೆ ತಕ್ಕ ಪ್ರತಿಫಲ ಕೆಲವು ಕಡೆ ದೊರೆತಿದೆ. ಆದರೆ ಈಗ ಧಾರಣೆವಾಸಿ ಬಹಳ ಇಳಿದಿರುವುದರಿಂದ ಗ್ರಾಮಾಂತರಗಳ ರೈತರಿಗೆ ಬಹಳ ತೊಂದರೆಯಾಗಿದೆ. ಯಾರೇ ಆಗಲಿ, ಒಟ್ಟಿನಲ್ಲಿ ಸಮಾಜದಲ್ಲಿ ಶಾಂತಿ ಇರಬೇಕಾದರೆ ಆಹಾರ ಸಮಸ್ಯೆಯೇನಿದೆ ಅದು ಬಗೆಹರಿಯಬೇಕು, ಮತ್ತು ಯಾವ ಕಾರಣದಿಂದ ಧಾರಣೆ ಇಳಿದಿದೆ ಎಂಬುದನ್ನು ನೋಡಿ ಅದು ಇನ್ನೂ ಇಳಿಯದಂತೆ ನೋಡಿಕೊಳ್ಳಬೇಕು. ಬೆಲೆ ಇಳಿದರೆ ರೈತರಿಗೆ ಅನುಕೂಲವಾಗುವಂತೆ ಸ್ವಲ್ಪ ಧಾರಣೆ ಹೆಚ್ಚಿಸಬೇಕು, ಎಂದರೆ ಕೊಳ್ಳುವವರಿಗೆ ತೊಂದರೆಯಾಗದಂತೆ ಹೆಚ್ಚಿಸಬೇಕು. ಈಗ ಗೊಬ್ಬರದ ಬೆಲೆ ವಿಪರೀತವಾಗಿದೆ, ಎಂಥ ರೈತರಾದರೂ ರಾಸಾಯನಿಕ ಗೊಬ್ಬರ ಉಪಯೋಗಿಸಬೇಕು. ಇದು ರಾಜ್ಯ ಸರಕಾರಕ್ಕೆ ಸಂಬಂಧಪಟ್ಟಿಲ್ಲ., ಭಾರತ ಸರಕಾರದ ನೀತಿ ಬದಲಾವಣೆಯಾಗುವವರೆಗೆ ರಾಸಾಯನಿಕ ಗೊಬ್ಬರದ ಬೆಲೆ ಇಳಿಯುವುದಿಲ್ಲ. ಈಗಿನ ಭಾರತ ಸರಕಾರದ ಬಜೆಟ್ ರೈತರಿಗೆ ಅನುಕೂಲವಾಗುವಂತಿಲ್ಲ. ಆದರೆ ರಾಜ್ಯ ಸರಕಾರದವರು ಮಾರಾಟದಲ್ಲಿರುವ ಬೇಕಾದಷ್ಟು ಇಂಟರ್‌ಮೀಡಿಯರಿಗಳನ್ನು ತೆಗೆದು ಹಾಕಬಹುದು, ಅವರು ಬೇಕಾದಷ್ಟು ಮಂದಿ ಇದ್ದಾರೆ. ಆ ಏಜಂಟುಗಳನ್ನು ತಪ್ಪಿಸಿದರೆ ಬೆಲೆ ಇಳಿಸಬಹುದು. ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಯಲ್ಲಿ ಈ ಸಾರಿ ಒಂದೂವರೆ ಕೋಟಿ ರೂಪಾಯಿಗಳ ನಷ್ಟವಾಗಿದೆ, ಇದಕ್ಕೆ ಹಿನ್ನೆಲೆಯೇನೆಂಬುದು ರೈತರಿಗೆ ತಿಳಿಯುವುದಿಲ್ಲ. ನಷ್ಟವಾದರೂ ಕೂಡ ಇಲಾಖೆ ಇದೆ, ಸಿಬ್ಬಂದಿಯಿದೆ. ಈ ಇಲಾಖೆಯನ್ನು ತೆಗೆದರೆ ಒಂದೂವರೆ ಕೋಟಿ ಸಬ್ಸಿಡಿ ಕೊಟ್ಟು ಗೊಬ್ಬರದ ಬೆಲೆ ಇಳಿಸಬಹುದು. ನಮ್ಮ ಉದ್ದೇಶ ರೈತರ ಸ್ಥಿತಿ ಸುಧಾರಿಸಬೇಕು ಎಂಬುದು. ಆದುದರಿಂದ ಇಲಾಖೆ ತೆಗೆಯುವುದು ಸೂಕ್ತ. ಹೀಗೆ ರಾಜ್ಯ ಸರಕಾರ ಸಾಧ್ಯವಿರುವುದನ್ನು ಮಾಡಬೇಕು ಹಾಗೆಯೇ ವ್ಯವಸಾಯದ ಉಪಕರಣದ ಬೆಲೆಯನ್ನೂ ಇಳಿಸಬೇಕು. ಬುಲ್‌ಡೋಜರುಗಳನ್ನು ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಒದಗಿಸುವುದು. ನಮ್ಮಲ್ಲಿ ದೊಡ್ಡ ಜಮೀನುದಾರರಿಲ್ಲ, ಇನ್ನು ಮುಂದೆ ಭೂ ಸುಧಾರಣೆ ಜಾರಿಗೆ ಬರುವುದರಿಂದ ದೊಡ್ಡ ಜಮೀನುದಾರರು ಇರುವುದಕ್ಕೆ ಸಾಧ್ಯವೂ ಇಲ್ಲ ಬಡವರಿಗೆ ಬುಲ ಡೋಜರನ್ನು ಕೊಳ್ಳುವ ಶಕ್ತಿಯೂ ಇಲ್ಲ, ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ನಿಗದಿ ಮಾಡಿರುವ ದರ ಕೊಟ್ಟು ಬುಲ್‌ಡೋಜರನ್ನು ಪಡೆದು ಬಡವರು ಭೂಮಿ ಮಟ್ಟ ಮಾಡಲು ಸಾಧ್ಯವಿಲ್ಲ,

ಹಾಗೆ ಮಾಡಿದರೆ ಅವರು ಸಾಲ ತೀರಿಸಲು ಸಾಧ್ಯವಿಲ್ಲ. ಆದುದರಿಂದ ಸಬ್ಸಿಡೈಜ್ ಆದರೂ ಮಾಡಿ ದರ ಕಡಮೆ ಮಾಡಿದರೆ ಬಡವರಿಗೆ ಸ್ವಲ್ಪ ಸೌಲಭ್ಯ ಸಿಕ್ಕುವುದು. ಎರಡನೆಯದಾಗಿ ಜಮೀನು ಮಟ್ಟಮಾಡಲು ಬ್ಯಾಂಕುಗಳಲ್ಲಿ ಸಾಲ ಸಿಕ್ಕುವುದು, ಇದಕ್ಕೆ ಎಕರೆಗೆ ೪ ಸಾವಿರ ರೂಪಾಯಿಗಳವರೆಗೂ ಕೊಡಬಹುದು, ಎಂದು ಇದೆ. ವ್ಯವಸಾಯದ ಇಲಾಖೆಯವರು ಇಷ್ಟು ಕೊಡಬೇಕೆಂದು ತಿಳಿಸಿದರೆ ಅಷ್ಟು ದೊರೆಯುವುದ ರಿಂದ ಹಾಗೆ ಮಾಡಿದರೆ ಉದ್ದೇಶ ಸಾಧನೆ ಮಾಡಿದಂತಾಗುವುದು, ಆ ರೀತಿ ಮಾಡಬೇಕು.

ಮತ್ತೊಂದು ವಿಷಯ. ಈಗ ವೆಟರ್ನರಿ ಕಾಲೇಜಿನ ವಿದ್ಯಾರ್ಥಿಗಳು ಮುಷ್ಕರ ಮಾಡುತ್ತಿದ್ದಾರೆ, ವೆಟರ್ನರಿ ಕಾಲೇಜಿನಲ್ಲಿ ಓದಿದವರಿಗೂ ಮೆಡಿಕಲ್ ಕಾಲೇಜಿನಲ್ಲಿ ಓದಿದವರಿಗೂ ಸಮಾನವಾದ ಸಂಬಳ ಕೊಡದಿದ್ದರೆ ಮುಷ್ಕರ ಮುಂದುವರೆಯುವುದು. ಎರಡು ಕಾಲೇಜುಗಳವರೂ ವ್ಯಾಸಂಗ ಮಾಡಲು ಇರುವ ಅವಧಿ ಒಂದೇ ಆಗಿರುವುದರಿಂದ ಈ ವಿಷಯವನ್ನು ಪರ್ಯಾಲೋಚಿಸಿ ಮೆಡಿಕಲ್ ಗ್ರಾಜುಯೇಟ್ಸಿಗೆ ಕೊಡುವ ಗ್ರೇಡನ್ನೇ ವೆಟರ್ನರಿ ಕಾಲೇಜಿನ ಗ್ರಾಜುಯೇಟ್ಸ್‌ಗೂ ಕೊಟ್ಟರೆ ಒಳ್ಳೆಯದು.

ಕೊನೆಯದಾಗಿ ಮಾತನಾಡಲು ಕಾಲಾವಕಾಶಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಕ್ತಾಯಮಾಡುತ್ತೇನೆ.

ಶ್ರೀ ಎನ್. ಚಿಕ್ಕೇಗೌಡ (ಹೊಸಕೋಟೆ).—ಮಾನ್ಯ ಸಭಾಧ್ಯಕ್ಷರೇ, ಈ ದಿವಸ ಈ ಸಭೆಯ ಮುಂದಿರುವ ವ್ಯವಸಾಯ, ಪಶುಸಂಗೋಪನ, ಅರಣ್ಯ ಮತ್ತು ಮೀನುಗಾರಿಕೆ ಇಲಾಖೆಗಳಿಗೆ ಸಂಬಂಧಪಟ್ಟ ಬೇಡಿಕೆಯನ್ನು ವಿರೋಧಿಸುತ್ತೇನೆ. ಮುಖ್ಯವಾಗಿ ನಿನ್ನೆ ಮತ್ತು ಇಂದು ನಡೆದ ವ್ಯವಸಾಯಕ್ಕೆ ಸಂಬಂಧಪಟ್ಟ ಬೇಡಿಕೆ ಬಗ್ಗೆ ಅನೇಕ ಸದಸ್ಯರು ಅನೇಕ ಉತ್ತಮವಾದ ಸಲಹೆ ಹಾಗೂ ಇಲಾಖೆಯಲ್ಲಿ ಇರುವ ಅಧಿಕಾರಿಗಳು ಮಾಡುವ ಲೋಪದೋಷಗಳನ್ನು ಹೇಳಿದ್ದಾರೆ. ಕಳೆದ ಬಜೆಟ್ ಮೇಲೆ ಚರ್ಚೆ ನಡೆದಾಗ ನಾನು ಮತ್ತು ಇತರ ಸದಸ್ಯರು ಕೊಟ್ಟ ಸಲಹೆಗಳನ್ನು ಪರಿಶೀಲಿಸಿ ಸರಕಾರ ಎಷ್ಟು ಕಾರ್ಯರೂಪಕ್ಕೆ ತಂದಿದೆ ಎಂಬುದನ್ನು ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಹೇಳುವರೆಂದು ನಾನು ನಂಬಿದ್ದೇನೆ. ಮುಖ್ಯವಾಗಿ ಶೇಕಡ ೭೫ ಮಂದಿ ಈ ದೇಶದಲ್ಲಿ ವ್ಯವಸಾಯದಲ್ಲಿ ನಿರತರಾಗಿದ್ದಾರೆ. ಅವರಿಗೆ ಈ ಸಭೆಯ ಮೂಲಕ ಮತ್ತು ವೇದಿಕೆಗಳ ಮೂಲಕ ಬಹಳ ಅನುಕೂಲ ಮಾಡಬೇಕು. ವ್ಯವಸಾಯ ಹೆಚ್ಚಬೇಕು ಎಂದು ಹೇಳಿರುವುದಕ್ಕನುಗುಣವಾಗಿ ದೇಶದ ಬೆನ್ನುಮೂಳೆಯಂತಿರುವ ರೈತರ ಹಿತದ ಬಗ್ಗೆ ಕಾರ್ಯತಃ ಏನೂ ಮಾಡಿರುವುದಿಲ್ಲ. ಸಾಧಾರಣವಾಗಿ ಸರಕಾರದವರು ಮತ್ತು ಜವಾಬ್ದಾರಿ ಹೊತ್ತಿರುವವರು ಬರೇ ಮಾತಿನಲ್ಲಿ ರೈತರ ಬಗ್ಗೆ ಹೇಳಿರುವರೇ ವಿನಾ ಕಾರ್ಯರೂಪದಲ್ಲಿ ಏನೂ ಮಾಡಿ ತೋರಿಸಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. "ವ್ಯವ" ಅಂದರೆ ವ್ಯಯ. "ಸಾಯ" ಎಂದರೆ ಸತ್ತುಹೋಗುವುದು ಎಂದು ವ್ಯವಸಾಯದ ಪದವನ್ನು ಅರ್ಥಮಾಡಬಹುದು. ಕಷ್ಟದಲ್ಲಿರುವ ರೈತರಿಗೆ ಸರಕಾರ ಮಾಡುತ್ತಿರುವ ಸಹಾಯ ಏನೇನೂ ಸಾಲದು. ಈ ದೇಶದಲ್ಲಿ ಕೈಗಾರಿಕೆ ಮತ್ತಿತರ ಉದ್ಯಮಗಳಿಗೆ ಕೊಡುವಷ್ಟು ಸಹಾಯವನ್ನು ವ್ಯವಸಾಯಕ್ಕೆ ಕೊಡುತ್ತಿಲ್ಲ, ಸಬ್ಸಿಡಿ ರೂಪದಲ್ಲಿ ಕೊಡುತ್ತಿದ್ದುದನ್ನೂ ನಿಲ್ಲಿಸುತ್ತಿದ್ದಾರೆ. ಕನ್ನಡದ ಒಂದು ಫಿಲಂ ತಯಾರಿಸಿದರೆ ಅದು ಚೆನ್ನಾಗಿದೆಯೋ ಇಲ್ಲವೋ ಎಂಬುದು ಗೊತ್ತಿಲ್ಲದಿದ್ದರೂ ಪ್ರತಿ ಚಿತ್ರಕ್ಕೆ ೫೦ ಸಾವಿರ ರೂಪಾಯಿ ಸಬ್ಸಿಡಿ ಕೊಡುವರು. ಆದರೆ ಅದೇ ವ್ಯವಸಾಯಕ್ಕೆ ಸಬ್ಸಿಡಿ ಕೊಡುತ್ತಿಲ್ಲ. ದಸರಾದಲ್ಲಿ ಅವಾರ್ಡನ್ನು ರೈತರಿಗೆ ಕೊಡುತ್ತೇವೆಂದು ಹೇಳಬಹುದು. ಅದು ಸಾಲದು. ಇಂದು ಫಿಲಂ ಕೈಗಾರಿಕೆಗೆ ಮತ್ತಿತರ ಕೈಗಾರಿಕೆಗಳಿಗೆ ಭೂಮಿ, ಸುಲಭ ದರದಲ್ಲಿ ನೀರು, ವಿದ್ಯುಚ್ಛಕ್ತಿ, ತೆರಿಗೆ ವಿನಾಯಿತಿ ಮುಂತಾದುವುಗಳನ್ನು ಕೊಡುವರು. ಹಾಗೆ ಕೊಡಬಾರ ದೆಂದು ನಾನು ಹೇಳುವುದಿಲ್ಲ. ಅವರಿಗೆ ಕೊಡುವಂತೆ ಸೇಕಡ ೭೫ ಭಾಗದ ಬಡ ರೈತರಿಗೂ ಕೂಡ ಸಬ್ಸಿಡಿ ಕೊಡುವುದು ಒಳ್ಳೆಯದು. ಈಗ ಅವರಿಗೆ ಕೊಡುವ ಸೌಲಭ್ಯ ಸಾಲದು. ಆದುದರಿಂದ ಅವರು ಪೂರ್ಣವಾಗಿ ವ್ಯವಸಾಯವನ್ನು ನಿಲ್ಲಿಸುವ ಪರಿಸ್ಥಿತಿ ಇದೆ.

ಇವತ್ತಿನ ದಿವಸ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಎರಡೂ ಸೇರಿ, ರೈತನ ಹತ್ತಿರ ಹಣ ತುಂಬಿದೆ ಎಂದು ಏನೇನೋ ತೆರಿಗೆಗಳನ್ನು ಹಾಕುವುದಕ್ಕೆ ಹೊರಟಿದ್ದಾರೆ. ರೈತನ ಜೇಬು ತುಂಬಿದೆ ಎಂದು ಅವನ ಜೇಬನ್ನು ಹುಡುಕುವುದಕ್ಕೆ ಹೋದರೆ, ಚಿನ್ನದ ಮೊಟ್ಟೆಯನ್ನು ಇಡುತ್ತಿದ್ದ ಬಾತನ್ನು ಕೊಂದ ಹಾಗೆ ಆಗುತ್ತದೆ. ರೈತನಿಗೆ ಬೇಕಾದ ಕೃತಕ ಗೊಬ್ಬರ, ಕ್ರಿಮಿ ನಾಶಕಗಳು, ಬೀಜ, ಇಂಪ್ಲಿಮೆಂಟ್ಸ್ ಇವನ್ನೆಲ್ಲ ತೆಗೆದುಕೊಂಡು, ಅವುಗಳ ಉಪಯೋಗದಿಂದ ಶಕ್ತಿಮಾನ್ ಜೋಳ ಮುಂತಾದ ಉತ್ತಮ ತಳಿಯ ಬೆಳೆ-ಯನ್ನು ಬೆಳೆಯುವುದಕೆ, ಹೊರಟದ್ದಾನೆ, ಅದರಲ್ಲಿ ಅವನು ಹಾಕಿದ ಬಂಡವಾಳ ಮತ್ತು ಬಂದಂಥ ಪ್ರತಿ-ಫಲ, ಇವೆರಡನ್ನೂ ಹೋಲಿಸಿ ನೋಡಿದರೆ ರೈತ ನಿಜವಾಗಿ ಕಷ್ಟದಲ್ಲಿದ್ದಾನೆ. ರೈತನಾದವನು ವ್ಯವಸಾಯಕ್ಕೆ ಖರ್ಚು ಮಾಡುವ ಹಣದ ಲೆಕ್ಕವನ್ನು ಇಟ್ಟರೆ ಅವನು ಮುಳುಗಿ ಹೋಗುತ್ತಾನೆ ಗ್ರೀನ್ ರೆವಲ್ಯೂಷನ್ ಆಗಿದೆ ಎಂದು ಏನು ಹೇಳುತ್ತಿದ್ದಾರೆ ಅದು ಗ್ರೀನ್‌ಲೆಸ್ ರೆವಲ್ಯೂಷನ್ ಆಗುತ್ತಿದೆಯೆಂದು ಹೇಳಬಹುದು,

(ಶ್ರೀ ಎನ್. ಚಿಕ್ಕೇಗೌಡ)

ರೈತನು ಬೆಳೆದ ಬೆಳೆಗಳಿಗೆ ಮಾರುಕಟ್ಟೆಯಲ್ಲಿ ಮಿನಿಮಂ ಪ್ರೈಸ್‌ಗಿಂತ ಕಡಮೆಯಾದರೆ ಸರ್ಕಾರದಿಂದ ಕೊಂಡುಕೊಳ್ಳುತ್ತೇವೆಂದು ಮಾನ್ಯ ಮಂತ್ರಿಗಳು ಹೇಳುತ್ತಾರೆ. ಮತ್ತು ಆ ರೀತಿ ಕೊಳ್ಳಲು ತಾಲ್ಲೂಕು ಅಗ್ರಿಕಲ್ಚರಲ್ ಪ್ರಾಡ್ಯೂಸ್ ಮಾರ್ಕೆಟಿಂಗ್ ಸೊಸೈಟಿಗೆ ಹೇಳಿದ್ದೇವೆ ಎಂದು ಹೇಳುತ್ತಾರೆ. ಕಾಗದದ ಮೇಲೆ ಸರ್ಕಾರದ ಆದೇಶಗಳಿವೆಯೇ ಹೊರತು ಕಾರ್ಯತಃ ಯಾವುದೂ ಆಗಿಲ್ಲ. ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗಳಲ್ಲಿ ಹಣವಿಲ್ಲ. ಕೆಲವು ಕಡೆ ಸೂಪರ್‌ಸೀಡ್ ಆಗಿ ಅಲ್ಲಿ ಅಡ್ಮಿನಿಸ್ಟ್ರೇಟರಿದ್ದಾರೆ, ಏನೂ ಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲ; ಡಿಮಾಂಡ್ ಇಲ್ಲ, ಗೋಡೌನ್ ಇಲ್ಲ ಎಂದು ಏನಾದರೂ ನೆಪ ಹೇಳುತ್ತಾರೆ. ಒಟ್ಟಿನಲ್ಲಿ ರೈತರ ರಕ್ಷಣೆಯಾಗುತ್ತಿಲ್ಲ.

ರಾಸಾಯನಿಕ ಗೊಬ್ಬರ, ಬುಲ್ ಡೋಜರುಗಳು, ಟ್ರಾಕ್ಟರುಗಳು ಇಂಥವನ್ನೆಲ್ಲ ಕೊಡುವ ಕೆಲಸ ಅಗ್ರೊ ಇಂಡಸ್ಟ್ರೀಸ್ ಕಾರ್ಪೊರೇಷನ್ನಿಗೆ ಹೋದರೆ ರೈತರಿಗೆ ಬಹಳ ಅನ್ಯಾಯವಾಗುತ್ತದೆ ಮತ್ತು ಅನಾನುಕೂಲವಾಗುತ್ತದೆ ಎಂದು ಅನೇಕ ಸದಸ್ಯರು ಹೇಳಿದ್ದಾರೆ. ಮಧ್ಯವರ್ತಿಗಳನ್ನು ಜಾಸ್ತಿ ಮಾಡಿ, ಒಂದೂವರೆ ಕೋಟಿ ರೂಪಾಯಿ ನಷ್ಟವಾದರೂ ಚಿಂತೆ ಇಲ್ಲ, ಗೊಬ್ಬರದ ಬೆಲೆಯನ್ನು ಹೆಚ್ಚಿಸಿ ನಷ್ಟವನ್ನು ತುಂಬು–ವುದಕ್ಕೆ, ಯಾರೋ ಕೆಲವರಿಗೆ ಅನುಕೂಲ ಮಾಡುವುದಕ್ಕೆ ಹೊರಟ್ಟಿದ್ದೀರಿ ಎಂದು ಮಾನ್ಯ ಸದಸ್ಯರಾದ ಮಂಜೇಗೌಡರು ಹೇಳಿದರು. ಇದು ನಿರ್ವಿವಾದ ವಾದ ಸಂಗತಿ. ಹೈಬ್ರಿಡ್ ಜೋಳವನ್ನು ಕೆ. ಜಿ. ಗೆ. ನಾಲ್ಕು ರೂಪಾಯಿಗೆ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಮೂಲಕ ತೆಗೆದುಕೊಂಡು ಅದನ್ನು ಏಳು ರೂಪಾಯಿ ಪ್ರಕಾರ ಮಾಡುತ್ತೀರಿ. ಇದರಲ್ಲಿ ಒಂದು ಕೆ. ಜಿ. ಗೆ ಮೂರು ರೂಪಾಯಿ ಲಾಭ ಬರುತ್ತದೆ ಈ ಪ್ರಕಾರವಾಗಿ ವ್ಯಾಪಾರ ಮಾಡುವುದಕ್ಕೆ ಹೊರಟಿದ್ದೀರಿ ಎಂದು ಹೇಳಬೇಕಾಗುತ್ತದೆ. ರೈತರಿಗೆ ಸಬ್ಸಿಡಿ ಕೊಡುವುದನ್ನು ಬಿಟ್ಟು, ನೋ ಪ್ರಾಫಿಟ್ ನೋ ಲಾಸ್ ಬೇಸಿಸ್ ಮೇಲೆ ಕೆಲಸ ಮಾಡುವುದನ್ನು ಬಿಟ್ಟು ಲಾಭವನ್ನು ಗಳಿಸಬೇಕು ಎಂದು ಇದನ್ನು ಒಂದು ವಾಪಾರ ಸಂಸ್ಥೆಯನ್ನಾಗಿ ಮಾಡುವುದಕ್ಕೆ ಹೊರಟಿದ್ದೀರಿ. ಉತ್ತಮವಾದ ಬಿತ್ತನೆ ಬೀಜವನ್ನು ಕೊಡಬೇಕು ಎನ್ನುವ ವಿಚಾರದಲ್ಲಿ ಬೇಕಾದಂಥ ಹತೋಟಿಯನ್ನು ಇಟ್ಟುಕೊಳ್ಳಿ, ಅಡಲ್ಟರೇಷನ್ ಆಗಬಾರದು, ಕ್ವಾಲಿಟಿಯಲ್ಲಿ ಡಿಟೀರಿಯೋರೇಷನ್ ಆಗಬಾರದು ಎಂದು ಬೇಕಾದಂಥ ಕಠಿಣವಾದ ನಿಯಮಗಳನ್ನು ಹಾಕಿ. ಬಿತ್ತನೆ ಬೀಜದ ಉತ್ಪಾದನೆ ಬಗ್ಗೆ ಅನೇಕ ರೈತರು ಹೇಳುತ್ತಿದ್ದಾರೆ, ಮತ್ತು ಅನೇಕರು ಬಂದು ಸರ್ಕಾರದ ಮುಂದೆ ಹೇಳಿದ ಕಾಲದಲ್ಲಿ ಡೆಲಿಗೇಷನ್‌ನಲ್ಲಿ ನಾನೂ ಕೂಡ ಹೇಳಿದವನಾಗಿದ್ದೇನೆ. ಒಳ್ಳೆಯ ಬಿತ್ತನೆ ಬೀಜ ಬೇಕು ಎಂದು ಹೇಳುವಾಗ ರೈತರಿಂದ ಕೊಳ್ಳತಕ್ಕ ದರವನ್ನು ಕಡಮೆ ಮಾಡಿ, ಹೆಚ್ಚು ದರಕ್ಕೆ ಮಾರಿ ಲಾಭ ಮಾಡಬೇಕು ಎನ್ನುವ ಉದ್ದೇಶ ಸರ್ಕಾರಕ್ಕೆ ಇದ್ದರೆ ಅದನ್ನು ಖಂಡಿತವಾಗಿ ಕೈ ಬಿಡಬೇಕು ಎಂದು ಹೇಳುತ್ತೇನೆ.

ವ್ಯವಸಾಯ ಇಲಾಖೆಯ ಮೂಲಕ ಆಗಿರತಕ್ಕ ಅನೇಕ ಯೋಜನೆಗಳು ಬರೀ ಕಾಗದದಲ್ಲಿದ್ದು, ಬಡ್‌ಜೆಟ್ಟಿನಲ್ಲಿ ಆ ಯೋಜನೆಗಳನ್ನು ಅಳವಡಿಸಿ ಕೇಂದ್ರ ಸರ್ಕಾರದಿಂದ ಮತ್ತು ಐ.ಸಿ ಎ.ಆರ್., ಗ್ರಾಂಟನ್ನು ಪಡೆಯುತ್ತಿದ್ದಾರೆ. ಆದರೆ ಕೇಂದ್ರದಿಂದ ಬರತಕ್ಕ ಅಸಿಸ್ಟೆನ್ಸ್ ತೆಗೆದುಕೊಂಡರೂ ಅನೇಕ ಯೋಜನೆಗಳನ್ನು ಕಾರ್ಯ-ರೂಪಕ್ಕೆ ತರುವುದಿಲ್ಲ ಅದಕ್ಕೆ ಅನೇಕ ಕಾರಣಗಳಿರಬಹುದು. ಅದನ್ನು ಸರ್ಕಾರದವರು ತಿಳಿಸಬೇಕು. ಸರ್ಕಾರದವರು ಅನೇಕ ಬೇಡದೇ ಇರತಕ್ಕ ಯೋಜನೆಗಳನ್ನು ಹಾಕಿಕೊಂಡು ಹಣವನ್ನು ಖರ್ಚು ಮಾಡುತ್ತಿದ್ದಾರೆ. ಹೊಸ ಕೋಟೆಯಲ್ಲಿ ಒಂದು ಸಾಯಿಲ್ ಕನ್‌ಸರ್ವೇಷನ್ ಸಬ್ ಡಿವಿಜನ್ ಕೊಡಿ, ಈಗ ಬೆಂಗಳೂರು ಜಿಲ್ಲೆ-ಯಲ್ಲಿ ಒಂದೆರಡು ಕಡೆ ಮಾತ್ರ ಇದ್ದು ಸರಿಯಾಗಿ ಕೆಲಸವಾಗುತ್ತಿಲ್ಲ, ಮಳೆ ಸರಿಯಾಗಿ ಆಗದೆ ಬಯಲು ಸೀಮೆಯಲ್ಲಿ ಒಣ ವ್ಯವಸಾಯ ಮಾಡುವವರಿಗೆ ಅನುಕೂಲವಾಗಲಿ ಎಂದರೆ ಅನೇಕ ನೆಪಗಳನ್ನು ಹೇಳು-ತ್ತಿದ್ದಾರೆ. ಏನೂ ಕೆಲಸವಿಲ್ಲದೆ, ಎಂದು ಕಾಗದ, ಒಂದು ಫೈಲು ಇಲ್ಲದೆ ಇದ್ದರೂ ಬೇಕಾದಷ್ಟು ಇಲಾಖೆ-ಗಳನ್ನು ರಚಿಸುತ್ತಾರೆ, ದೊಡ್ಡ ಸೈನ್ಯದ ತಂಡವನ್ನೇ ಇಟ್ಟುಕೊಂಡಿದ್ದಾರೆ. ವ್ಯವಸಾಯದ ಬಗ್ಗೆ ಸಾಯಿಲ್ ಕನ್‌ಸರ್ವೇಷನ್‌ಗೆ ಅನುಕೂಲ ಮಾಡಿಕೊಡಿ ಎಂದರೆ ಮಾಡುತ್ತಿಲ್ಲ ವ್ಯವಸಾಯದ ಬಗೆ ಸಾಯಿಲ್ ಕನ್-ಸರ್ವೇಷನ್ ಮಾಡುತ್ತೇವೆ ಬಂಡ್ ಹಾಕಿಸಿದ್ದೇವೆ ಎಂದು ಹೇಳುತ್ತಾರೆ. ಬಂಡ್ ಹಾಕಿಸುವುದಕ್ಕೆ ೨೫ ಪರ್ಸೆಂಟ್ ಸಬ್ಸಿಡಿ ಬೇರೆ ಕೊಡುತ್ತಾರೆ. ಅದೆಲ್ಲ ಸಿಬ್ಬಂದಿಗೇ ಹೋಗುತ್ತದೆ. ಬಂಡ್ ಹಾಕಿಸುವುದಕ್ಕೆ ಖರ್ಚಾಗುವ ಹಣದ ಮೇಲೆ ೫ ರಿಂದ ೯ ಪರ್ಸೆಂಟ್‌ವರೆಗೂ ಬಡ್ಡಿಯನ್ನು ಹಾಕಿ ವಸೂಲು ಮಾಡುತ್ತಾರೆ. ಕೆಲಸವನ್ನು ಈ ಪುಕ್ಕಟೆಯಾಗಿ ಮಾಡಿಸಬಹುದು. ಭೂಕಂದಾಯ ಮತ್ತು ಅನೇಕ ಪ್ರತ್ಯಕ್ಷ ಮತ್ತು ಪರೋಕ್ಷ ತೆರಿಗೆಗಳನ್ನು ರೈತರ ಮೇಲೆ ಹಾಕುತ್ತಾರೆ. ಆದರೆ ಜಮೀನಿನಲ್ಲಿ ಬದು ಹಾಕಿಸುವುದಕ್ಕೆ ಬಡ್ಡಿ ಸಮೇತ ಹಣ ವಸೂಲು ಮಾಡುತ್ತಾರೆ ಮತ್ತು ರೈತರಿಗೆ ಬದು ಹಾಕಿಸಿ ಸಹಾಯ ಮಾಡಿದ್ದೇವೆಂದು ಹೇಳುತ್ತಾರೆ. ಇದರಿಂದ ರೈತರಿಗೆ ಬಹಳ ತೊಂದರೆಯಾಗುತ್ತಿದೆ

ಅಗ್ರಿಕಲ್ಚರಲ್ ಯೂನಿವರ್ಸಿಟಿಗೆ ಸಂಶೋಧನೆ ಕಾರ್ಯವನ್ನು ವರ್ಗಾಯಿಸಿ ಅದಕ್ಕಾಗಿ ಏನು ಕಮಿಟ್ ಮಾಡಿಕೊಂಡಿದ್ದಾರೆ ಅದರ ಪ್ರಕಾರ ಕೊಡಬೇಕು ಬ್ಲಾಕ್ ಗ್ರಾಂಟ್ ೧೯೬೮-೬೯ರಲ್ಲಿ ೩೦ ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಈ ಸಲ ೯೦ ಲಕ್ಷ ರೂಪಾಯಿ ಕೊಟ್ಟಿದ್ದಕ್ಕಾಗಿ ಸರ್ಕಾರವನ್ನು ವಂದಿಸುತ್ತೇನೆ. ಸಂಶೋಧನೆಗೆ ಬೇಕಾದ ಹಣವನ್ನು ಒದಗಿಸಲೇ ಬೇಕು. ಈ ವಿಭಾಗವನ್ನು ವಿಶ್ವವಿದ್ಯಾಲಯಕ್ಕೆ ವರ್ಗಾಯಿಸು ವಾಗ ಏನು ಕಮಿಟ್ ಮಾಡಿಕೊಂಡಿದ್ದಾರೆ ಅಷ್ಟನ್ನು ಕೊಡಲೇಬೇಕು. ಕೇಂದ್ರ ಸರ್ಕಾರ ಮತ್ತು ಐಸಿಎಆರ್., ಕಡೆಗೆ ತೋರಿಸುವುದು ಸರಿಯಲ್ಲ. ಪಂಜಾಬಿನಲ್ಲಿ ಆಗಿರವಂಥ ಪ್ರಗತಿ ನಮ್ಮ ರಾಜ್ಯದಲ್ಲಿ ಕೂಡ ಆಗ ಬೇಕಾದರೆ ಸಂಶೋಧನೆಗೆ ಬೇಕಾದ ಹಣವನ್ನು ಇಲಾಖೆಯಿಂದ ಕೊಡಬೇಕು. ಮತ್ತು ತನ್ಮೂಲಕ ರೈತರಿಗೆ ಬೇಕಾದ ಹೊಸ ಹೊಸ ತಳಿಗಳನ್ನು ಕೊಂಡು ಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕು.

ಬೆಂಗಳೂರು ಡೈರಿಯಲ್ಲಿ ನಷ್ಟವಾಗುತ್ತಿದೆ. ಅದರ ಬಗ್ಗೆ ಏನೂ ಮಾಡಿಲ್ಲ. ಹಾಲು ಪೆರಿಷಹಲ್ ಆರ್ಟಿಕಲ್. ಅದನ್ನು ಹೆಚ್ಚು ಕಾಲ ಇಡುವುದಕ್ಕಾಗುವುದಿಲ್ಲ. ಡೈರಿಯಲ್ಲಿ ಈಗ ಆಡಳಿತ ಸ್ವಲ್ಪ ಮಟ್ಟಿಗೆ ಉತ್ತಮ ವಾಗಿದೆ. ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಉತ್ತೇಜನವನ್ನು ಕೊಟ್ಟು ಮಧ್ಯವರ್ತಿ ಜನರೆನಿದ್ದಾರೆ ಮತ್ತು ಕಮಿಷನ್ ಏಜೆಂಟರೇನಿದ್ದಾರೆ, ಅವರನ್ನು ತಪ್ಪಿಸಬೇಕು. ಬೆಂಗಳೂರು ಡೈರಿಯನ್ನು ಕಮರ್ಷಿ-ಯಲ್ ಬೇಸಿಸ್‌ನಲ್ಲಿ ನೋಡಬಾರದು ಎಂದು ಹೇಳುತ್ತೇನೆ.

ಹಾರ್ಟಿಕಲ್ಚರಲ್ ಇಲಾಖೆಯಲ್ಲಿ ಚೆನ್ನಾಗಿ ಕೆಲಸ ನಡೆಯುತ್ತಿದೆ. ಅದರಲ್ಲಿಯೂ ಕೈ ಹಾಕುವುದಕ್ಕೆ ಹೊರಟಿದ್ದಾರೆಂದು ಕೇಳಿದ್ದೇನೆ. ಆ ರೀತಿ ಮಾಡದೆ ಅಲ್ಲಿ ಒಳ್ಳೆಯ ಕೆಲಸವಾಗುವುದಕ್ಕೆ ಅವಕಾಶ ಮಾಡಿ ಕೊಡಬೇಕೆಂದು ಹೇಳಿ, ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ. ನಂಜಪ್ಪ (ಶಾಂತಿನಗರ) : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಮಂಡಿಸಿದ ವ್ಯವಸಾಯ ಅರಣ್ಯ, ಮೀನುಗಾರಿಕೆ, ಪಶು ಸಂಗೋಪನೆ ಬೇಡಿಕೆಗಳನ್ನು ಸ್ವಾಗತಮಾಡಿ ಈ ಸಂದರ್ಭದಲ್ಲಿ ಎರಡು ಮಾತಂ ಹೇಳಲು ಇಚ್ಛೆಪಡುತ್ತೇನೆ. ಬೆಂಗಳೂರು ನಗರದಲ್ಲಿ ಇರತಕ್ಕಂಥ ಎಮ್ಮೆ ಹಸುಗಳಿಗೆ ಲೈಸೆನ್ಸ್ ತೆಗೆದುಕೊಳ್ಳಬೇಕೆಂದು ೫ನೇ ತಾರೀಖಿನ ದಿನ ಬೆಂಗಳೂರು ನಗರ ಕಾರ್ಪೊರೇಷನ್ನು ಪ್ರಕಟಣೆ ಹೊರಡಿಸಿದ್ದು ಪೇಪರಿನಲ್ಲಿ ಬಂದಿತ್ತು, ಅದನ್ನು ನಾನು ನೋಡಿದೆ. ಈಗಾಗಲೇ ಬೆಂಗಳೂರುನಗರ ಕಾರ್ಪೊರೇಷನ್ನಿನಲ್ಲಿ ಭ್ರಷ್ಟಾಚಾರ ಜಾಸ್ತಿ ನಡೆಯುತ್ತಿದೆ ಎನ್ನುವ ಕೂಗು ಇದೆ ಇದೂ ಒಂದು ಸೇರಿದರೆ ಭ್ರಷ್ಟಾಚಾರ ಇನ್ನೂ ಜಾಸ್ತಿಯಾಗುತ್ತದೆ. ಕಾರ್ಪೊರೇಷನ್ನವರು ಲೈಸನ್ಸನ್ನು ಸುಮ್ಮನೆ ಕೊಡುವುದಿಲ್ಲ. ಹೋಟೆಲ್ಲುಗಳಿಗೆ ಲೈಸನ್ಸು ಕೊಡುವ ತರಹದಲ್ಲಿ ಕಂಡೀಷನ್ಸ್ ಹಾಕುತ್ತಾರೆ. ದನಗಳನ್ನು ಮಡಗಿದರೆ ಇಷ್ಟು ಜಾಗ ಇರಬೇಕು, ಹುಲ್ಲು ಹಾಕುವುದಕ್ಕೆ ಜಾಗ ಇರಬೇಕು, ನೀರು ಒದಗಿಸಲು ನಲ್ಲಿ ಇರಬೇಕು, ಫ್ಲಾಶ್‌ಔಟ್ ಇರಬೇಕು ಎಂದು ಹೇಳುತ್ತಾರೆ. ಇಷ್ಟೆಲ್ಲವನ್ನೂ ಮಾಡಿ ದನಗಳನ್ನು ಸಾಕುವುದಕ್ಕೆ ಆಗುತ್ತದೆಯೇ ? ದನಗಳನ್ನು ಸಾಕುವುದಕ್ಕೆ ಆಗುವುದಿಲ್ಲ ಮತ್ತು ಈ ಕಿರಿಕಿರಿ ತಪ್ಪುವುದಿಲ್ಲ. ಈ ರೀತಿ ನಾಗರೀಕರಿಗೆ ತೊಂದರೆ ಕೊಡದೆ, ದನಗಳನ್ನು ಕಟ್ಟುವುದಕ್ಕೆ ಒಂದು ಕಾಲೋನಿ ಮಾಡಬೇಕು, ಅಲ್ಲಿ ಎಲ್ಲಾ ಸೌಕರ್ಯ ಒದಗಿಸಿಕೊಡಬೇಕು ಅಲ್ಲಿಯೇ ಹಾಲು ಕರೆದು ಕೊಡುವಂತೆ ಮಾಡಿ ಅವರಿಂದ ಸರಕಾರ ಹಾಲು ಕೊಂಡುಕೊಳ್ಳಬೇಕು. ಇಂಥ ಒಂದು ವ್ಯವಸ್ಥೆ ಮಾಡಿದರೆ ಎಲ್ಲರಿಗೂ ಅನುಕೂಲವಾಗುತ್ತದೆ, ಈ ರೀತಿ ಮಾಡದೆ ಕಾರ್ಪೊರೇಷನ್ ಲೈಸೆನ್ಸ್ ತೆಗೆದುಕೊಳ್ಳಬೇಕು ಎಂದು ಹೇಳಿದರೆ ಬಹಳ ಅನ್ಯಾಯವಾಗುತ್ತದೆ, ಅಲ್ಲದೆ ಭ್ರಷ್ಟಾಚಾರ ಜಾಸ್ತಿಯಾಗುತ್ತದೆ. ಆದುದರಿಂದ ಹೀಗೆ ಮಾಡಬಾರದು. ದನಗಳ ಕೊಟ್ಟಿಗೆ ಇರುವ ಒಂದು ಕಾಲೋನಿ ಮಾಡಿ ಅಲ್ಲಿ ಎಲ್ಲ ದನಗಳನ್ನು ಕಟ್ಟಬೇಕು ಎಂದು ಕಾನೂನು ಮಾಡಲು ಕ್ರಮ ತೆಗೆದುಕೊಳ್ಳಬೇಕು. ಅದನ್ನು ಬಿಟ್ಟು ಪ್ರತಿಯೊಂದು ದನಕ್ಕೆ ಲೈಸೆನ್ಸ್ ತೆಗೆದುಕೊಳ್ಳಿ ಎಂದರೆ ನಿಜ ವಾಗಿಯೂ ಬಹಳ ತೊಂದರೆಯಾಗುತ್ತದೆ. ಇಂದು ಬೆಂಗಳೂರು ನಗರದಲ್ಲಿ ಡೈರಿ ಮೂಲಕ ಹಾಲು ಸರಿಯಾಗಿ ನಾಗರೀಕರಿಗೆ ಸರಬರಾಜು ಮಾಡುತ್ತಿಲ್ಲ. ನಾಗರೀಕರಿಗೆ ಹಾಲು ಸರಬರಾಜು ಮಾಡುವ ಉದ್ಯೋಗವನ್ನು ಬೆಂಗಳೂರು ನಗರದಲ್ಲಿ ಅನೇಕ ಬಡವರು ಮಾಡುತ್ತಿದ್ದಾರೆ. ಅವರು ಹಸುಗಳನ್ನು ಮಡಗಿಕೊಂಡು ಜೀವನ ಮಾಡುತ್ತಿದ್ದಾರೆ. ಸರಕಾರ ಇಂಥವರಿಗೆ ಬೇಕಾದರೆ ಬೇರೆಕೆಲಸಕೊಟ್ಟು ಅವರ ದನಗಳನ್ನು ತೆಗೆದುಕೊಂಡು, ಹೋಗಿ ಕಾಲೋನಿಯಲ್ಲಿ ಬೇಕಾದರೆ ಮಡಗಿಕೊಳ್ಳಲಿ. ಸರ್ಕಾರದವರೇ ಹಾಲಿನ ಉತ್ಪತ್ತಿ ತೆಗದುಕೊಳ್ಳಲಿ. ಆದರೆ ಕಾರ್ಪೊರೇಷನ್ ದನಗಳಿಗೆ ಲೈಸೆನ್ಸ್ ತೆಗೆದುಕೊಳ್ಳಬೇಕು ಎಂದು ಹೇಳುವುದನ್ನು ಮಾತ್ರ ನಾನು ವಿರೋಧ ಮಾಡುತ್ತೇನೆ. ಇದರಿಂದ ಜನರಿಗೆ ತೊಂದರೆಯಾಗು ತ್ತದೆ ಹಾಗೂ ಇದರಲ್ಲಿ ಬಹಳ ಕಷ್ಟ ಇದೆ. ಬೆಂಗಳೂರಿನಲ್ಲಿ ಕಾರ್ಪೊರೇಷನ್ನಿನಲ್ಲಿ ಎಂಥ ಆಡಳಿತ ನಡೆಯುತ್ತಿದೆ ಎನ್ನುವುದು ಜನರಿಗೆ ಗೊತ್ತಿದೆ. ಇಂಥ ಸಂದರ್ಭದಲ್ಲಿ ದನಗಳಿಗೆ ಲೈಸೆನ್ಸ್ ತೆಗೆದುಕೊಳ್ಳ ಬೇಕು ಎಂದು ಹೇಳುವುದನ್ನು ನೋಡಿದರೆ ನನಗೆ ವ್ಯಸನವಾಗುತ್ತಿದೆ. ಈ ವಿಚಾರದಲ್ಲಿ ಹಿಂದಕ್ಕೆ ಒಂದು

(ಶ್ರೀ ಎ. ನಂಜಪ್ಪ)

ನಿರ್ಣಯ ಏನು ನಾವು ಮಾಡಿದ್ದೇವೆಯೋ ಅದರ ಪ್ರಕಾರ ಜನರಿಗೆ ಅನುಕೂಲ ಮಾಡಿಕೊಡಬೇಕು ಎಂದು ಇದೆ. ಅದರ ಪ್ರಕಾರ ಅನುಕೂಲ ಮಾಡಿಕೊಡುವುದನ್ನು ಜಾರಿಗೆ ಕೊಡಬೇಕು. ಅದನ್ನು ಬಿಟ್ಟು ಲೈಸನ್ಸ್ ತೆಗೆದುಕೊಳ್ಳಿ ಅಂದರೆ ಜನರು ಹಸುಗಳನ್ನು ರೋಡಿನಲ್ಲಿ, ಫುಟ್‌ಪಾಥಿನಲ್ಲಿ ಕಟ್ಟುತ್ತಾರೆ. ಇದರಿಂದ ಏನು ಪ್ರಯೋಜನವಾದೀತು ? ಕಾನೂನು ಪ್ರಕಾರ ವ್ಯವಸ್ಥೆ ಮಾಡದೇ ಜನರಿಗೆ ಕಷ್ಟ ಕೊಡುತ್ತಾರೆ. ಕಾನೂನು ಮಾಡುವುದು ಹೀಗೆಯೆ ? ಅಲ್ಲಿ ಇರತಕ್ಕಂಥ ಅಧಿಕಾರಿಗಳಿಗೆ ಮಾತ್ರ ಅನುಕೂಲ ಮಾಡಿಕೊಟ್ಟ ಹಾಗೆ ಆಗುತ್ತದೆ, ಒಂದು ವೇಳೆ ಈ ಲೈಸೆನ್ಸ್ ಪದ್ಧತಿಯಿಂದ ಬೆಂಗಳೂರು ನಾಗರೀಕರಿಗೆ ತೊಂದರೆಯಾದರೆ ನಾನು ರಾಜೀನಾಮೆ ಕೊಡುತ್ತೇನೆ. ಬೆಂಗಳೂರು ನಗರದ ಪ್ರತಿನಿಧಿ ಗಳಾಗಿ ನಾವು ಇಲ್ಲಿ ಈ ಸಭೆಯಲ್ಲಿ ಒಂಭತ್ತು ಜನ ಸದಸ್ಯರು ಇದ್ದೇವೆ. ನಮಗೆ ಇದರಿಂದ ಧಕ್ಕೆ ಬರುತ್ತದೆ. ಈ ಒಂಭತ್ತು ಜನ ಸದಸ್ಯರ ಅಭಿಪ್ರಾಯ ಏನು ಇದೆ ಎನ್ನುವುದನ್ನು ಸರ್ಕಾರದವರು ಕೇಳಿದ್ದಾರೆಯೇ ? ಬೆಂಗಳೂರು ನಗರದ ಪ್ರತಿನಿಧಿಗಳಾಗಿ ನಾವು ಇದ್ದೇವೆ. ನಮ್ಮ ಜೊತೆಗೆ ಈ ಬಗ್ಗೆ ವಿಚಾರ ವಿನಿಮಯವಾಗಿ ಮಾಡಿದ್ದಾರೆಯೇ? ನಮ್ಮನ್ನು ಕೇಳಿದರೆ ? ನಮ್ಮ ಜೊತೆಗೆ ಚರ್ಚೆ ಮಾಡಬೇಕು. ಅಧಿಕಾರಿಗಳನ್ನು ಮಾತ್ರ ಸರ್ಕಾರದವರು ಕರೆಸಿಕೊಂಡು ಆಫೀಸಿನಲ್ಲಿ ಕೂತುಕೊಂಡು ಈ ತೀರ್ಮಾನ ಮಾಡಿದ್ದಾರೆ. ನಾವು ಪ್ರತಿನಿಧಿಗಳಾಗಿ ಜನಗಳಿಂದ ಆರಿಸಿ ಬಂದಿದ್ದೇವೆ. ನಮನ್ನು ಮೊದಲು ಕೇಳಬೇಕಾಗಿತ್ತು. ಅದನ್ನು ಬಿಟ್ಟು ಲೈಸನ್ಸ್ ತೆಗೆದುಕೊಳ್ಳಬೇಕೆಂದು ಅಧಿಕಾರಿಗಳೊಡನೆ ಚರ್ಚೆಮಾಡಿ ತೀರ್ಮಾನ ಮಾಡಿರುತ್ತಾರೆ. ಲೈಸೆನ್ಸ್‌ನಿಂದ ಹಣ ಶೇಖರಿಸಬೇಕು ಎಂದಿದ್ದರೆ ಬೆಂಗಳೂರಿನ ನಾಗರೀಕರೂ ಕೂಡ ಲೈಸೆನ್ಸ್ ತೆಗೆದುಕೊಳ್ಳಬೇಕು ಎಂದು ಮಾಡಿದರೆ ಸರಿ ಹೋಗುತ್ತದೆ. ಇಡೀ ಬೆಂಗಳೂರಿನಲ್ಲಿ ೨೦ ಲಕ್ಷ ಜನ ನಾಗರೀಕರು ಇದ್ದಾರೆ ಪ್ರತಿಯೊಬ್ಬರು ತಲೆಗೆ ಇಷ್ಟು ಕಂದಾಯ ಎಂದು ಹಾಕಿ ಬೇಕಾದಷ್ಟು ಉತ್ಪತ್ತಿ ಬರುತ್ತದೆ. ಇಂದು ದನಗಳಿಗೆ ಬೇಕಾದ ಹುಲ್ಲು ಭೂಸಾ ಹೊಟ್ಟು ಇಂಡೀ ಬೆಲೆ ವಿಪರೀತ ಜಾಸ್ತಿ ಯಾಗಿದೆ ಬೆಂಗಳೂರು ಡೈರಿ ಎಲ್ಲ ನಾಗರೀಕರಿಗೆ ಹಾಲು ಸಪ್ಲೈ ಮಾಡುತ್ತಾರೆಯೇ ಡೈರಿ ಪ್ರಾರಂಭ ಮಾಡಿರುವುದು ಒಂದು ಒಳ್ಳೆಯ ಕೆಲಸ. ಇದನ್ನು ಒಪ್ಪುತ್ತೇನೆ. ನಗರದಲ್ಲಿ ಎಲ್ಲಾ ದನಗಳನ್ನು ನೋಡಿ ಕೊಳ್ಳುವುದಕ್ಕೆ ಒಂದು ಕಾಲೋನಿ ಮಾಡಿ ಅಲ್ಲಿ ಮಡಗಿಕೊಳ್ಳಲಿ ಎಲ್ಲಹಾಲನ್ನು ಸರಕಾರವೇ ತೆಗೆದುಕೊಳ್ಳಲಿ ಅದನ್ನು ಬಿಟ್ಟು ಲೈಸೆನ್ಸ್ ತೆಗೆದುಕೊಳ್ಳಬೇಕು ಅಂದರೆ ಭ್ರಷ್ಟಾಚಾರ ಜಾಸ್ತಿಯಾಗುತ್ತದೆ. ಬೆಂಗಳೂರು ನಗರದ ನಾವು ಒಂಭತ್ತು ಜನ ಸದಸ್ಯರು ಇದನ್ನು ವಿರೋಧ ಮಾಡುತ್ತೇವೆ. ಇಷ್ಟೇ ಅಲ್ಲದೆ ನಗರದಲ್ಲಿಯ ಎಲ್ಲಾ ಎಮ್ಮೆ ಹಸುಗಳನ್ನು ತಂದು ನಿಮ್ಮ ಮನೆಯಮುಂದೆ ಕಟ್ಟುತ್ತೇವೆ, ವಿಧಾನ ಸೌಧದ ಸುತ್ತ ತಂದು ಕಟ್ಟುತ್ತೇವೆ. ದನಗಳನ್ನು ಇಟ್ಟುಕೊಂಡ ಅನೇಕರು ಇವೊತ್ತು ಪಾಪರ್ ಆಗಿದ್ದಾರೆ. ಅವರಿಗೆ ಹೊಟ್ಟೆಗಿಲ್ಲ. ಅಂಥವರಿಗೆ ಮೊದಲು ಅನುಕೂಲ ಮಾಡಿಕೊಡಿ. ಲೈಸನ್ಸ್ ತೆಗೆದುಕೊಳ್ಳದಿದ್ದರೆ ಒಂದು ಸಾವಿರ ರೂಪಾಯಿ ದಂಡ ವಿಧಿಸುತ್ತಾರೆ, ಇದು ಪ್ರಜಾಪ್ರಭುತ್ವವೇ? ಅಧಿಕಾರಿಗಳಿಗೆ ಫೈನ್‌ಹಾಕಿ ಅಂದರೆ ಅದರ ಎರಡರಷ್ಟು ಹಾಕುತ್ತಾರೆ ಆದುದರಿಂದ ಈ ಬಗ್ಗೆ ನ್ಯಾಯವಾಗಿ ಪರಿಶೀಲನ ಮಾಡಬೇಕು. ನ್ಯಾಯವಾಗಿ ಒಳ್ಳೇ ಕೆಲಸ ಮಾಡಿ. ಅದನ್ನು ಸ್ವಾಗತ ಮಾಡುತ್ತೇವೆ. ಆದರೆ ಈ ರೀತಿ ಲೈಸೆನ್ಸ್ ತೆಗೆದುಕೊಳ್ಳಿ ಎಂದು ಹೇಳುವುದರಿಂದ ಬಹಳ ವ್ಯಥೆಯಾಗುತ್ತಿದೆ, ಇದನ್ನು ಖಂಡಿತ ವಿರೋಧ ಮಾಡು ತ್ತೇವೆ. ಹಸುಗಳನ್ನು ವಿಧಾನ ಸೌಧದ ಮುಂದೆ ನಿಲ್ಲಿಸುತ್ತೇವೆ ಎಂದು, ಈ ಸಂದರ್ಭದಲ್ಲಿ ವ್ಯಥೆಯಿಂದ ಹೇಳಬೇಕಾಗುತ್ತದೆ. ಇದಕ್ಕೆ ಆಸ್ಪದ ಕೊಡಬಾರದು. ಮತ್ತು ಬಡವರಿಗೆ ತೊಂದರೆ ಕೊಡಬಾರದು. ಬಡವರಿಗೆ ಅನುಕೂಲ ಮಾಡಿಕೊಡಬೇಕು. ಬೇಕಾದಷ್ಟು ಹಣ ಖರ್ಚು ಮಾಡುತ್ತಿದ್ದೇವೆ. ದನಗಳ ಕಾಲೋನಿ ಮಾಡಬೇಕು ಎಂದು ಹೇಳುತ್ತೇನೆ, ದಯವಿಟ್ಟು ಲೈಸೆನ್ಸ್ ಹಾಕುವುದಕ್ಕೆ ಹೋಗಬಾರದು ಎಂದು ತಮ್ಮ ಮೂಲಕ ಅವರಿಗೆ ತಿಳಿಸುತ್ತೇನೆ.

ಇನ್ನು ಹಾಲನ್ನು ಸಾಗಿಸುವುದಕ್ಕೆ ಟೆಂಡರುಗಳನ್ನು ಕರೆದು ಲಾರಿಗಳನ್ನು ಬಾಡಿಗೆಗೆ ಇಟ್ಟುಕೊಂಡಿ ದ್ದಾರೆ. ಅವರಿಗೆ ಒಂದು ಕಿ. ಲೋ ಮೀಟರ್‌ಗೆ ೩ ರೂಪಾಯ ಬಾಡಿಗೆ ಕೊಡಬೇಕಾಗಿದೆ. ಇದರಿಂದ ಹಾಲಿನ ಬೆಲೆ ಏರುತ್ತದೆ- ಆದ್ದರಿಂದ ಅದನ್ನು ತಪ್ಪಿಸಿ ಸರ್ಕಾರದವರೇ ವ್ಯಾನುಗಳನ್ನು ಇಟ್ಟರೆ ಒಳ್ಳೆಯ ದೆಂದು ಹೇಳಿ ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ವಂದನೆಗಳನ್ನರ್ಪಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ,

5-00 P.M.

ಶ್ರೀ ಹಂಜಿ-ಶಿವಣ್ಣ (ತರೀಕೆರೆ) :_ ಮಾನ್ಯ ಅಧ್ಯಕ್ಷರೇ ಈ ಸಭೆಯ ಮುಂದೆ ಮಂಡಿಸಿರತಕ್ಕ ಡಿಮ್ಯಾಂಡ್‌ಗಳನ್ನು ವಿರೋಧಿಸಬೇಕಾಗಿರತಕ್ಕ ಸಂದರ್ಭವಿರುವುದರಿಂದ ನಾನು ನಾಲ್ಕುಮಾತುಗಳನ್ನು ಆಡಬಯಸುತ್ತೇನೆ.

ಸರ್ಕಾರದವರು ಅಗ್ರಿಕಲ್ಚರಲ್ ಡಿಮ್ಯಾಂಡನ್ನು ಮಂಡಿಸುತ್ತ ಇದರಿಂದ ರೈತರಿಗೆ ಹೆಚ್ಚಿನ ಅನುಕೂಲ ಮಾಡಿಕೊಡುವುದಕ್ಕಾಗಿ ಈ ಹಣವನ್ನು ಸಭೆಯವರು ಮಂಜೂರು ಮಾಡಬೇಕೆಂದು ಕೇಳಿದ್ದಾರೆ. ಆದರೆ ಈ ಇಲಾಖೆಯಿಂದ ರೈತರಿಗೆ ಆಗತಕ್ಕ ಅನುಕೂಲಕ್ಕಿಂತ ಅನಾನುಕೂಲವೇ ಜಾಸ್ತಿಯಾಗುತ್ತಿದೆ ಎಂಬುದಕ್ಕೆ ನಾನು ಕೆಲವು ವಿಚಾರಗಳನ್ನು ಸರ್ಕಾರದವರ ಹಾಗೂ ಈ ಮಾನ್ಯಸಭೆಯವರ ಗಮನಕ್ಕೆ ತರಲಿಚ್ಛಿಸುತ್ತೇನೆ. ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಒಬ್ಬ ದೊಡ್ಡ ಶ್ರೀಮಂತರಿಗೆ ತುಂಗಭದ್ರ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸುವುದಕ್ಕಾಗಿ ೩ ಸಾವಿರ ಎಕರೆ ಜಮೀನನ್ನೂ ಮತ್ತು ಲೈಸೆನ್ಸನ್ನೂ ಕೂಡ ಮಂಜೂರು ಮಾಡಿದ್ದಾರೆ. ಆದರೆ ಅವರಿಂದ ಈ ದಿವಸ ಅಲ್ಲಿನ ರೈತರಿಗೆಷ್ಟು ಕಿರುಕುಳವಾಗುತ್ತಿದೆ ಎಂಬುದನ್ನು ನಾನೀಗ ತಿಳಿಸಬೇಕಾಗಿದೆ. ಹಿಂದೆ ಆ ರಾಜ ಮಹಾರಾಜರುಗಳ ಕಾಲದಲ್ಲಿ ಅವರು ಬಳುವಳಿಯಾಗಿ ಜಮೀನನ್ನು ಕೊಡುತ್ತಿದ್ದರೆಂದು ಕೇಳುತ್ತಿದ್ದೆವು. ಅದೇ ರೀತಿ ಈ ದಿವಸ ಸರ್ಕಾರದವರೂ ಆ ಶ್ರೀಮಂತರಿಗೆ ೩ ಸಾವಿರ ಎಕರೆ ಒಳ್ಳೆಭೂಮಿಯನ್ನು ಬಳುವಳಿಯಾಗಿ ಕೊಟ್ಟಿದ್ದಾರೆ. ಆದರೆ ಅದರಿಂದ ಬಹಳ ಕೆಟ್ಟಪರಿಣಾಮವುಂಟಾಗಿದೆ. ಮೊದಲು ಆ ಕಂಪನಿಯನ್ನು ಸ್ಥಾಪಿಸತಕ್ಕ ಕಾಲಕ್ಕೆ ಅಲ್ಲಿ ಸುತ್ತಲೂ ೨೦ ಮೈಲಿ ಫಾಸಲೆಯಲ್ಲಿ ಯಾವ ರೈತರು ಕಬ್ಬನ್ನು ಕಬ್ಬನ್ನು ಬೆಳೆದರೂ ಅದನ್ನು ಕಂಪನಿಯವರು ಕೊಳ್ಳಬೇಕೆಂಬ ಒಂದು ಕಂಡಿಷನ್ ಹಾಕಿ ಕೊಡಲಾಗಿತ್ತು. ಆದರೆ ಈಗ ಆ ಕಂಪನಿಯವರು ಅವರಿಗೆ ಕೊಡಲಾಗಿದ್ದ ೩ ಸಾವಿರ ಎಕರೆ ಭೂಮಿಯನ್ನು ಉತ್ತಮಪಡಿಸಿ ಕೊಂಡು ಅದರಲ್ಲಿ ಬೆಳೆಯತಕ್ಕ ಕಬ್ಬನ್ನು ಕಂಪನಿಗೆ ಬಳಸುತ್ತಿದ್ದಾರೆ. ಬೇರೆಯವರು ಬೆಳೆದಿರತಕ್ಕ ಕಬ್ಬನ್ನು ಕೊಳ್ಳುವುದಕ್ಕೆ ಅವರು ಇಷ್ಟಪಡುತ್ತಿಲ್ಲ. ಕೆಲವರು ಶ್ರೀಮಂತರು ಬೆಳೆದ ಕಬ್ಬನ್ನು ಮಾತ್ರ ಸರಿಯಾದ ಬೆಲೆಗೆ ಕೊಳ್ಳುತ್ತಿದ್ದಾರೆ. ಬಡವರು ಬೆಳದಿರತಕ್ಕ ಕಬ್ಬನ್ನು ಕಡಿಮೆ ದರದಲ್ಲಿ ಕೊಟ್ಟರೆ ಕೊಳ್ಳುವುದಾಗಿ ಹೇಳು ತ್ತಿದ್ದಾರೆ. ಅದರಿಂದ ಬಡ ರೈತರಿಗೆ ಬಹಳ ಅನ್ಯಾಯ ವಾಗುತ್ತಿದೆ. ಒಪ್ಪಿಗೆ ಕಬ್ಬಿನ ಬೆಲೆ ೧೨೦ ರೂಪಯಿ ಗಳಿದ್ದರೆ ನಾನೊಪ್ಪಿಗೆ ಕಬ್ಬಿಗೆ ೮೦ ರೂಪಾಯಿ ಬೆಲೆಯನ್ನು ನಿಗದಿ ಮಾಡಿದ್ದಾರೆ. ಇದರಿಂದ ರೈತನ ಗತಿಯೇನಾಗಬೇಕು? ಇಂಥ ಒಂದು ದೊಡ್ಡ ಅನ್ಯಾಯ ಅಲ್ಲಿ ಒಂದು ವರ್ಷದಿಂದಲೂ ನಡೆದುಕೊಂಡು ಬರುತ್ತಿದೆ. ಆದ್ದರಿಂದ ನಾನು ಸರ್ಕಾರಕ್ಕೆ ಸೂಚನೆ ಮಾಡುವುದೇನೆಂದರೆ ಆ ೩ ಸಾವಿರ ಎಕರೆ ಜಮೀನನ್ನು ಅವರಿಂದ ಬಿಡಿಸಿಕೊಂಡು ಅದನ್ನು ಬಡವರಿಗೆ ಹಂಚಿದರೆ ಬಹಳ ಅನುಕೂಲವಾಗುತ್ತದೆ. ಆಗ ಆವರು ಬೇರೆಯವರು ಬೆಳೆದ ಕಬ್ಬನ್ನು ಕೊಳ್ಳುವುದಕ್ಕೂ ಅವಕಾಶವನ್ನು ಕಲ್ಪಿಸಿದಂತಾಗುತ್ತದೆ. ಸರ್ಕಾರದವರು ಈ ವಿಚಾರಕ್ಕೆ ಹೆಚ್ಚಿನ ಗಮನ ಕೊಡಬೇಕೆಂದು ಹೇಳುತ್ತೇನೆ. ಇಲ್ಲವೇ ಸರ್ಕಾರದವರು ಅವರಿಗೆ ಆ ನಾನ್–ಒಪ್ಪಿಗೆ ಕಬ್ಬನ್ನು ಕೊಂಡುಕೊಳ್ಳುವುದಕ್ಕೆ ಒಂದು ನ್ಯಾಯವಾದ ಬೆಲೆಯನ್ನಾದರೂ ನಿಗದಿ ಮಾಡಬೇಕೆಂದುಹೇಳುತ್ತೇನೆ. ಮತ್ತು ಅಲ್ಲಿ ೨೦ ಮೈಲಿ ಸುತ್ತುಮುತ್ತಲಿನ ಪ್ರದೇಶದಲ್ಲಿ ಬೆಳೆಯತಕ್ಕ ಎಲ್ಲ ಕಬ್ಬನ್ನು ಇವರು ಕೊಂಡುಕೊಳ್ಳುವಂತೆ ಒಂದು ಕಂಡೀಷನ್ ಸಹಾ ಹಾಕಬೇಕೆಂದು ಹೇಳುತ್ತೇನೆ.

ಇನ್ನು ಸರ್ಕಾರದವರು ಮಾಡಿರತಕ್ಕ ಒಂದು ದೊಡ್ಡ ಅಪರಾಧ ಎಂದರೆ ಚುನಾವಣೆಗೆ ಮುನ್ನ ಆಡಳಿತ ಪಕ್ಷದವರು ರಾಜ್ಯದಲ್ಲಿ ಎಲ್ಲ ಜನರಿಗೂ ಕಂದಾಯವನ್ನು ಮಾಫಿಮಾಡುತ್ತೇವೆಂದು ಹೇಳಿ ಚುನಾವಣೆಗಳು ಮುಗಿದ ನಂತರ ರಾಜ್ಯದಲ್ಲಿ ಒಂದಕ್ಕೆ ನಾಲ್ಕು ಪಟ್ಟು ಕಂದಾಯದ ದರವನ್ನು ಹೆಚ್ಚಿಸಿದ್ದಾರೆ. ಇದರಿಂದ ಈ ಸರ್ಕಾರದವರು ರೈತರಿಗೆ ಮಾಡಬಾರದ ಅನ್ಯಾಯವನ್ನು ಮಾಡಿದ್ದಾರೆಂದು ಹೇಳುತ್ತೇನೆ.

ಇನ್ನು ಪಶುಸಂಗೋಪನೆ ವಿಚಾರಕ್ಕೆ ಬಂದರೆ–ನಮ್ಮ ದೇಶದಲ್ಲಿ ಅನೇಕ ಕಡೆ ಅಮೃತಮಹಲ್ ಕಾವಲುಗಳಿವೆ. ಅಲ್ಲಿ ಮೊದಲು ಉತ್ತಮ ತಳಿಯ ರಾಸುಗಳನ್ನು ಉತ್ಪತ್ತಿಮಾಡುತ್ತಿದ್ದರು. ಈ ದಿವಸ ಅಲ್ಲಿ ಯಾವ ಕಾವಲುಗಾರರನ್ನು ಆ ಅಮೃತಮಹಲ್ ಕಾವಲಿನ ಬಗ್ಗೆ ಇಡಲಾಗಿದೆಯೋ ಆ ಜನರು ತಮ್ಮ ರಾಸುಗಳನ್ನು ಮಾತ್ರ ಆ ಕಾವಲಿನಲ್ಲಿ ಮೇಯಿಸಿ ಸರ್ಕಾರಿ ರಾಸುಗಳನ್ನು ಕಾಡಿಗೆ ಮೇಯುವುದಕ್ಕೆ ಓಡಿಸುತ್ತಿದ್ದಾರೆ. ಅವರ ಇಂಥ ಚಟುವಟಿಕೆಗಳೆಲ್ಲಾ ಈ ಆಡಳಿತ ನಡೆಸತಕ್ಕ ಸರ್ಕಾರಕ್ಕೆ ಗೊತ್ತಾಗುವುದಿಲ್ಲ ಎಂಬುದನ್ನು ಅವರು ಚೆನ್ನಾಗಿ ಮನಗಂಡಿದ್ದಾರೆ. ಏಕೆಂದರೆ ಈ ದಿವಸ ಯಾರ ಕೈಗೆ ದೇಶದ ಆಡಳಿತ ಸಿಕ್ಕಿದೆಯೋ ಅವರು, ಎಂದೂ ಕುದುರೆಯನ್ನು ಹತ್ತದವನು ಕುದುರೆಯನ್ನು ತಾನು ಹಿಂದುಮುಂದಾಗಿ ಹತ್ತಿ ಕುಳಿತಂತೆ ಇಂದಿನವರು ಆಡಳಿತವನ್ನು ನಡೆಸುತ್ತಿದ್ದಾರೆಂಬುದು ಅವರಿಗೆ ಚೆನ್ನಾಗಿ ಮನದಟ್ಟಾಗಿದೆ. ಈ ಜನರ ಕೈಗೆ ದೇಶದ ಆಡಳಿತ ಸಿಕ್ಕಿ ಇಲ್ಲಿಗೆ ೨೦–೨೨ ವರ್ಷಗಳಾಯಿತು. ಆದರೆ ಇಲ್ಲಿಯವರೆಗೂ ಇಲ್ಲಿ ಅಧಿಕಾರದಲ್ಲಿರತಕ್ಕ ಮಂತ್ರಿಗಳಿಗೆ ಆ ಅಮೃತಮಹಲ್ ಕಾಲವಲುಗಳೆಲ್ಲಿವೆ ಎಂಬುದು ತಿಳಿಯದು. ಅಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಯಾರೂ ಪರೀಕ್ಷೆ ಮಾಡಿಲ್ಲ. ನಾನು ವೃಥಾ ಮಂತ್ರಿಗಳನ್ನು ಅಲ್ಲಗಳೆಯಬೇಕೆಂದು ಈ ಮಾತುಗಳನ್ನು ಹೇಳುತ್ತಿಲ್ಲ. ಇರತಕ್ಕ ವಿಚಾರವನ್ನು ಸಭೆಯ ಗಮನಕ್ಕೆ ತರುತ್ತಿದ್ದೇನೆ.

ಇನ್ನು ಅರಣ್ಯ ಖಾತೆಯ ಬಗ್ಗೆ ಎರಡು ಮಾತುಗಳನ್ನು ಹೇಳಬೇಕಾಗಿದೆ. ಈಗಾಗಲೇ ರಾಜ್ಯದಲ್ಲಿರತಕ್ಕ ಅರಣ್ಯ ಸಂಪತ್ತೆಲ್ಲಾ ನಾಶವಾಗುತ್ತಾ ಬಂದಿದೆ. ಈ ಹಿಂದೆ ಕಾಂಗ್ರೆಸ್ ಪಕ್ಷದ ಮಾನ್ಯ

(ಶ್ರೀ ಹಂಚಿ ಶಿವಣ್ಣ)

ಸದಸ್ಯರೊಬ್ಬರು ಮಾತನಾಡುತ್ತಾ ಹೇಳಿದರು, ರಾಜ್ಯದಲ್ಲಿ ಇರತಕ್ಕ ಅರಣ ಸಂಪತ್ತು ಒಂದನ್ನು ಸಂರಕ್ಷಣೆ ಮಾಡಿಕೊಂಡು ಬಂದರೆ ಈ ರಾಜ್ಯವನ್ನು ೫೦ ವರ್ಷಕಾಲ ಸುಖವಾಗಿ ಆಳಬಹುದೆಂದು ಬ್ರಿಟೀಷರು ದೇಶ ಬಿಟ್ಟು ಹೋಗುವಾಗ ಹೇಳಿದ್ದರು ಎಂಬುದಾಗಿ ನಿಜ, ಅವರು ಹೇಳಿದಂತೆ ೫೦ ವರ್ಷಗಳಕಾಲ ಬರಬೇಕಾಗಿದ್ದ ಸಂಪತನ್ನು ಇವರು ಆಡಳಿತಕ್ಕೆ ಬಂದ ೨೦ ವರ್ಷಗಳಲ್ಲೇ ಹಾಳು ಮಾಡಿದ್ದಾರೆ ಇವರಿಗೆ ಕಾಡು ಎಂದರೇನು ಎಂಬುದೇ ಗೊತ್ತಿಲ್ಲ. ಅಂದಾಗ ಇವರಿಗೆ ಆ ಕಾಡುಗಳನ್ನು ಸಂಗಕ್ಷಣೆ ಮಾಡಬೇಕು, ಅಭಿವೃದ್ಧಿ ಮಾಡಬೇಕು ಅನ್ನುವ ಆಸಕ್ತಿಯಾದರೂ ಹೇಗೆ ಬರಬೇಕು? ನಾವು ಈ ಸಭೆಯಲ್ಲಿ ಪದೇ ಪದೇ ಅರಣ್ಯಾಧಿಕಾರಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ದೂರುಗಳನ್ನು ಹೇಳಿದ್ದಾಗ್ಯೂ ಅದಕ್ಕೇನೂ ಪುರಸ್ಕಾರ ಸಿಕ್ಕಲಿಲ್ಲ.

ಪ್ರತಿಯೊಂದು ಕಡೆಯೂ ಸರ್ಕಾರದವರು ಎಲ್ಲೆಲ್ಲಿ ಕಳವಿನಿಂದ ನಾಟಾಗಳು ಸಾಗುತ್ತಿವೆಯೊ ಅಲ್ಲೆಲ್ಲಾ ತಮ್ಮ ಇಲಾಖೆಯ ನೌಕರರನ್ನೂ ಅಧಿಕಾರಿಗಳನ್ನೂ ಇಟ್ಟಿದ್ದಾರೆ. ಆದರೇನು ಸಾರ್ಥಕ? ಮಾಮೂಲಿನಂತೆ ಈಗಲೂ ಲಕ್ಷಾಂತರ ರೂಪಾಯಿಗಳ ಬೆಲೆಬಾಳತಕ್ಕ ಸಾಗುವಾನಿ ಮತ್ತು ಶ್ರೀಗಂಧದ ಮರ ಕಳುವಾಗುತ್ತಲೆ ಇವೆ. ಅಂದಾಗ ಅಲ್ಲಿರತಕ್ಕ ಆ ಅಧಿಕಾರಿಗಳು ಅಲ್ಲಿ ಪರೀಕಾಗದೆ ಇದ್ದರೆ ಹೇಗೆ ಕಳುವಾಗುವುದಕ್ಕೆ ಅವಕಾಶವಿದೆ? ಇದು ಇನ್ನು ಕೆಲವಾರು ವರ್ಷಗಳು ಹೀಗೇ ಮುಂದುವರಿದಲ್ಲಿ ನಮ್ಮ ಮುಂದಿನ ಪೀಳಿಗೆಗೆ ಕಾಡು ಎಂದರೇನು? ಸಾಗುವಾನಿ ಮರ ಎಂದರೇನು? ಎಂಬುದೇ ಗೊತ್ತಾಗದಂತಾಗುತ್ತದೆ. ಇನ್ನೂ ಮೊನ್ನೆತಾನೆ ಕಾಡಿನಲ್ಲಿ ಒಂದು ಕಡೆ ಕಳವಿನಿಂದ ಸಾಗುತ್ತಿದ್ದ ಸುಮಾರು ೪೦ ಸಾವಿರ ರೂಪಾಯಿಗಳ ಬೆಲೆಬಾಳತಕ್ಕ ನಾಟಾಗಳನ್ನು ಒಬ್ಬ ಅರಣ್ಯ ಇಲಾಖೆಯ ಅಧಿಕಾರಿಗಳು ತಮ್ಮ ಪ್ರಾಣದ ಮೇಲಿನ ಇಚ್ಛೆಯನ್ನು ಕೂಡ ತೊರೆದು ಅದನ್ನು ಹಿಡಿದಿದ್ದಾರೆ. ಆ ದಿವಸ ಅವರ ಪ್ರಾಣಕ್ಕೆ ಅಪಾಯಸಂಭವಿಸತಕ್ಕ ಪರಿಸ್ಥಿತಿ ಇತ್ತು ಎಂದು ಹೇಳಲಾಗುತ್ತಿದೆ. ಅವರು ಸುದೈವದಿಂದ ಆ ವಿಪತ್ತಿನಿಂದ ಪಾರಾಗಿದ್ದಾರೆ. ಇನ್ನಾದರೂ ಸರ್ಕಾರದವರು ಈ ವಿಚಾರದಲ್ಲಿ ಕೂಡಲೆ ತೀವ್ರ ಕ್ರಮಗಳನ್ನು ಕೈಗೊಳ್ಳುತ್ತಾರೆಂದು ನಾನು ಆಶಿಸುತ್ತೇನೆ. ನಮ್ಮ ಹಿಂದಿನ ಅಧಿಕಾರಿಗಳನ್ನು ಈ ಗೊಂಡಾರಣ್ಯಗಳನ್ನು ಹೇಗೆ ಸಾಕಿಕೊಂಡು ಬಂದಿದ್ದರು ಎಂಬುದನ್ನು ನಾನೀಗ ವರ್ಣನೆ ಮಾಡುವುದಕ್ಕೂ ಸಹಾ ಸಾಧ್ಯವಿಲ್ಲ. ದೇವರಗುಡ್ಡದಂಥ ಗೊಂಡಾರಣ್ಯದಲ್ಲೂ ಅವರು ಕುದುರೆಯನ್ನು ಹತ್ತಿಕೊಂಡು ಗಸ್ತು ತಿರುಗುತ್ತಿದ್ದರು. ಹಾಗೆ ಹಿಂದಿನವರು ಗಿಳಿಯಂತೆ ಸಾಕಿದ್ದ ಕಾಡನ್ನು ಈ ದಿವಸ ನಿಮ್ಮ ಕೈಗೆ ಕೊಟ್ಟಿದ್ದನ್ನು ನೋಡಿದರೆ ಬೆಕ್ಕಿನ ಕೈಗೆ ಗಿಳಿಯನ್ನು ಕೊಟ್ಟಂತಾಗಿದೆ ಎಂದು ಹೇಳದೆ ವಿಧಿಇಲ್ಲ. ನಮ್ಮ ಅರಣ್ಯಗಳು ಹಾಳಾದುದರಿಂದಲೇ ದೇಶದಲ್ಲಿ ಈಗಾಗಲೆ ಮಳೆಬೆಳೆಗಳಾಗದೆ ಕ್ಷಾಮ ಖಾಯಂ ಆಗಿ ತಲೆಯೆತ್ತಿ ನಿಲ್ಲುವುದಕ್ಕೆ ಅವಕಾಶವಾಗಿದೆ ಎಂಬುದು ಎಲ್ಲರಿಗೂ ತಿಳಿದಿರತಕ್ಕ ವಿಷಯ. ಆದ್ದರಿಂದ ಇನ್ನು ಸರ್ಕಾರದವರು ಅರಣ್ಯಗಳ ಅಭಿವೃದ್ಧಿಯ ವಿಷಯದಲ್ಲಿ ಹೆಚ್ಚಿನ ಆಸಕ್ತಿಯನ್ನು ವಹಿಸಬೇಕೆಂದು ಒತ್ತಾಯ ಮಾಡುತ್ತೇನೆ ಅಷ್ಟೇ ಅಲ್ಲದೆ ಹಾಲಿ ಎಲ್ಲೆಲ್ಲಿ ದಟ್ಟವಾಗಿ ಕಾಡು ಬೆಳೆದಿರುತ್ತದೋ ಅಂಥ ಕಡೆಗಳಲ್ಲಿ ಕಾಡನ್ನು ಕಡಿದು ನೀಲಗಿರಿ ಮರಗಳನ್ನು ಬೆಳೆಸುವ[illegible]ಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತಿದಾರೆ. ಅದನ್ನು ತಪ್ಪಿಸಿ ಎಲ್ಲಿ ಮರಗಳೇ ಇಲ್ಲವೋ ಅಂಥ ಕಡೆಗಳಲ್ಲಿ ಮಾತ್ರ ಆ ನೀಲಗಿರಿ ಗಿಡಗಳನ್ನು ಬೆಳೆಸಬೇಕೆಂದು ಹೇಳಿ ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ನಂಜಪ್ಪ (ಗಂಡಸಿ) : ಮಾನ್ಯ ಸಭಾಧ್ಯಕ್ಷರೇ, ಈ ದಿವಸ ವ್ಯವಸಾಯ, ಪಶುಪಾಲನೆ, ಅರಣ್ಯ ಇಲಾಖೆ ಇವುಗಳಿಗೆ ಸಂಬಂಧಪಟ್ಟ ಬೇಡಿಕೆಗಳನ್ನು ಅನುಮೋದನೆ ಮಾಡುತ್ತಾ ಒಂದೆರಡು ಸಲಹೆಗಳನ್ನು ಈ ಸಭೆಯ ಮುಂದಿಡುತ್ತೇನೆ.

ಪಶುಪಾಲನೆಯ ಬಗ್ಗೆ ಈವೊತ್ತಿನ ದಿವಸ ಅನೇಕ ಸನ್‌ಮಾನ್ಯ ಸದಸ್ಯರು ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಪ್ರತಿಯೊಬ್ಬರೂ ಕೂಡ ಇದರ ಉತ್ಪಾದನಾ ವಿಚಾರದಲ್ಲಿ ಹೆಚ್ಚು ಸಲಹೆಗಳನ್ನು ಕೊಟ್ಟಿದ್ದಾರೆ. ಆದ್ದರಿಂದ ನಾನು ಮತ್ತೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಮುಖ್ಯವಾದ ಒಂದು ವಿಚಾರವನ್ನು ನಮ್ಮ ಮಂತ್ರಿಗಳ ಗಮನಕ್ಕೆ ತರಬೇಕೆಂದು ಇಚ್ಛೆಪಡುತ್ತೇನೆ. ನಮ್ಮದು ವ್ಯವಸಾಯ ದೇಶ. ಈ ವ್ಯವಸಾಯಕ್ಕೆ ಮುಖ್ಯವಾಗಿ ಬೇಕಾಗಿರತಕ್ಕದ್ದು ಗಟ್ಟಿ ಮುಟ್ಟಾದ ಎತ್ತುಗಳು ಏನು ಇವೆಯೋ ಅವು ಕಡಿಮೆಯಾಗಿಬರುತ್ತಾ ಇವೆ. ಸಾಮಾನ್ಯವಾಗಿ ಇನ್ನು ೫-೬ ವರ್ಷಗಳು ಕೆಲಸ ಮಾಡುವ ಸ್ಥಿತಿಯಲ್ಲಿದ್ದಾಗಲೇ ಎತ್ತುಗಳು ಕಟುಕರ ಪಾಲಿಗೆ ಹೋಗುತ್ತವೆ ಎಂದು ಹೇಳಿದರೆ ತಪ್ಪಾಗಲಾರದು. ಹೆಚ್ಚು ಹೆಚ್ಚಾಗಿ ನಮ್ಮ ದೇಶದಿಂದ ಹೊರಗಡೆಗೆ ತೆಗೆದುಕೊಂಡು ಹೋಗುವುದರಿಂದ ಎತ್ತುಗಳ ಸಂಖ್ಯೆ ದಿನೇ ದಿನೇ ಕಡಿಮೆಯಾಗುತ್ತಾ ಇದೆ. ಇದರ ಬಗ್ಗೆ ಸರ್ಕಾರದವರು ಹೆಚು ನಿಗಾ ಕೊಟ್ಟು ಹೊರಗೆ ಹೋಗುವುದನ್ನು ತಪ್ಪಿಸಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿವರ್ಯರಿಗೆ ಹೇಳುತ್ತೇನೆ.

ಇನ್ನು ನಮ್ಮ ದೇಶಕ್ಕೆ ತಾತ್ಕಾಲಿಕವಾಗಿ ಟ್ರಾಕ್ಟರುಗಳನ್ನು ಉಪಯೋಗಮಾಡುವ ಸ್ಥಿತಿ ಬಂದಿದೆ. ನಮ್ಮ ಮಂತ್ರಿಗಳೋ, ಉಪ ಮಂತ್ರಿಗಳೋ, ಅಥವಾ ೧೦೦ ಎಕರೆ, ಮತ್ತು ಸಾವಿರಾರು ಎಕರೆ ಇರುವಂಥಾವರು ಈ ಟ್ರಾಕ್ಟರನ್ನು ಇಟ್ಟುಕೊಂಡು ಇದರಿಂದ ಉಪಯೋಗ ಪಡೆಯುತ್ತಾರೆ. ನಮ್ಮದು ಸಣ್ಣ ಸಣ್ಣ ಹಿಡುವಳಿದಾರರ ದೇಶ. ಆದುದರಿಂದ ಸಣ್ಣ ಹಿಡುವಳಿದಾರರಿಗೆ ಕಡ್ಡಾಯವಾಗಿ ಎತ್ತುಗಳು ಇಲ್ಲದೇ ಹೋದರೆ ಖಂಡಿತವಾಗಿಯೂ ನಮ್ಮ ವ್ಯವಸಾಯವನ್ನು ಸಾಗಿಸುವುದು ಕಷ್ಟವಾಗುತ್ತದೆ. ಆದುದರಿಂದ ಹಾಲಿನ ಉತ್ಪಾದನೆಗೆ ಎಷ್ಟುಮಟ್ಟಿಗೆ ಮುತವರ್ಜಿ ವಹಿಸಿ ಕೆಲಸಕಾರ್ಯಗಳನ್ನು ಮಾಡುತ್ತಾರೋ ಅಷ್ಟೇ ಮುತವರ್ಜಿ ವಹಿಸಿ ಎತ್ತುಗಳ ಉತ್ಪಾದನೆಯನ್ನೂ ಮಾಡಬೇಕು. ಈ ದೇಶದಲ್ಲಿ ಅದನ್ನು ಸಂಪೂರ್ಣವಾಗಿ ಕೈಬಿಟ್ಟಿದ್ದಾರೆ. ನಮ್ಮ ಸರ್ಕಾರದವರು ಇವೊತ್ತಲ್ಲ ಇನ್ನು ೧೦ ವರ್ಷವಾದ ಮೇಲೆ ಕಷ್ಟಕ್ಕೆ ಸಿಕ್ಕಿಹಾಕಿಕೊಳ್ಳುತ್ತಾರೆ. ಇದನ್ನು ಯೋಚನೆ ಮಾಡಬೇಕು ಎಂದು ಹೇಳುತ್ತೇನೆ ನಮ್ಮ ಮೈಸೂರು ದೇಶ ಸುಪ್ರಸಿದ್ಧವಾದಂಥ ಹಳ್ಳಿಕಾರ ತಳಿಗಳನ್ನು ಹೊಂದಿರುವಂಥ ದೇಶ. ನಮ್ಮ ರಾಜ್ಯದ ರೈತರಿಗೆ ಬೇಕಾದ ಅತ್ಯುತ್ತಮವಾದ ಎತ್ತುಗಳನ್ನು ನಾವು ಅಭಿವೃದ್ಧಿ ಪಡಿಸಬೇಕಾಗಿದೆ. ಆದುದರಿಂದ ಮಾನ್ಯ ಮಂತ್ರಿವರ್ಯರಿಗೆ ನಾನು ಹೇಳುವುದು ಇಷ್ಟೆ. ಎತ್ತುಗಳ ಅಭಿವೃದ್ಧಿ ವಿಚಾರದಲ್ಲಿ ತಮ್ಮ ಶ್ರದ್ಧೆಯನ್ನೂ ವಹಿಸಿ ಕೆಲಸ ಮಾಡಬೇಕು ಎಂದು ಮುಖ್ಯವಾಗಿ ಒಂದು ವಿಚಾರ ಹೇಳುವುದಾದರೆ ಈ ಅಮೃತ್ ಮಹಲ್ ರಾಸು ಏನು ಇದೆಯೋ ಅದು ಅತ್ಯುತ್ತಮವಾದ ಮತ್ತು ಸುಪ್ರಸಿದ್ಧವಾದ ಒಂದು ತಳಿ, ಅದನ್ನು ನಮ್ಮ ಮೈಸೂರಿನಲ್ಲಿ ಸಾಮಾನ್ಯವಾಗಿ ಕಡೆಗಾಣಿಸಿದ್ದಾರೆ, ಇದನ್ನು ಏತಕ್ಕೆ ಕಡೆಗಾಣಿಸಿದ್ದಾರೋ ನನಗೆ ಅರ್ಥವಾಗುವುದಿಲ್ಲ. ಈ ಒಂದು ಆನ್ಯೂಯಲ್ ರಿಪೋರ್ಟ್‌ನಲ್ಲಿ ಅಂದರೆ ೧೯೬೭-೬೮ರ ರಿಪೋರ್ಟಿನಲ್ಲಿ ಕೆಲವು ವಿವರಗಳನ್ನು ಕೊಟ್ಟಿದ್ದಾರೆ. ಸಾಮಾನ್ಯವಾಗಿ ೧೩ ಲೈವ್ ಸ್ಟಾಕ್ ಫಾರಂಗಳು ಇವೆ. ಅಜ್ಜಂಪುರದಲ್ಲಿ ಒಂದು ಕ್ಯಾಟಲ್ ಬ್ರೀಡಿಂಗ್ ಸ್ಟೇಷನ್‌ನಲ್ಲಿ ಹೆಚ್ಚು ಹೆಚ್ಚಾಗಿ ಅಮೃತ್ ಮಹಲ್ ರಾಸುಗಳನ್ನು ಬೆಳೆಸುವಂತೆ ಮಾಡಬೇಕು ಎಂದು ಹೇಳುತ್ತೇನೆ. ಇದಕ್ಕೆ ಖರ್ಚು ಮಾಡತಕ್ಕಂಥಾದ್ದು ೭೦ ೭೫೦ ರೂಪಾಯಿ, ಆದಾಯ ೧,೯೩,೦೦೦ ರೂಪಾಯಿ ಬಂದಿದೆ. ಇಂತಹ ಒಂದು ಒಳ್ಳೆಯ ಹಣ ಬರುವಂಥ ಸ್ಕೀಮು ಈ ದೇಶದಲ್ಲಿ ಇದ್ದರೂ ಕೂಡ ಈ ವಿಚಾರದಲ್ಲಿ ನಮ್ಮ ಸರ್ಕಾರದವರು ಕಡೆಗಾಣಿಸಿದ್ದಾರೆ. ನಮ್ಮ ದೇಶದಲ್ಲಿ ಸುಮಾರು ೮-೧೦ ಸಾವಿರ ಅತ್ಯುತ್ತಮವಾದ ರಾಸುಗಳು ಇವೆ. ಆದಕ್ಕಾಗಿ ಸುಮಾರು ೫೦-೬೦ ಸಾವಿರ ಎಕರೆ ಇರತಕ್ಕಂಥ ಅಮೃತ ಮಹಲ್ ಕಾವಲು ವ್ಯವಸಾಯದ ಇಲಾಖೆಯವರ ವಶದಲ್ಲಿದೆ. ಆದುದರಿಂದ ಈ ಇಲಾಖೆಯವರು ಇಂತಹ ಕಾವಲುಗಳಿಗೆ ಹೆಚ್ಚು ನಿಗಾ ಕೊಟ್ಟು ಇನ್ನೂ ಹೆಚ್ಚು ಹೆಚ್ಚು ಅಮೃತ ಮಹಲ್ ಕಾವಲುಗಳನ್ನು ಮಾಡಬೇಕು ಎಂದು ಹೇಳುತ್ತೇನೆ ಅನಾದಿಕಾಲದಿಂದಲೂ ಬಂದಿರತಕ್ಕಂಥ ಈ ಪದ್ಧತಿಯಿಂದ ಎಷ್ಟು ಕಾವಲುಗಳಲ್ಲಿ ದನಗಳನ್ನು ಸಾಕುತ್ತಿದ್ದರೋ ಅಷ್ಟೇ ದನಗಳನ್ನು ಈಗಲೂ ಸಾಕುತ್ತಿದ್ದಾರೆ. ಮತ್ತು ಪುರಾತನ ಕಾಲದಿಂದ ಬಂದಂಥ ಕಾವಲುಗಳಲ್ಲಿಯೇ ದನಗಳನ್ನು ಮೇಯಿಸುತ್ತಿದ್ದಾರೆ. ದನಗಳನ್ನು ಹೆಚ್ಚು ಹೆಚ್ಚು ಉತ್ಪತ್ತಿ ಮಾಡಬೇಕು. ಆದರೆ ಈ ಕಾವಲುಗಳಲ್ಲಿ ಎಷ್ಟು ಎಕರೆಯಲ್ಲಿ ಮೇವು ಇದೆ, ಎಷ್ಟು ಎಕರೆಯಲ್ಲಿ ರಾಸುಗಳನ್ನು ಹೆಚ್ಚು ಮಾಡಬಹುದು, ಇದರಿಂದ ಎಷ್ಟು ಉತ್ಪಾದನೆ ಮಾಡಬಹುದು ಎನ್ನುವ ಒಂದು ಯೋಜನೆಯನ್ನು ಹಾಕದೆ ಅನಾದಿಕಾಲದಿಂದ ಬಂದ ಒಂದೇ ಒಂದು ಪದ್ಧತಿಯನ್ನು ಅನುಸರಿಸಿಕೊಂಡು ಬರುತ್ತಿದ್ದಾರೆಂದು ನಾನಾದರೂ ಕೂಡ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ ಈವೊತ್ತಿನ ದಿವಸ ನಮ್ಮ ದೇಶಕ್ಕೆ ಬೇಕಾದಷ್ಟು ಎತ್ತುಗಳು ಬೇಕಾಗುತ್ತಿದೆ. ಅತ್ಯುತ್ತಮವಾದ ಎತ್ತುಗಳನ್ನು ಉತ್ಪಾದನೆ ಮಾಡಲಿಕ್ಕೆ ಮತ್ತು ಅವುಗಳನ್ನು ಹೆಚ್ಚು ಮಾಡುವುದಕ್ಕೆ ಬೇಕಾದಷ್ಟು ಅನುಕೂಲಗಳು ನಮ್ಮ ಹತ್ತಿರ ಈ ದಿವಸ ಇದೆ. ಆ ಅನುಕೂಲಗಳನ್ನು ಉಪಯೋಗಿಸಿಕೊಂಡು ಜಾಸ್ತಿ ಜಾಸ್ತಿ ಸಂಖ್ಯೆಯಲ್ಲಿ ದನಗಳನ್ನು ಸಾಕಿ ಹೆಚ್ಚು ಹೆಚ್ಚು ಉತ್ಪಾದನೆ ಮಾಡಿ ರೈತರಿಗೆ ಸಾಕಷ್ಟು ಸಂಖ್ಯೆಯಲ್ಲಿ ಒದಗಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದರಲ್ಲಿ ಎರಡು ವಿಧ ಇವೆ. ಒಂದನೆಯದಾಗಿ ಪ್ರೈವೇಟ್ ಕ್ಯಾಟಲ್ ಬ್ರೀಡರ್ಸ್‌ನವರು ಈ ಉತ್ಪಾದನೆಗೆ ತೊಡಗಿದ್ದಾರೆ. ಎರಡನೆಯದಾಗಿ ಸರ್ಕಾರದವರೂ ಇದಕ್ಕೆ ತೊಡಗಿದ್ದಾರೆ. ಸರ್ಕಾರದವರು ಈ ಪ್ರೈವೇಟ್ ಕ್ಯಾಟಲ್ ಬ್ರೀಡರ್ಸ್‌ಗೆ ನೀವು ಉತ್ಪಾದನೆ ಮಾಡಬೇಡಿ ನಾವೇ ಮಾಡುತ್ತೇವೆ ಎಂದು ಹೇಳುತ್ತಾರೆ.

[Mr. DEPUTY SPEAKER in the Chair]

ಆದುದರಿಂದ ಪ್ರೈವೇಟ್ ಕ್ಯಾಟಲ್ ಬ್ರೀಡರ್ಸ್‌ನವರು ಇದನ್ನು ಕೈಬಿಟ್ಟಿದ್ದಾರೆ. ಈ ಕೆಲಸವನ್ನು ಸರ್ಕಾರದವರೇ ಮಾಡಬೇಕೆಂದು ಯೋಚನೆ ಮಾಡಿದ್ದಾರೆ. ಆ ರೀತಿ ಮಾಡುತ್ತೇವೆಂದು ಹೇಳಿ ಇದನ್ನು ಪ್ರೈವೇಟ್‌ನವರಿಗೆ ಮಾಡುವುದಕ್ಕೂ ಅವಕಾಶ ಕೊಡುವುದಿಲ್ಲ, ತಾವೂ ಮಾಡುವುದಿಲ್ಲ. ನೀವಾದರೂ ಕೂಡ ದಕ್ಷತೆಯಿಂದ ಕೆಲಸ ಮಾಡುತ್ತಾ ಇಲ್ಲ. ಕಾಲಾನು ಕಾಲದಿಂದ ನಡೆದುಕೊಂಡು ಬಂದಂಥ ಸುಪ್ರಸಿದ್ಧವಾದ ತಳಿಯ ಅಭಿವೃದ್ಧಿಯ ಕಡೆಗೆ ಗಮನ ಕೊಡುತ್ತಾ ಇಲ್ಲ. ಇದರ ಹಿಂದೆ ಯಾರಾವರೂ

(ಶ್ರೀ ಬಿ. ನಂಜಪ್ಪ)

ನಾಟಕ ಆಡಿದ್ದಾರೆಯೇ ಎಂದು ಕೇಳುತ್ತೇನೆ. ಈ ಸ್ಥಿತಿಯಲ್ಲಿ ನೀವು ಕೆಲಸಕಾರ್ಯಗಳನ್ನು ಮಾಡತ್ತಾ ಇದ್ದೀರಿ ಆದರೆ ನಮ್ಮ ಮಂತ್ರಿ ವರ್ಯರಿಗೆ ನಾನು ಹೇಳುವುದು ಇಷ್ಟೆ, ಇದು ಯಾವರೀತಿಯೇ ಇರಲಿ, ಇದು ದೇಶದ ಮರ್ಯಾದೆ, ಇದು ದೇಶದ ಸಂಪತ್ತು ಎಂದು ತಿಳಿದುಕೊಂಡು ಈ ಕೆಲಸಕಾರ್ಯಗಳನ್ನು ಮುತುವರ್ಜಿ ವಹಿಸಿ ಮಾಡಬೇಕು. ಸರ್ಕಾರದವರೇ ಆಗಲಿ ಪ್ರೈವೇಟ್ ಕ್ಯಾಟಲ್ ಬ್ರೀಡರ್ಸ್‌ನವರೇ ಆಗಲಿ ಇದನ್ನು ತೆಗೆದುಕೊಂಡು ಈ ಕೆಲಸಕಾರ್ಯಗಳನ್ನು ಸಮರ್ಪಕವಾಗಿ ಮಾಡಬೇಕು ಎಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಅರಣ್ಯ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಆಡುತ್ತೇನೆ. ಅರಣ್ಯ ಇಲಾಖೆಯಲ್ಲಿ ಸಾಮಾನ್ಯವಾಗಿ ಹೆಚ್ಚು ಉತ್ಪಾದನೆ ಬರುತ್ತಾ ಇದೆ. ಈಗ ಬರುತ್ತಾ ಇರುವಂಥ ಉತ್ಪತ್ತಿ ಹಿಂದೆ ಮಾಡಿದಂಥ ಅಫಾರಸ್ಟೇಷನ್‌ನಿಂದ ಬರುತ್ತಾ ಇದೆ. ಇಲ್ಲದಿದ್ದರೆ ಇಷ್ಟೊಂದು ಉತ್ಪತ್ತಿ ಬರುತ್ತಾ ಇರಲಿಲ್ಲ. ಇದು ಅನಾದಿಕಾಲದಿಂದಲೂ ಬಂದಿರತಕ್ಕಂಥ ಅರಣ್ಯ. ಈವೊತ್ತು ಅದರಿಂಧ ಹೆಚ್ಚು ಸಂಪಾದನೆಯನ್ನು ಮಾಡುತ್ತಾ ಇದ್ದೀರಿ. ಈಗಲಾದರೂ ಕೂಡ ನೀವು ಮಾಡುತ್ತಾ ಇರುವುದು ಈ ಅಫಾರಸ್ಟೇಷನ್‌ನಲ್ಲಿ ಸಮೃದ್ಧಿಯಾಗಿ ಬೆಳೆದಿರತಕ್ಕಂಥ ಬೆಲೆಬಾಳುವಾಥ ಒಳ್ಳೆಯ ಜಾತಿಮರಗಳನ್ನು ಅಂದರೆ ನಂದಿ, ಹೊನ್ನೆ ತೇಗ ಇವುಗಳನ್ನು ಆ ಕಾಡಿನಲ್ಲಿ ಕತ್ತರಿಸುತ್ತಿದ್ದೀರಿ, ಬೆಂಕಿ ಹಾಕಿ ಸುಡುತ್ತಿದ್ದೀರಿ ಮತ್ತೆ ಸರ್ವೆ ಮಾಡಿ ಸಣ್ಣ ಸಣ್ಣ ಗಿಡಗಳನ್ನು ನೆಟ್ಟು ಕಾಡನ್ನು ಬೆಳೆಸುತ್ತೇವೆ ಎಂದು ಹೇಳುತ್ತೀರಿ. ಇದರ ಉದ್ದೇಶ ಏನು ಎಂದು ನಾನು ಪ್ರಶ್ನೆಮಾಡಬೇಕಾಗಿದೆ.

ಚೆನ್ನಾಗಿ ಬೆಳೆದಿರುವ ಕಾಡಿನಲ್ಲಿ ಸೌದೆಗಾಗಿ ಒಳ್ಳೆಯ ಮರಗಳನ್ನು ಕಡಿಯುವುದು ನೋಡಿ ನಮಗೆ ಬಹಳ ಆಶ್ಚರ್ಯವಾಗುತ್ತಿದೆ ಕೆಲವು ಕಡೆ ಲಕ್ಷಾಂತರ ರೂಪಾಯಿಗಳಷ್ಟು ಖರ್ಚುಮಾಡಿ ಕಾಡುಬೆಳೆಸುತ್ತಿದ್ದೀರಿ. ಈಚೆಗೆ ಹುಣಸೂರಿನ ಬಳಿ ಇರುವ ಕಾಡಿಗೆ ಹೊಂದಿಕೊಂಡಂತೆ ಎರಡು ಸಾವಿರ ಎಕರೆಗಳಲ್ಲಿ ಕಾಡು ಬೆಳೆಸಬೇಕೆಂದು ಗಿಡಗಳನ್ನು ನೆಟ್ಟರು. ಆದರೆ ಇಂದು ನೋಡಿದರೆ ಯಾವ ಕಡೆಯಲ್ಲಾದರೂ ಒಂದು ಗಿಡವಾದರೂ ನಿಂತಿಲ್ಲ. ಸುಮ್ಮನೆ ಲಕ್ಷಾಂತರ ರೂಪಯಿಗಳಷ್ಟು ಹಣವನ್ನು ಅಫೊರಸ್ಟೇಷನ್‌ಗಾಗಿ ಖರ್ಚು ಮಾಡುತ್ತೀರಿ. ಹೀಗೆ ಖರ್ಚುಮಾಡಿದರೂ ಇದರಿಂದ ಏನೂ ಪ್ರಯೋಜನವಾಗದೆ ಸರಕಾರದ ಹಣ ಸಂಪೂರ್ಣವಾಗಿ ನಷ್ಟವಾಗಿದೆ. ಇದಕ್ಕೆ ಕಾರಣವೇನು? ಇಲ್ಲಿರುವ ಅಧಿಕಾರಿಗಳು ಸರಿಯಾಗಿ ಗಮನ ಕೊಡದೆ ಹೋಗಾಯಿತೇ? ಈ ಬಗ್ಗೆ ಪರಿಶೀಲನೆ ಮಾಡಿ ಅಫೊರಸ್ಟೇಷನ್ ಸ್ಕೀಂ ವಿಫಲವಾಗುವಂತೆ ಮಾಡಿರುವ ಅಧಿಕಾರಿಗಳ ಮೇಲೆ ಸೂಕ್ತವಾದ ಕಾರ್ಯಕ್ರಮ ತೆಗೆದುಕೊಳ್ಳುವುದು ಸರಿಯಲ್ಲವೇ, ಸುಮ್ಮನೆ ಎಲ್ಲ ಕಡೆಯಲ್ಲೂ ಅರಣ್ಯ ಬೆಳೆಸಬೇಕು, ಅಫೋರೆಸ್ಟೇಷನ್ ಮಾಡಬೇಕೆಂದು ಹೇಳಿ ಗಿಡಗಳನ್ನು ಬೆಳೆಸದೆ ಹೋದರೆ ಇದರಿಂದ ಜನರಿಗೆ ತೊಂದರೆಯಾಗುವುದಿಲ್ಲವೇ? ಯಾರೋ ಕೆಲವರು ಅಧಿಕಾರಿಗಳಿಗೆ ಸಂಪಾದನೆ ಮಾಡಿಕೊಳ್ಳಲು ಒಂದು ದಾರಿ ಮಾಡಿಕೊಳ್ಳಲು ಈ ರೀತಿ ಅಫೊರಸ್ಟೇಷನ್ ಕೆಲಸಗಳನ್ನು ಜಾಸ್ತಿ ಮಾಡುತ್ತಿದ್ದಾರೆಂದು ಕೇಳುತ್ತೇವೆ. ಇದರ ಬಗ್ಗೆ ಸರಿಯಾದ ಎನಕ್ವೈರಿ ಮಾಡಿದರೆ ಮಾನ್ಯ ಮಂತ್ರಿಗಳಿಗೆ ಇದರಲ್ಲಿರುವ ಅವ್ಯವಹಾರಗಳು ಗೊತ್ತಾಗಬಹುದು. ಈಗ ನಡೆಯುತ್ತಿರುವ ಅಫೊರಸ್ಟೇಷನ್ ಕೆಲಸಗಳನ್ನು ನೋಡಿದರೆ ಇದರಿಂದ ಸರಕಾರಕ್ಕೇನೂ ಉಪಯೋಗವಿಲ್ಲ ಮತ್ತು ನಷ್ಟವಾಗುತ್ತಿದೆ ಎನ್ನುವಂತೆ ಇಲ್ಲಿ ಭಾಸವಾಗುತ್ತದೆ. ಮತ್ತು ಕೆಲವು ಅಧಿಕಾರಿಗಳು ಎಲ್ಲಿ ಅಫೊರಸ್ಟೇಷನ್ ಕೆಲಸಗಳು ನಡೆಯುತ್ತಿವೆಯೋ ಅಲ್ಲಿಗೆ ಹೆಚ್ಚು ದುಡ್ಡು ಕೊಟ್ಟು ವರ್ಗಾಯಿಸಿಕೊಳ್ಳುತ್ತಿದ್ದಾರೆ ಎಂದು ಕೇಳುತ್ತೇವೆ. ಏಕೆಂದರೆ ಇಲ್ಲಿ ಅಧಿಕಾರಿಗಳಿಗೆ ದುಡ್ಡನ್ನು ಸಂಪಾದನೆ ಮಾಡಿಕೊಳ್ಳಲು ಅನುಕೂಲವಾಗುತ್ತದೆ ಎಂದು, ಹೀಗೆ ವರ್ಗಕ್ಕಾಗಿಯೇ ಕೆಲವುಜನ ಅಧಿಕಾರಿಗಳು ಪ್ರಯತ್ನ ಮಾಡುತ್ತಿದ್ದಾರೆ ಎಂದು ಕೇಳುತ್ತೇವೆ. ಸರಕಾರದವರು ಒಂದೊಂದು ಕಡೆ ಒಂದೊಂದು ಪ್ಲಾಟು ತೆಗೆದುಕೊಂಡು ಅದನ್ನು ಅಫೊರ್‌ಸ್ಟೇಷನ್‌ಗೆ ಕನವರ್ಟ್ ಮಾಡಿ ಗಿಡಗಳನ್ನು ನೆಡುಸುತ್ತಿದ್ದಾರೆ. ಇಲ್ಲಿ ಹೇಗೆ ಕೆಲಸಮಾಡುತ್ತಾರೆ ಎನ್ನುವುದನ್ನು ಮಾನ್ಯ ಮಂತ್ರಿಗಳು ಅನಿರೀಕ್ಷಿತವಾಗಿ ಹೋಗಿ ನೋಡಿದರೆ ಅವರಿಗೆ ಇದರ ವಿವರಗಳೆಲ್ಲಾ ಚೆನ್ನಾಗಿ ಗೊತ್ತಾಗುತ್ತದೆ. ಈಗ ಮಾಡುತ್ತಿರುವ ಅಫೊರ್‌ಸ್ಟೇಷನ್‌ಗಿಂತ ಸರಕಾರದಲ್ಲಿರುವ ಬಂಜರು ಜಮೀನುಗಳಲ್ಲಿ ಬೆಳೆಬರುವಂತೆ ಸಾಗು ಮಾಡಲು ಪ್ರಯತ್ನ ಮಾಡಿದ್ದರೆ ಜನಕ್ಕೆ ಎಷ್ಟೋ ಅನುಕೂಲಗಳಾದರೂ ಸಿಗುತ್ತಿದ್ದವು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನೊಂದು ವಿಚಾರ ಇಲ್ಲಿ ಹೇಳಬೇಕಾಗಿದೆ. ನಮ್ಮ ಸರಕಾರದವರು ಎಲ್ಲೆಲ್ಲೂ ಹಸಿರುಕ್ರಾಂತಿ ಮಾಡಬೇಕು ಎಂದು ದೊಡ್ಡದಾಗಿ ಪ್ರಚಾರ ಮಾಡುತ್ತಿದ್ದಾರೆ. ಇದು ಬರೀ ಪ್ರಚಾರಕ್ಕಾಗಿ ಮಾಡುತ್ತಿದ್ದಾರೋ ಒಂದೂ ಗೊತ್ತಾಗುತ್ತಿಲ. ಹಸಿರು ಕ್ರಾಂತಿ ಮಾಡುತ್ತೇವೆಂದು ಹೇಳಿ ಸರಕಾರ ಒಂದು ಜಿಲ್ಲೆಗೆ ಅಗ್ರಿಕಲ್ಚರು ಇಲಾಖೆಯಿಂದ ಎಷ್ಟು ಅಧಿಕಾರಿಗಳನ್ನು ನೇಮಕ ಮಾಡಬೇಕು ಎಂದು ಕೇಳುತ್ತೇನೆ.

ಹಿಂದೆ ಒಂದು ಜಿಲ್ಲೆಗೆ ಒಬ್ಬರೆ ಡಿಸ್ಟ್ರಿಕ್ಟ್ ಅಗ್ರಿಕಲ್‌ಚರ್ ಆಫೀಸರು ಎಂದು ಇದ್ದರು. ಅವರೇ ಎಲ್ಲಕೆಲಸಗಳನ್ನೂ ಚೆನ್ನಾಗಿ ಮಾಡುತ್ತಿದ್ದರು. ಆದರೆ ಈಗ ಎಲ್ಲಿ ನೋಡಿದರೂ ಬರೀ ಅಧಿಕಾರಿಗಳೇ ಆಗಿದ್ದಾರೆ. ಬೀಜಗಳಿಗೆ ಒಬ್ಬರು, ಗೊಬ್ಬರಕ್ಕೆ ಒಬ್ಬರು ಷುಗರ್ ಕೇನ್‌ಗೆ ಒಬ್ಬರು, ಸಾಯಿಲ್ ಕನ್ಸರ್‌ವೇಷನ್‌ಗೆ ಒಬ್ಬರು ಹೀಗೆ ಬೇಕಾದಷ್ಟು ಜನ ಅಧಿಕಾರಿಗಳು ಪ್ರತಿಜಿಲ್ಲೆಯಲ್ಲೂ ಇದ್ದಾರೆ. ಇವರೆಲ್ಲರಿಗೂ ಅಲ್ಲಿರುವ ಗ್ರಾಮ ಸೇವಕರುಗಳಿಂದಲೇ ಎಲ್ಲವರದಿಗಳೂ ಬರಬೇಕು. ಅವರು ಕೊಟ್ಟ ವರದಿಗಳ ಆಧಾರದ ಮೇಲೆಯೇ ಇವರುಗಳು ಕೆಲಸಮಾಡಬೇಕು. ಇವರೇನೋ ಯಾವ ರೈತರಬಳಿ ಹೋಗುವುದಿಲ್ಲ ಮತ್ತು ಎಲ್ಲಿ ಪೈರು ಬೆಳೆದಿವೆ ಅಥವಾ ಇಲ್ಲಾ ಎನ್ನುವುದನ್ನು ನೋಡುವುದಕ್ಕೆ ಹೋಗುವುದಿಲ್ಲ. ನಿಜವಾಗಿಯೂ ಹಸಿರುಕ್ರಾಂತಿ ಎನ್ನುವುದು ಬರೀ ಕಾಗದದಲ್ಲಿ ಇದೆಯೇ ಹೊರತು ಜನಗಳಿಗೆ ಇದರಿಂದ ಯಾವ ಪ್ರಯೋಜನವೂ ಆಗುತ್ತಿಲ್ಲ. ಸರಕಾರಕ್ಕೆ ಅಧಿಕಾರಿಗಳನ್ನು ಹೆಚ್ಚುಮಾತ್ರ ಹಸಿರು ಕ್ರಾಂತಿ ಮಾಡಬೇಕು ಎಂದು ಇದ್ದರೆ ಖಂಡಿತ ಇದರಿಂದ ಏನೂ ಆಗುವುದಿಲ್ಲ ಎಂದು ಹೇಳುತ್ತೇನೆ ರೈತರಿಗೆ ನೇರವಾಗಿ ಎಲ್ಲಸಹಾಯ ಸಲಕರಣೆಗಳು ಸರಕಾರದಿಂದ ದೊರೆತರೆ ಆಗ ಹಸಿರು ಕ್ರಾಂತಿ ಎನ್ನುವುದು ಫಲಪ್ರದವಾಗುತ್ತದೆ ಇಲ್ಲದೇ ಇದ್ದರೆ ಇದು ಸಾಧ್ಯವಿಲ್ಲವೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎನ್. ಜಿ. ಹಾಲಪ್ಪ, (ಚನ್ನಗಿರಿ):—ಮಾನ್ಯಅಧ್ಯಕ್ಷರೇ, ನಮ್ಮದೇಶದ ವ್ಯವಸಾಯ ಕ್ಷೇತ್ರದಲ್ಲಿ ಒಂದು ರೀತಿಯಾದ ಸಾಂಕ್ರಾಮಿಕರೋಗ ಹರಡುತ್ತಿದೆ. ಬರೀ ಸ್ಲೋಗನ್‌ಗಳಿಂದ ಸೋಷಿಯಲಿಸಂ ಬರುತ್ತದೆ ಎಂದು ಸರಕಾರದವರು ಭಾವಿಸಿ ಬರಿಹೇಳಿಕೆಗಳನ್ನು ಕೊಡುತ್ತಿದ್ದಾರೆ, ಹಾಗೆ ಇಂದು ಎಲ್ಲೆಲ್ಲೂ ಹಸಿರುಕ್ರಾಂತಿ ಮಾಡಬೇಕು ಎಂದು ದೊಡ್ಡದಾಗಿ ಪ್ರಚಾರ ಮಾಡುತ್ತಿದ್ದಾರೆ. ಹಸಿರುಕ್ರಾಂತಿ ಎನ್ನುವುದು ಬರೀ ಆಫೀಸಿನಲ್ಲಿ ಆಗುತ್ತಿದೆ ಎಂದು ಜನರು ಭಾವಿಸುವಂತಾಗಿದೆ. ಆಗ್ರಿಕಲ್‌ಚರ್ ಆಫೀಸಿನಲ್ಲಿರುವ ಅಧಿಕಾರಿಗಳು ಜನಸಾಮಾನ್ಯರಲ್ಲಿ ಹೋಗಿ ಅವರ ಕಷ್ಟಗಳೇನು ಎನ್ನುವುದನ್ನು ತಿಳಿಯದೇ ಬರೀ ಸ್ಲೋಗನ್ ಮೂಲಕ ಹೇಳಿಕೆಕೊಟ್ಟು ಹಸಿರುಕ್ರಾಂತಿಯಾಗುತ್ತದೆ ಎಂದು ತಿಳಿವರೆ ಅದು ಖಂಡಿತ ಸಾಧ್ಯವಾಗುವುದಿಲ್ಲ. ಡಿಪಾರ್ಟಮೆಂಟಿನಲ್ಲಿರುವ ಅಧಿಕಾರಿಗಳು ರೈತರ ಹತ್ತಿರಹೋಗಿ ಅವರು ಬೆಳೆಯುತ್ತಿರುವ ಪೈರುಗಳು ಚೆನ್ನಾಗಿಬರುತ್ತಿವೆಯೋ ಇಲ್ಲವೇ, ಅವರಿಗೆ ಸುಧಾರಿತವಾದ ಬೀಜಗಳು ಹಾಗು ಗೊಬ್ಬರ ಬೇಕೇ ಇತ್ಯಾದಿ ವಿಚಾರಗಳಲ್ಲಿ ಅವರ ಕಷ್ಟಗಳೇನು ಎಂದು ತಿಳಿದುಕೊಂಡು ಕೆಲಸಮಾಡುತ್ತಿಲ್ಲ. ಉದಾಹರಣೆಯಾಗಿ ಹೇಳಬೇಕಾದರೆ ನಮ್ಮ ತಾಲ್ಲೂಕಿನಲ್ಲಿ ಸುಮಾರು ನಾಲ್ಕೈದು ಸಾವಿರ ಎಕರೆ ಪ್ರದೇಶದಲ್ಲಿ ಭತ್ತ ಬೆಳೆದಿದ್ದರು. ಆದರೆ ಭತ್ತಕ್ಕೆ ಒಂದು ರೀತಿಯಾದ ರಿಂಡರುಪಸ್ಟ್ ಎನ್ನುವ ರೋಗ ತಗುಲಿತ್ತು ಈ ರೋಗವನ್ನು ನಿವಾರಿಸಬೇಕು ಇಲ್ಲದಿದ್ದರೆ ಇಲ್ಲಿನ ಭತ್ತದ ಬೆಳೆ ಹಾಳಾಗುತ್ತದೆ ಎಂದು ಅಧಿಕಾರಿಗಳಿಗೆ ಹೇಳಿದರೂ ಇಲ್ಲಿನ ಎನ್. ಇ. ಎಸ್. ಅಧಿಕಾರಿಗಳು ಗಮನ ಕೊಡಲಿಲ್ಲ. ನಾನೇ ಖುದ್ದು ದಾವಣಗೆರೆಯಲ್ಲಿದ್ದ ಆಗ್ರಿಕಲ್‌ಚರ್ ಇಲಾಖೆಯ ಅಧಿಕಾರಿಗಳಿಗೆ ತಿಳಿಸಿ ಇಲ್ಲಿನ ಫಸಲು ಹಾಳಾಗಿ ಹೋಗುತ್ತಿದೆ ಇದರಲ್ಲಿ ಯಾವುದೋ ಒಂದು ರೀತಿಯಾದ ರೋಗ ಬಂದಿದೆ ಇವನ್ನು ಕ್ರಿಮಿನಾಶಕ ಔಷಧಿ ಉಪಯೋಗಿಸಿ ಸರಿಮಾಡಬೇಕು ಎಂದು ಒತ್ತಾಯ ಮಾಡಿದ ಮೇಲೆ ತಕ್ಕ ಕ್ರಮಕೈಗೊಂಡರು. ಹೀಗೆ ಅಧಿಕಾರಿಗಳಲ್ಲಿ ಮನಪರಿವರ್ತನೆಯಾಗದ ಹೊರತು ಹಸಿರುಕ್ರಾಂತಿ ಎನ್ನುವುದು ಯಾವುದೇ ರೀತಿಯಿಂದಲೂ ಆಗಲು ಸಾಧ್ಯದವಿಲ್ಲ. ನಮ್ಮರೈತರಿಗೆ ಸಕಾಲದಲ್ಲಿ ಮಳೆ ಬರದೇ ಹೋದರೆ ಅವರು ಬೆಳೆಮಾಡಲು ಸಾಧ್ಯವೇ ಇಲ್ಲ. ಹಿಂದೆ ದವಸದ ರೇಟು ಪಲ್ಲಕ್ಕೆ ಸುಮಾರು ೧೨೦ ರೂಪಾಯಿಗಳಿದ್ದುದು ಇಂದು ೪೦–೪೫ ರೂಪಾಯಿಗಳಿಗೆ ಇಳಿದಿದೆ. ಇದರಿಂದ ರೈತರು ಬೆಳೆಯುವ ದವಸಕ್ಕೆ ಸರಿಯಾದ ಬೆಲೆಸಿಗದೆ ನಷ್ಟವಾಗುತ್ತಿದೆ. ಕೆಲವುಕಡೆ ಮಳೆಬಂದರೆ ರೈತರಸ್ಥಿತಿ ಚೆನ್ನಾಗಿರುತ್ತದೆ ಆದರೆ ಕೆಲವುಕಡೆಗಳಲ್ಲಿ ಮಳೆಯೇ ಬಾರದೆ ಹೋದರೆ ಆ ಪ್ರದೇಶ ವಾಸ್ತವವಾಗಿ ಕ್ಷಾಮಪ್ರದೇಶದ್ದಂತಾಗುತ್ತ ದಲ್ಲಿ ಹೇಗೆ ಬೆಳೆಮಾಡಬೇಕು? ಸುಮ್ಮನೆ ಸರಕಾರ ಹಸಿರುಕ್ರಾಂತಿಯಾಗಬೇಕು ಎಂದು ಬರೀ ಹೇಳಿ ಕೆಕೊಡುತ್ತಾ ಹೋದರೆ ಇದರಿಂದ ನಮ್ಮ ದೇಶ ಉದ್ಧಾರವಾಗುವುದಿಲ್ಲ. ನಮ್ಮ ಭದ್ರಾಪ್ರಾಜೆಕ್ಟ್ ಕೆಳಗೆ ಸುಮಾರು ಮೂರು ನಾಲ್ಕು ಸಾವಿರ ಎಕರೆಯಷ್ಟು ಭೂಮಿಯಲ್ಲಿ ಅಲ್‌ಕಲೈನ್ ಆಗಿ ಇಲ್ಲಿ ಯಾವಫಸಲು ಬೆಳೆಯಲು ಆಗುತ್ತಿಲ್ಲ. ಇದರ ಕಡೆಗೆ ವ್ಯವಸಾಯ ಇಲಾಖೆಯವರು ಸಾಕಷ್ಟು ಹೆಚ್ಚು ಗಮನ ವಹಿಸಿ ಇದನ್ನು ನಿವಾರಿಸಲು ಪ್ರಯತ್ನಗಳನ್ನು ಮಾಡಬೇಕೆಂದು ಹೇಳಿದರೂ ಕೂಡ ಇದರ ಕಡೆಗೆ ಗಮನ ಕೊಡಲಿಲ್ಲ. ಇದರಿಂದಾಗಿ ನಮ್ಮಕಡೆಒಬ್ಬರು ಹಿಂದೆ ಲಕ್ಷಾಧೀಶ್ವರರು ಆಗಿದ್ದವರು ಇಂದು ಭಿಕ್ಷಾದಿಪತಿಗಳಾಗಿದ್ದಾರೆ. ಅಗ್ರಿಕಲ್‌ಚರು ಇಲಾಖೆಯವರು ಸೆಲೈನ್ ಆಗಿರುವ ಭೂಮಿಯನ್ನು ಫರ್ಟೈಲ್ ಆಗಿ ಮಾಡಲು ಸೂಕ್ತಕ್ರಮ ತೆಗೆದುಕೊಳ್ಳಲು ಮುಂಜಾಗರೂಕತೆ ವಹಿಸಿದ್ದರೆ ಜನತಗೆ ಅನುಕೂಲವಾಗುತ್ತಿತ್ತು ಹೀಗೆ ಇಲಾಖೆಯಲ್ಲಿರುವ ಅಧಿಕಾರಿಗಳು ರೈತರ ಬಗ್ಗೆ ಸಾಕಷ್ಟು ಆಸಕ್ತಿವಹಿಸದೇ ಹೋದರೆ ರೈತರು ಯಾವಫಸಲನ್ನೂ ಚೆನ್ನಾಗಿ ಬೆಳೆಯಲು ಆಗುವುದಿಲ್ಲ ಇನ್ನು ನಮ್ಮ ಹರಿಹರದಲ್ಲಿ ಒಂದು ಸೀಡ್ ಫಾರಂ ತೆಗೆಯಬೇಕೆಂದು ಸುಮಾರು ೧೬೩ ಎಕರೆ ಪ್ರದೇಶಗಳನ್ನು ವಶಪಡಿಸಿಕೊಂಡಿದ್ದರು. ಆದರೆ ಅಲ್ಲಿಯ ತಾಲ್ಲೂಕು ಜನರು ಇಲ್ಲಿ ವಶಪಡಿಸಿಕೊಂಡಿರುವ ಜಮೀನು ಬಹಳ ಬೆಲೆಯುಳ್ಳದ್ದು ಮತ್ತು ಈ ಭೂಮಿಗೆಹೆಚ್ಚು ಬೆಲೆ ಸರಕಾರ ಕೊಟ್ಟರೆ ಮೂಗಿಗಿಂತ ಮೂಗುತಿಯೇ ಭಾರ ಎನ್ನುವಂತಾಗುತ್ತೆ ಎಂದು

(ಶ್ರೀ ಎನ್. ಜಿ. ಹಾಲಪ್ಪ)

ಇದಕ್ಕೆ ೨೦ ಲಕ್ಷ ಹಣಕೊಡುವುದು ಸರಿಯಲ್ಲ ಎಂದು ಒತ್ತಾಯ ಮಾಡಿದ್ದರಿಂದ ಸರಕಾರ ಇದನ್ನು ಕೈಬಿಟ್ಟರು ಮತ್ತು ಈಚೆಗೆ ನಮ್ಮ ತಾಲ್ಲೂಕಿನ ಬಳಿ ಇರುವ ತ್ಯಾವಣಗಿ ಎಂಬಲ್ಲಿ ಸುಮಾರು ೩೦೦ ಎಕರೆ ಸರಕಾರದ ಗೋಮಾಳ ಇವೆ, ಇದರಲ್ಲಿ ೨೦೦ ಎಕರೆಯೊಳಗೆ ಸೀಡ್‌ಫಾರಂ ಮಾಡಬಹುದು ಎಂದು ಇದ್ದಾರೆ, ಆದರೆ ಇಲ್ಲಿರುವ ಗೋಮಾಳದಲ್ಲಿ ಕೆಲವರು ಸರಕಾರದ ಅಪ್ಪಣೆ ಇಲ್ಲದೆ ಬಗೆರ್ ಹುಕುಂ ಸಾಗುವಳಿ ಮಾಡುತ್ತಿದ್ದಾರೆ. ಸರಕಾರ ಈಗ ಯೋಚಿಸಿರುವಂತೆ ಇಲ್ಲಿ ಒಂದು ಸೀಡ್‌ಫಾರಂ ಮಾಡಿದರೆ ಭದ್ರಾಪ್ರಾಜೆಕ್ಟ್ ಜನರಿಗೆಲ್ಲಾ ಅನುಕೂಲವಾಗುತ್ತದೆ. ಆದುದರಿಂದ ಆದಷ್ಟು ಜಾಗ್ರತೆ ಇಲ್ಲಿರುವ ಗೋಮಾಳದ ಸುಮಾರು ೨೦೦ ಎಕರೆಗಳ ಪ್ರದೇಶದಲ್ಲಿ ಸೀಡ್‌ಫಾರಂ ಮಾಡಿ ಒಳ್ಳೆಯ ಬತ್ತದ ಬೀಜ ಹಾಗೂ ಇನ್ನಿತರ ಸುಧಾರಿತ ಬೀಜಗಳನ್ನು ಜನರಿಗೆ ದೊರಕುವಂತೆ ಸಹಾಯಮಾಡಬೇಕೆಂದು ಕೇಳುತ್ತೇನೆ. ಇದರಿಂದ ದಾವಣಗೆರೆ, ಹರಿಹರ ಹಾಗೂ ಭದ್ರಾಪ್ರಾಜೆಕ್ಟ್‌ನ ಇಲ್ಲಾ ಭಾಗಗಳಿಗೂ ಅನುಕೂಲವಾಗುತ್ತದೆ. ಇದರ ಕಡೆಗೆ ಸರಕಾರ ನಿಗಾವಹಿಸಬೇಕೆಂದು ಹೇಳುತ್ತೇನೆ. ಇನ್ನು ಅರಣ್ಯದ ಬಗ್ಗೆ ಹೇಳಬೇಕಾದರೆ ವೃಕ್ಷ ಕಡಿದರೆ ಬಿಕ್ಷ ಮಾಡುವುದು ಹೆಚ್ಚಾಗುತ್ತೆ ಎನ್ನುವಂತೆ ನಮ್ಮ ಕಾಡುಗಳಲ್ಲಿರುವ ಮರವನ್ನು ಕಡಿದು ನಾಶ ಮಾಡುತ್ತಿದ್ದಾರೆ. ಇದೇಕೆ ಹೀಗೆ ಮಾಡುತ್ತಾರೆನ್ನುವುದು ನನಗೆ ಅರ್ಥವಾಗುತ್ತಿಲ್ಲ. ನಾನೇ ಒಂದು ಪ್ರಶ್ನೆಯನ್ನು ಇದೇ ತಿಂಗಳು ಎರಡನೇ ತಾರೀಖು ಇಲ್ಲಿ ಕೇಳಿದ್ದೆ. ಇದಕ್ಕೆ ಉತ್ತರವಾಗಿ ಮಾನ್ಯ ಮಂತ್ರಿಗಳು ಹೇಳುತ್ತಾ ಚಿಕ್ಕಮಗಳೂರು ದಾವಣಗೆರೆ ಮತ್ತು ಶಿವಮೊಗ್ಗ ಡಿವಿಜನ್‌ಗಳಲ್ಲಿ ಸುಮಾರು ೪೬, ೭೬೩ ಎಕರೆ ಯಷ್ಟು ಪ್ರದೇಶವನ್ನು ಅರಣ್ಯಕ್ಕಾಗಿ ಅಕ್ವೈರು ಮಾಡಿಕೊಂಡಿದೆಯೆಂದು ಹೇಳಿದಾಗ ಇದು ಸರಿಯಲ್ಲ ಎಂದು ನಾನುಹೇಳಿದರೂ ಅದಕ್ಕೆ ಸರಿಯಾದ ಉತ್ತರ ಕೊಡಲಿಲ್ಲ. ಮತ್ತು ಸರಕಾರದಿಂದ ಜವಾಬುದಾರಿಯುತವಾದ ಉತ್ತರಕೂಡಬರಲಿಲ್ಲ. ಮಲೆನಾಡಿನಲ್ಲಿರುವ ಕಾಡುಗಳನ್ನು ಕಡಿದರೆ ಮಳೆ ಬರಲು ತೊಂದರೆಯಾಗುವುದಿಲ್ಲವೇ ಎಂದು ಮತ್ತೊಂದುಪ್ರಶ್ನೆ ಕೇಳಿದುದಕ್ಕೆ There is no decease in rainfall ಎಂದು ಹೇಳಿದರು. ಇದರಿಂದೇನೂ ತೊಂದರೆಯಾಗುವುದಿಲ್ಲ ಎಂದು ಹೇಳಲು ಬಹುಶಃ ಸಂಬಂಧಪಟ್ಟ ಅಧಿಕಾರಿಗಳು ಮಂತ್ರಿಗಳಿಗೆ ಸರಿಯಾದ ಮಾಹಿತಿ ಕೊಡಲಿಲ್ಲ ಎಂದು ಕಾಣುತ್ತದೆ. ಸರಿಯಾದ ಅಂಕೆ ಸಂಖ್ಯೆಗಳನ್ನು ನೋಡಿದರೆ ಮಲೆನಾಡಿನಲ್ಲಿ ಈಚೆಗೆ ಬರುತ್ತಿರುವ ಮಳೆ ಬಹು ಕಡಿಮೆ ಎನ್ನುವುದು ಗೊತ್ತಾಗುತ್ತದೆ. ನಮ್ಮ ಚನ್ನಗಿರಿ ತಾಲ್ಲೂಕಿನಲ್ಲಿರುವ ಎರಡು ಹೋಬಳಿಗಳಲ್ಲೂ ಈ ಸಾರಿ ಮಳೆ ಇಲ್ಲ ಇಲ್ಲಿರುವ ಮೂರು ಸಾವಿರ ಎಕರೆ ಇದ್ದ ಅರಣ್ಯ ಪ್ರದೇಶಗಳಿಂದ ಸೌದೆಗಾಗಿ ಮರಗಳನ್ನು ಕಡಿದುಭದ್ರಾವತಿಯ ಐರನ್ ಕಂಪನಿಗೆ ಕಳುಹಿಸುತ್ತಿದ್ದಾರೆ. ಮಂತ್ರಿಗಳು ಇಲ್ಲಿ ಕೊಟ್ಟಿರುವ ಅಂಕೆಗಳಂತೆ ನೋಡಿದರೆ ತೀರ್ಥಹಳ್ಳಿಯಲ್ಲಿ ೨೫೫ ಎಕರೆಗಳು, ಹೊಸನಗರದಲ್ಲಿ ೧೪೨ ಎಕರೆಗಳು ಚನ್ನಗಿರಿಯಲ್ಲಿ ೩೦೦ ಎಕರೆಗಳಲ್ಲಿರುವ ಕಾಡುಗಳ ಮರಗಳನ್ನು ಕಡಿದು ಐರನ್‌ಕಂಪನಿಗೆ ಒದಗಿಸಲು ಸೌಕರ್ಯ ಮಾಡಿಕೊಟ್ಟಿದ್ದಾರೆ.

ಇವತ್ತು ಚೆನ್ನಗಿರಿ ತಾಲ್ಲೂಕ್‌ನಲ್ಲಿರುವ ಕಾಡಿನಿಂದ ಮರಗಳನ್ನು ಕಳ್ಳಸಾಗಾಣಿಕೆ ಮಾಡಲಾಗುತ್ತಿದೆ. ಇದರ ಜೊತೆಗೆ ಭದ್ರಾವತಿಯಲ್ಲಿರುವ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗೆ ಅವಶ್ಯಕ ವಾದ ಸೌದೆ ಮತ್ತು ಇದ್ದಿಲುಗಳನ್ನು ಒದಗಿಸಲು ಚೆನ್ನಗಿರಿ ತಾಲ್ಲೂಕ್‌ನಲ್ಲಿ ಮೂರು ಸಾವಿರ ಎಕರೆ ಅರಣ್ಯ ಪ್ರದೇಶಗಳಲ್ಲಿ ಮರಗಳನ್ನು ಕಡಿದಿದ್ದಾರೆ. ಮಾನ್ಯ ಮಂತ್ರಿಗಳು ನಮ್ಮ ಮಲೆನಾಡಿಗೆ ಬಂದು ನೋಡಿದರೆ ಕಾಡು ಹಾಳಾಗುತ್ತಿರುವುದನ್ನು ಕಣ್ಣಾರೆ ನೋಡಬಹುದು. ತಾವು ಈಗ ತಮ್ಮ ಅಧಿಕಾರಿಗಳು ಕೊಡುತ್ತಿರುವ ಅಂಕಿ ಅಂಶಗಳನ್ನೇ ಇಲ್ಲಿ ಹೇಳುತ್ತೀರಿ. ನಿಜ ಪರಿಸ್ಥಿತಿ ತಿಳಿಯಬೇಕಾದರೆ ತಾವು ಒಂದು ಸಲ ನಮ್ಮ ಮಲೆನಾಡಿಗೆ ಬರಬೇಕು. ಅಲ್ಲಿಯ ವಾತಾವರಣ ಕೂಡ ಪ್ರಶಾಂತವಾಗಿದೆ. ಇದೇ ರೀತಿ ಕಾಡನ್ನು ಕಡಿದು ಮುಂದೆ ನಮ್ಮ ಕೈಗೆ ಭಿಕ್ಷಾಪಾತ್ರೆಯನ್ನು ಕೊಡುತ್ತೀರೆಂದು ಕಾಣುತ್ತದೆ. ಕಾಡನ್ನು ಕಡಿದಂತೆಲ್ಲಾ ಮಳೆಯಾಗುವುದು ಕಡಿಮೆಯಾಗುತ್ತದೆ. ಆದ್ದರಿಂದ ತಾವು ಇಂಡಸ್ಟ್ರಿ ಮಿನಿಸ್ಟರ್ ಹತ್ತಿರ ಸಮಾಲೋಚನೆ ಮಾಡಿ ಕಾಡನ್ನು ಕಡಿಯುವುದನ್ನು ನಿಲ್ಲಿಸುವುದಕ್ಕೆ ಏರ್ಪಾಡು ಮಾಡಬೇಕು. ಅರಣ್ಯ ಸಂಪತ್ತು ಜಾಸ್ತಿ ಇದ್ದರೆ ಮಳೆ ಬೆಳೆ ಚೆನ್ನಾಗಿ ಆಗುತ್ತದೆ ಮತ್ತು ದೇಶದ ಸಂಪತ್ತು ಕೂಡ ಜಾಸ್ತಿಯಾಗುತ್ತದೆ. ಆದ್ದರಿಂದ ಈ ಬಗ್ಗೆ ತೀವ್ರವಾಗಿ ಸರ್ಕಾರದವರು ಆಲೋಚನೆ ಮಾಡಿ ಕಾಡನ್ನು ಕಡಿಯುವುದನ್ನು ನಿಲ್ಲಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

53-0 PM.

ಇನ್ನು ಅಫಾರೆಸ್ಟೇಷನ್ ಎಂದು ಮಾಡುತ್ತಿದ್ದೀರಿ. ಇದನ್ನು ಎಲ್ಲಿ ಮಾಡಬೇಕೋ ಅಲ್ಲಿ ಮಾಡುತ್ತಿಲ್ಲ. ನನ್ನ ತಾಲ್ಲೂಕ್‌ನಲ್ಲಿ ಕೂಡ ಮಾಡಿದ್ದರು. ನೆಟ್ಟ ಗಿಡಗಳನ್ನು ದನಕರಗಳು ಮತ್ತು ಕುರಿಗಳು ತಿಂದು ಹಾಕಿದವು ಎಂದು ಅಧಿಕಾರಿಗಳು ಹೇಳುತ್ತಾರೆ. ಈ ಬಗ್ಗೆ ಖರ್ಚು ಮಾಡುತ್ತಿರುವ ಹಣವೆಲ್ಲಾ ದುರುಪಯೋಗವಾಗುತ್ತಿದೆ ಎಂದು ಹೇಳುತ್ತೇನೆ. ಈ ಒಂದು ಶಾಪ ಮುಂದೆ ನಿಮಗೆ ತಟ್ಟಬಹುದು ಎಂದು ಹೇಳುತ್ತೇನೆ.

ನಮ್ಮ ಜಿಲ್ಲೆಯಲ್ಲಿ ತ್ವರಿತಗತಿಯಿಂದ ಕಾಡಿನಲ್ಲಿರುವ ಮರಗಳನ್ನು ಕಡಿಯುತ್ತಿದ್ದಾರೆಯೇ ವಿನಃ ಹೊಸದಾಗಿ ಗಿಡಗಳನ್ನು ಬೆಳೆಸುತ್ತಿಲ್ಲ ನಿಮ್ಮ ಅಧಿಕಾರಿಗಳು ಏನು ಕೆಲಸ ಮಾಡುತ್ತಿದ್ದಾರೆ ಎಂಬುದು ನೀವು ಒಂದು ಸಲ ಬಂದು ನೋಡಿದರೆ ಗೊತ್ತಾಗುತ್ತದೆ. ಅಫಾರೆಸ್ಟೇಷನ್ ಕೆಲಸ ಏನಿದೆ ಅದು ಫೇಲ್ ಆಗಿದೆ. ಆ ಬಗ್ಗೆ ಅಧಿಕಾರಿಗಳು ತಪ್ಪು ಅಂಕಿ ಅಂಶಗಳನ್ನು ಕೊಡುತ್ತಿದ್ದಾರೆ. ಎಲ್ಲಿ ಇದನ್ನು ಮಾಡಬೇಕೋ ಅಲ್ಲಿ ಮಾಡದೆ ಕಾಡಿನ ಒಳಗೆ ಅಂದರೆ ೨೦ ಮೈಲಿಯ ಒಳಗಡೆ ಹೋಗಿ ಮಾಡುತ್ತಿದ್ದಾರೆ. ೧೦–೧೨ ಮೈಲಿಗಳಷ್ಟು ಜಾಗ ನಮ್ಮ ತಾಲ್ಲೂಕ್‌ನಲ್ಲಿ ಇದೆ, ಅದು ಯೋಗ್ಯವಾದ ಜಾಗ. ಅಲ್ಲಿ ಅಫಾರೆಸ್ಟೇಷನ್ ಮಾಡಿದರೆ ಒಳ್ಳೆಯ ಕಾಡನ್ನು ಬೆಳೆಸಬಹುದು. ಇಷ್ಟ ಬಂದ ಕಡೆ ಮಾಡುವುದರಿಂದ ನಮಗೆ ತಿಳಿಯುವುದೂ ಇಲ್ಲ ಮತ್ತು ಸಾರ್ವಜನಿಕರ ಹಣವೂ ಕೂಡ ದುರುಪಯೋಗವಾಗುತ್ತದೆ. ಅಧಿಕಾರಿಕಗಳು ಏನೇನು ಮಾಡುತ್ತಿದ್ದಾರೆಂಬುದನ್ನು ಮಾನ್ಯ ಮಂತ್ರಿಗಳು ಅಡ್ಡಾಡಿ ನೋಡಬೇಕು. ತಾವು ಬೆಂಗಳೂರನ್ನು ಬಿಟ್ಟು ಕಾಡುಗಳಲ್ಲಿ ಹೋಗಿ ನೋಡಬೇಕು. ಅಲ್ಲಿ ಏನು ಅನ್ಯಾಯವಾಗುತ್ತಿದೆ ಎಂಬುದು ತಮಗೆ ಗೊತ್ತಾಗುವುದಲ್ಲದೆ ತಮ್ಮ ಮನಸ್ಸಿಗೂ ಕೂಡ ಕಾಡಿನಲ್ಲಿ ಸಂಚಾರ ಮಾಡಿದರೆ ಶಾಂತಿ ಸಿಗುತ್ತದೆ. ಒಳ್ಳೆಯ ಟಿಂಬರ್ ಮತ್ತು ಗಂಧದ ಮರಗಳು ಸ್ಮಗಲ್ಡ್ ಆಗುತ್ತಿರುವುದಕ್ಕೆ ಅಧಿಕಾರಿಗಳು ಸಹ ಕಾರಣರಾಗಿದ್ದಾರೆಂದು ಹೇಳುತ್ತಿದ್ದೇನೆ. ಸರ್ಕಾರಕ್ಕೆ ತೋರಿಸುವುದಕ್ಕೆ ಒಂದೆರಡು ಕೇಸ್‌ಗಳನ್ನು ಹಿಡಿಯುತ್ತಾರೆ ಅಷ್ಟೆ ನಮ್ಮ ತಾಲ್ಲೂಕ್‌ನಲ್ಲಿ ಸ್ಮಗಲ್ಡ್ ಮಾಡಿ ತೆಗೆದುಕೊಂಡು ಹೋಗುತ್ತಿದ್ದುದನ್ನು ಬಳ್ಳಾರಿಯಲ್ಲಿ ಹಿಡಿದಿದ್ದಾರೆ. ಸ್ಮಗಲ್ಡ್ ಆದಂತಹ ಟೀಕ್ ಟಿಂಬರ್ ಬೆಂಗಳೂರಿಗೆ ಕೂಡ ಬರುತ್ತಿದೆ ಇವತ್ತು ಬೆಂಗಳೂರಿನಲ್ಲಿ ದೊಡ್ಡ ದೊಡ್ಡ ಮನೆಗಳನ್ನು ಕಟ್ಟಿಸಿರುವವರು ಸ್ಮಗಲ್ಡ್‌ನಿಂದ ಬಂದಂತಹ ಮರಗಳನ್ನು ಉಪಯೋಗಿಸಿ ಎಂದು ಹೇಳಬಹುದು. ಯಾವ ಅಧಿಕಾರಿಗಳ ಮೇಲೆ ಬ್ಯಾಡ್ ರಿಪೋರ್ಟ್ ಇದೆಯೋ ಅಂತಹ ಅಧಿಕಾರಿಗಳನ್ನು ಕೂಡಲೇ ಕೆಲಸದಿಂದ ತೆಗೆದು ಹಾಕಿದರೆ ಅರಣ್ಯ ಸಂಪತ್ತು ಹೆಚ್ಚುವುದಕ್ಕೆ ಅವಕಾಶವಾಗುತ್ತದೆ. ನಮ್ಮ ಮಲೆನಾಡಿನಲ್ಲಿರುವ ಅರಣ್ಯ ಸಂಪತ್ತನ್ನು ಕಾಪಾಡಿಕೊಂಡು ಬರದಿದ್ದರೆ ಒಂದು ಕೆಟ್ಟ ಹೆಸರನ್ನು ತಾವು ತೆಗೆದುಕೊಳ್ಳಬೇಕಾಗುತ್ತದೆ ಮತ್ತು ಆ ಭಾಗದ ಜನರಿಗೆ ಭಿಕ್ಷಾ ಪಾತ್ರೆಯನ್ನು ಕೊಡುವ ಸಂದರ್ಭವೂ ಸಹ ಬರುತ್ತದೆಂದು ಹೇಳುತ್ತೇನೆ. ಇದಕ್ಕೆ ಅವಕಾಶ ಕೊಡಬಾರದೆಂದು ಸರ್ಕಾರದವರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಪಶುಸಂಗೋಪನೆ ಇಲಾಖೆಯ ಬಗ್ಗೆ ಇಟ್ಟಿರುವ ಡಿಮ್ಯಾಂಡನ್ನು ನಾನು ವಿರೋಧ ಮಾಡುತ್ತೇನೆ- ಈ ಬಾಬಿಗೆ ಇಟ್ಟಿರುವ ಹಣ ಕಡಿಮೆ. ಕುರಿ, ಕೋಳಿ ಮತ್ತು ದನಕರುಗಳ ಅಭಿವೃದ್ಧಿ ಇನ್ನೂ ಆಗಬೇಕಾಗಿದೆ. ಈಗಿನ ಮಂತ್ರಿಗಳು ಈ ಇಲಾಖೆಯನ್ನು ವಹಿಸಿಕೊಂಡ ಮೇಲೆ ಜೀವಕಳೆ ತುಂಬಿದ್ದಾರೆ. ಪಶುಸಂಗೋಪನೆಯ ಬಗ್ಗೆ ಎರಡು ಕೋಟಿ ರೂಪಾಯಿಗಳನ್ನು ಇಟ್ಟಿರುವುದು ಸಾಲದು. ಇನ್ನೂ ಜಾಸ್ತಿ ಹಣವನ್ನು ಒದಗಿಸಿ ಇದೂ ಕೂಡ ಒಂದು ಜೀವಂತ ಇಲಾಖೆ ಎಂಬುದನ್ನು ತೋರಿಸಬೇಕು. ಮಾನ್ಯ ಮಂತ್ರಿಗಳು ಈ ಇಲಾಖೆಯ ಬಗ್ಗೆ ಬಹಳ ನಿಷ್ಠೆಯಿಂದ ಕೆಲಸ ಮಾಡುತ್ತಿರುವುದಕ್ಕಾಗಿ ಅವರನ್ನು ಅಭಿನಂದನೆ ಮಾಡಬೇಕಾಗುತ್ತದೆ ಇಷ್ಟು ಹೇಳಿ ನಮ್ಮ ಮುಂದೆ ಇಟ್ಟಿರತಕ್ಕಂಥ ಡಿಮ್ಯಾಂಡ್‌ಗಳನ್ನು ವಿರೋಧ ಮಾಡಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸೋಲೂರ್ ಸಿದ್ದಪ್ಪ (ಕುದೂರ್) — ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ಮಂಡಿಸಿರುವ ನಾಲ್ಕು ಡಿಮ್ಯಾಂಡ್‌ಗಳ ಬಗ್ಗೆ ಅನುಮೋದನೆ ಕೊಡುತ್ತಾ ಕೆಲವು ನ್ಯೂನತೆಗಳನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಮೊದಲು ಅರಣ್ಯ ಇಲಾಖೆಯ ಬಗ್ಗೆ ಕೆಲವು ಸಲಹೆಗಳನ್ನು ಸರ್ಕಾರಕ್ಕೆ ಕೊಡುವುದಕ್ಕೆ ಇಷ್ಟಪಡುತ್ತೇನೆ ಈಹೊತ್ತು ಅರಣ್ಯ ಸಂಪತ್ತು ಕುಂಠಿತವಾಗುತ್ತಿದೆ. ಅರಣ್ಯ ಇಲಾಖೆಯನ್ನು ಹೊಸ ಮಂತ್ರಿಗಳು ತಮ್ಮ ವಶಕ್ಕೆ ತೆಗೆದುಕೊಂಡ ಮೇಲೆ ಅತ್ಯುತ್ತಮ ಸ್ಥಿತಿಗೆ ತರುತ್ತಿದ್ದಾರೆ. ಮೊದಲಿನಿಂದಲೂ ಅರಣ್ಯ ಸಂಪತ್ತಿನಿಂದ ದೇಶಕ್ಕೆ ಅನುಕೂಲವಾಗುತ್ತಿರುವುದಲ್ಲದೆ ಇದರಿಂದ ರಾಜ್ಯದ ಬೊಕ್ಕಸಕ್ಕೂ ಹಣ ಬರುತ್ತಿದೆ. ಅರಣ್ಯ ಸಂಪತ್ತು ವೃದ್ಧಿಯಾಗಿರೆ ರೈತರಿಗೆ ಬೇಕಾಗುವಂತಹ ಎಲ್ಲಾ ಅನುಕೂಲಗಳನ್ನು ಪಡೆಯುವುದಕ್ಕೆ ಸಾಧ್ಯವಿದೆ. ಕೆಲವು ಸಂದರ್ಭಗಳಲ್ಲಿ ಸರ್ಕಾರದವರು ಇದ್ದಿಲು ಮಾಡಲು ಮತ್ತು ಒಳ್ಳೆಯ ಟಿಂಬರ್‌ಗಳನ್ನು ಕಡಿಯಲು ಲೈಸೆನ್ಸ್ ಕೊಡುತ್ತಿರುವುದರಿಂದ ವನಸಂಪತ್ತು ದಿನೇ ದಿನೇ ನಾಶವಾಗುವುದಕ್ಕೆ ಅವಕಾಶವಾಗಿದೆ. ಇನ್ನು ಮುಂದೆ ಯಾವುದೇ ಕಾರಣದಿಂದಲೂ ಕೂಡ ಕಾಡಿನಲ್ಲಿ ಇದ್ದಿಲಿಗಾಗಿ ಮರಗಳನ್ನು ಕಡಿಯುವುದಕ್ಕೆ ಮತ್ತು ಕಾಡಿನಲ್ಲಿ ದನಗಳು ಮೇಯುವುದಕ್ಕೆ ಅವಕಾಶ ಕೊಡಬಾರದೆಂದು ಹೇಳುತ್ತೇನೆ. ಹುಣಸೆ, ಮಾವು ಮುಂತಾದ ಅತ್ಯುತ್ತಮವಾದಂಥ ಮರಗಳನ್ನು ಬೆಳೆಸುವುದರ ಮೂಲಕ ಅರಣ್ಯ ಸಂಪತ್ತು ಜಾಸ್ತಿಯಾಗುವುದಕ್ಕೆ ಅವಕಾಶ ಮಾಡಬೇಕು. ವನ್ಯ ಸಂಪತ್ತಿನಿಂದ ದೇಶಕ್ಕೂ ಹಾಗೂ ಸರ್ಕಾರಕ್ಕೂ ಲಾಭವಾಗುತ್ತಿದೆ. ಮಾನ್ಯ ಮಂತ್ರಿಗಳು ಸಂಚಾರ ಕೈಕೊಂಡು ಒಂದೇ ಕಡೆ ಕೆಲಸ ಮಾಡುತ್ತಿರುವವರನ್ನು ಕಂಡುಹಿಡಿದು ವರ್ಗ ಮಾಡಬೇಕು. ೧೦–೨೦ ವರ್ಷಗಳಿಂದ ಒಂದೇ ಕಡೆ

(ಶ್ರೀ ಸೋಲೂರು ಸಿದ್ದಪ್ಪ)

ಫಾರೆಸ್ಟ್ ಗಾರ್ಡ್‌ಗಳು ಕೆಲಸ ಮಾಡುತ್ತಿದ್ದಾರೆ. ಇಂತಹವರನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ವರ್ಗ ಮಾಡಬೇಕು. ಇವತ್ತು ಅನೇಕ ಕಾರಣಗಳಿಂದ ವನ್ಯ ಸಂಪತ್ತು ಕುಂಠಿತವಾಗುವುದಕ್ಕೆ ಅವಕಾಶವಾಗಿದೆ. ಈ ವಿಚಾರ ಅಧಿಕಾರಿಗಳಿಗೂ ಮತ್ತು ಮಂತ್ರಿಗಳಿಗೂ ಮನವರಿಕೆಯಾಗಿದೆ. ಇವತ್ತು ಅರಣ್ಯದಿಂದಲೇ ಸರ್ಕಾರಕ್ಕೆ ಸುಮಾರು ೧೫ ಕೋಟಿ ರೂಪಾಯಿಗಳಷ್ಟು ವರಮಾನ ಬರುತ್ತಿದೆ. ಈ ವರಮಾನ ಇನ್ನೂ ಜಾಸ್ತಿಯಾಗುವುದಕ್ಕೆ ಕಾಡುಗಳಲ್ಲಿ ಯೋಗ್ಯವಾದಂಥ ಮರಗಳನ್ನು ಬೆಳೆಸುವುದಕ್ಕೆ ವ್ಯವಸ್ಥೆ ಮಾಡಬೇಕು.

ಯಾವ ಒಂದು ಕಾರಣದಿಂದಲೂ ಅರಣ್ಯ ಪ್ರದೇಶವನ್ನು ಸಾಗುವಳಿಗಾಗಿ ಜನಗಳಿಗೆ ಕೊಡತಕ್ಕಂಥ ಒಂದು ಕಾರ್ಯವನ್ನು ಸರ್ಕಾರದವರು ಮಾಡಬಾರದು. ವನಸಂಪತ್ತನ್ನು ಹೆಚ್ಚಿಸಿ ದೇಶಕ್ಕೆ ಲಾಭಾಯಕ ವಾಗುವಂತಹ ಅನುಕೂಲಗಳನ್ನು ಹೆಚ್ಚಿಸಬೇಕು ಎನ್ನತಕ್ಕಂಥಾ ಕಾಲದಲ್ಲಿ ೫೦ ಎಕರೆ, ೪೦ ಎಕರೆ, ೩೦ ಎಕರೆ ಜಮೀನನ್ನು ಯಾವುದಕ್ಕೂ ಯಾವ ಕಾರಣದಿಂದಲೂ ಯಾರಿಗೂ ಅದನ್ನು ಕೊಡತಕ್ಕಂಥ ಕಾರ್ಯವನ್ನು ಇನ್ನು ಮೇಲೆ ಸರ್ಕಾರದವರು ಖಂಡಿತವಾಗಿಯೂ ನಿಲ್ಲಿಸಬೇಕು. ಈ ಸಭೆಯಲ್ಲಿ ನಾವು ಹೇಳುವಂಥಾ ಮಾತುಗಳನ್ನು ಸರ್ಕಾರದವರು ಗಮನಿಸಬೇಕು. ಅವರು ಅದನ್ನು ಗಮನಿಸದಿದ್ದರೆ ನಾವು ಹೇಳಿದಂತಹ ಮಾತುಗಳಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಜನರಿಂದ ಚುನಾಯಿತರಾಗಿ ಬಂದಂಥವರೇ ಈ ದಿನ ಮಂತ್ರಿಗಳಾಗಿರತಕ್ಕವರು. ಆದ್ದರಿಂದ ನಾವು ಹೇಳುವಂಥಾ ಮಾತನ್ನು ಗಮನಿಸಬೇಕು. ಅರಣ್ಯ ಸಂಪತ್ತನ್ನು ಹೆಚ್ಚಿಸದಿದ್ದರೆ ತುಂಬಾ ಕಷ್ಟವಾಗುತ್ತದೆ. ಮತ್ತು ಯಾವ ಕಾರಣ ದಿಂದಲೂ ಫಾರೆಸ್ಟಿನ ಜಮೀನನ್ನು ಯಾರಿಗೂ ಕೊಡಬಾರದು. ಫಾರೆಸ್ಟಿನ ಒಳಗಡೆ ಖಾಲಿ ಜಮೀನು ಇದ್ದರೆ ಅಂಥಾ ಜಮೀನನ್ನು ಯಾರಿಗಾದರೂ ಕೊಟ್ಟರೆ ಆ ಏರಿಯಾದಲ್ಲಿರತಕ್ಕ ವನಸಂಪತ್ತನ್ನೆಲ್ಲಾ ರೈತರು, ಜನಗಳು ಹಾಳು ಮಾಡುತ್ತಾರೆ. ಈ ದೃಷ್ಟಿಯಿಂದ ಫಾರೆಸ್ಟ್ ಜಮೀನನ್ನು ಯಾರಿಗೂ ಕೊಡಬಾರದು ಎಂದು ನಾನು ಹೇಳುತ್ತೇನೆ.

ಮೀನುಗಾರಿಕೆಯ ವಿಷಯದಲ್ಲಿ ನಾನು ಒಂದೆರಡು ವಿಚಾರಗಳನ್ನು ಹೇಳುತ್ತೇನೆ. ಈಗ ಎರಡು ವರ್ಷಗಳಿಂದ ಈಚೆಗೆ ಈ ಖಾತೆಗೆ ಪ್ರತ್ಯೇಕವಾದ ಒಬ್ಬರು ಮಂತ್ರಿಗಳನ್ನು ನೇಮಿಸಿದ್ದಾರೆ. ಅದರ ಪರಿಣಾಮವಾಗಿ ದೇಶದ ಎಲ್ಲಾ ಭಾಗದಲ್ಲಿಯೂ ಮೀನುಗಾರಿಕೆಯ ಉಪಯೋಗ ಜನಗಳಿಗೆ ದೊರೆತಿದೆ. ಇದರಿಂದ ಆಹಾರದ ಪರಿಸ್ಥಿತಿಯೂ ಸ್ವಲ್ಪಮಟ್ಟಿಗೆ ಸುಧಾರಣೆ ಯಾಗುತ್ತದೆ. ಸಣ್ಣ ಸಣ್ಣ ಕೆರೆಗಳಲ್ಲಿ ಕೂಡ ಈ ಮೀನುಗಾರಿಕೆಯ ಉದ್ಯಮವನ್ನು ಕೈಗೊಂಡು ಸರ್ಕಾರದವರು ನಡೆಸುತ್ತಿದ್ದಾರೆ. ಈ ಉದ್ಯಮವನ್ನು ಒಂದು ಉತ್ತಮ ಮಟ್ಟಕ್ಕೆ ತರುವುದಕ್ಕೆ ಸರ್ಕಾರದವರು ಹೆಚ್ಚಿನ ಪ್ರೋತ್ಸಾಹವನ್ನು ಕೊಟ್ಟಿದ್ದಾರೆ. ಜನತೆಗೆ ಅದರ ಪ್ರಯೋಜನ ಹೆಚ್ಚು ಹೆಚ್ಚಾಗಿ ದೊರೆಯುವಂತೆ ಮಾಡಬೇಕು.

ಗೋ ಸಂಪತ್ತಿನ ಬಗ್ಗೆ ಹೇಳುವುದಾದರೆ ಈಗ ಗ್ರಾಮಾಂತರ ಪ್ರದೇಶಗಳಲ್ಲಿ ಎಲ್ಲೆಲ್ಲಿ ಅಮೃತಮಹಲ್ ಕಾವಲುಗಳು ಇವೆಯೋ ಅದನ್ನೆಲ್ಲಾ ದಿನೇ ದಿನೇ ಜನಗಳಿಗೆ ಕೊಡುತ್ತಿರುವುದರಿಂದ ಅದು ಕಡಿಮೆ ಯಾಗುತ್ತಿದೆ. ಅಮೃತಮಹಲ್ ಕಾವಲುಗಳಲ್ಲಿ ಉತ್ತಮವಾದ ತಳಿಯನ್ನು, ಉತ್ತಮವಾದ ಜಾನುವಾರ ಗಳನ್ನು ತಯಾರು ಮಾಡತಕ್ಕಂಥ ಒಂದು ಕಾರ್ಯ ಕುಂಠಿತವಾಗಿದೆ. ಈ ರೀತಿಯಾಗಿ ತಳಿಗಳು ಕುಂಠಿತವಾದದ್ದು ರೈತರಿಗೆ ಬಹಳ ತೊಂದರೆಯಾಗಿದೆ. ಅಮೃತ್‌ಮಹಲ್ ಕಾವಲುಗಳಲ್ಲಿ ಒಳ್ಳೆಯ ಜಾನುವಾರುಗಳನ್ನು, ಒಳ್ಳೆಯ ಹಸುಗಳನ್ನು, ಒಳ್ಳೆಯ ತಳಿಯ ರಾಸುಗಳನ್ನು ತಂದು ಸಾಕಿ ಗ್ರಾಮಾಂತರ ಪ್ರದೇಶಗಳಲ್ಲಿ ರೈತರಿಗೆ ಒಳ್ಳೆಯ ತಳಿಯನ್ನು ಒದಗಿಸುವಂಥಾ, ಹಂಚುವಂತಹ ಕೆಲಸವನ್ನು ಮಾಡಬೇಕು. ಮತ್ತು ತಳಿಗಳನ್ನು ಉತ್ತಮಪಡಿಸಬೇಕು.

ಇನ್ನು ವ್ಯವಸಾಯಕ್ಕೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ ವ್ಯವಸಾಯಕ್ಕೆ ಇನ್ನೂ ಹೆಚ್ಚಿನ ಹಣವನ್ನು ಒದಗಿಸಿ ರೈತರಿಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕು. ರೈತ ಬೆಳೆದಂತಹ ರಾಗಿ, ಬತ್ತ ಮುಂತಾದ ಆಹಾರ ಧಾನ್ಯಗಳಿಗೆ ಸರಿಯಾದಂತಹ ಬೆಲೆ ಸಿಕ್ಕುವಂತೆ ಸರ್ಕಾರದವರು ವ್ಯವಸ್ಥೆ ಮಾಡಬೇಕು. ಈಗ ರೈತ ವ್ಯವಸಾಯವನ್ನು ಮಾಡಬೇಕಾದರೆ ಹೆಚ್ಚಿನ ಬೆಲೆಯನ್ನು ಕೊಟ್ಟು ಗೊಬ್ಬರ, ವ್ಯವಸಾಯದ ಇತರ ಸಲಕರಣೆಗಳನ್ನು ಕೊಂಡುಕೊಳ್ಳಬೇಕಾಗುತ್ತದೆ. ಮತ್ತು ಅವನು ನಾನಾ ರೀತಿಯಲ್ಲಿ ವ್ಯವಸಾಯಕ್ಕೆ ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಇದರ ಜೊತೆಗೆ ಕಂದಾಯವನ್ನು ಜಾಸ್ತಿ ಕೊಡಬೇಕಾಗುತ್ತದೆ. ಮತ್ತು ವ್ಯವಸಾಯಕ್ಕೆ ಬೇಕಾದಂತಹ ಟ್ರಾಕ್ಟರು ಮತ್ತು ಬುಲ್‌ಡೋಜರ್‌ಗಳನ್ನು ಪಡೆಯಬೇಕಾಗಿದ್ದರೆ ಅದಕ್ಕೆ ಅವನು ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ಇವೆಲ್ಲವನ್ನು ಖರ್ಚು ಮಾಡಿ ರೈತ ಕಷ್ಟಪಟ್ಟು ಆಹಾರಧಾನ್ಯಗಳನ್ನು ಬೆಳೆದರೆ ಅವನು ಬೆಳೆದಂಹತ ಬೆಳೆಗೆ, ಧಾನ್ಯಕ್ಕೆ ಕಡಿಮೆ ಬೆಲೆ ಸಿಕ್ಕುವುದಾದರೆ ಅವನಿಗೆ ಉತ್ಸಾಹ ಕಡಿಮೆಯಾಗುತ್ತದೆ. ಅವನು ವ್ಯವಸಾಯದಲ್ಲಿ

ತೀರಾ ಹಿಂದುಳಿಯುತ್ತಾನೆ. ಆದ್ದರಿಂದ ರೈತರು ಬೆಳೆದಂತಹ ಧಾನ್ಯವನ್ನು ಸರ್ಕಾರದವರೇ ಕೊಂಡು ರೈತರಿಗೆ ಉಂಟಾಗುವ ನಷ್ಟವನ್ನು ಭರ್ತಿ ಮಾಡಿಕೊಡಬೇಕು. ಆ ರೀತಿ ಮಾಡುವುದಾದರೆ ರೈತ ಸಂತೋಷದಿಂದ ಕೆಲಸ ಮಾಡುತ್ತಾನೆ. ಜಮೀನನ್ನು ಹೆಚ್ಚು ಉತ್ಸಾಹದಿಂದ ಸಾಗು ಮಾಡಿ ಹೆಚ್ಚು ಹೆಚ್ಚು ಆಹಾರವನ್ನು ಉತ್ಪಾದನೆ ಮಾಡುತ್ತಾನೆ. ಮತ್ತು ಪಟ್ಟಣಗಳಲ್ಲಿರತಕ್ಕ ನೌಕರ ವರ್ಗದವರಿಗೆ, ಕೈಗಾರಿಕೆಗಳಲ್ಲಿ ಕೆಲಸ ಮಾಡತಕ್ಕ ಕಾರ್ಮಿಕರಿಗೆ ಎಲ್ಲರಿಗೂ ಅವನು ಆಹಾರ ಧಾನ್ಯವನ್ನು ಒದಗಿಸುತ್ತಾನೆ. ಆದ್ದರಿಂದ ಈಕಡೆ ಸರ್ಕಾರದವರು ಗಮನಕೊಡಬೇಕು. ನಾವು ಹೇಳತಕ್ಕಂಥಾದ್ದು ಅರಣ್ಯರೋದನವಾಗ ಬಾರದು. ನಾವು ಹೇಳಿದಂತಹ ವಿಚಾರಗಳನ್ನು ಮಾನ್ಯ ಮಂತ್ರಿಗಳು ಗಮನಕ್ಕೆ ತೆಗೆದುಕೊಂಡು ಅವುಗಳನ್ನು ಕಾರ್ಯಗತ ಮಾಡಬೇಕು. ಇದನ್ನೆಲ್ಲಾ ಕಾರ್ಯಗತ ಮಾಡತಕ್ಕ ಅಧಿಕಾರಿಗಳು ಎನಿಸಿದ್ದಾರೆ ಅವರಿಗೆ ಸರ್ಕಾರದವರು ತಿಳುವಳಿಕೆ ಕೊಡುವಾಗ ಚೆನ್ನಾಗಿ ವಿಚಾರ ಮಾಡಿ ಯಾವ ರೀತಿ ಕೆಲಸಗಳನ್ನು ಮಾಡಬೇಕೆಂಬುದನ್ನು ಸೂಚನೆಯನ್ನು ಕೊಡಬೇಕು. ರೈತರು ಸರ್ಕಾರದ ಹತ್ತಿರ ಬಾರದ ಹಾಗೆ ಅವರು ಇದ್ದಲ್ಲಿಯೇ ಕೆಲಸಗಳು ಆಗುವಂತಹ ಒಂದು ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕು. ದೇಶದ ಉನ್ನತಿಗೆ ನಾವೆಲ್ಲರೂ ಹೊಣಗಾರಿಕೆಯನ್ನು ಹೊರಬೇಕೆಂದು ನಾನು ಹೇಳುತ್ತೇನೆ.

ಇವೊತ್ತು ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಗಳಲ್ಲಿ ಸುಮಾರು ಒಂದೂವರೆಕೋಟಿ ರೂಪಾಯಿ ಲಾಸ್ ಆಗಿದೆ. ಪ್ರತಿ ವರ್ಷ ಈ ರೀತಿ ಸೊಸೈಟಿಗಳಲ್ಲಿ ಲಾಸ್ ಆಗುತ್ತಿದ್ದರೆ ಸೊಸೈಟಿಗಳು ಮುಂದೆ ಬರುವುದಿಲ್ಲ. ಮತ್ತು ಈ ರೀತಿ ೪ ಲಕ್ಷ, ೫ ಲಕ್ಷ, ೮ ಲಕ್ಷ ರೂಪಾಯಗಳು ಲಾಸ್ ಆದರೆ, ಅದರ ಹೊರೆಯನ್ನು ಹೊರತಕ್ಕವರು ಯಾರು? ಅದರ ಹೊರೆಯನ್ನು ಬಡ ಬೋರೇಗೌಡನು ಹೊರಬೇಕಾಗುತ್ತದೆ. ಆದ್ದರಿಂದ ಆ ರೀತಿ ಸೊಸೈಟಿಗಳಲ್ಲಿ ಲಾಸ್ ಆಗುವುದಕ್ಕೆ ಅವಕಾಶವನ್ನು ಕೊಡದಂತೆ ಸರ್ಕಾರದವರು ಭದ್ರ ಮಾಡಬೇಕು. ಮತ್ತು ಆ ಲಾಸ್ ಆಗುವುದಕ್ಕೆ ಯಾರು ಕಾರಣ ಕರ್ತರಾಗಿರುತ್ತಾರೆಯೋ ಅವರಿಂದ ಆ ಹಣವನ್ನು ವಸೂಲು ಮಾಡಬೇಕು. ಈ ದಿವಸ ನಾನು ಹೆಚ್ಚು ಕಾಲ ಮಾತನಾಡುವುದಕ್ಕೆ ಅಧ್ಯಕ್ಷರು ಕಾಲಾವಕಾಶವನ್ನು ಕೊಡದೇ ಇರುವುದರಿಂದ ಇನ್ನು ಉಳಿದ ವಿಚಾರಗಳನ್ನು ನಾನು ಸರ್ಕಾರಕ್ಕೆ ಬೇರೆ ಮಾರ್ಗದಲ್ಲಿ ತಿಳಿಸುತ್ತೇನೆ. ಇಷ್ಟು ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ದೊಡ್ಡಬೋರೇಗೌಡ (ಶ್ರೀರಂಗಪಟ್ಟಣ).—ಸನ್ಮಾನ್ಯ ಸಭಾಧ್ಯಕ್ಷರೇ, ವ್ಯವಸಾಯ ಇಲಾಖೆಯ ಮಂತ್ರಿಗಳು, ಪಶುಪಾಲನಾ ಇಲಾಖೆ ಮಂತ್ರಿಗಳು, ಅರಣ್ಯ ಶಾಖೆಯ ಮಂತ್ರಿಗಳು ಹಾಗೂ ಮೀನುಗಾರಿಕೆಯ ಇಲಾಖೆಯ ಮಂತ್ರಿಗಳು ಈ ಸಭೆಯ ಮುಂದೆ ೨೧ ಕೋಟಿ ರೂಪಾಯಿಗಳ ನಾಲ್ಕು ಡಿಮ್ಯಾಂಡ್‌ಗಳ ಬೇಡಿಕೆಯನ್ನು ಇಟ್ಟಿದ್ದಾರೆ. ಈ ಬೇಡಿಕೆಯ ಮೇಲೆ ಈಗ ಎರಡು ದಿವಸಗಳಿಂದಲೂ ಚರ್ಚೆ ನಡೆಯುತ್ತಿದೆ. ಈ ಬೇಡಿಕೆಗಳ ಚರ್ಚೆಗೆ ಕೊಟ್ಟಿರತಕ್ಕ ಅವಧಿಯನ್ನು ನೋಡಿದರೆ ಈ ಖಾತೆಗಳ ಚೌಕಟ್ಟಿನಲ್ಲಿ ಬರತಕ್ಕ ದೇಶದ ಶೇಕಡಾ ೭೮ ರಷ್ಟು ಜನತೆಯ ಒಂದು ದುರ್ದೈವ ಎಂದು ಹೇಳಬಹುದು. ಯಾರು ಪ್ರಜಾಪ್ರಭುತ್ವವನ್ನು ತಂದುಕೊಟ್ಟರೋ, ಯಾರು ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ್ದಾರೋ ಅಂಥಾ ಜನ ಇರುವಂತಹ ಈ ದೇಶದಲ್ಲಿ ಆಹಾರ ಧಾನ್ಯಗಳಾಗಲೀ, ಬಟ್ಟೆ ಬರೆಗಳಾಗಲೀ, ಇತರ ಮನುಷ್ಯನ ಜೀವನ ಅವಶ್ಯಕತೆಗೆ ಬೇಕಾದಂತಹ ವಸ್ತುಗಳ ಬೆಲೆಯನ್ನು ಗೊತ್ತು ಮಾಡುವಾಗ ಅಧಿಕಾರಿಗಳಾಗಲೀ ಅಥವಾ ಮಂತ್ರಿಗಳಿಗಾಗಲೀ ಅಥವಾ ಸ್ವಲ್ಪ ಪೂರ್ವ-ಪರ ಯೋಚನೆ ಮಾಡಬೇಕು ಎಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಪೂಜ್ಯ ಸರ್. ಎಂ ವಿಶ್ವೇಶ್ವರಯ್ಯನವರು ತಮ್ಮ ಕೊನೆಯ ಉಸಿರು ಇರುವವರೆಗೂ ರಾಷ್ಟ್ರದಲ್ಲಿರುವ ಮತ್ತು ರಾಜ್ಯದಲ್ಲಿರುವ ಪ್ರತಿಯೊಬ್ಬ ಶ್ರೀ ಸಾಮಾನ್ಯನ ಪ್ರೀತಿ ವಿಶ್ವಾಸವನ್ನು ಗಳಿಸಿ ರಾಷ್ಟ್ರದಲ್ಲೇ ಒಂದು ದೊಡ್ಡ ಕೀರ್ತಿಯನ್ನು ಗಳಿಸಿದ್ದರು. ಈಗ ಇರತಕ್ಕ ಮಂತ್ರಿಗಳ ಹಾಗೆ ಅಧಿಕಾರಿಗಳ ಹಾಗೆ ಅವರು ಯಾವ ರಾಜಭೋಗವನ್ನೂ ಅನುಭವಿಸುತ್ತಾ ಇರಲಿಲ್ಲ. ಇವತ್ತು ನಮ್ಮ ಮಂತ್ರಿಗಳು ರಾಜಭೋಗವನ್ನು ಅನುಭವಿಸುವುದಕ್ಕೆ ದೊಡ್ಡ ದೊಡ್ಡ ಭವನಗಳನ್ನು ಮಾಡಿಕೊಂಡಿದಾರೆ. ನೀವು ಪೂಜ್ಯ ಸರ್ ಎಂ. ವಿಶ್ವೇಶ್ವರಯ್ಯನವರ ಕೀರ್ತಿಯನ್ನು ಪಡೆಯುವುದಕ್ಕೆ ದೇಶದಲ್ಲಿ ಶೇಕಡಾ ೭೮ ಭಾಗ ಇರತಕ್ಕ ಜನತೆಗೆ ಸೌಕರ್ಯ ಒದಗಿಸಲು ಯಾವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ ಎಂಬುದನ್ನು ಈ ಸಭೆಯ ಮುಂದೆ ವಿವರವಾಗಿ ಹೇಳುತ್ತೀರಾ ಎಂದು ನಾನು ಪ್ರಶ್ನೆ ಮಾಡುತ್ತೇನೆ.

ಇವರು ಬೆಂಗಳೂರು ನಗರದಲ್ಲಿ ಏರ್ ಕಂಡಿಶನ್ಸ್ ಬಂಗಲೆಗಳಲ್ಲಿ ವಾಸ ಮಾಡುತ್ತಿದ್ದಾರೆ. ಅಧಿಕಾರಿಗಳು ಇವರ ಯೋಗಕ್ಷೇಮಕ್ಕಾಗಿ ಮತ್ತು ಇವರನ್ನು ಸ್ವಾಗತ ಮಾಡುವುದಕ್ಕಾಗಿ ಎಲ್ಲಾ ಕಡೆಯೂ ಇದ್ದಾರೆ. ಹಣಕಾಸಿನ ಮಂತ್ರಿಯವರು ೨೩೪ ಕೋಟಿ ರೂಪಾಯಿಗಳಲ್ಲಿ ಎರಡು ಲಕ್ಷ ಚಿಲ್ಲರೆ ಅಧಿಕಾರಿಗಳಿಗೆ ಶೇಕಡ ೫೨ ಭಾಗ ಹಣ ಖರ್ಚಾಗಿದೆ ಎಂದು ಹೇಳಿದ್ದಾರೆ. ಅದೇ ರೀತಿ ಇತರ ಎರಡುಮುಕ್ಕಾಲು ಕೋಟಿ

(ಶ್ರೀ ಬಿ. ದೊಡ್ಡಬೋರೇಗೌಡ)

ಜನರಿಗೆ ಎಷ್ಟು ಹಣ ಖರ್ಚು ಮಾಡಿದ್ದಾರೆಂದು ನಾನು ಕೇಳುತ್ತೇನೆ. ಇನ್ನು ರೈತರಿಗೆ ಅನುಕೂಲ ಮಾಡುವುದಕ್ಕೋಸ್ಕರ ಒಂದು ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಶನನ್ನು ರಚನೆ ಮಾಡಿದ್ದಾರೆ. ಇವತ್ತು ಇವರ ಆಡಳಿತದಲ್ಲಿ ರಾಸಾಯನಿಕ ಗೊಬ್ಬರದ ಹೊರೆಯನ್ನು ಹೊರುವುದಕ್ಕೆ ಆಗುವುದಿಲ್ಲ. ಸ್ಟೇಟ್ ಮಾರ್ಕೆಟಿಂಗ್ ಕೋ-ಆಪರೇಟಿವ್ ಸೊಸೈಟಿಯಲ್ಲಿ ಆದ ೧೮೦ ಲಕ್ಷ ರೂಪಾಯಿನ ನಷ್ಟದ ಬಗ್ಗೆ ಯಾರು ಹೊಣೆಗಾರರು ? ಈ ನಷ್ಟವನ್ನು ರೈತರಿಗೆ ಹೇರುತ್ತಿರಿ. ಇವರು ಎಲ್ಲಾ ಇಲಾಖೆಗಳಿಗೂ ಒಂದು ಬೋರ್ಡು ರಚನೆ ಮಾಡಿ, ಈ ರಸ್ತೆಗಳಲ್ಲಿ ಹ್ಯಾಂಡ್ ಪೋಸ್ಟು ಇರುತ್ತದಲ್ಲಾ, ಹಾಗೆ, ನೀವು ನಿಮ್ಮ ಜವಾಬ್ದಾರಿಯನ್ನು ಈ ಬೋರ್ಡು ಗಳಿಗೆ ಕೈತೋರಿಸಿ ನಿಮ್ಮ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವಂತೆ ಕಾಣುತ್ತದೆ. ಮಂಡ್ಯ ಪ್ಯಾಕೇಜ್ ಪ್ರೋಗ್ರಾಂನಲ್ಲಿ ಕಳೆದ ವರ್ಷ ಎಷ್ಟು ಔಷಧಿಗಳನ್ನು ಸಿಂಪಡಿಸಿದ್ದೀರಿ? ನಿಮ್ಮ ಜನರು ಎಲ್ಲಿದ್ದಾರೆ, ನಿಮಗೆ ಎಲ್ಲಿ ಓಟು ಬಂದಿದೆ, ಅಂಥ ಗ್ರಾಮಗಳಿಗೆ ಮಾತ್ರ ಸಿಂಪಡಿಸಿದ್ದೀರಿ. ಈ ರೀತಿ ಮಾಡಿದರೆ ಇದನ್ನು ಪ್ರಜಾಪ್ರಭುತ್ವವೆಂದು ಹೇಳುತ್ತಾರೆಯೇ ? ಸಮಾಜವಾದದ ಕಡೆ ಯಾರು ಇವತ್ತು ಹೊರಟಿರುವುದು ? ಕೇವಲ ಕೆಲವರು ಅಧಿಕಾರಕ್ಕಾಗಿ, ತಮ್ಮ ಐಶ್ವರ್ಯಕ್ಕಾಗಿ, ಹೋರಾಡುತ್ತಿರುವುದು. ಆದರೆ ಸಾಮಾನ್ಯ ಜನತೆಗೆ ಅನುಕೂಲ ಮಾಡುವ ಉದ್ದೇಶ ನಿಮ್ಮದಲ್ಲ. ೧೯೬೮ನೇ ಇಸವಿಯ ಆಡಿಟ್ ವರದಿಯ ಪ್ರಕಾರ ನಿಮ್ಮ ಇಲಾಖೆಯ ಬುಲ್‌ಡೋಜರ್‌ಗಳು ಏನು ಕೆಲಸ ಮಾಡಿದೆ ? ನೀವು ಇವತ್ತು ಏಕಕಾಲದಲ್ಲಿ ನಾಲ್ಕು ಡಿಮ್ಯಾಂಡುಗಳನ್ನು ತಂದು ಜನತೆಗೆ ಮೋಸ ಮಾಡುತ್ತಿದ್ದೀರಿ. ಈ ಸಭೆಯು ಆಡಳಿತದಲ್ಲಿರತಕ್ಕ ಕುಂದು ಕೊರತೆಗಳ ಬಗ್ಗೆ ಸಮಗ್ರವಾದ ಚರ್ಚೆ ಮಾಡಲು ರಚನೆಯಾಗಿರುವುದು. ಎರಡು ದಿನಗಳಲ್ಲಿ ಅನ್ನ ನೀರಿಗೆ ಸಂಬಂಧಪಟ್ಟ ಈ ಡಿಮ್ಯಾಂಡನ್ನು ತಂದು ಮುಗಿಸಬೇಕೆಂದರೆ ಹೇಗೆ ಸಾಧ್ಯ ? ನಮ್ಮ ರಾಜ್ಯದ ಅರಣ್ಯವು ದೇಶ ವಿದೇಶಗಳಲ್ಲಿ ಬಹಳ ಕೀರ್ತಿಯನ್ನು ಗಳಿಸಿತ್ತು. ಆದರೆ ಇವೊತ್ತಿನ ದಿವಸ ನಮ್ಮ ಅರಣ್ಯವು ಬೆಂಗಾಡಾಗಿದೆ; ದಿವಾಳಿಯಾಗಿದೆ ಮತ್ತು ಅವ್ಯವಸ್ಥಿತವಾಗಿದೆ. ಇದಕ್ಕೆ ಒಬ್ಬ ಮಂತ್ರಿ ಬೇಕು, ಇವರಿಗೆ ಭವ್ಯ ಭವನ ಬೇಕು ಮತ್ತು ನೂರಾರು ಜನರು ಅವರಿಗೆ ಆರತಿ ಎತ್ತುವುದಕ್ಕೆ ಬೇಕು. ಈಗಲಾದರೂ ನಿಮಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇದ್ದರೆ, ಒಳ್ಳೆಯ ಕೀರ್ತಿ ಬರಬೇಕಾದರೆ, ಒಳ್ಳೆಯಕೆಲಸಗಳನ್ನು ಮಾಡಿ. ಮತ್ತು ಅದು ನೂರಾರು ವರ್ಷ ಉಳಿಯುತ್ತದೆ. ನೀವು ಗ್ರಾಮಾಂತರ ಪ್ರದೇಶಗಳಿಗೆ ಹೋಗಿ ಜನರನ್ನು ಜಾಗ್ರತಗೊಳಿಸಿ, ಒಳ್ಳೆಯ ಕೆಲಸಗಳನ್ನು ಅಲ್ಲಿ ಮಾಡಿಸುತ್ತಾರೆಂದು ನಾನು ನಂಬಿದ್ದೇನೆ. ಮೊನ್ನೆ ದಾರವಾಡದಲ್ಲಿ ೫ ಸಾವಿರ ಎಕರೆಯಲ್ಲಿ ಬೆಳೆಗೆ ಹುಳುಬಿದ್ದು ಹಾಳಾಗಿದೆ ಎಂದು ಹೇಳಿದರು. ಇದರಿಂದ ಆ ರೈತರ ಜೀವನ ಸಾಗಿಸುವುದಕ್ಕೆ ಏನು ಮಾಡಿದ್ದೀರಿ. ಮತ್ತು ಅದಕ್ಕೆ ತಕ್ಕ ಸಮಯದಲ್ಲಿ ಕ್ರಿಮಿಕೀಟಗಳ ಔಷಧಿಯನ್ನು ಯಾಕೆ ಮುಂಜಾಗ್ರತೆ ವಹಿಸಿ ಸಿಂಪಡಿಸಲಿಲ್ಲ, ಈ ರೀತಿ ಮಾಡಬಾರದು ಎಂದು ಹೇಳಿ, ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ನಾಗಮ್ಮ, ಕಲ್ಮಲ :— ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ನಮ್ಮ ಮುಂದಿರತಕ್ಕ ಅಗ್ರಿಕಲ್ಚರ್ ಡಿಮ್ಯಾಂಡಿನ ಮೇಲೆ ನಾನು ಬಹಳ ಸಂತೋಷದಿಂದ ಒಂದೆರಡು ವಿಷಯಗಳನ್ನು ಹೇಳಬೇಕೆಂದಿದ್ದೇನೆ. ಇವತ್ತು ಅಗ್ರಿಕಲ್ಚರ್ ಜೊತೆಗೆ ಇನ್ನಿತರ ಮೂರು ಡಿಮ್ಯಾಂಡುಗಳನ್ನೂ ಇಟ್ಟಿದ್ದಾರೆ. ಏಕೆಂದರೆ, ಅಗ್ರಿಕಲ್ಚರ್ ಎಂಬುದು ತಾಯಿಯ ಹಾಗೆ ಇದೆ; ಉಳಿದವುಗಳು ಅದರ ಮಕ್ಕಳು ಇದ್ದ ಹಾಗೆ ಇವೆ. ಇವತ್ತು ಅಗ್ರಿಕಲ್ಚರ್ ಇಲಾಖೆಯು ಬೇಕಾದಷ್ಟು ಕೆಲಸ ಮಾಡಿದೆ. ಇನ್ನೂ ಬಹಳ ಕೆಲಸ ಮಾಡಬೇಕಾಗಿದೆ. ಅವರು ಇನ್ನೂ ಹೆಚ್ಚು ಹೆಚ್ಚು ಜನರಿಗೆ ಪ್ರಯೋಜನವಾಗುವ ಕೆಲಸಗಳನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತು ಇಂಥ ಒಳ್ಳೆಯ ಕೆಲಸ ಮಾಡಬೇಕೆಂದು ಅಧಿಕಾರಿಗಳಿಗೆ ಮತ್ತು ಸರ್ಕಾರದವರಿಗೆ ತಿಳಿವಳಿಕೆ ಬಂದಿದೆ. ಇದೇ ರೀತಿ ಬಡವರಿಗೆ ಟ್ರಾಕ್ಟರುಗಳು ಬಹಳ ಬೇಗನೆ ಸಿಗುವಂತೆ ಮಾಡಬೇಕು. ಅದೇ ರೀತಿ ಬೀಜ, ಗೊಬ್ಬರ ಇತ್ಯಾದಿ ಬಡ ಹರಿಜನ ಮತ್ತು ಗಿರಿಜನರಿಗೆ ಶೇಕಡಾ ೫೦ ರಂತೆ ಫ್ರೀ ಯಾಗಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಆ ರೀತಿ ಕೊಟ್ಟರೆ ರೈತರು ಚೆನ್ನಾಗಿರುತ್ತಾರೆ ನಾವೂ ಚೆನ್ನಾಗಿರುತ್ತೇವೆ; ಮತ್ತು ದೇಶಕ್ಕೂ ಒಳ್ಳೆಯದಾಗುತ್ತದೆ.

ಇನ್ನೊಂದು ವಿಷಯವೇನೆಂದರೆ, ನಮ್ಮ ಅರಣ್ಯ ಇಲಾಖೆಯ ಮಂತ್ರಿಯವರು ನಮ್ಮ ರಾಯಚೂರು ಜಿಲ್ಲೆಯ ಕಡೆ ಸ್ವಲ್ಪ ಗಮನವನ್ನು ಹರಿಸಬೇಕು. ಅದೇರೀತಿ ಮೀನುಗಾರಿಕೆಯ ಬಗ್ಗೆ ಕೂಡ ರಾಯಚೂರು ಜಿಲ್ಲೆಯಲ್ಲಿ ನೀರೇ ಇಲ್ಲದಿದ್ದರೂ ಕೂಡ ಬೇಕಾದಷ್ಟು ಕೆಲಸ ಮಾಡಿದ್ದಾರೆ. ರಾಯಚೂರಿನಲ್ಲಿ ತುಂಗಭದ್ರಾ ಮುಂತಾದ ಕಡೆ ಎಲ್ಲೆಲ್ಲಿ ನೀರಿನ ಸೌಕರ್ಯ ಇದೆಯೋ, ಅಲ್ಲಿ ಮೀನುಗಾರಿಕೆಯನ್ನು ಹೆಚ್ಚಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಕೋಳಿ, ಕೋಣ, ಕುರಿ ಸಾಕುವವರಿಗೆ ೫೦೦ ರೂಪಾಯಿಗಳನ್ನು ನೀವು ಕೊಡಿ. ೫೦೦ ರೂಪಾಯಿಗಳನ್ನು ನಾವು ಹಾಕುತ್ತೇವೆಂದು ಹೇಳುತ್ತಿದ್ದೀರಿ. ನಾನಾದರೂ

ಹೇಳುತ್ತೇನೆ, ನೀವು ಕೊಡುವುದಾದರೆ ಫ್ರೀಯಾಗಿ ಕೊಡಬೇಕು. ಇಲ್ಲದಿದ್ದರೆ ಅದರಲ್ಲಿ ದುರುಪಯೋಗವಾಗುತ್ತದೆ. ಇನ್ನು ಆಸ್ಪತ್ರೆಯಲ್ಲಿ ಡಾಕ್ಟರುಗಳು ಚೆನ್ನಾಗಿ ಕೆಲಸ ಮಾಡುತ್ತಾರೆ. ಆದರೆ ಅವರಿಗೆ ಎಲ್ಲಿಯಾದರೂ ಹೋಗಿ ಬರುವುದಕ್ಕೆ ಬಹಳ ತೊಂದರೆಯಾಗುತ್ತದೆ. ನನ್ನ ಕ್ಷೇತ್ರದ ಅನುಭವದಿಂದ ಇದನ್ನು ಹೇಳುತ್ತಿದ್ದೇನೆ. ಅಲ್ಲಿ ದನಕರುಗಳ ಜೀವನ, ಮನುಷ್ಯರ ಜೀವನದಂತೆ ಆಗಬೇಕಾದರೆ, ಆಸ್ಪತ್ರೆಯಲ್ಲಿ ಎಲ್ಲಾ ಸೌಕರ್ಯಗಳೂ ಬೇಕು ಮತ್ತು ಅಲ್ಲಿಯ ಡಾಕ್ಟರಿಗೆ ಹೋಗಲು ಬರಲು ಒಂದು ಜೀಪನ್ನು ಒದಗಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಅದೇ ರೀತಿ ಅಲ್ಲಿ ಆಸ್ಪತ್ರೆಯ ಹತ್ತಿರ ೨-೩. ಕಟ್ಟಡಗಳನ್ನು ಕಟ್ಟಬೇಕೆಂದು ಕೇಳಿಕೊಂಡು, ಮಾತನಾಡಲು ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

6-00 P. M.

MR. SPEAKER ;—The Hon. Minister will reply.

SRI H. SIDDAVEERAPPA ;—Sir, if all the four Ministers were to speak they will take about two hours. I suggest that we may take it up tomorrow and at six of the clock, the chair may please apply guillotine and put the demands to vote, whether the Ministers reply or not. We cannot sit late to-day.

MR. SPEAKER ;—I accept the hon. Member's suggestion But to-day let the Ministers reply so that there may not be any arrears of work left over for tomorrow.

SRI H. SIDDAVEERAPPA :—Within the limited time they cannot do justice. If you postpone it for tomorrow they can reply conscientiously and effectively.

MR. SPEAKER :—Let us see how the debate proceeds.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ :—ನಾವೆಲ್ಲರೂ ಇಲ್ಲಿ ವ್ಯವಸಾಯಗಾರರ ಪರವಾಗಿ ಇದ್ದೇವೆ ನಾವೂ ಸಹ ವ್ಯವಸಾಯಗಾರರಾಗಿದ್ದೇವೆ. ಅದಕ್ಕಾಗಿ ನಾವೂ ಸಹ ಕ್ಲಾರಿಫಿಕೇಷನ್ಸ್ ಅದರ ಬಗ್ಗೆ ಕೇಳಬೇಕಾಗಿದೆ. ಸಾಮಾನ್ಯವಾಗಿ ಒಬ್ಬ ಸದಸ್ಯರು ಮಾತನಾಡಬೇಕೆಂದರೆ ಕೇವಲ ೫ ನಿಮಿಷಗಳನ್ನು ಜಾಸ್ತಿ ಕೊಡುವುದಿಲ್ಲ. ಅಂದ ಮೇಲೆ ಈಗ ಸುಮಾರು ೨ ಗಂಟೆಯವರೆಗೂ ಮಂತ್ರಿಗಳು ಉತ್ತರ ಕೊಡುತ್ತಾರೆಂದರೆ ಇಲ್ಲಿ ಸದಸ್ಯರು ಅಷ್ಟು ಹೊತ್ತು ಕೂತುಕೊಂಡು ಸಾಯಬೇಕೆಂದು ಈಗ ಯಾವ ರೂಲ್ಸ್‌ನಲ್ಲಿದೆ? ಇದು ಸರಿಯಲ್ಲ. ಅವರು ಉತ್ತರ ಕೊಡಬೇಕಾದರೆ ನಾಳೆ ಕೊಡಲಿ, ಸಂತೋಷ.

SRI H. SIDDAVEERAPPA :—Agriculture is an important portfolio. It is stated that we are now having a green revolution. We really want to know from the Government what they have done. There are certain points on which we require clarifications. Therefore I suggest this may be taken up tomorrow.

MR. SPEAKER :—It was agreed by the whips of all parties that reply should start at 5-30 P.M, Now it is 6 P.M. It is only half an hour late I requst the Ministers to make up this half an hour Letus Complete the discussion on this demand to-day.

ಶ್ರೀ ಎಚ್. ಎಸ್. ಸಂಜೀಗೌಡ :—ಮಾನ್ಯ ಶ್ರೀ ರಾಚಯ್ಯನವರು ಬಿಚ್ಚು ಮನಸ್ಸಿನಿಂದ ಉತ್ತರ ಕೊಡುವುದಕ್ಕೆ ಹೆಸರಾದವರು. ಅದಕ್ಕಾಗಿ ಎಲ್ಲಾ ಸದಸ್ಯರು ಹೇಳಿದ್ದನೆಲ್ಲಾ ಬರೆದುಕೊಂಡು ಅವಕ್ಕೆಲ್ಲಾ ಪಾಯಿಂಟ್ ಬೈ ಪಾಯಿಂಟ್ ವಿವರವಾಗಿ ಅವರು ಉತ್ತರ ಕೊಡಬೇಕಾಗಿದೆ. ಅದರೆ ಎಲ್ಲಾ ಪಾಯಿಂಟ್ಸ್-ಗಳಿಗೆ ಉತ್ತರ ಕೊಡುವುದು ಕಷ್ಟ. ಇಲ್ಲದೇ ಇದ್ದರೆ ಏನೂ ಸಾರ್ಥಕವಾಗುವುದಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ ;—ನನಗೆ ಈ ದಿವಸ ಮದುವೆಗೆ ಹೋಗುವುದಕ್ಕೆ ಬಿಡಿ, ಏಕೆಂದರೆ ಅಗ್ರಿಕಲ್ಚರ್ ಮಿನಿಸ್ಟರ್ ಅವರ ಮನೆಯಲ್ಲಿ ರಿಸೆಪ್ಷನ್ ಇದೆ. ದಯಮಾಡಿ ಇವತ್ತು ನಾನು ಹೋಗುವುದಕ್ಕೆ ಬಿಡಿ.

ಅಧ್ಯಕ್ಷರು :—ನೋಡೋಣ, ಅವರು ಮೊದಲು ಉತ್ತರ ಕೊಡಲಿ ಕೂಡಿ.

SRI H. M. CHANNABASAPPA :—May I submit "ನೋಡೋಣ" has no meaning ? We have got to function under the rule of law.

SRI H. SIDDAVEERAPPA :—Straightaway you may put it to vote. We are game for it.

MR. SPEAKER :—Let us be guided by the agreement between parties It was agreed that reply should start at 5-30 P.M.

SRI H. SIDDAVEERAPPA :—Who agreed ?

MR. SPEAKER :—After getting chits from Sri Bhasker Shetty and Sri Agnihotri it was fixed. I consulted Sri Veerappa Gowda also. Did I not consult him.

SRI K. N. Veerappa Gowda :—No, Sir.

MR. SPEAKER :—If this is postponed for tomorrow, what are you going to do for tomorrow's demands? The programme is very tight. If you postpone this it will be at the cost of other demands.

SRI H. SIDDAVEERAPPA :—What I am saying is, right from the beginning this Government is obdurate. and obstinate They went on stating that they do not want vote on account Therefore on the 30th even if there were to be half a dozen demands, you can apply guilloline. So, I cannot understand this. If they do not agree, why should we agree to this? If they insist let them reply, We will not be here.

The hon. Member and a few other members withdrew.

ಶ್ರೀ ಬಿ.ರಾಚಯ್ಯ (ವ್ಯಾವಸಾಯಿಕ ಶಾಖೆಯ ಮಂತ್ರಿಗಳು):—ಸನ್ಮಾನ್ಯ ಅಧ್ಯಕ್ಷರೇ,ಕಳೆದಎರಡು ದಿನಗಳಿಂದ ಕೃಷಿ ಮತ್ತು ತೋಟಗಾರಿಕೆ ಇಲಾಖೆ ಬೇಡಿಕೆ ಮೇಲೆ ಭಾಷಣಗಳನ್ನು ಅತ್ಯಂತ ಆಸಕ್ತಿಯಿಂದ ಕೇಳಿದ್ದೇನೆ. ಬಹುಶಃ ಮಾತನಾಡಿದಂತಹ ಮಾನ್ಯ ಸದಸ್ಯರು ಎಲ್ಲರೂ ಕೂಡ ಬಹುಮಟ್ಟಿಗೆ ರಚನಾತ್ಮಕವಾಗಿರತಕ್ಕಂಥ ಸಲಹೆಗಳನ್ನು ಕೊಟ್ಟಿದ್ದಾರೆ.........

ಶ್ರೀ ಬಿ. ಭಾಸ್ಕರ ಶೆಟ್ಟಿ:—ಐದೂವರೆ ಗಂಟೆಗೆ ರಿಪ್ಲೈ ಪ್ರಾರಂಭವಾಗುತ್ತದೆ ಎಂದು ಹೇಳಿ ಈಗ ಪ್ರಾರಂಭವಾಗಿದೆ. ಒಂದು ಕಡೆ ಜಗಳವಾಡಿ ಕೆಲವು ಸದಸ್ಯರು ಹೊರಟು ಹೋದರು. ಎಂಟು ಗಂಟೆವರೆಗೆ ಕುಳಿತುಕೊಂಡು ಮತ್ತೆ ನಾಳೆ ಬೇಗ ಬರುವುದು ಕಷ್ಟವಾಗುತ್ತೆ. ಮತ್ತು ನಾವು ಏನು ಕೆಲಸ ಮಾಡಿಕೊಳ್ಳುವುದಕ್ಕೂ ಆಗುವುದಿಲ್ಲ. ಆದುದರಿಂದ ಇದನ್ನು ಪ್ರತಿಭಟಿಸಿ ನಾವು ಹೊರಗೆ ಹೋಗುತ್ತೇವೆ.

(ಶ್ರೀ ಭಾಸ್ಕರ ಶೆಟ್ಟಿ ಮತ್ತು ಇತರ ಕೆಲವು ಸದಸ್ಯರು ಸಭಾತ್ಯಾಗ ಮಾಡಿದರು).

ಶ್ರೀ ಬಿ. ರಾಚಯ್ಯ:—ಈ ಕೃಷಿ ಬೇಡಿಕೆಗಳ ಮೇಲೆ ಮಾತನಾಡಿದಂಥ ಬಹುಮಂದಿ ಸದಸ್ಯರು ಇದುವರೆಗೆ ಏನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ ಅವು ರೈತರಿಗೆ ಹೆಚ್ಚಿನ ಸ್ಫೂರ್ತಿಯನ್ನೂ ಉತ್ಸಾಹವನ್ನೂ ತುಂಬತಕ್ಕಂಥದಾಗಿಲ್ಲ ಮತ್ತೆ ಒಂದು ಹಳೆಯ ಪದ್ಧತಿ ಪ್ರಕಾರ ಒಂದು ಕೃಷಿ ಪಾಲಸಿ ನಡೆದುಕೊಂಡು ಬಂದಿದೆ ಅಂತಲೂ, ಈಗ ಏನೇನು ಹೊಸ ಯೋಜನೆಗಳನ್ನು ಹಾಕಿಕೊಂಡಿದ್ದೇವೆಯೋ ಆ ಯೋಜನೆಗಳು ಹೆಚ್ಚಿಗೆ ಎಲ್ಲ ನೀರಾವರಿ ಪ್ರದೇಶಗಳಲ್ಲಿವೆ, ಆ ಪ್ರದೇಶಕ್ಕೆ ಹೆಚ್ಚು ಅನುಕೂಲವಾಗಿದ್ದು ಅದರಲ್ಲಿಯೂ ಕೂಡ ದೊಡ್ಡ ರೈತರಿಗೆ ಹೆಚ್ಚು ಉಪಯೋಗವಾಗಿದೆ, ಸಣ್ಣ ಹಿಡುವಳಿದಾರರಿಗೆ ಬಹಳ ಉಪಯೋಗವಾಗಿಲ್ಲ ಎಂತಲೂ ಮತ್ತು ಮಳೆ ಆಶ್ರಯವನ್ನು ನಂಬಿಕೊಂಡು ಬೇಸಾಯ ಮಾಡತಕ್ಕಂಥ ೧೦೦ ಕ್ಕೆ ೮೦ ಭಾಗದಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಕೃಷಿ ಬದಲಾವಣೆಯಲ್ಲಿ ರೈತನಿಗೆ ಬೇಕಾಗಿರತಕ್ಕ ಸಾಧನ ಸಂಪತ್ತುಗಳು ಸಕಾಲದಲ್ಲಿ ಸರಿಯಾದ ಬೆಲೆಗೆ ದೊರೆಯುತ್ತಾ ಇಲ್ಲ, ಅವನಿಗೆ ಬೇಕಾಗಿರತಕ್ಕಂಥ ಹಣವಾಗಲಿ, ಉಪಕರಣವಾಗಲಿ, ಬೀಜಗಳಾಗಲಿ, ಗೊಬ್ಬರವಾಗಲಿ, ಕ್ರಿಮಿನಾಶಕ ವಸ್ತು ಅವುಗಳ ಬೆಲೆ ಹೆಚ್ಚು ಆಗದೆ ಅವುಗಳನ್ನು ಕಡಿಮೆ ಬೆಲೆಗೆ ಕೊಡತಕ್ಕ ವ್ಯವಸ್ಥೆ ಆಗಬೇಕು ಮತ್ತು ಬೆಳೆದಂಥ ಪದಾರ್ಥಕ್ಕೆ ಸಾಕಷ್ಟು ಪ್ರಮಾಣದಲ್ಲಿ ಅವರಿಗೆ ಒಂದು ಸ್ಫೂರ್ತಿ ಬರತಕ್ಕ ಬೆಲೆಯನ್ನು ಕೊಡಿಸುವುದರಲ್ಲಿ ಸರಕಾರ ವಿಫಲವಾಗಿದೆ ಎಂಥಲೂ ಹೇಳಿದ್ದಾರೆ. ಹೀಗೆ ನಾಲ್ಕಾರು ಭಾಗಗಳಾಗಿ ಈ ಟೀಕೆಗಳನ್ನು ನಾನು ವಿಂಗಡಿಸಿಕೊಂಡು ಮತ್ತೆ ಮಾನ್ಯ ಸದಸ್ಯರು ಕಳುಹಿಸಿರತಕ್ಕಂಥ ಖೋತಾ ನಿರ್ಣಯಗಳನ್ನು ಗಮನಕ್ಕೆ ತೆಗೆದುಕೊಂಡು ನನ್ನ ಕೈಲಾದ ಮಟ್ಟಿಗೆ ಉತ್ತರ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ನಾನು ಕಳೆದ ಎರಡು ದಿವಸಗಳಿಂದ ಬಹಳ ಶಾಂತಿಯಿಂದ ಕುಳಿತು ಎಲ್ಲರೂ ಹೇಳಿದ್ದನ್ನು ಕೇಳಿದೆ. ಅಷ್ಟೇ ಉದಾರತೆಯಿಂದ ಮಾನ್ಯ ವಿರೋಧ ಪಕ್ಷದ ಸದಸ್ಯರು ಸರಕಾರದ ಉತ್ತರವನ್ನು ಕೇಳಿದ್ದರೆ ಚೆನ್ನಾಗಿತ್ತು ಎಂದು ನಾನಾದರೂ ಆಶೆಪಡುತ್ತೇನೆ. ಒಟ್ಟಿನಲ್ಲಿ ಈ ಕೃಷಿ ಬಹಳ ಕಾಲದಿಂದಲೂ ಕೂಡ ಅವಿದ್ಯಾವಂತರ ಕೈಯಲ್ಲಿ ಇದ್ದು ಅವರಲ್ಲಿ ಯಾವ ಒಂದು ಪ್ರಗತಿಯನ್ನು ಕೂಡ ಸಾಧಿಸುವುದಕ್ಕೆ ಆಗಿರಲಿಲ್ಲ. ಸರಕಾರದ ಮಟ್ಟದಲ್ಲಿ ಕೃಷಿಗೆ ಹೆಚ್ಚಿನ ಪ್ರಮಾಣದಲ್ಲಿ ಪ್ರೋತ್ಸಾಹ ಸಿಕ್ಕಿಲ್ಲ. ಆದ್ದರಿಂದ ಇದರಲ್ಲಿ ಹೆಚ್ಚಿನ ರೀತಿಯಲ್ಲಿ ನಾವು ಪ್ರಗತಿಯನ್ನು ಮಾಡಬೇಕು ಎಂದು ಹೇಳಿ ಬಹಳ ಮಟ್ಟಿಗೆ ಒತ್ತಾಯ ಮಾಡಿದ್ದಾರೆ. ನಾನಾದರೂ ಕೂಡ ಈ ಸಂಸ್ಥಾನದಲ್ಲಿ ಈ ಭೂಮಿಯನ್ನು ಸಮಪಾತಳ ಮಾಡುವುದರಲ್ಲಿ ಅಥವಾ ಭೂಸಂರಕ್ಷಣೆ ಮಾಡುವುದರಲ್ಲಾಗಲಿ ಕಳೆದ ವರ್ಷಕ್ಕಿಂತ ಇಂದಿನ ವರ್ಷದಲ್ಲಿ ಹೆಚ್ಚಿನ ಕಾರ್ಯವನ್ನು ಸಾಧಿಸಿದ್ದೇವೆಂದು ಹೇಳುವುದಕ್ಕೆ ಹೆಮ್ಮೆ ಪಡುತ್ತೇನೆ. ಎರಡುಲಕ್ಷ ಹತ್ತು ಸಾವಿರ ಎಕರೆಗಳಲ್ಲಿ ಈ ಭೂ ಸುಧಾರಣೆ ಕಾರ್ಯ ಮಾಡಬೇಕಾಗಿ ಇದ್ದರೂ ಈವೊತ್ತು ೨ ಲಕ್ಷ ೩೫ ಸಾವಿರ ಎಕರೆಗಳಲ್ಲಿ ಈ ಒಂದು ಭೂಸಂರಕ್ಷಣೆ ಕಾರ್ಯವನ್ನು ಮಾಡಲಾಗಿದೆ. ಇನ್ನೂ ಒಂದು ಕೋಟಿ ೨೦ ಲಕ್ಷ ಎಕರೆಗಳಲ್ಲಿ ಭೂಸಂರಕ್ಷಣೆ ಕಾರ್ಯಗಳು ನಡೆಯಬೇಕಾಗಿವೆ. ಕಳೆದ ವರ್ಷ ೬೦ ಲಕ್ಷ ರೂಪಾಯಿ ಹಣ ಕೊಟ್ಟಿದ್ದೆವು. ಕ್ಷಾಮ ಪರಿಹಾರದ ನಿಧಿಯಿಂದ ಕೂಡ ಹಣವನ್ನು ಉಪಯೋಗಿಸಿಕೊಂಡು ಹೆಚ್ಚು ಸಾಧನೆಯನ್ನು ಮಾಡುವುದಕ್ಕೆ ಸಾಧ್ಯವಾಯಿತು. ಈ ವರ್ಷ ಕೃಷಿ ಇಲಾಖೆ ಮುಖಾಂತರ ಒಂದು ಕೋಟಿ ೨೫ ಲಕ್ಷ ರೂಪಾಯಿಗಳಷ್ಟು ಹಣವನ್ನು ಇದಕ್ಕೆ ಒದಗಿಸಿಕೊಟ್ಟಿದ್ದೇವೆ. ಇದು ಬಹುಶಃ ಎರಡು ಲಕ್ಷ ಹತ್ತು ಸಾವಿರ ಎಕರೆಗಳಿಗೆ ಸಾಕಾಗಬಹುದು. ಅದು ಏನೇನು ಸಾಲುವುದಿಲ್ಲ ಎನ್ನುವುದನ್ನು ನಾನು ಒಪ್ಪುತ್ತೇನೆ. ಅನೇಕ ಸದಸ್ಯರು ಮಾತನಾಡುವಾಗ ಈ ಕೃಷಿ ಇಲಾಖೆಗೆ ಕಳೆದ ವರ್ಷ ಏನು ಹಣವನ್ನು ಒದಗಿಸಿಕೊಟ್ಟಿದ್ದಾರೋ ಅದಕ್ಕಿಂತ ಒಂದು ಕೋಟಿ ರೂಪಾಯಿ ಹಣ ಕಡಿಮೆ ಆಗಿದೆ. ಕೃಷಿಗೆ ಪ್ರಾಧಾನ್ಯತೆ ಕೊಡುತ್ತೇವೆ. ಕೃಷಿ ಅಭಿವೃದ್ಧಿ ಹೆಚ್ಚು ಆಗಬೇಕು. ಕೃಷಿಕರ ಅಭಿವೃದ್ಧಿ ಆಗದ ಹೊರತು ದೇಶದ ಸಂಪತ್ತು ಹೆಚ್ಚಿಸುವುದಕ್ಕಾಗುವುದಿಲ್ಲ ಎಂದು ನಾನು ಹಿಂದೆಯೂ ಹೇಳಿದ್ದೇನೆ. ಆ ಮಾತನ್ನು ನಾನು ಈಗಲೂ ಒಪ್ಪುತ್ತೇನೆ. ಆದರೆ ನಮ್ಮ ರಾಜ್ಯದಲ್ಲಿ ನೀರಾವರಿ ಸೌಕರ್ಯಗಳನ್ನು ಹೆಚ್ಚಿಸುವುದಕ್ಕೋಸ್ಕರ ಈ ಉಭಯ ಸಭೆಗಳ ರಿಸೋರ್ಸ್ಸ್ ಕಮಿಟಿ ಎಂದು ಏನು ಮಾಡಿದ್ದಾರೆ ಅವರು ಈ ಯೋಜನೆಗಳನ್ನು ಕಡಿಮೆ ಮಾಡಿ ನೀರಾವರಿಗೆ ಹೆಚ್ಚಿಗೆ ಹಣ ಕೊಡಬೇಕು ಎಂಬ ಉದ್ದೇಶದಿಂದ ಒಂದು ಕೋಟಿ ರೂಪಾಯಿಗಳವರೆಗೆ ಈ ಇಲಾಖೆಯಲ್ಲಿ ಬಡ್ಜೆಟ್ ಹಣದಲ್ಲಿ ಕಡಿಮೆ ಆಯಿತು. ಆದರೆ ಇದು ಕಡಿಮೆ ಆಗಬಾರದಾಗಿತ್ತು ಎಂದು ಅನೇಕರ ಅಭಿಪ್ರಾಯವಾಗಿದೆ. ಒಟ್ಟಿನಲ್ಲಿ ಮಳೆ ಆಶ್ರಯವನ್ನು ಅವಲಂಬಿಸಿರತಕ್ಕ ಈ ಪ್ರಾಂತ್ಯದಲ್ಲಿ ಹೆಚ್ಚಿಗೆ ನೀರಾವರಿಯನ್ನು ಉತ್ತಮಪಡಿಸಿಕೊಳ್ಳದಿದ್ದರೆ ಇನ್ನು ಹಲವಾರು ಕಾರ್ಯಕ್ರಮಗಳನ್ನು ತೆಗೆದು

(ಶ್ರೀ ಬಿ. ರಾಚಯ್ಯ)

ಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಕಾರಣದಿಂದ ಈವೊತ್ತು ದೊಡ್ಡ ನೀರಾವರಿ, ಸಣ್ಣ ನೀರಾವರಿ ಯಲ್ಲಿ ಬಾವಿಗಳನ್ನು ತೋಡಿಸುವುದು ಮತ್ತು ಸಣ್ಣ ಸಣ್ಣ ಕೆರೆಗಳನ್ನು ಕಟ್ಟಿಸುವ ವಿಷಯದಲ್ಲಿಯೂ ಸ್ವಣ್ಣ ಮಟ್ಟಿಗೆ ನಾವು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಮುಖಾಂತರ. ಷೆಡ್ಯೂಲ್ ಬ್ಯಾಂಕ್‌ಗಳ ಮುಖಾಂತರ ಸಹಾಯ ಪಡೆದು ನಮ್ಮ ಡಿಪಾರ್ಟ್‌ಮೆಂಟ್‌ನಿಂದ ಬೋರವೆಲ್ ಮಿಷನ್ ಕೊಟ್ಟು ಅವುಗಳಿಂದ ಬಾವಿ ತೋಡಿಸುವ ಮುಖಾಂತರ ನೀರನ್ನು ಒದಗಿಸಿ ಹೆಚ್ಚು ಬೆಳೆ ಬೆಳೆಯುಲಿಕ್ಕೆ ಅವಕಾಶ ಮಾಡಿದ್ದೇವೆ. ಆದರೆ ನಿರೀಕ್ಷಿಸಿದ ಮಟ್ಟದಲ್ಲಿ ಏನು ಅಭಿವೃದ್ಧಿ ಆಗಬೇಕಾಗಿತ್ತೊ, ಏನು ಕೆಲಸ ಕಾರ್ಯಗಳು ನಡೆಯಬೇಕಾಗಿತ್ತೋ ಅದು ನಡೆಯಲಿಲ್ಲ. ಕಾರಣ ಅನೇಕ ಸೊಸೈಟಿಗಳಲ್ಲಿ ಏನು ಹಳೆಯ ಬಾಕಿ ವಸೂಲು ಮಾಡಿ ರೈತರಿಗೆ ಸಕಾಲದಲ್ಲಿ ಸಾಲ ಕೊಡಬೇಕಾಗಿತ್ತೋ ಆ ಕೆಲಸಗಳು ನಡೆಯದೆ ಇದ್ದುದರಿಂದ ಈ ಭಾಗದಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧನೆ ಮಾಡುವುದಕ್ಕೆ ಆಗಲಿಲ್ಲ.

ಶ್ರೀಮಾನ್ ಚನ್ನಬಸಪ್ಪನವರು ಮಾತನಾಡುವಾಗ ಬಾವಿ ತೋಡಿಸುವುದು ಒಂದು ಇಲಾಖೆ, ಹಣ ಕೊಡುವುದು ಮತ್ತೊಂದು ಇಲಾಖೆ, ಹೀಗೆ ಬೇರೆ ಬೇರೆ ಕಾರ್ಯಕ್ರಮ ಹಾಕಿಕೊಳ್ಳುವುದಕ್ಕೆ ಬದಲಾಗಿ ಸರ್ಕಾರದವರೇ ಈ ಕೆಲಸವನ್ನು ಏಕೆ ಮಾಡಬಾರದು ಎಂದು ಅಗ್ರಹಪೂರ್ವಕವಾಗಿ ಒತ್ತಾಯ ಪಡಿಸಿದರು. ಒಂದು ವ್ಯವಸ್ಥಿತವಾದ ರೀತಿಯಲ್ಲಿ ಹಣವನ್ನು ಒದಗಿಸಿಕೊಡುವುದು ಮತ್ತು ಕೆಲಸ ಮಾಡುವುದು ಎರಡೂ ಒಂದೇ ಇಲಾಖೆಯ ಮುಖಾಂತರ ಆಗಿದ್ದರೆ ಚೆನ್ನಾಗಿತ್ತು. ಆದರೂ ಕೂಡ ಈಗಿರತಕ್ಕ ಇಲಾಖೆಗಳು ಏನಿವೆ ಅವುಗಳ ಸಹಕಾರವನ್ನು ಪಡೆದು ಈ ಕೆಲಸವನ್ನು ಮಾಡಬೇಕಾಗಿದೆ. ಕ್ಯಾಬಿನೆಟ್ ಮಟ್ಟದಲ್ಲಿ ಇದಕ್ಕೆ ಒಂದು ಕ್ಯಾಬಿನೆಟ್ ಸಬ್‌ಕಮಿಟಿ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಇರುವುದರಿಂದ ಈ ವಿಷಯಗಳನ್ನು ಸಂಬಂಧ ಪಟ್ಟ ಮಂತ್ರಿಗಳು ಮತ್ತು ಅಧಿಕಾರಿಗಳು ಚರ್ಚೆ ಮಾಡಿ ಕೆಲಸಕಾರ್ಯಗಳನ್ನು ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದೇವೆ. ಈ ದೃಷ್ಟಿಯಿಂದ ಈ ಬಾವಿ ತೋಡಿಸತಕ್ಕ ವಿಷಯದಲ್ಲಿ ಬಹುಶಃ ಅನೇಕರಿಗೆ ನಾವು ಏನು ಸಹಾಯವನ್ನು ಮಾಡಬೇಕಾಗಿತ್ತೊ ಅದನ್ನು ಮಾಡಿದ್ದೇವೆ. ಹಣ ಸಹಾಯ ಮಾಡಿದರೂ ಕೂಡ ಕೆಲವು ಸಂದರ್ಭಗಳಲ್ಲಿ ಬಂಡೆಗಳು ಸಿಕ್ಕುತ್ತವೆ. ಅದನ್ನು ಆಳಪಡಿಸವುದಕ್ಕೆ ಆಗುವುದಿಲ್ಲ. ಮತ್ತೆ ಕೆಲವು ಸಂದರ್ಭಗಳಲ್ಲಿ ಅವರಿಗೆ ಕೊಟ್ಟಂಥ ಹಣ ಸಾಲುವುದಿಲ್ಲ, ಕಡಿಮೆಯಾಗಿರುತ್ತದೆ. ಇನ್ನು ಕೆಲವು ಸಂದರ್ಭ ಗಳಲ್ಲಿ ಯಾವ ಕೆಲಸಕ್ಕೆ ಸಾಲ ಪಡೆದಿರುತ್ತಾರೆ ಬಹುಶಃ ಆ ಕೆಲಸಕ್ಕೆ ನೇರವಾಗಿ ಉಪಯೋಗಿಸಿರುವುದಿಲ್ಲ. ಆದ್ದರಿಂದ ಇಲಾಖೆ ಮುಖಾಂತರ ಅವರಿಗೆ ಸೌಲಭ್ಯವನ್ನು ಒದಗಿಸಿಕೊಡುವುದಕ್ಕೆ ಸಾಧ್ಯವೇ ಅಂತ ಅನ್ನುವುದನ್ನು ತಿಳಿದುಕೊಂಡು, ಕಲ್ಲುಬಂಡೆ ಸಿಕ್ಕಿದರೆ ಬ್ಲಾಸ್ಟಿಂಗ್ ಯುನಿಟ್ಟು ಒದಗಿಸುವುದಕ್ಕೂ, ಬೋರಿಂಗ್ ಮಷೀನ್‌ಗಳನ್ನು ತರಿಸಿಕೊಡುವುದಕ್ಕೂ ಮತ್ತು ಭೂಮಿಯನ್ನು ಸಮಪಾತಾಳವಾಗಿ ಮಾಡುವುದಕ್ಕೆ, ಮಟ್ಟಮಾಡುವುದಕ್ಕೆ ಬುಲಡೋಜರ್ ಮತ್ತು ಟ್ರಾಕ್ಟರಗಳ ವ್ಯವಸ್ಥೆಯನ್ನು ಮಾಡುವುದಕ್ಕೂ ಒಂದು ಯೋಜನೆಯನ್ನು ಕಳೆದ ವರ್ಷ ನಾನು ಪರಿಶೀಲನೆ ಮಾಡುತ್ತೇನೆ ಎಂದು ಈ ಮಾನ್ಯ ಸಭೆಯಲ್ಲಿ ಹೇಳಿದ್ದೆ. ಆ ಬಗ್ಗೆ ಮತ್ತೆ ನಾನು ಉದ್ದವಾದ ಭಾಷಣಮಾಡುವುದಕ್ಕೆ ಇಚ್ಛೆಪಡುವು ದಿಲ್ಲ, ಏಕೆಂದರೆ ಸರ್ಕಾರದವರು ಏನೋ ಹೇಳುತ್ತಾರೆ ಯಾವುದನ್ನು ಮಾಡುವುದಕ್ಕೂ ಅವರಿಗೆ ಮನಸ್ಸಿಲ್ಲ ಎಂದು ಶ್ರೀಮಾನ್ ಚನ್ನಬಸಪ್ಪನವರು ಬಹಳವಾಗಿ ಹೇಳಿದರು. ಆದ್ದರಿಂದ ಕಳೆದ ಸಾಲಿನಲ್ಲಿ ಈ ಸಭೆಯಲ್ಲಿ ಏನು ಟೀಕೆ ಬಂತು ಮತ್ತು ಏನು ರಚನಾತ್ಮಕವಾದ ಸಲಹೆಗಳು ಬಂದವು ಅವುಗಳ ವಿಷಯದಲ್ಲಿ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದೆ ಅವುಗಳ ಬಗ್ಗೆ ಹೆಚ್ಚು ವಿವರವಾಗಿ ಹೇಳುವುದಕ್ಕೆ ಅವಸಗಿಷ್ಟವಿಲ್ಲದೆ ಇರುವುದರಿಂದ ಇಷ್ಟು ಮಾತ್ರ ಹೇಳಬಲ್ಲೆ. ಕಳೆದ ವರ್ಷ ಈ ಮಾನ್ಯ ಸಭೆಗೆ ಏನು ಆಶ್ವಾಸನೆ ಕೊಟ್ಟಿದ್ದೆ ಅದರ ಪ್ರಕಾರ ಈ ವರ್ಷ ಎಂದರೆ ೬೯–೭೦ನೇ ಸಾಲಿನಲ್ಲಿ ಮಣ್ಣನ್ನು ಪರೀಕ್ಷೆ ಮಾಡುವುದಕ್ಕೆ ಸಂಶೋಧನಾ ಕೇಂದ್ರಗಳನ್ನು ತೆರೆಯಬೇಕೆಂದು ಹೇಳಿ ಪ್ರತಿ ಜಿಲ್ಲೆಗೆ ಒಂದಾದರೂ ಮಣ್ಣಿನ ಪರೀಕ್ಷಾ ಕೇಂದ್ರ ಇರಬೇಕೆಂದು ಹೇಳಿದ್ದೆ. ಅದರ ಪ್ರಕಾರ ಈ ವರ್ಷ ಎರಡು ಸಂಶೋಧನಾ ಕೇಂದ್ರಗಳನ್ನು ಒಂದು ಶಿವಮೊಗ್ಗಾದಲ್ಲಿ ಮತ್ತೊಂದು ಗುಲ್ಬರ್ಗಾದಲ್ಲಿ ಸರ್ಕಾರ ಮಂಜೂರು ಮಾಡಿದೆ. ಅಗ್ರಿಕಲ್ಚರಲ್ ಕಾಲೇಜು ಗಳನ್ನು ಹೆಚ್ಚಿಸಬೇಕು, ಫಾರ್ಮರ್ಸ್ ಟ್ರೈನಿಂಗ್ ಸೆಂಟರ್ಸ್‌ನ್ನು ಹೆಚ್ಚು ಮಾಡಬೇಕೆಂದು ಕೇಳಿದ್ದರು. ಗುಲ್ಬರ್ಗಾಕ್ಕೆ ಈ ವರ್ಷ ಒಂದು ಅಗ್ರಿಕಲ್ಚರಲ್ ಸ್ಕೂಲ್‌ನ್ನು ಮಂಜೂರು ಮಾಡಿದ್ದೇವೆ. ಕೂಡ್ಲಗಿ, ಅರಭಾವಿ, ಹಳ್ಳಿಕೇರಿ ಈ ಮೂರು ಕಡೆ ಮೂರು ಫಾರ್ಮರ್ಸ್ ಟ್ರೈನಿಂಗ್ ಸೆಂಟರ್ಸ್‌ನ್ನು ಮಂಜೂರು ಮಾಡಿದ್ದೇವೆ. ಮತ್ತು ವ್ಯವಸಾಯದ ವಿಶ್ವವಿದ್ಯಾನಿಲಯದಲ್ಲಿ ೨೦೦ ವಿದ್ಯಾರ್ಥಿಗಳಿಗೆ ಅವಕಾಶ ಇದ್ದುದನ್ನು ೩೦೦ರ ವರೆಗೂ ಹೆಚ್ಚು ಮಾಡಲು ಅವಕಾಶ ಮಾಡಿಕೊಟ್ಟಿದ್ದೇವೆ. ಮಣ್ಣು ಸಂರಕ್ಷಣಾ ಕಾರ್ಯಕ್ರಮ ಹೆಚ್ಚು ವಿತರಣೆಯಿಂದ ಆಗಬೇಕೆಂಬ ಉದ್ದೇಶದಿಂದ ಇನ್ನೂ ಹೆಚ್ಚು ಸಬ್-ಡಿವಿಜನ್‌ಗಳು, ಡಿವಿಜನ್‌ಗಳು ಆಗಬೇಕೆಂದು ಕೇಳಿದ್ದರು. ಅದನ್ನು ಈ ವರ್ಷ ಪರಿಶೀಲಿಸುತ್ತೇನೆ ಎಂದು ಹೇಳಿದ್ದೆ, ಇದರ ಪ್ರಕಾರ ಈ ವರ್ಷ ಎರಡು ಸಾಯಲ್ ಕನ್‌ಸರ್ವೇಷನ್ ಡಿವಿಜನ್‌ಗಳನ್ನು ಶಿವಮೊಗ್ಗ ಮತ್ತು ಬಳ್ಳಾರಿಯಲ್ಲಿ ಸರ್ಕಾರ ಪ್ರಾರಂಭ

ಮಾಡುವುದಕ್ಕೆ ಮಂಜೂರು ಮಾಡಿದೆ. ಬುಲ್‌ಡೋಜರ್, ಟ್ರ್ಯಾಕ್ಟರ್ಸ್, ಪವರ್ ಟಿಲ್ಲರ್ಸ್ ಕೆಟ್ಟು ಹೋದರೆ ಅವನ್ನು ರಿಪೇರಿ ಮಾಡುವುದಕ್ಕೆ ಸಾಕಾದಷ್ಟು ಪ್ರಮಾಣದಲ್ಲಿ ವರ್ಕ್‌ಷಾಪ್ ಇಲ್ಲ ಅವನ್ನು ತೆರೆಯಬೇಕೆಂದು ಕಳೆದ ವರ್ಷ ಕೇಳಿದ್ದರು ಅದಕ್ಕನುಗುಣವಾಗಿ, ರಾಯಚೂರು, ಕೋಲಾರ, ಶಿವಮೊಗ್ಗ ಮತ್ತು ಧಾರವಾಡ ಈ ೪ ಪ್ರದೇಶಗಳಲ್ಲಿ ವರ್ಕ್‌ಷಾಪುಗಳನ್ನು ೨೯ ಲಕ್ಷ ರೂಪಾಯಿಗಳ ಅಂದಾಜಿನಲ್ಲಿ ತೆರೆದು ಪ್ರಾರಂಭ ಮಾಡಿದ್ದೇವೆ. ಸಾಯಲ್ ಸರ್ವೆ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ನಲ್ಲಿ ಮಾಡಬೇಕಾಗಿದೆ, ಮತ್ತು ಲ್ಯಾಂಡ್ ರೆಕ್ಲಮೇಷನ್ ಮಾಡಬೇಕಾಗಿದೆ. ಕ್ರಾಪ್ ಪ್ಯಾಟ್ರನ್ ಮಾಡಬೇಕಾಗಿದೆ, ಇದಕ್ಕೂ ಕೂಡ ಮುಂಜಾಗರೂಕತೆಯಿಂದ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಕಳೆದ ವರ್ಷ ಹೇಳಿದ್ದೆ, ಈ ವರ್ಷ ಮಂಜೂರು ಮಾಡಿದ್ದೇವೆ. ಇಂಟೆನ್ಸೀವ್ ಅಗ್ರಿಕಲ್ಚರಲ್ ಪ್ರೋಗ್ರಾಂನಲ್ಲಿ ಹತ್ತು ಜಿಲ್ಲೆಗಳಿಗೆ ಮಂಜೂರಾತಿಕೊಟ್ಟು, ಈ ವರ್ಷ ಹೊಸದಾಗಿ ಬೆಂಗಳೂರು ಮತ್ತು ಗುಲ್ಬರ್ಗಾ ಜಿಲ್ಲೆಗಳಿಗೆ ಐ. ಎ. ಪಿ. ಪ್ರೋಗ್ರಾಂನ್ನು ಮಂಜೂರು ಮಾಡಿದ್ದೇವೆ. ಅಗ್ರಿಕಲ್ಚರಲ್ ಇನ್‌ಫರ್ಮೇಷನ್ ಸೆಂಟರ ಅಂತ ಹೇಳಿ ರೈತರಿಗೆ ಬೇಕಾಗಿರತಕ್ಕ ತಿಳಿವಳಿಕೆಯನ್ನು ಕೊಡುವುದಕ್ಕೆ, ಯಾವ ಕಾಲಕ್ಕೆ ಯಾವ ಬೆಳೆಯನ್ನು ಬೆಳೆಯಬೇಕು, ಯಾವ ಕಾಲದಲ್ಲಿ ಗೊಬ್ಬರ ಹಾಕಬೇಕು, ಯಾವ ಬೀಜ ಹಾಕಬೇಕು, ಕ್ರಿಮಿ ನಾಶಕಗಳನ್ನು ಯಾವ ರೀತಿ ಬಳಸಬೇಕು, ಯಾವ ರೀತಿ ಮುಂಜಾಗರೂಕತೆಯ ಕ್ರಮ ತೆಗೆದುಕೊಳ್ಳಬೇಕು ಎಂಬುದನ್ನು ತಿಳಿಸುವುದಕ್ಕೆ ಇನ್‌ಫರ್ಮೇಷನ್ ಸೆಂಟರ್‌ಗಳನ್ನು ಮಂಜೂರು ಮಾಡಿದ್ದೇವೆ. ಅದರ ಜೊತೆಗೆ ಐ. ಎ. ಡಿ. ಪಿ. ಪ್ರೋಗ್ರಾಂನ್ನು ರಾಯಚೂರಿನಲ್ಲೂ ಕೂಡ ಮಂಜೂರು ಮಾಡಿದ್ದೇವೆ. ಮತ್ತು ಎ. ಐ. ಆರ್. ನಲ್ಲಿ ರೈತರ ತಿಳಿವಳಿಕೆಗಾಗಿ ಅನೌನ್ಸ್‌ಮೆಂಟ್‌ಗಳನ್ನು ಮಾಡುತ್ತಾ ಇದ್ದೇವೆ. ನಮ್ಮ ಕೇಂದ್ರದಲ್ಲಿದ್ದ ಫಾರ್ಮರ್ಸ್ ಫೋರಂಗೆ ಇಬ್ಬರು ಅಧಿಕಾರಿಗಳನ್ನು ಕಳುಹಿಸಿಕೊಟ್ಟು ರೈತರಿಗೆ ಬೇಕಾಗಿರತಕ್ಕ. ತಿಳಿವಳಿಕೆ ಮತ್ತು ತಾಂತ್ರಿಕ ಜ್ಞಾನವನ್ನು ಕೊಡಬಹುದೋ ಅದನ್ನು ಕೊಡುವುದಕ್ಕೆ ಸೂಕ್ತವಾದ ಏರ್ಪಾಡನ್ನು ಮಾಡಿದ್ದೇವೆ. ಮೂರು ಅಡೀಷನಲ್ ಯುನಿಟ್ಸ್‌ನ್ನು ಸೀ ಐಲೆಂಡ್ ಕಾಟನ್ ಬೆಳೆಯುವುದಕ್ಕೆ ಉತ್ತಮ ಪಡಿಸುವುದಕ್ಕೆ ಹೊಸದಾಗಿ ಮಂಜೂರು ಮಾಡಿದ್ದೇವೆ. ಒಂದು ಜಿಲ್ಲೆಯಿಂದ ಮತ್ತೊಂದು ಜಿಲ್ಲೆಗೆ ಹೋಗಿ ರೈತರು ಬೆಳೆದದ್ದನ್ನು ನೋಡಿ ಅನುಭವ ಪಡೆಯುವುದಕ್ಕೆ ಫಾರ್ಮರ್ಸ್ ಎಕ್ಸ್‌ಚೇಂಜ್ ಪ್ರೋಗ್ರಾಂ ಅಂತ ಒಂದು ಯೋಜನೆಯನ್ನು ಈ ವರ್ಷ ಮಂಜೂರು ಮಾಡಿದ್ದೇವೆ. ಗಂಗಾವತಿಯಲ್ಲಿ ಇನ್ನೊಂದು ವರ್ಕ್‌ಷಾಪ್‌ನ್ನು ಗ್ರಾಮ ಸೇವಕ್ ಟ್ರೇನಿಂಗ್ ಸೆಂಟರಿಗೆ ಅಟ್ಯಾಚ್‌ಮಾಡಿಸಿ ಕೊಟ್ಟಿದ್ದೇವೆ. ಬಾಗಲಕೋಟೆಯಲ್ಲಿರುವ ಒಂದು ಟ್ರೈನಿಂಗ್ ಸೆಂಟರ್‌ನ್ನು ಅಪ್ ಗ್ರೇಡ್ ಮಾಡಿ ಈ ವರ್ಷ ಅದಕ್ಕೆ ಮಂಜೂರಾತಿ ಕೊಟ್ಟಿದ್ದೇವೆ.

ಸೆಲಿನಿಟಿ ಹೆಚ್ಚಾಗುತ್ತಾ ಇದೆ. ಅದನ್ನು ಹೋಗಲಾಡಿಸುವುದಕ್ಕೆ ಏನೂ ಕ್ರಮ ತೆಗೆದುಕೊಂಡಿಲ್ಲ ಎಂದು ಮಾನ್ಯ ಸದಸ್ಯರು ಹೇಳಿದರು. ಸಾಯಲ್ ಕನ್‌ಸರ್ವೇಷನ್ ಮೆಸರ್ಸ್‌ನ್ನು ತುಂಗಭದ್ರಾ ಏರಿಯಾದಲ್ಲಿ ಮಂಜೂರು ಮಾಡಿದ್ದೇವೆ. ಹೊಸದಾಗಿ ಈ ವರ್ಷ ಹರಳು ಬೆಳೆಸತಕ್ಕ ಒಂದು ಯೋಜನೆಯನ್ನು ಮಂಜೂರು ಮಾಡಿದ್ದೇವೆ. ಇನ್ನು ಮುಂದಿನ ವರ್ಷದಲ್ಲಿ ನಮ್ಮ ಪ್ರೋಗ್ರಾಂ ಏನಿದೆ ಎಂಬುದನ್ನು ಹೇಳಬೇಕೆಂದು ಇದ್ದೇನೆ.

6–30 P.M.

ಮುಂದಿನ ವರ್ಷ ೭೯ ಸಾವಿರ ಎಕರೆಗಳಲ್ಲಿ ಹೆಚ್ಚು ನೀರಾವರಿ ಮೂಲಕ ಬೆಳೆ ಬೆಳೆಸಲು ಕಾರ್ಯಕ್ರಮವಿದೆ. ಅದರಲ್ಲಿ ಬಹುತಃ ೨೦ ಸಾವಿರ ಬಾವಿ ತೋಡಿ, ೪೦೦ ಬೋರ್ ವೆಲ್ ತೆಗೆದು, ೧೦ ಸಾವಿರ ಎಲೆಕ್ಟ್ರಿಕ್ ಪಂಪುಸೆಟ್ಟುಗಳನ್ನು ಒದಗಿಸಿ, ೧೫೦೦ ಡೀಸಲ್ ಪಂಪುಗಳನ್ನು ಕೊಟ್ಟು ಈ ಕಾರ್ಯ ಮಾಡಬೇಕೆಂಬ ಗುರಿಯಿದೆ. ಮತ್ತು ೨೫ ಸಾವಿರ ಎಕರೆ ವೇಸ್ಟ್ ಲ್ಯಾಂಡನ್ನು ಬುಲ್‌ಡೋಜರುಗಳು ಮತ್ತು ಟ್ರ್ಯಾಕ್ಟರುಗಳ ಮೂಲಕ ಸಮ ಮಾಡಲು ಪ್ರಯತ್ನಮಾಡಬೇಕೆಂದಿದೆ. ೨ ಲಕ್ಷ ೧೦ ಸಾವಿರ ಎಕರೆ ಭೂ ಸಂರಕ್ಷಣೆ ಕಾರ್ಯಮಾಡಬೇಕೆಂಬ ಉದ್ದೇಶವಿದೆ. ಇದಕ್ಕೆ ಮುಂದಿನ ವರ್ಷ ಬೇಕಾದ ರಾಸಾಯನಿಕ ಗೊಬ್ಬರ ೩ ಲಕ್ಷ ಟನ್ ಕೊಟ್ಟು ಹೆಚ್ಚು ಬೆಳೆಯುವುದಕ್ಕೆ ಪ್ರಯತ್ನ ಮಾಡಬೇಕೆಂಬ ಯೋಜನೆ ಇದೆ. ಕ್ರಿಮಿನಾಶಕ ಔಷಧಿ ಉಪಯೋಗಮಾಡಿ ಬೆಳೆ ಸಂರಕ್ಷಣೆ ಮಾಡಲು ಮುಂದಿನ ವರ್ಷ ೫೦ ಲಕ್ಷ ಎಕರೆಗಳಿಗೆ ಸಂಬಂಧಪಟ್ಟ ಕಾರ್ಯಕ್ರಮವಿದೆ. ೧೯೭೧ನೆಯ ಸಾಲಿನಲ್ಲಿ ಎರಡು ಜಿಲ್ಲೆಗಳಲ್ಲಿ ಐ. ಎ. ಪಿ ಪ್ರೋಗ್ರಾಂ ಜಾರಿಗೆ ತರಬೇಕೆಂಬ ಯೋಜನೆ ಇದೆ. ಸುಮಾರು ೧೪ ಲಕ್ಷ ಎಕರೆಯಲ್ಲಿ ಹೆಚ್ಚು ಇಳುವರಿ ಕೊಡುವ ಬೆಳೆ ಬೆಳೆಯಬೇಕೆಂಬ ಗುರಿ ಇದೆ. ಕಮರ್ಷಿಯಲ್ ಕ್ರಾಪ್ಸ್ ಎಂದರೆ ಹತ್ತಿ, ಎಣ್ಣೆಕಾಳು, ಶೇಂಗ, ಹೊಗೆಸೊಪ್ಪು ಇವುಗಳನ್ನು ೭ ಲಕ್ಷ ಎಕರೆಗಳಲ್ಲಿ ಉತ್ಪತ್ತಿ ಮಾಡಬೇಕೆಂಬ ಗುರಿ ಇದೆ. ಇದಕ್ಕೆ ಹಿಂದಿನಿಂದ ನಾವೇನು ಉತ್ಪತ್ತಿ ಮಾಡಿದ್ದೇವೆ ಅದನ್ನು ಮುಂದುವರೆಸುವುದಕ್ಕೆ ಹೊಸದಾಗಿ ಕೆಲವು ಯೋಜನೆಗಳನ್ನು ಅಳವಡಿಸುವುದು ಇದೆ. ಹೊಸದಾಗಿ ಅಳವಡಿಸಿರುವ ಯೋಜನೆಯಲ್ಲಿ ಸಣ್ಣ ಹಿಡುವಳಿಯವರಿಗೆ ಇದುವರೆಗೆ ಹಾಕಿರುವ ಯೋಜನೆ ಪ್ರಕಾರ ಅವರಿಗೆ ಸಕಾಲದಲ್ಲಿ ಸಾಲ ಸಿಕ್ಕುವುದಿಲ್ಲ, ಬ್ಯಾಂಕುಗಳು ಅಥವಾ ಸಹಕಾರ

(ಶ್ರೀ ಬಿ. ರಾಚಯ್ಯ)

ಸಂಘಗಳು ಮುಂದೆ ಬಂದು ಕೊಡುವುದಿಲ್ಲ ಎಂದು ಕೇಂದ್ರ ಸರಕಾರ ಸಣ್ಣ ಹಿಡುವಳಿದಾರರಿಗೆ ಅನುಕೂಲ ಮಾಡಲು ಒಂದು ಯೋಜನೆಗೆ ಒಪ್ಪಿದೆ, ಮೈಸೂರು ಜಿಲ್ಲೆ ಒಂದು ಮಾತ್ರ ಅದಕ್ಕೆ ಗೊತ್ತುಮಾಡಿತ್ತು. ನಾವು ಎರಡು ಜಿಲ್ಲೆ ಗೊತ್ತುಮಾಡಿದ್ದೆವು. ಬಿದರೆ ಮತ್ತು ಮೈಸೂರು ಜಿಲ್ಲೆಗಳಲ್ಲಿ ಸಣ್ಣ ಹಿಡುವಳಿದಾರರಿಗೆ ೩ ಕೋಟಿಗಿಂತ ಹೆಚ್ಚು ಸಾಲಕೊಡಲು ಒಪ್ಪಿಗೆ ಪಡೆಯಲಾಗಿದೆ, ಇನ್ನೂ ಎರಡು ಜಿಲ್ಲೆಯಲ್ಲಿ ಮಾಡುತ್ತೇವೆ ಸಹಕಾರ ಕೊಡಿ ಎಂದು ಕೇಂದ್ರ ಸರಕಾರವನ್ನು ಕೇಳಿದ್ದೇವೆ. ಹೆಚ್ಚು ಇಳುವರಿ ಕೊಡುವ ಬೀಜ, ರಾಸಾಯನಿಕ ಗೊಬ್ಬರ, ಕ್ರಿಮಿನಾಶಕ ಔಷಧಿ ಕೆಲವು ಭಾಗದವರಿಗೆ ದೊರಕಿಲ್ಲವೆಂಬುದು ನಿರ್ವಿವಾದವಾದ ವಿಚಾರವಾಗಿದೆ. ಈ ಕಾರಣದಿಂದ ಇನ್ನು ಮೇಲೆ ಬ್ಯಾಂಕುಗಳ ರಾಷ್ಟ್ರೀಕರಣವಾದಮೇಲೆ ಕೆಲವು ಕಡೆ ಹಣ ಸಲೀಸಾಗಿ ಸಿಕ್ಕುತ್ತಿದೆ, ಆದರೆ ಚನ್ನಬಸಪ್ಪನವರು ಹೇಳಿದಂತೆ ವೇರ್‌ಹೌಸ್ ಕಾರ್ಪೊರೇಷನ್ನಿನಲ್ಲಿ ಬೆಳೆದವರು ತಮ್ಮ ಧಾನ್ಯ ಇಟ್ಟರೆ ಸಾಲಪಡೆಯಲು ನಿರ್ಬಂಧ ಸ್ವಲ್ಪ ಇದೆ. ಅದನ್ನು ತೆಗೆಯುವವರೆಗೆ ಅನುಕೂಲವಿಲ್ಲ. ಆ ವಿಚಾರದಲ್ಲಿ ಕೇಂದ್ರ ಸರಕಾರದೊಡನೆ ವ್ಯವಹರಿಸಿ ಸಾಧ್ಯವಾದ ಮಟ್ಟಿಗೆ ಸೌಲಭ್ಯ ದೊರಕಿಸಲು ಪ್ರಯತ್ನಮಾಡುತ್ತೇವೆ. ಇದುವರೆಗೆ ಕೇಂದ್ರ ಸರಕಾರದವರು ಔಷಧಿಗಳಿಗಾಗಿ ೨೫ ಪರ್ಸೆಂಟ್ ಸಬ್ಸಿಡಿ ಕೊಡುತ್ತಿದ್ದುದನ್ನು ನಿಲ್ಲಿಸಿದ್ದಾರೆ, ಕಾರಣ ಚನ್ನಬಸಪ್ಪನವರು ಹೇಳಿದರು, ಅದನ್ನು ರಾಜ್ಯ ಸರಕಾರ ಸ್ವಂತ ಖರ್ಚಿನಿಂದ ಮುಂದುವರಿಸುವುದು. They have made inroads into the powers of the State Government with regard to the policies and programmes of agricultural production.

ರಾಜ್ಯಾಂಗದ ಕನೆಕರೆಂಟ್ ಲಿಸ್ಟಿನಲ್ಲಿ ಬೆಲೆ ನಿಯಂತ್ರಣ ವಿಚಾರ ಇದೆ, ಆದುದರಿಂದ ಕೇಂದ್ರ ಸರಕಾರಕ್ಕೆ ಹಕ್ಕಿದೆ, ಆದರೆ ನಮ್ಮ ಸಲಹೆ ಪ್ರಕಾರ ಕೇಂದ್ರ ಸರಕಾರದವರು ಮಾಡಬೇಕೆ ಹೊರತು ಹಾಗೆ ಮುಂದು ವರೆಯುವಂತಿಲ್ಲ, ನಮ್ಮ ಹಕ್ಕಿನಮೇಲೆ ಅವರು ಪ್ರವೇಶಮಾಡುತ್ತಿದ್ದಾರೆಂಬ ಭಾವನೆಯಿಲ್ಲಿಲ್ಲ. ಮುಖ್ಯ ಮಂತ್ರಿಗಳು ಮತ್ತು ಆರ್ಥಿಕ ಮಂತ್ರಿಗಳು ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್ಲಿನಲ್ಲಿ ಕೇಂದ್ರದ ಸಹಾಯ ವೇನಿದೆ ಅದನ್ನು ಒಟ್ಟಾಗಿ ಕೊಡಬೇಕು, ಯಾವ ಇಲಾಖೆಗೆ ಹಂಚಬೇಕೋ ಅದನ್ನು ನಾವೇ ಹಂಚುತ್ತೇವೆ ಎಂದು ತಿಳಿಸಿದ್ದಾರೆ. ಈಗ ಕೇಂದ್ರದ ಸಹಾಯ ಬಹಳ ಮಟ್ಟಿಗೆ ಕಡಿಮೆಯಾಗಿ ಕೆಲವು ಬಾಬುಗಳಿಗೆ ಮಾತ್ರ ಸಹಾಯ ದೊರೆಯುತ್ತಿದೆ. ಕ್ರಿಮಿನಾಶಕಗಳಿಗೆ ಸಬ್ಸಿಡಿ ಕೊಡುವುದು ಅಥವ ಇತರ ಸಂದರ್ಭಗಳಲ್ಲಿ ಕೊಡುವುದನ್ನು ಕಡಿಮೆ ಮಾಡಿದ್ದಾರೆ, ಅದನ್ನು ನಿಲ್ಲಿಸಬಾರದು, ಶೇಕಡ ೨೫ರಷ್ಟಾದರೂ ಕೊಡಬೇಕು. ಅದಕ್ಕಿಂತ ಕಡಿಮೆ ಮಾಡಬಾರದು ಎಂದು ಮನವಿಮಾಡಲಾಗಿದೆ, ಕೆಲವು ಸಂದರ್ಭಗಳಲ್ಲಿ ಶೇಕಡ ೫೦ ಭಾಗ ಕೊಟ್ಟು ಮಂಡ್ಯ, ಧಾರವಾಡ ಮುಂತಾದ ಕಡೆಗಳಲ್ಲಿ ವಿಮಾನದಿಂದ ಕ್ರಿಮಿನಾಶಕಗಳನ್ನು ಸಿಂಪಡಿಸಿದ್ದೇವೆ, ಇದಕ್ಕೆ ತಾಲ್ಲೂಕು ಬೋರ್ಡಿನವರು ಕಾಂಟ್ರಿಬ್ಯೂಷನ್ ಕೊಡಬೇಕು, ಮಂಡ್ಯ ಮತ್ತು ಪಾಂಡವಪುರದವರು ಕೊಡಲು ಮುಂದೆ ಬಂದರು, ನಂಜನಗೂಡಿನವರು ಮುಂದೆ ಬರಲಿಲ್ಲ, ಧಾರವಾಡ ತಾಲ್ಲೂಕಿನಲ್ಲಿ ೬೦ ಸಾವಿರ ಎಕರೆಯಲ್ಲಿದ್ದ ಹೈಬ್ರಿಡ್ ಜೋಳದ ಫಸಲಿಗೆ ಔಷಧಿ ಸಿಂಪಡಿಸಲಾಗಿದೆ. ಆದ್ದರಿಂದ ಅವರು ಹೆಚ್ಚು ಬೆಳೆಯಲು ಸಾಧ್ಯವಾಗಿದೆ, ಕೆಲವು ಕಡೆ ಜೂನ್ ತಿಂಗಳಲ್ಲಿ ಮಳೆ ಬಾರದೆ ಅಕ್ಟೋಬರಿನಲ್ಲಿ ಹೊಡೆ ಬಂದು ಕಾಳು ಬರಲಿಲ್ಲ, ಹುಳ ಬಿದ್ದ ಕಡೆ ಔಷಧಿ ಹಾಕಲು ಜನರು ಒಪ್ಪದೆ ಹೋದುದರಿಂದ ಔಷಧಿ ಹಾಕಲು ಸಾಧ್ಯ ವಾಗಲಿಲ್ಲ, ನಾವು ರೈತರಿಗೆ ಸಹಾಯಮಾಡಬೇಕೆಂದು ಪ್ರಯತ್ನಮಾಡಿರುವ ಕಡೆ ರಾಜಕೀಯವೇನೂ ಇಲ್ಲ, ಮತ್ತು ಯಾವ ತಾರತಮ್ಯವನ್ನೂ ಮಾಡಿಲ್ಲ ಎಂದು ವಿನಯಪೂರ್ವಕವಾಗಿ ಹೇಳುತ್ತೇನೆ. ಈ ದಿನ ಬಹುಶಃ ಡಿಮ್ಯಾಂಡಿನಮೇಲೆ ಮಾನ್ಯ ಸಭೆ ನಿರೀಕ್ಷೆಮಾಡಿದ ಪ್ರಮಾಣದಲ್ಲಿ ಉತ್ತರ ಕೊಡುವುದಕ್ಕೆ ಉತ್ಸಾಹ ವಿಲ್ಲ, ಕಾರಣ, ಏನು ನಿಷ್ಠೆಯಿಂದ ಕೃಷಿಕ್ಷೇತ್ರದಲ್ಲಿ ಕೆಲಸಮಾಡಬೇಕೆಂದು ಪ್ರಯತ್ನ ಮಾಡಲಾಗಿತ್ತೋ ಆ ಕೆಲಸ ನಾವು ಮಾಡುವುದಕ್ಕೆ ಸಾಧ್ಯವಿದೆ ಎಂದು ಬಹಳ ಧೈರ್ಯದಿಂದ ಹೇಳುವಹಾಗಿಲ್ಲ, ಕಾರಣ ಇಷ್ಟೆ, ಯೋಜನೆ ತಯಾರಿಸುವಾಗ ಹಣಕಾಸು ಒದಗಿಸುವಾಗ ಬಹುಶಃ ಜನರ ಆಶೋತ್ತರ ಏನಿದೆ ಅದರ ಪ್ರಕಾರ ಯೋಜನೆ ಮಾಡಲು, ಅದರಂತೆ ಕೆಲಸಮಾಡಲು ಇಂದು ಕೇಂದ್ರ ಸರಕಾರದಲ್ಲಾಗಲೀ, ರಾಜ್ಯ ಸರಕಾರ ದಲ್ಲಾಗಲೀ ಅವಕಾಶವಿಲ್ಲ ಬಹುಶಃ ರೈಲ್ವೆ ಮಂತ್ರಿಗಳು ಅವರಿಗೆ ಬೇಕಾದ ಹಣಕಾಸಿಗೆ ಒಪ್ಪಿಗೆ ಪಡೆಯುವ ಹಾಗೆ ಕೃಷಿ ಸಚಿವರೂ ತಮ್ಮ ಹಣಕಾಸಿಗೆ ಒಪ್ಪಿಗೆ ಪಡೆಯಲು ಅವಕಾಶ ಸಿಕ್ಕಿದಾಗ ಕೃಷಿಗಿರುವ ಅಡಚಣೆ ದೂರಮಾಡಿ ಅದಷ್ಟು ಶೀಘ್ರವಾಗಿ ಕೆಲಸಕಾರ್ಯ ಮಾಡುವುದಕ್ಕೆ ಅವಕಾಶವಾಗುತ್ತದೆ, ಪ್ರಜಾಪ್ರಭುತ್ವದ ಒಂದು ನೆರಳಲ್ಲಿ ಕೆಲಸಮಾಡುವಾಗ ಸದಸ್ಯರು ಅನುಮತಿ ಕೊಡುವ ೧೧ ಕೋಟಿ ಚಿಲ್ಲರೆ ಹಣವನ್ನು ಒಂದನೆಯ ತಾರೀಖಿನಿಂದಲೇ ಅಧಿಕಾರಿಗಳಿಗೆ ಬೇಗನೆಕೊಟ್ಟು, ಅವರಿಗೆ ಸಂಪೂರ್ಣ ಅಧಿಕಾರ ಕೊಟ್ಟು, ಗೊಬ್ಬರ, ಬೀಜ ಮುಂತಾದುವನ್ನು ಸಕಾಲದಲ್ಲಿ ಒದಗಿಸಲು ಅವಕಾಶವಾಗಬಹುದು, ಈಗಿನ ಪರಿಸ್ಥಿತಿಯಲ್ಲಿ ಮೊನ್ನೆ ಮೊನ್ನೆಯವರೆಗೂ ಕೂಡ ಕೆಲವು ಯೋಜನೆಗಳನ್ನು ಮಂಜೂರು ಮಾಡ ಬೇಕಾಗಿದ್ದಾಗ ಅನೇಕ ಅಡ್ಮಿನಿಸ್ಟ್ರೇಟಿವ್ ತೊಂದರೆಗಳು ಬಂದುದರಿಂದ ಎಷ್ಟರ ಮಟ್ಟಿಗೆ ಪ್ರಗತಿಯನ್ನು ಸಾಧನೆ ಮಾಡಬಹುದೋ ಅಷ್ಟನ್ನು ಸಾಧನೆ ಮಾಡುವುದಕ್ಕೆ ಆಗಿಲ್ಲ, ಮಾನ್ಯಪ್ರಧಾನ ಮಂತ್ರಿಗಳು ಹಿಂದೆ

ವ್ಯವಸಾಯ ಖಾತೆಯನ್ನು ರಾಜ್ಯಗಳಲ್ಲಿ ಮುಖ್ಯ ಮಂತ್ರಿಗಳೇ ವಹಿಸಿಕೊಳ್ಳಬೇಕು ಎಂದು ಹೇಳಿದ್ದರು. ಇದಕ್ಕೆ ಕಾರಣ ಹಣಕಾಸಿನ ಸಚಿವರು ಮತ್ತು ಇತರ ಸಚಿವರು ಬೇಗ ಬೇಗ ಕೆಲಸ ಮಾಡುತ್ತಾರೆ ಎನ್ನುವುದೇ ಆಗಿದೆ. ನೂರಕ್ಕೆ ೮೦ ಜನ ಇರುವ ರೈತರನ್ನು ಉದ್ಧಾರಮಾಡಬೇಕೆಂದು ಎಲ್ಲರೂ ಹೇಳುತ್ತಿದ್ದರೂ ಕೂಡ ಅದಕ್ಕೆ ಬಡ್ಜೆಟ್ಟಿನಲ್ಲಿ ಕೊಟ್ಟಿರುವ ಹಣವನ್ನು ನೋಡಿದಾಗ ಎಷ್ಟು ಕೆಲಸವನ್ನು ಮಾಡಬೇಕೋ ಅಷ್ಟನ್ನು ಮಾಡಲು ಸಾಧ್ಯವಾಗದೇ ಹೋಗಬಹುದು ನಗರಗಳಲ್ಲಿರುವ ಆಸ್ತಿಯಮೇಲೆ ತೆರಿಗೆಯನ್ನು ಹಾಕಬೇಕಾದರೆ ಎಷ್ಟು ಜನ ಸಂಘಟಿತರಾಗಿ ವಿರೋಧ ಮಾಡುತ್ತಾರೆಯೋ, ಅದೇ ರೀತಿ ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಹಾಕಬೇಕೆಂದು ಹೊರಟಾಗ ವಿರೋಧ ಬರುವುದಿಲ್ಲ, ಅವರಲ್ಲಿ ಅಷ್ಟು ಸಂಘಟನೆ ಇರುವುದಿಲ್ಲ. ಅಗ್ರಿಕಲ್ಚರಲ್ ಡಿಮ್ಯಾಂಡ್ ಬಗ್ಗೆ ಯಾರಿಗೂ ಅಷ್ಟು ಆಸಕ್ತಿಇಲ್ಲ, ರೈತರ ಪರವಾಗಿ ಯಾರೂ ಇಲ್ಲ ಎಂದು ನಿನ್ನೆ ಪತ್ರಿಕೆಯನ್ನು ನೋಡಿದಾಗ ನನಗೆ ಅನ್ನಿಸಿತು. ಈ ಡಿಮ್ಯಾಂಡ್ ಬಗ್ಗೆ ಚರ್ಚೆ ನಡೆಯುತ್ತಿದ್ದಾಗ ಈ ಸಭೆಯಲ್ಲಿ ೩೦ಕ್ಕಿಂತ ಹೆಚ್ಚು ಸದಸ್ಯರು ಕೂಡ ಇರಲಿಲ್ಲ. ವ್ಯವಸಾಯದ ವಿಷಯದಲ್ಲಿ ನಾವು ಮಾಡಬೇಕಾದಂಥ ಕೆಲಸವನ್ನು ಮಾಡಬೇಕಾಗಿದ್ದರೆ ಅದಕ್ಕೆ ಏನೇನೋ ಅಡಚಣೆಗಳು ಬರುತ್ತವೆ, ಅವುಗಳನ್ನು ತೊಡೆದು ಹಾಕುವುದಕ್ಕೆ ಪ್ರಯತ್ನ ಮಾಡಬೇಕು.

ಕೃಷಿಗೋಸ್ಕರ ಬುಲ್ ಡೋಜರುಗಳನ್ನು ಕೊಡುವುದರಲ್ಲಿ ಮತ್ತು ಅಗ್ರಿಕಲ್ಚರಲ್ ಇಂಜಿನಿಯರಿಂಗ್ ಸೆಕ್ಷನ್‌ನಲ್ಲಿ ಕೆಲಸಕಾರ್ಯಗಳು ಸರಿಯಾಗಿ ನಡೆಯುವುದಕ್ಕೆ ಅವಕಾಶವಿಲ್ಲ ಎಂದು ಪಬ್ಲಿಕ್ ಅಕೌಂಟ್ಸ್ ಕಮಿಟಿ ಹೇಳಿರುವುದಲ್ಲದೆ ಅದರಲ್ಲಿ ನಷ್ಟವಾಗುತ್ತಿದೆ ಎಂದೂ ಹೇಳಿದೆ. ಪ್ರತಿ ಸಾರಿಯೂ ನಷ್ಟವಾಗುತ್ತಿದೆ, ನೋಲಾಸ್ ನೋ ಫ್ರಾಫಿಟ್ ಬೇಸಿಸ್ ಮೇಲೆ ನಡೆಸಬೇಕೆಂದು ಹೊರಟಾಗ ರೈತರಿಗೆ ಬುಲ್‌ಡೋಜರ್, ಟ್ರಾಕ್ಟರ್, ಬೋರ್‌ವೆಲ್ ಯಂತ್ರಗಳನ್ನು ಯಾವದರದಲ್ಲಿ ಕೊಡುತ್ತಿದ್ದೇವೇ ಅದನ್ನು ಹೆಚ್ಚಿಸಬೇಕಾಗುತ್ತದೆ, ದರವನ್ನು ಹೆಚಿಸಿದಾಗ ಲಾಭ ಮಾಡುವುದಕ್ಕೆ ಸಾಧ್ಯವಾಗದೆ ಇದ್ದರೂ ನಷ್ಟವನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಸರ್ಕಾರಕ್ಕೆ ಎಷ್ಟು ಖರ್ಚಾಗುತ್ತದೆ, ಎಷ್ಟರಮಟ್ಟಿಗೆ ಸಬ್ಸಿಡಿ ಕೊಡಬಹುದು ಎಂದು ಲೆಕ್ಕ ಹಾಕಿ ಕನಿಷ್ಟ ಪಕ್ಷ ೨೦ ಪರ್ಸೆಂಟಾದರೂ ಸಬ್ಸಿಡಿ ಕೊಡಬೇಕೆಂದು ನಿರ್ಧಾರಮಾಡಿ ರೇಟನ್ನು ಕಡಿಮೆ ಮಾಡಿದ್ದೇವೆ. ಬುಲ್‌ಡೋಜರ್ ಆರ್ಗನೈಜೇಷನ್‌ನಲ್ಲಿ ಒಂದು ವರ್ಷಕ್ಕೆ ನಾಲ್ಕು ಲಕ್ಷ ರೂಪಾಯಿ ನಷ್ಟವಾಗುತ್ತಿದೆ. ಈಗ ಏನು ಇಂಪ್ರೂವ್‌ಮೆಂಟ್ ಮಾಡಿಸಿದ್ದೀರಿ ಎಂದು ಅನೇಕ ಸದಸ್ಯರು ಕೇಳುತ್ತಾರೆ, ಕಳೆದ ವರ್ಷ ನಾನು ಹೇಳಿದೆ, ಒಂದು ವರ್ಷ ಅವಕಾಶಕೊಡಿ, ಈ ಇಲಾಖೆಯಲ್ಲಿ ತ್ವರಿತವಾಗಿ ಕೆಲಸ ಮಾಡುವುದಕ್ಕೆ ಪ ಯತ್ನಮಾಡಿ ತಾವು ಏನು ನಿರೀಕ್ಷೆ ಮಾಡುತ್ತೀರಿ ಅದನ್ನು ಮಾಡುತ್ತೇನೆ ಎಂದು, ೮೮ ಬುಲ್‌ಡೋಜರುಗಳು ವಿವಿಧ ಜಿಲ್ಲೆಗಳಲ್ಲಿ ೫೬. ೨೧೦ ಗಂಟೆಗಳಕಾಲ ಜನವರಿ ತಿಂಗಳವರೆಗೂ ಕೆಲಸಮಾಡಿದೆ. ೧೯೫೬ರಿಂದ ೧೯೬೧ರವರೆಗೆ ೨, ೧೬, ೬೦೭, ಗಂಟೆಗಳ ಕೆಲಸಮಾಡಿ ೬೩, ೧೭೬, ಎಕರೆಗಳನ್ನು ಸಮಪಾತಳಿ ಮಾಡಿದೆ. ೧೯೬೧ರಿಂದ ೧೯೬೬ರವರೆಗೆ ೪೨, ೧೫, ೩೬೫ ಗಂಟೆಗಳು ಕೆಲಸಮಾಡಿ ೫೩, ೮೬೧ ಎಕರೆ ಭೂಮಿಯನ್ನು ಸಮಪಾತಳಿಮಾಡಿದೆ, ೧೯೬೬ರಿಂದ ಜನವರಿ ೧೯೭೦ರವರೆಗೆ ೧, ೭೯, ೧೧೧, ಗಂಟೆ ಕೆಲಸಮಾಡಿ ೪೭,೭೭೪ ಎಕರೆ ಭೂಮಿಯನ್ನು ಸಮಪಾತಳಿಮಾಡಿದೆ, ಕಳೆದ ಎರಡು ತಿಂಗಳಲ್ಲಿ ನಡೆದಿರುವ ಕೆಲಸದ ಲೆಕ್ಕ ಬಂದಿಲ್ಲ. ಒಟ್ಟಿನಲ್ಲಿ ಇದುವರೆಗೆ ೧, ೬೪, ೧೮೭ ಎಕರೆ ಭೂಮಿಗೆ ಬುಲ್‌ಡೋಜರುಗಳಿಂದ ಸಹಾಯವಾಗಿದೆ. ಬುಲ್ ಡೋಜರುಗಳಿಗೆ ಹಿಂದಿನಿಂದಲೂ ಹಾಕುತ್ತಿದ್ದ ದರವನ್ನು ಕೆಲವು ಮಾನ್ಯಸದಸ್ಯರು ಕೇಳಿದರು. ಅದು ಈರೀತಿ ಇದೆ. ೪೦ರಿಂದ ೫೦ ಅಶ್ವಶಕ್ತಿಯವರೆಗೆ ೨೬ ರೂಪಾಯಿ, ೫೦ ರಿಂದ ೬೦ ಅಶ್ವಶಕ್ತಿಯವರೆಗೆ ೩೬ ರೂಪಾಯಿ ೭೫ರಿಂದ ೮೦ ಅಶ್ವಶಕ್ತಿಯುವರೆಗೆ, ೪೧ ರೂಪಾಯಿ, ೧೦೦ರಿಂದ ೧೩೦ ಅಶ್ವಶಕ್ತಿಯವರೆಗೆ ೪೫ ರೂಪಾಯಿ ಹಾಕಿದ್ದೇವೆ, ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಲ್ಲಿ ಅದಕ್ಕೆ ೬೬ ರೂಪಾಯಿಗಳನ್ನು ವಿಧಿಸುತ್ತಿದ್ದಾರೆ. ಒಂದು ದಿವಸ ಕೆಲಸಮಾಡಿಸದೆ ಇಟ್ಟುಕೊಂಡಿದ್ದರೆ ೫೦ ರೂಪಾಯಿ ಪೆನಾಲ್ಟಿ ಎಂದು ಗೊತ್ತು ಮಾಡಿದ್ದೇವೆ, ಬುಲ್‌ಡೋಜರನು ತೆಗೆದುಕೊಂಡು ಹೋಗುವಾಗ ಒಂದುಮೈಲಿಗೆ ೧೦ರೂಪಾಯಿ ಮೈಲೇಜ್ ಆಗುತ್ತದೆ.

೪೫ ಟ್ರಾಕ್ಟರುಗಳು ಬಿಜಾಪುರ ಮತ್ತು ರಾಯಚೂರು ಜಿಲ್ಲೆಯಲ್ಲಿ ಕೆಲಸ ಮಾಡುತ್ತಿವೆ. ವೆಲ್ ಬೋರಿಂಗ್ ಯೂನಿಟ್ಸ್ ೫೨ ಇದ್ದವು, ಹೊಸದಾಗಿ ೧೩ ಯೂನ್ಸಿಟ್ ತೆಗೆದುಕೊಳ್ಳಲಾಗಿದೆ, ಒಟ್ಟು ೬೯ ಯೂನಿಟ್ಸ್ ಈ ವರ್ಷ ಕೆಲಸ ಮಾಡುತ್ತಿದೆ ಹೊಸದಾಗಿ ೪೪ ಯೂನಿಟ್ಸ್‌ಕೊಂಡುಕೊಳ್ಳುತ್ತೇವೆಂದು ಹೇಳಿದ್ದೆ ಕೆಲವಾರು ಆಡಳಿತದ ಅಡಚಣೆಗಳಿಂದ ಫೆಬ್ರವರಿ ತಿಂಗಳಿನಲ್ಲಿ ೨೫ ಯೂನಿಟ್ಸ್ ಬಂದಿವೆ, ಉಳಿದದ್ದು ಬರಬೇಕಾಗಿದೆ. ಈ ಕಾರಣದಿಂದ ಎಷ್ಟು ತ್ವರಿತವಾಗಿ ತರಿಸಿ ರೈತರಿಗೆ ಇವುಗಳ ಸಹಾಯವನ್ನು ಕೊಡಬೇಕು ಎಂದು ಹೇಳಲಾಗಿತ್ತೋ ಅಷ್ಟು ತ್ವರಿತವಾಗಿ ತರಿಸುವುದಕ್ಕಾಗುವುದಿಲ್ಲ. ಸ್ಟೋರ್ಸ್ ಪರ್ಚೆಸ್ ಕಮಿಟಿ, ಹಣಕಾಸು ಇಲಾಖೆ ಇವೆಲ್ಲದರ ಮೂಲಕ ಹೋಗಬೇಕಾಗಿರುವುದರಿಂದ ಬಹಳ ತಡವಾಗುತ್ತದೆ, ೪೪ ಯಂತ್ರಗಳನು ಕೊಂಡುಕೊಳ್ಳಬೇಕಾದರೆ ಒಂದು ವರ್ಷ ಹಿಡಿಯಿತು. ಈ ಯಂತ್ರಗಳ ಸಹಾಯದಿಂದ ಎಷ್ಟು ಕೆಲಸ ನಡೆದಿದೆ ಎನ್ನುವ ವಿವರಗಳನ್ನು ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ, ೧೯೬೭–೧೯೬೮ರಲ್ಲಿ ೯೩ ಬಾವಿಗಳನ್ನು ತೆಗೆದಿದು ೮೬ ಬಾವಿಗಳಲ್ಲಿ ನೀರು ಬಿದ್ದಿದೆ. ೧೯೬೮–೧೯೬೯ರಲ್ಲಿ ೧೫೬ ಬಾವಿಗಳನ್ನು

(ಶ್ರೀ ಬಿ. ರಾಚಯ್ಯ)

ತೆಗೆಯಲಾಯಿತು. ಈ ವರ್ಷ ೫೨ ಯಂತ್ರಗಳು ಕೆಲಸ ಮಾಡುತ್ತಿದ್ದು ೨೧೩ ಬಾವಿಗಳು ಜನವರಿ ತಿಂಗಳ ವರೆಗೆ ಆಗಿವೆ, ಇದರಿಂದ ಸ್ವಲ್ಪಮಟ್ಟಿಗೆ ಕೆಲಸ ಚುರುಕಾಗಿ ನಡೆದಿದೆ ಎಂದು ಮಾನ್ಯ ಸದಸ್ಯರು ಗಮನಿಸ ಬಹುದು. ಈ ವರ್ಷ ಪೋಲಿಷ್ ರಿಗ್ಸ್, ಎರಡು ದಿವಸಕ್ಕೆ ಒಂದು ಬಾವಿಯನ್ನು ತೋಡುವಂಥ ಮೂರು ಯಂತ್ರಗಳು ಬಂದಿವೆ, ಅವುಗಳನ್ನು ಬೆಂಗಳೂರು, ಬೆಳಗಾಂ ಗುಲ್ಬರ್ಗ ಡಿವಿಜನ್ನುಗಳಿಗೆ ಒಂದೊಂದನ್ನು ಕೊಟ್ಟಿದ್ದೇವೆ. ಬಾವಿ ತೋಡತಕ್ಕ ಯಂತ್ರಗಳೇನಿವೆ ಅವುಗಳನ್ನು ಯಾವ ಪ್ರಮಾಣದಲ್ಲಿ ಮತ್ತು ಯಾವ ವೇಗ ದಲ್ಲಿ ನಮ್ಮವರು ಉಪಯೋಗಮಾಡುತ್ತಿದ್ದಾರೆ ಎನ್ನುವುದನ್ನು ನೋಡಿದರೆ ಸೌತ್ ಇಂಡಿಯಾ ಚರ್ಚಿನವರು ಕೆಲಸ ಮಾಡುವ ವೇಗದಲ್ಲಿ ನಮ್ಮವರು ಕೆಲಸ ಮಾಡುವುದಿಲ್ಲ, ಅವರು ಹಗಲೂ ರಾತ್ರಿ ದುಡ್ಡು ಬರುತ್ತದೆ ಎನ್ನುವ ನೆಪದಿಂದ ಕೆಲಸ ಮಾಡುತ್ತಾರೆ, ಪ್ರೈವೇಟ್ ಸೆಕ್ಟರ್ ಮತ್ತು ಪಬ್ಲಿಕ್ ಸೆಕ್ಟರಿಗೆ ಇರುವ ವ್ಯತ್ಯಾಸ ಇದು, ಬುಲ್‌ಡೋಜರಿನಲ್ಲಿ ಕೆಲಸ ಮಾಡತಕ್ಕ ಜನ ಒಂದು ವರ್ಷದಲ್ಲಿ ಸುಮಾರು ಒಂದು ಸಾವಿರ ಗಂಟೆ ಕೆಲಸ ಮಾಡುತ್ತಿದ್ದರು, ಡ್ರೈವರುಗಳಿಗೆ ಮತ್ತು ಇತರರಿಗೆ ಸ್ವಲ್ಪ ಇನ್‌ಸೆಂಟಿವ್ ಕೊಟ್ಟಮೇಲೆ ಹೆಚ್ಚು ಚುರುಕಾಗಿ ಕೆಲಸಮಾಡಿ ಎರಡು ಸಾವಿರ ಚಿಲ್ಲರೆ ಗಂಟೆಗಳಿಗಿಂತ ಹೆಚ್ಚು ಕೆಲಸಮಾಡವುದಕ್ಕೆ ಪ್ರಯತ್ನ ಮಾಡಿದ್ದಾರೆ. ಭಾರವಾದ ಯಂತ್ರಗಳನು ನಡೆಸುವ ಜನರ ಕಷ್ಟವೇನೆಂದರೆ, ಒಂದಲ್ಲ ಒಂದು ರೀತಿಯಲ್ಲಿ ಅವರಿಗೆ ಇನ್‌ಸೆಂಟಿವ್ ಕೊಡದೆ ಹೋದರೆ ಚುರುಕಾಗಿ ಕೆಲಸ ನಡೆಯುವುದಿಲ್ಲ, ಈ ದೃಷ್ಟಿಯಿಂದ ವೆಲ್ ಬೋರಿಂಗ್ ಯೂನಿಟ್ಸ್‌ನಲ್ಲಿ ಕೆಲಸ ಮಾಡತಕ್ಕ ಆಪರೇಟರ್ಸ್ ಮತ್ತು ಇಂಜಿನಿಯರ್ಸ್, ಮತ್ತು ಇವರು ಕೈಕೆಳಗೆಕೆಲಸಮಾಡತಕ್ಕ ಜನ ಯಾರು ಯಾರು ಇದ್ದಾರೆ ಇವರಲ್ಲಿ ಕೆಲವರು ಕೈ ಕಾಲು ಕಳೆದುಕೊಂಡಿದ್ದಾರೆ, ಕೆಲವರು ಬೆರಳು ಕಳೆದುಕೊಂಡಿದ್ದಾರೆ ಭೂಮಿ ಒಳಗೆ ಹೋಗಿ ಯಂತ್ರ ಕೆಲಸಮಾಡತಕ್ಕ ಕಾಲದಲ್ಲಿ ಕೆಲವಾರ ಯಂತ್ರಗಳ ತೊಂದರೆಯಿಂದ ನಾವು ನಿರೀಕ್ಷೆ ಮಾಡಿದ ಪ್ರಮಾಣದಲ್ಲಿ ಕೆಲಸ ನಡೆಯುವುದಿಲ್ಲ ಅವರಿಗೆಲ್ಲ ಹ್ಯುಮ್ಯಾನಿಟೇರಿಯನ್ ಕನಿಸಿಡರೇಷನ್ ಮೇಲೆ ನೋಡಿದಾಗ ಒಂದು ರೀತಿಯ ಇನ್‌ಸೆಂಟಿವ್ ಕೊಡ ತಕ್ಕದ್ದು ಉಚಿತ ಎನ್ನುವುದನ್ನು ಸರ್ಕಾರ ಗಮನದಲ್ಲಿಟ್ಟುಕೊಂಡು ಆ ರೀತಿಯಲ್ಲಿ ಇನ್‌ಸೆಂಟೀವ್ ಕೊಟ್ಟ ಮೇಲೆ ಕೆಲಸ ಚುರುಕಾಗಿ ನಡೆಯುತ್ತಿದೆ ಎಂದು ನಾನು ಭಾವಿಸುತ್ತೇನೆ.

ಇನ್ನು ೪ ಇಂಚು ಡೈಮೀಟರಿಗೆ ರೇಟು ರೂ. ೫
೬ ಇಂಚು ಡೈಮೀಟರಿಗೆ ರೇಟು ರೂ. ೭
೮ ಇಂಚು ಡೈಮೀಟರಿಗೆ ರೇಟು ರೂ. ೧೨ ಎಂದು

ಗೊತ್ತುಮಾಡಿದ್ದೇವೆ. ೩೦೦ ಅಡಿಗೆ ೫೦ ರೂಪಾಯಿ ರೇಟು ಇದೆ. ಈ ರೇಟಿನಲ್ಲಿ ಕೆಲಸ ಮಾಡಲು ಆಗುವುದಿಲ್ಲ. ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ದರ ಹೆಚ್ಚಾಗಿ ಇದೆ. ಒಂದು ಅಡಿ ಗೆ ೭ ರೂ. ಮತ್ತು ಪೈಪಿಗೆ ೨೮ ರೂ. ಹೀಗೆ ಎರಡೂ ಸೇರಿ ೩೫ ರೂಪಾಯಿ ಹಾಕುತ್ತಾರೆ. ಹೊಸ ಮೆಷಿನ್ನಿಗೆ ೧೭ ರೂಪಾಯಿ ಒಂದು ಅಡಿ ಗೆ ರೇಟು ಇದೆ. ೧೩೫ ಅಡಿ ಕೆಲಸ ಎರಡು ದಿವಸದಲ್ಲಿ ಆಗುತ್ತದೆ. ಒಂದು ಅಡಿ ಗೆ ೧೭ರೂ. ೫೦ ಪೈಸೆ ರೇಟು ಹಾಕಿದೆ. ಇದರಲ್ಲಿ ಪೈಪು ಸೇರುವುದಿಲ್ಲ. ೨೩ರಿಗ್ ಹಾಲ್ಸ್ಟರ್ ಯೂನಿಟ್ಸ್ ತೆಗೆದುಕೊಂಡಿ ದ್ದೇವೆ. ಈಗಾಗಲೇ ೧೮೨೦ ಭಾವಿಗಳನ್ನು ಆಳವಾಗಿ ಮಾಡಿದೆ. ಅಂದರೆ ಒಟ್ಟು ೨,೯೩.೭೨೭ ಅಡಿಗಳಷ್ಟು ಆಳಪಡಿಸಿದ್ದೇವೆ. ವ್ಯವಸಾಯಕ್ಕಾಗಿ ೩೪ ರೂ. ರೇಟು ಗೊತ್ತುಮಾಡಿದ್ದೇವೆ. ಅದರ ಬೇರೆ ಇಂಡಸ್ಟ್ರೀ ಜಾಗಕ್ಕಾಗಿ ೬೮ ರೂಪಾಯಿ ಒಂದು ಗಂಟೆಗೆ ಗೊತ್ತು ಮಾಡಿದ್ದೇವೆ.

ಇನ್ನು ಆಯಿಲ್ ಎಂಜಿನ್ಸ್ ಇಲೆಕ್ಟ್ರಿಕ್ ಪಂಪ್ ಸೆಟ್ಸ್ ವಿಚಾರದಲ್ಲಿ ಹೇಳುವುದಾದರೆ ೨೮.೭೨೨ ಆಯಿಲ್ ಎಂಜಿನ್ಸ್ ಒದಗಿಸಿದ್ದೇವೆ. ಇಲೆಕ್ಟ್ರಿಕ್ ಪಂಪ್ ಸೆಟ್ಸ್ ೯೪,೭೨೮ ರೈತರಿಗೆ ಒದಗಿಸಿಕೊಟ್ಟಿದ್ದೇವೆ. ಟ್ರ್ಯಾಕ್ಟರ್ ವಿಚಾರದಲ್ಲಿ ಮೈಸೂರು ಆಗ್ರೊ ಇಂಡಸ್ಟ್ರೀಜ್ ಕಾರ್ಪೋರೇಷನ್ನು ೩,೨೪೪ ರೈತರಿಗೆ ಟ್ರ್ಯಾಕ್ಟರ್ ಒದಗಿಸಿದ್ದಾರೆ. ಮುಂದಿನ ವರ್ಷ ೧೦೦೦೦ ಟ್ರ್ಯಾಕ್ಟರ್ಸ್ ಒದಗಿಸುವ ಯೋಜನೆ ಇದೆ. ಕೆಲಸ ತೀವ್ರವಾಗಿ ದಕ್ಷತೆಯಿಂದ ನಡೆಯಬೇಕು ಎಂದು ಆಗ್ರೋ ಇಂಡಸ್ಟ್ರೀಜ್ ಕಾರ್ಪೋರೇಷನ್ ಮತ್ತು ಅಗ್ರಿ ಕಲ್ಚರಲ್ ಎಂಜಿನಿಯರಿಂಗ್ ಯೂನಿಟ್ ಎರಡನ್ನೂ ಮರ್ಜ್ ಮಾಡಿದ್ದೇವೆ. ಅಗ್ರಿಕಲ್ಚರಲ್ ಎಂಜಿ ನಿಯರಿಂಗ್ ಯುನಿಟ್ ಸಿಬ್ಬಂದಿಗೆ ಸಂಬಳ ಹೆಚ್ಚು ಕೊಡುತ್ತಾರೆ ಆದುದರಿಂದ ಸಿಬ್ಬಂದಿ ಅಲ್ಲಿಗೆ ಹೋಗ ಬಹುದು ಮತ್ತು ಇಲ್ಲಿ ಕೆಲಸ ನಿಂತು ಹೋಗಬಹುದು ಎಂದು ಮತ್ತು ಆಟಾನಮಸ್ ಬಾಡಿ ಮುಖಾಂತರ ಕೆಲಸ ಚೆನ್ನಾಗಿ ಮಾಡಬಹುದು ಎಂದು ಈ ರೀತಿ ಮಾಡಿದ್ದೇವೆ. ಇದರಲ್ಲಿ ವೈಯಕ್ತಿಕವಾಗಿ ಯಾರಿಗಾದರೂ ಉಪಕಾರ ಮಾಡುವುದಕ್ಕೋಸ್ಕರ ಮಾಡಿಲ್ಲ. ಒಂದು ರೀತಿ ಸರಿಯಾದ ಕಂಟ್ರೋಲ್ ಇರಬೇಕಾಗುತ್ತದೆ. ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಇದನ್ನು ಮಾಡಲು ಸಾಧ್ಯವಿಲ್ಲ. ಇದರಲ್ಲಿ ಆಗ್ರೋ ಇಂಡಸ್ಟ್ರೀಜ್ ಕಾರ್ಪೋರೇಷನ್ ಷೇರ್ ಬಂಡವಾಳ ಎರಡು ಕೋಟಿ ರೂಪಾಯಿ ಮಾತ್ರ ಇದೆ. ಎರಡೂ ಭಾಗ ಸೇರಿ

ನಾಲ್ಕು ನಾಲ್ಕೂವರೆ ಕೋಟಿ ಆಗುತ್ತದೆ ಇನ್ನೂ ಷೇರ್ ಬಂಡವಾಳ ಹೆಚ್ಚಿಸಿ ರೈತರಿಗೆ ಅನುಕೂಲ ಒದಗಿಸಲು ಕೆಲಸ ಮಾಡುತ್ತಾರೆ.

ಇನ್ನು ಗೊಬ್ಬರದ ವಿಚಾರದಲ್ಲಿ ಹೇಳುವುದಾದರೆ ರಾಸಾಯನಿಕ ಗೊಬ್ಬರ ಬೆಲೆ ಇಳಿಸಬೇಕು ಎಂದು ಅನೇಕ ಮಾನ್ಯ ಸದಸ್ಯರು ಸೂಚಿಸಿದ್ದಾರೆ. ೩ ಟೈರ್ ಏಜೆನ್ಸಿ ಇದ್ದುದನ್ನು ೨ ಟೈರ್ ಏಜನ್ಸಿ ಮಾಡಿದ್ದೇವೆ. ಒಂದು ಮೆಟ್ರಿಕ್ ಟನ್‌ಗೆ ೧೨ ರೂಪಾಯಿ ಕಡಿಮೆ ಮಾಡಲು ಏರ್ಪಾಡು ಮಾಡಿದ್ದೇವೆ. ಕೇಂದ್ರ ಸರ್ಕಾರ ಅಮೋನಿಯಂ ಸಲ್ಫೇಟ್ ಬೆಲೆ ೯೦ ರೂಪಾಯಿ ಕಡಿಮೆ ಮಾಡಿದ್ದಾರೆ. ಇನ್ನೂ ಬೆಲೆ ಕಡಿಮೆ ಮಾಡಲು ಸಾಧ್ಯವಿದೆ. ಇದಕ್ಕಾಗಿ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿದ್ದೇವೆ. ನಮ್ಮಲ್ಲಿ ಗೊಬ್ಬರ ತಯಾರಾಗುತ್ತಿರುವುದು ಕಡಿಮೆ ಪ್ರಮಾಣದಲ್ಲಿ ಇದೆ. ಹೊರಗಡೆಯಿಂದ ತರಿಸಿಕೊಂಡು ಒದಗಿಸಬೇಕಾಗುತ್ತದೆ. ಇದರ ಬೆಲೆ ಕೇಂದ್ರ ಸರ್ಕಾರ ಗೊತ್ತು ಮಾಡುತ್ತದೆ, ಮಾರಾಟ ಮಾಡತಕ್ಕದ್ದರಲ್ಲಿ ೮೦ ರೂಪಾಯಿ ಮಾರ್ಜಿನ್ ಇದೆ. ಇದನ್ನು ಸಹ ಕಡಿಮೆ ಮಾಡಲು ಸಾಧ್ಯವಿದೆ. ಇದರಲ್ಲಿ ಮಾರ್ಕೆಟಿಂಗ್ ಸೊಸೈಟಿಗೆ ಅವಕಾಶ ಇದೆ. ಪ್ರೈವೇಟ್ ಕಂಪನಿಯಾದಲಿ ಕಾಂಪಿಟೀಟಿವ್ ರೇಟ್ಸ್ ಇರುತ್ತವೆ. ಇದರಲ್ಲಿ ಒಂದು ಕೋಟಿ ರೂಪಾಯಿ ನಷ್ಟವಾಗುತ್ತದೆ ಆದರೂ ಕೂಡ ಇದು ಅನಿವಾರ್ಯವಾಗಿದೆ. ಗೊಬ್ಬರ ತರಿಸಲು ಬಹಳ ಕಷ್ಟವಾಗುತ್ತದೆ ಮೊದಲು ಬ್ಲಾಕ್ ಮಾರ್ಕೆಟ್ಟಿನಲ್ಲಿ ಹೆಚ್ಚು ಬೆಲೆಗೆ ಮಾರಾಟವಾಗುತ್ತಿದ್ದರಿಂದ ಗೊಬ್ಬರ ಸಿಕ್ಕುತ್ತಾ ಇರಲಿಲ್ಲ. ಈಗ ನಮ್ಮಲ್ಲಿ ಸಾಕಷ್ಟು ಸ್ಟಾಕ್ ಇರುವುದರಿಂದ ಕಳ್ಳ ಸಂತೆಗೆ ಅವಕಾಶವಿಲ್ಲ. ನಮ್ಮಲ್ಲಿ ೧೮ ಕೋಟಿ ರೂಪಾಯಿ ಬೆಲೆಯ ಗೊಬ್ಬರ ಉಳಿದಿದೆ, ಇದು ಮುಂದಿನ ವರ್ಷಕ್ಕೆ ಆಗುತ್ತದೆಂದು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಈ ನನ್ನ ಡಿಮ್ಯಾಂಡ್ ಮೇಲೆ ಅನೇಕ ಸದಸ್ಯರು ಮಾತನಾಡಿ ಉಪಯುಕ್ತ ಸಲಹೆಗಳನ್ನು ಕೊಟ್ಟಿದ್ದಾರೆ. ಕಟ್ ಪ್ರೋಷನ್ಸ್ ಸಹ ಕಳಿಸಿದ್ದಾರೆ ಡ್ರೈ ಫಾರ್ಮಿಂಗಿಗೆ ಹೆಚ್ಚು ಗಮನ ಕೊಟ್ಟಿಲ್ಲ, ರಿಸರ್ಚ್ ಕೆಲಸ ಮಾಡಿಲ್ಲ ಎಂದು ಹೇಳಿದ್ದಾರೆ, ಅದನ್ನು ನಾನು ಒಪ್ಪುತ್ತೇನೆ. ಇದರ ಬಗ್ಗೆ ಕೇಂದ್ರ ಸರ್ಕಾರ ಗಮನ ಹರಿಸುತ್ತಿದೆ. ಸಂಶೋಧನೆ ನಡೆಸುವುದು ಕೇಂದ್ರ ಸರಕಾರದ ಜವಾಬ್ದಾರಿಯಾಗಿದೆ. ಡ್ರೈ ಫಾರ್ಮಿಂಗ್ ಅಂದರೆ ಬರೀ ಸಾಯಿಲ್ ಕನ್ಸರ್‌ವೇಷನ್ ಅಲ್ಲ. ವ್ಯವಸಾಯ ಉಪಕರಣ ಒದಗಿಸಲು ವ್ಯವಸಾಯ ವಿಶ್ವವಿದ್ಯಾನಿಲಯದವರು ಯೋಜನೆ ಮಾಡಿದ್ದಾರೆ. ಇದಕ್ಕೆ ಕೇಂದ್ರ ಸರ್ಕಾರದ ನೆರವನ್ನು ಪಡೆಯುವುದಕ್ಕೆ ಕ್ರಮ ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತೇವೆ. ಎಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಕಳೆದ ವರ್ಷ ವ್ಯವಸಾಯ ವಿಶ್ವವಿದ್ಯಾನಿಲಯಕ್ಕೆ ೬೦ ಲಕ್ಷ ರೂಪಾಯಿ ಕೊಟ್ಟಿದ್ದೇವೆ ಈ ವರ್ಷ ಅದನ್ನು ೯೦ ಲಕ್ಷ ರೂಪಾಯಿಗೆ ಹೆಚ್ಚಿಸಿದ್ದೇವೆ, ಮೈಸೂರು, ಬೆಂಗಳೂರು ಮತ್ತು ಕರ್ನಾಟಕ ವಿಶ್ವವಿದ್ಯಾನಿಲಯಗಳಿಗೆ ಹೆಚ್ಚು ಹಣ ಒದಗಿಸಿ, ಕೃಷಿ ವಿಶ್ವವಿದ್ಯಾನಿಲಯಕ್ಕೆ ಹೋದ ವರ್ಷದಷ್ಟೇ ಇಟ್ಟಿದ್ದಾರೆ ಎಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ಇಷ್ಟು ಹಣ ಒದಗಿಸಿದ್ದು ಅದೇನೂ ಕಾಯಂ ಅಲ್ಲ. ಅವಶ್ಯಕತೆಗೆ ಅನುಗುಣವಾಗಿ ಹಣ ಒದಗಿಸಲು ಪ್ರಯತ್ನ ಮಾಡುತ್ತೇವೆ. ಡ್ರೈ ಫಾರ್ಮಿಂಗ್ ಸಂಶೋಧನೆ ನಡೆಸಬೇಕು ಎಂದು ಹೇಳಿರುವುದಕ್ಕೆ ಕಾರ್ಯಕ್ರಮ ಹಾಕಿಕೊಳ್ಳಲು ಪ್ರಯತ್ನ ಮಾಡುತ್ತೇನೆ. ನನ್ನ ಇಲಾಖೆಗೆ ಸಂಬಂಧ ಪಡದೇ ಇದ್ದ ಕೆಲವು ವಿಚಾರಗಳನ್ನು ಮಾನ್ಯ ಸದಸ್ಯರೊಬ್ಬರು ಹೇಳಿದ್ದಾರೆ. ವಿದ್ಯುತ್‌ಶಕ್ತಿ ಒದಗಿಸಿ ನೀರು ಉಪಯೋಗಿಸುವ ಯೋಜನೆ ಮಾಡಬೇಕು ಎಂದು ಹೇಳಿದ್ದಾರೆ. ಅದು ಗಮನಿಸಬೇಕಾದ ವಿಚಾರವಾಗಿದೆ.

ಇನ್ನು ರಿಜರ್ವ್ ಬ್ಯಾಂಕಿನಿಂದ ಹಣ ಒದಗಿಸಲು ಅಡಿಯಾಗಿದೆ, ಅದನ್ನು ನಿವಾರಣೆ ಮಾಡಲು ಪ್ರಯತ್ನ ಮಾಡಬೇಕು ಎಂದು ಹೇಳಿದ್ದಾರೆ. ಇದರ ಬಗ್ಗೆ ಸರ್ಕಾರ ಪ್ರಯತ್ನ ಮಾಡುತ್ತದೆ ಎಂದು ತಿಳಿಸುತ್ತೇನೆ. ಈ ಒಂದು ಇಲಾಖೆಯಲ್ಲಿ ಅತೃಪ್ತಿ ತುಂಬಿದೆ ಎಂದು ಶ್ರೀಮಾನ್ ಗುರಡ್ಡಿಯವರು ಹೇಳಿದ್ದಾರೆ.

ಕೃಷಿ ಇಲಾಖೆಯಲ್ಲಿ ಅಲ್ಲಲ್ಲೇ ಅಲ್ಪಸ್ವಲ್ಪ ಅತೃಪ್ತಿ ಕೆಲವರಲ್ಲಿದೆ. ಐದು ಕಡೆಯ ಜನರು ಒಂದು ಕಡೆ ಸೇರಿ ಕೆಲಸಮಾಡತಕ್ಕ ಇಂಥ ಒಂದು ವಿಶೇಷ ಸಂದರ್ಭದಲ್ಲಿ ಎಲ್ಲರಿಗೂ ಸಮಾಧಾನಕರವಾಗತಕ್ಕ ರೀತಿಯಲ್ಲಿ ಎಲ್ಲರನ್ನೂ ತೃಪ್ತಿಪಡಿಸತಕ್ಕ ರೀತಿಯಲ್ಲಿ ಕಾನೂನು ಮಾಡಬೇಕೆಂದರೆ ಅದು ಸಾಧ್ಯವಿಲ್ಲ. ಆದರೆ ನಾವು ಯಾರಿಗೂ ನ್ಯಾಯವನ್ನು ಪಡೆಯತಕ್ಕ ಕಡೆ ಅಡ್ಡಿಯನ್ನು ಮಾಡಿಲ್ಲ. ಆದರೆ ನಮ್ಮಲ್ಲಿರತಕ್ಕ ಈ ಇಲಾಖೆಯ ೧೪ ಕೇಡರುಗಳಲ್ಲಿ ೧೩ ಕೇಡರುಗಳ ಸೀನಿಯಾರ್ಟಿ ಪಟ್ಟಿಯನ್ನು ಈಗಾಗಲೇ ತೀರ್ಮಾನ ಮಾಡಿದ್ದೇವೆ. ಆದರೆ ಇನ್ನೊಂದು ಕೇಡರಿನ ವಿಷಯ ಅಂದರೆ ನಮ್ಮ ಡೆಮಾನ್‌ಸ್ಟ್ರೇಟರುಗಳ ಸೀನಿಯಾರ್ಟಿ ವಿಚಾರದಲ್ಲಿ ಹೈಕೋರ್ಟಿನಿಂದ ಒಂದು ತಡೆಯಾಜ್ಞೆ ಬಂದಿರುವುದರಿಂದ ಅದರ ಬಗ್ಗೆ ಸ್ವಲ್ಪ ನಿಧಾನವಾಗಿದೆ. ಅದು ಬಿಡುಗಡೆಯಾದ ಕೂಡಲೆ ಅದನ್ನು ನಿರ್ಧರಿಸಲಾಗುತ್ತದೆ.

(ಶ್ರೀ ಬಿ. ರಾಚಯ್ಯ)

7-00 P. M.

ಇನ್ನು ಹಾರ್ಟಿಕಲ್ಚರಲ್ ಇಲಾಖೆಯ ಬಗ್ಗೆ ಶ್ರೀಮರ್ಾ ಎಂ. ನಾಗಪ್ಪನವರು ಕೆಲವು ಖೋತಾ ಸೂಚನೆಗಳನ್ನು ಕಳುಹಿಸಿದ್ದಾರೆ. ಅವುಗಳಲ್ಲಿ ನರಡಗಡ್ಡ ತಾಲ್ಲೂಕಿನ ಮಲಿಯಾಬಾದ್ ಹಿಲ್ ಸ್ಟೇಷನ್‌ನ್ನು ಅಭಿವೃದ್ಧಿಪಡಿಸಲು ಅಲ್ಲಿ ಬೋಟಾನಿಕಲ್ ತೋಟಗಳನ್ನು ಏರ್ಪಡಿಸಬೇಕೆಂದು ಕೇಳಿದ್ದಾರೆ. ನಾನು ಒಟ್ಟಿನಲ್ಲಿ ಹೇಳುವುದಾದರೆ ನಮ್ಮ ಇಲಾಖೆಯ ಅಧಿಕಾರಿಗಳು ರಾಜ್ಯದ ಯಾವ ಯಾವ ಭಾಗದಲ್ಲಿ ಏನೇನು ಮಾಡಬೇಕೆಂಬುದನ್ನು ನೋಡಿಕೊಂಡು ಬಂದಿದ್ದಾರೆ. ಅದರ ಪ್ರಕಾರ ರಾಯಚೂರು, ಗಂಗಾವತಿ ತಾಲ್ಲೂಕುಗಳಲ್ಲಿ ಮತ್ತು ಇತರೇ ಭಾಗಗಳಲ್ಲಿ ಏನೇನು ಹಣ್ಣಿನ ಗಿಡಗಳನ್ನು ಬೆಳಿಸಬೇಕು ಎಲ್ಲೆಲ್ಲಿ ಯಾವ ಉದ್ಯಾನವನಗಳನ್ನು ಬೆಳಸಬೇಕು ಎಲ್ಲಿ ಒಳ್ಳೆಯ ಉತ್ತಮ ತರಕಾರಿ ಬೆಳೆಯನ್ನು ಬೆಳಿಸಬಹುದು ಎಂಬುದನ್ನೆಲ್ಲಾ ನೋಡಿ ಅಲ್ಲಿ ಕೆಲಸ ಪ್ರಾರಂಭಿಸುವುದಕ್ಕೆ ಪ್ರಯತ್ನಗಳನ್ನು ಮಾಡುವುದರಲ್ಲಿದ್ದಾರೆ. ಕಳೆದ ಸಾಲಿನಲ್ಲಿ ಬೆಂಗಳೂರು ನಗರದಲ್ಲಿರತಕ್ಕ ಲಾಲ್‌ಬಾಗ್ ಮತ್ತು ಕಬ್ಬನ್ ಪಾರ್ಕುಗಳ ಅಭಿವೃದ್ಧಿಗಾಗಿ ೧೧ ಲಕ್ಷ ರೂಪಾಯಿಗಳನ್ನು ಒದಗಿಸಲಾಗಿತ್ತು. ಹಾಗೆ ಇಲ್ಲಿ ಒಂದು ಜೂ ಗಾರ್ಡನ್ ಅಭಿವೃದ್ಧಿ ಮಾಡಲು ಎರಡೂವರೆ ಲಕ್ಷ ರೂಪಾಯಿಗಳನ್ನು ಒದಗಿಸಲಾಗಿತ್ತು. ಅದೇ ರೀತಿ ನಮ್ಮ ರಾಜ್ಯದಲ್ಲಿರತಕ್ಕ ೧೭೪ ತಾಲ್ಲೂಕುಗಳಲ್ಲಿ ೭೪ ತಾಲ್ಲೂಕುಗಳನ್ನು ಬಿಟ್ಟು ಉಳಿದ ೧೦೦ ತಾಲ್ಲೋಕ್‌ಗಳಲ್ಲಿ ಫಾರಂಗಳಿವೆ. ಇನ್ನು ಬೇರೆ ೪೦ ತಾಲ್ಲೂಕುಗಳಲ್ಲಿ ಉತ್ತಮ ಜಾತಿಯ ಹಣ್ಣು ಹಂಪಲುಗಳನ್ನೂ ಹೂವಿನ ಗಿಡಗಳನ್ನೂ ಬೆಳಿಸುವುದಕ್ಕೆ ಪ್ರಯತ್ನಗಳನ್ನು ನಡೆಸಿದ್ದೇವೆ. ರಾಜ್ಯದಲ್ಲಿ ಟೂರಿಸ್ಟ್‌ಗಳ ಅನುಕೂಲತೆಗಾಗಿ ಅಲ್ಲಲ್ಲೆ ಈಜುವ ಕೊಳ, ಒಳ್ಳೆಯ ಹೋಟಲುಗಳ ಅನುಕೂಲ ಮತ್ತು ವಸತಿ ಸೌಕರ್ಯಗಳನ್ನು ಕಲ್ಪಿಸಲು ವ್ಯವಸ್ಥೆಗಳನ್ನು ಮಾಡಲಾಗುತ್ತಿದೆ. ಅಷ್ಟೇ ಅಲ್ಲ ನಮ್ಮ ಹಾರ್ಟಿಕಲ್ಚರಲ್ ಇಲಾಖೆಯವರು ರಾಜ್ಯದಲ್ಲಿ ಮೂರು ಕಡೆಗಳಲ್ಲಿ ಅಂದರೆ ಚಿಕ್ಕಬಳ್ಳಾಪುರ, ಹಾಸನ ಮತ್ತು ಬಿಳಿಗಿರಿರಂಗನಬೆಟ್ಟ ಈ ಕಡೆಗಳಲ್ಲಿ ರೋಗರಹಿತ ಉತ್ತಮ ಜಾತಿಯ ಆಲೂಗೆಡ್ಡೆಯನ್ನು ಬೆಳಸುವುದಕ್ಕೆ ಪ್ರಯತ್ನಗಳನ್ನು ಮಾಡಲು ರಿಸರ್ಚ್ ಸ್ಟೇಷನ್‌ಗಳನ್ನು ಮಾಡಿದ್ದೇವೆ. ಹಾಗೆ ಉತ್ತಮ ತಳಿಯ ತೆಂಗಿನ ಸಸಿಗಳನ್ನು ಬೆಳೆಸಲಾಗುತ್ತಿದೆ. ಇನ್ನು ನಮ್ಮ ರಾಜ್ಯದಲ್ಲಿ ಅಡಕೆ ಮತ್ತು ತೆಂಗಿನ ಮರಗಳಿಗೆ ಬರತಕ್ಕ ರೋಗಗಳನ್ನು ತಡೆಗಟ್ಟತಕ್ಕ ವಿಧಾನಗಳನ್ನು ಕಂಡುಹಿಡಿಯುವುದಕ್ಕೆ ಪ್ರಯತ್ನ ಮಾಡತಕ್ಕ ಬಗ್ಗೆ ಆ ವ್ಯವಸಾಯದಲ್ಲಿ ತೊಡಗಿರತಕ್ಕ ಜನರಿಗೆ ಆ ಬೆಳೆಯನ್ನು ಬೆಳೆಯತಕ್ಕ ವೆಚ್ಚದಲ್ಲಿ ಇಲ್ಲವೇ ಆ ರೋಗಾದಿಗಳನ್ನು ತಡೆಗಟ್ಟತಕ್ಕ ವಹಿಸಲಿರುವ ವೆಚ್ಚದಲ್ಲಿ ಶೇ. ೫೦ ರಷ್ಟು ಸಬ್‌ಸಿಡಿಯನ್ನು ಕೊಡುವುದಕ್ಕೂ ಕೂಡ ಏರ್ಪಾಡುಗಳನ್ನು ಮಾಡುವುದಕ್ಕೆ ಆಲೋಚನೆ ಮಾಡುತ್ತಿದ್ದೇವೆ. ಇನ್ನು ರಾಜ್ಯದ ಐದು ವಿಭಾಗಗಳಿಗೂ ತೋಟಗಾರಿಕೆಯನ್ನು ಮುಂದು ವರಿಸಲು ಅಲ್ಲಲ್ಲೆ ಉತ್ತಮ ಜಮೀನನ್ನು ದೊರಕಿಸಿಕೊಳ್ಳುವುದಕ್ಕಾಗಿ ಪ್ರಯತ್ನ ಮಾಡಲಾಗಿದೆ. ನಮ್ಮ ಹಿಂದಿನವರು ನಗರ ಸೌಂದರ್ಯವನ್ನು ಹೆಚ್ಚಿಸತಕ್ಕ ಉದ್ದೇಶದಿಂದ ಬೆಳೆಸಿರತಕ್ಕ ಯಾವ ಉದ್ಯಾನ ವನವನ್ನೂ ನಾವು ಕೈಬಿಡುವುದಕ್ಕೆ ತಯಾರಾಗಿಲ್ಲ. ಅವುಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಸರ್ಕಾರದವ ರಿಂದ ಎಲ್ಲಾ ಪ್ರಯತ್ನಗಳನ್ನೂ ಮಾಡಲಾಗಿದೆ. ಆದರೆ ನನಗೆ ಇಲ್ಲಿ ಇನ್ನೂ ಕೆಲವು ವಿಚಾರಗಳ ಬಗ್ಗೆ ಉತ್ತರ ಕೊಡುವುದಕ್ಕೆ ಅವಕಾಶವಾಗದಿದ್ದರೂ ನಾನು ಮಾನ್ಯ ಸದಸ್ಯರು ಸೂಚಿಸಿರತಕ್ಕ ಎಲ್ಲ ಸಲಹೆ ಗಳನ್ನು ಬರೆದಿಟ್ಟುಕೊಂಡಿದ್ದೇನೆ. ಅವುಗಳ ಬಗ್ಗೆ ಸೂಕ್ತ ಕಾರ್ಯಕ್ರಮ ಕೈಗೊಳ್ಳುವ ಭರವಸೆಯನ್ನು ಕೊಡುತ್ತಿದ್ದೇನೆ. ಆದ್ದರಿಂದ ತಾವೆಲ್ಲರೂ ಈಗ ನಾವು ಸಭೆಯ ಮುಂದೆ ಮಂಡಿಸಿರತಕ್ಕ ಡಿಮ್ಯಾಂಡು ಗಳನ್ನು ಅನುಮೋದಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಶ್ರೀ ಐ. ಸೋಮಶೇಖರಪ್ಪ :—ಈಗಾಗಲೇ ಸ್ವೀಡನ್, ನ್ಯೂಜಿಲೆಂಡ್ ಮತ್ತು ಅಮೇರಿಕ ಈ ಸ್ಥಳ ಗಳಲ್ಲಿ ಆಹಾರದ ಬೆಳೆಗಳಿಗೆ ಬರತಕ್ಕ ರೋಗಾದಿಗಳನ್ನು ನಾಶಪಡಿಸತಕ್ಕ ಬಗೆ ಡಿ. ಡಿ. ಟಿ. ಯನ್ನು ಉಪಯೋಗ ಮಾಡುತ್ತಿರುವುದನ್ನು ತಡೆಗಟ್ಟಬೇಕೆಂದೂ, ಇಲ್ಲದಿದ್ದರೆ ಡಿ. ಡಿ. ಟಿ. ಪ್ರಯೋಗ ಮಾಡಿದ ಆಹಾರ ಧಾನ್ಯಗಳನ್ನು ಜನರು ಉಪಯೋಗಿಸಿದರೆ ಅವರ ಆರೋಗ್ಯಕ್ಕೆ ಬಹಳ ಅಪಾಯವುಂಟಾಗುತ್ತ ದೆಂದು ಹೇಳುತ್ತಿದ್ದಾರೆ. ಆದ್ದರಿಂದ ನಮ್ಮ ಸರ್ಕಾರದವರು ಈ ಬಗ್ಗೆ ಇಲ್ಲಿ ಏನು ತೀರ್ಮಾನ ತೆಗೆದು ಕೊಂಡಿದ್ದಾರೆ ?

ಇನ್ನೊಂದು ವಿಷಯ ಎಂದರೆ ಬೀದರ್ ಮತ್ತು ರಾಜ್ಯದ ಇತರೇ ಸಣ್ಣ ಸಣ್ಣ ಹಿಡುವಳಿದಾರರಿಗೆ ಸಾಲ ಕೊಡತಕ್ಕ ಬಗ್ಗೆ ಮೂರು ಕೋಟಿ ರೂಪಾಯಿಗಳನ್ನು ಇಡಲಾಗಿದೆ ಎಂದು ಹೇಳಿದರು. ಹಣವನ್ನು ಯಾವ ಏಜನ್ಸಿ ಮೂಲಕ ಹಂಚಿಕೆ ಮಾಡಲಾಗುತ್ತದೆ ಮತ್ತು ಅದಕ್ಕೆ ಬೆಳೆಯನ್ನು ಆಧಾರ ಮಾಡಿ ಕೊಳ್ಳುತ್ತಾರೋ ಅಥವಾ ಭೂಮಿಯನ್ನು ಆಧಾರ ಮಾಡಿಕೊಳ್ಳುತ್ತಾರೋ ?

ಮತ್ತು ರಾಜ್ಯದ ೭ ಜಿಲ್ಲೆಗಳಲ್ಲಿರತಕ್ಕ ದುರ್ಬಲ ಬ್ಯಾಂಕುಗಳಿಗೆ ೧೨೦ ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ ಎಂದು ಹೇಳಿದ್ದಾರೆ. ಅದರಲ್ಲಿ ಆ ಹಿಂದೆ ಹೇಳಿದ ಮೂರು ಕೋಟಿ ಸೇರಿದೆಯೋ ಅಥವಾ ಅದು ಬೇರೆಯೋ ?

ಶ್ರೀ ಬಿ. ರಾಚಯ್ಯ.—ಆ ಮೂರು ಕೋಟಿ ಮತ್ತು ನೂರು ಕೋಟಿ ರೂಪಾಯಿಗಳು ಬೇರೆ ಬೇರೆ. ದುರ್ಬಲ ಬ್ಯಾಂಕುಗಳ ವಿಚಾರದಲ್ಲಿ ಬೇಕಾದ ವಿಚಾರವನ್ನು ಸಹಕಾರ ಮಂತ್ರಿಗಳನ್ನು ಕೇಳಿದರೆ ಅವರು ತಮಗೆ ಸರಿಯಾದ ಉತ್ತರವನ್ನು ಹೇಳಬಹುದು.

ಇನ್ನು ಡಿ. ಡಿ ಟಿ. ವಿಚಾರದಲ್ಲಿ ನಾವು ಇಲ್ಲಿ ಅಷ್ಟು ಭಾರಿ ಪ್ರಮಾಣದಲ್ಲಿ ಉಪಯೋಗ ಮಾಡುತ್ತಿಲ್ಲ; ಅಂದರೆ ಅದನ್ನು ಬಹಿಷ್ಕಾರಮಾಡತಕ್ಕ ಮಟ್ಟದಲ್ಲಿ ಬಳಸುತ್ತಿಲ್ಲ. ಇಲ್ಲಿ ಆಗಾಗ್ಗೆ ಈ ವಿಚಾರದಲ್ಲಿ ಕಾನ್‌ಫರ್‌ನ್ಸ್‌ಗಳು ನಡೆಯುತ್ತಿರುತ್ತವೆ(ಆಗ ಈ ವಿಚಾರವನ್ನು ತಜ್ಞರಿಗೆ ತಿಳಿಸಿ ಅವರ ಸಲಹೆಯ ಪ್ರಕಾರ ಕ್ರಮ ಕೈಗೊಳ್ಳಲಾಗುತ್ತದೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿ (ಬಂದರುಗಳು ಮತ್ತು ಮೀನುಗಾರಿಕೆ ಶಾಖೆಗಳ ರಾಜ್ಯ ಮಂತ್ರಿಗಳು:—

ಮಾನ್ಯ ಉಪಸಭಾಧ್ಯಕ್ಷರೇ, ಕಳೆದ ಎರಡು ದಿನಗಳಿಂದಲೂ ಶ್ರೀಮಾನ್ ಭಾಸ್ಕರಶೆಟ್ಟಿಯವರಿಂದ ಪ್ರಾರಂಭ ಮಾಡಿ ಶ್ರೀಮತಿ ನಾಗರತ್ನಮ್ಮನವರ ಕೊನೆಯ ಭಾಷಣದವರೆಗೂ ಕೂಡ ಎಲ್ಲ ಸದಸ್ಯರು ಕೂಡ ಈ ಮೀನುಗಾರಿಕೆ ಮೇಲೆ ತಮ್ಮ ಅಮೂಲ್ಯವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅದಕ್ಕಾಗಿ ಅವರೆಲ್ಲರಿಗೂ ನಾನು ಹೃತ್ಪೂರ್ವವಾಗಿ ವಂದಿಸುತ್ತೇನೆ. ನಾನು ಮಾನ್ಯ ಸದಸ್ಯರು ಸೂಚನೆ ಮಾಡಿರುವ ಕೆಲವು ಅಂಶಗಳ ಬಗ್ಗೆ ಕೆಲವು ಸೂಚನೆಗಳನ್ನು ಕೊಡ ಬಯಸುತ್ತೇನೆ.

ಮೊದಲನೆಯದಾಗಿ ಈ ಮೀನುಗಾರಿಕೆ ಇಲಾಖೆಯನ್ನು ವ್ಯವಸಾಯದ ಇಲಾಖೆಗೆ ಬದಲಾಯಿಸಿ ಅದನ್ನು ಒಂದು ಮೇಜರ್ ಇಲಾಖೆಯನ್ನಾಗಿ ಮಾಡಬೇಕು ಎನ್ನತಕ್ಕಂಥ ಅಭಿಪ್ರಾಯವನ್ನು ಅನೇಕ ಸದಸ್ಯರು ಪ್ರಸ್ತಾಪ ಮಾಡಿದರು. ಈ ಮೀನುಗಾರಿಕೆ ಇಲಾಖೆ ಈಗ ವ್ಯವಸಾಯಕ್ಕೆ ವಿಲೀನವಾಗಿದೆ ಈ ಮೀನುಗಾರಿಕೆ ಇಲಾಖೆಗೆ ಇನ್ನೂ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕು ಮತ್ತು ಹೆಚ್ಚಿನ ಗಮನ ಕೊಡಬೇಕು ಎಂದು ಅನೇಕ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು. ಈಗ ಈ ಮೀನುಗಾರಿಕೆ ಎನ್ನುವುದು ಒಂದು ಕಡೆ ಕೈಗಾರಿಕೆ ಇನ್ನೊಂದು ಕಡೆ ವ್ಯವಸಾಯ ಎನ್ನುತ್ತಾರೆ ಆದರೂ ಈ ವ್ಯವಸಾಯಕ್ಕೆ ಮತ್ತು ಕೈಗಾರಿಕೆಗೆ ಕೊಡುತ್ತಾ ಇರತಕ್ಕಂಥ ಗಮನ ಮತ್ತು ಅವುಗಳಿಗೆ ಹಾಕುತ್ತಾ ಇರತಕ್ಕಂಥ ಹಣವನ್ನು ಈ ಮೀನುಗಾರಿಕೆ ಇಲಾಖೆಗೆ ಹಾಕಿದರೆ ಇನ್ನೂ ಹೆಚ್ಚಿನ ಲಾಭ ಇದೆ ಎಂದು ಹೇಳುತ್ತೇನೆ ನಮ್ಮ ಸಂಸ್ಥಾನದಲ್ಲಿ ಮೀನುಗಾರಿಕೆ ಇಲಾಖೆ ಕೆಲಸಕಾರ್ಯಗಳು ಏನೆಂಬುದು ಎಲ್ಲರಿಗೂ ಗೊತ್ತಿರತಕ್ಕಂಥ ವಿಷಯವಾಗಿದೆಯೆಂದು ನಾನಾಪರೂ ಕೂಡ ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತೇನೆ. ಈ ಒಂದು ದೃಷ್ಟಿಯಿಂದಲೂ ಕೂಡ ಈ ಮೀನುಗಾರಿಕೆ ಇಲಾಖೆ ಒಂದು ಪ್ರಾಮುಖ್ಯವಾದ ಇಲಾಖೆ ಎಂದು ಪರಿಗಣಿಸಿ ಅದಕ್ಕೆ ಒಂದು ಹೆಚ್ಚಿನ ಪ್ರಾಶಸ್ತ್ಯವನ್ನೂ ಮತ್ತು ಹೆಚ್ಚಿನ ಹಣವನ್ನೂ ಕೊಡುವುದು ಆವಶ್ಯಕ ಎಂದು ಹೇಳುತ್ತೇನೆ.

ಈ ವರ್ಷದಲ್ಲಿ ಪ್ಲಾನ್‌ಗೆ ೮೦ ಲಕ್ಷ, ನಾನ್ ಪ್ಲಾನ್‌ಗೆ ೬೭.೮೨ ಲಕ್ಷ, ಫಿಷರೀಸ್ ಹಾರ್ಬರ್‍ಸ್ ಸೆಂಟ್ರಲ್ ಸ್ಪಾನ್ ಡ್ ಸ್ಕೀಂ ಇವುಗಳೆಲ್ಲಾ ಸೇರಿ ೨೫.೪೯ ಲಕ್ಷ ರೂಪಾಯಿಗಳಷ್ಟು ವನಹಣ್ಣು ಆಯವ್ಯಯದಲ್ಲಿ ನಿಗದಿ ಮಾಡಿದ್ದಾರೆ. ಅನಿಮಲ್ ಹಸ್ಬೆಂಡರಿ ಇಲಾಖೆಯವರ ಒಂದು ಬೇಡಿಕೆ ನೋಡಿದರೆ ೨ ಕೋಟಿ ೫ ಲಕ್ಷ ೯೬ ಸಾವಿರ ರೂಪಾಯಿಗಳು ಇದೆ. ಈ ಇಲಾಖೆಯ ಬೇಡಿಕೆಗಿಂತಲೂ ಮೀನುಗಾರಿಕೆ ಇಲಾಖೆಗೆ ಒದಗಿ-ಸಿರುವ ಹಣ ಸಣ್ಣದಾಗಿದೆ. ಈ ಇಲಾಖೆಯಲ್ಲಿ ಹೆಚ್ಚಿನ ಒಂದು ಆಧಾಯವು ಇದೆ ಅಂದರೆ ೩೫.೬. ಲಕ್ಷ ರೂಪಾಯಿಗಳ ಆದಾಯ ಬರುವುದಾಗಿದೆ. ಮತ್ತು ಈ ಮೀನುಗಾರಿಕೆ ಉದ್ಯಮದ ಮೇಲೆ ಯಾವುದರ ಮೇಲೆ ಹಣ ಹಾಕಿದರೂ ಲಾಭ ಬರುತ್ತದೆ, ನಷ್ಟವಾಗುವುದಕ್ಕೆ ಅವಕಾಶವಿಲ್ಲ. ಈ ಒಂದು ವಿಷಯ-ವನ್ನೂ ಕೂಡ ಗಮನದಲ್ಲಿರಿಸಕೊಂಡರೆ ಇದು ಒಂದು ಮುಖ್ಯವಾದ ಇಲಾಖೆ ಮತ್ತು ಮುಖ್ಯವಾದ ಕೈಗಾರಿಕೆಯೂ ಆಗಿದೆ. ಮತ್ತು ಮುಖ್ಯವಾದ ಆಹಾರವು ಆಗಿದೆ. ಅಂದರೆ ದೇಶದಲ್ಲಿರತಕ್ಕಂಥ ಆಹಾರದಲ್ಲಿ ಇದು ಪೌಷ್ಟಿಕವಾದ ಆಹಾರವಾಗಿದೆ. ಆದುದರಿಂದ ಇದನ್ನು ಹೆಚ್ಚು ಹೆಚ್ಚಾಗಿ ಅಭಿವೃದ್ಧಿ ಪಡಿಸುವುದಕ್ಕೆ ನಮ್ಮ ಸಂಸ್ಥಾನದಲ್ಲಿ ಕರಾವಳಿಯಲ್ಲಿ ಹಾಗೂ ಒಳನಾಡಿನಲ್ಲಿ ಬಹಳ ಹೆಚ್ಚು ಅವಕಾಶ ಇದೆ ಎನ್ನುವ ಒಂದು ವಿಷಯವನ್ನೂ ನಾವು ಗಮನಿಸಬೇಕಾಗಿದೆ, ನಮ್ಮ ಸುಯೋಗದಿಂದ ೨೦೦ ಮೈಲಿಯಷ್ಟು

(ಶ್ರೀ ಎಚ್. ಸಿ. ಲಿಂಗಾರೆಡ್ಡಿ)

ಕರಾವಳಿ ನಮ್ಮ ರಾಜ್ಯದಲ್ಲಿದೆ. ೧೯ ಮೀನುಗಾರಿಕೆ ಬಂದರುಗಳು ಮತ್ತು ಸಾಮಾನುಸರಂಜಾಮು ಬಂದರುಗಳು ಇವೆ. ಮಾನ್ಯ ಕೆಲವು ಸ್ನೇಹಿತರುಗಳು ಅದರಲ್ಲೂ ಶ್ರೀಮಾನ್ ಭಾಸ್ಕರಶೆಟ್ಟಿಯವರು ಮಾಡಿದ ವಾದ ಬಹಳ ವಿಚಿತ್ರವಾಗಿತ್ತು. ಏನೆಂದರೆ ಮಂತ್ರಿಗಳು ಕೇವಲ ಭಾಷಣ ಮಾಡುತ್ತಾರೆ, ಪ್ರವಾಸ ಮಾಡುತ್ತಾರೆ, ಕೆಲಸ ಮಾಡುವುದಿಲ್ಲ ಅನ್ನುವುದನ್ನು ಹೇಳಿದರು. ಬಹುಶಃ ಅವರು ನನ್ನ ಉತ್ತರವನ್ನು ಕೇಳುವುದು ಕಷ್ಟ ಎಂದು ಓಡಿ ಹೋಗಿಬಿಟ್ಟರು ಎಂದು ನಾನು ತಿಳಿಯುತ್ತೇನೆ. ನಮ್ಮ ಮಂತ್ರಿಮಂಡಲ ಬದಲಾವಣೆ ಆದಾಗ, ಮೀನುಗಾರಿಕೆ ಇಲಾಖೆ ನನ್ನ ಬಳಿಗೆ ಬಂದಮೇಲೆ ಮೈಸೂರು ಸಂಸ್ಥಾನದಲ್ಲಿ ಫಿಷರೀಸ್ ಸೈಯನ್ಸ್ ಕಾಲೆಜನ್ನು ಓಪನ್ ಮಾಡುವುದಕ್ಕೆ ಸೂಚನೆ ಏನಾದರೂ ಇದೆಯೇ ಎಂದು ಸರ್ಕಾರವನ್ನು ಮಾನ್ಯ ಸದಸ್ಯರು ಕೇಳಿದಾಗ ಶ್ರೀ ಮಾನ್ ಡಿ. ದೇವರಾಜ್ ಅರಸ್‌ರವರು ಹಿಂದೆ ಈ ಪೋರ್ಟ್‌ಫೋಲಿಯೋ ಮಂತ್ರಿಗಳಾಗಿದ್ದಾಗ "ಇಲ್ಲ" ಎಂದು ಹೇಳಿದ್ದರು, ನಾನು ಮಂಗಳೂರಿಗೆ ಹೋಗಿದ್ದ ಸಂದರ್ಭದಲ್ಲಿ ಫಿಷರೀಸ್ ಟ್ರೈನಿಂಗ್ ಸೆಂಟರ್‌ಗೆ ಹೋಗುವ ಒಂದು ಅವಕಾಶ ದೊರಕಿತು. ಆ ಸಂಸ್ಥೆಯ ಜನರಲ್ಲಿ ಫಿಷರೀಸ್‌ನ್ನು ಉಚ್ಚ್ರಾಯ ಸ್ಥಿತಿಗೆ ತರುವುದಕ್ಕೆ ಅವಕಾಶ ಇದೆಯೇ ಎಂದು ಅವರೊಡನೆ ಮಾತನಾಡಿದೆ ಮತ್ತು ಈ ಫಿಷರೀಸ್ ಸೈಯನ್ ಕಾಲೇಜನ್ನು ಓಪನ್ ಮಾಡಿದರೆ ವಿಶ್ವವಿದ್ಯಾನಿಲಯಕ್ಕೆ ಸೇರಿಸಿ ಕೊಳ್ಳುತ್ತಾರೆಯೇ ಎನ್ನುವುದನ್ನು ತಿಳಿಯುವುದಕೋಸ್ಕರ ಅಲ್ಲಿಯ ವೈಸ್‌ಛಾನ್ಸಲರ್ ಮತ್ತು ಡೀನ್ ಜೊತೆ ಮಾತನಾಡಿದೆ. ಆಮೇಲೆ ನಮ್ಮ ವ್ಯವಸಾಯ ಇಲಾಖೆಯ ಮಂತ್ರಿಗಳು ಮುಖ್ಯ ಮಂತ್ರಿಗಳು ಕೇಂದ್ರದ ಐ. ಸಿ. ಆರ್. ಕೇಂದ್ರ ಮಂತ್ರಿಗಳು ಮತ್ತು ಅಧಿಕಾರಿಗಳ ಹತ್ತಿರ ಕೂಡ ಮಾತನಾಡಿದೆ. ನಂತರ ಈ ವಿಷಯವನ್ನು ಕ್ಯಾಬಿನೆಟ್ ಮುಂದೆ ತಂದು ಹಿಂದೆ ಶ್ರೀ ಮಾನ್ ದೇವರಾಜ್ ಅರಸ್‌ರವರು ಇದರ ಬಗ್ಗೆ ಸಲಹೆ ಇಲ್ಲ ಎಂದು ಉತ್ತರ ಕೊಟ್ಟಿರತಕ್ಕಂಥಾದ್ದನ್ನು ಅಮೆಂಡ್‌ಮೆಂಟ್ ಮಾಡಿಸಿ "ಇದೆ" ಎಂದು ಇದೇ ಅಸೆಂಬ್ಲಿಯಲ್ಲಿ ಹೇಳಿದೆ. ವಾಸ್ತವಿಕವಾಗಿ ಆಮೇಲೆ ಈ ಫಿಷರೀಸ್ ಕಾಲೇಜನ್ನು ಓಪನ್ ಮಾಡಿರುವುದನ್ನು ಅವರೇ ನೋಡಿರುವಾಗ ಅವರ ಪ್ರಶ್ನೆಗೆ ಉತ್ತರ ಅಲ್ಲಿಯೇ ಸಿಕ್ಕುತ್ತದೆ. ಆದುದರಿಂದ ಅವರು ಹೇಳಿರುವ ವಿಚಾರದಲ್ಲಿ ಅಂದರೆ ಮಂತ್ರಿಗಳು ಟೂರ್ ಮಾಡುತ್ತಾರೆ, ಸುಮ್ಮಸುಮ್ಮನೆ ಬರುತ್ತಾರೆ ಎನ್ನುವ ವಿಷಯದಲ್ಲಿ ಎಷ್ಟರಮಟ್ಟಿಗೆ ಸತ್ಯಾಂಶ ಇದೆ ಎಂಬುದನ್ನು ಈ ದಿವಸ ಪರಿಶೀಲನೆ ಮಾಡಬೇಕಾಗಿದೆ.

ಶ್ರೀ ಎಸ್. ಕೆ. ಅಮೀನ್:— ಫಿಷರೀಸ್ ಟ್ರೈನಿಂಗ್ ಪ್ರೊಸೆಸ್ ಸೆಂಟರನ್ನು ಅಗ್ರಿಕಲ್‌ಚರ್ ಸೈನ್ಸ್ ಕಾಲೇಜಿಗೆ ಕೊಟ್ಟಿದ್ದೀರಲ್ಲಾ, ಅದರಿಂದ ಹೆಚ್ಚಿನ ಪ್ರಯೋಜನವಾಗಬಹುದಲ್ಲವೆ?

ಶ್ರೀ ಹೆಚ್. ಸಿ. ಲಿಂಗಾರೆಡ್ಡಿ? ಫಿಷರೀಸ್ ಟ್ರೈನಿಂಗ್ ಪ್ರೊಸೆಸ್ ಸೆಂಟರನ್ನು ಅಗ್ರಿಕಲ್‌ಚರ್ ಯೂನಿವರ್ಸಿಟಿಯಲ್ಲೇ ತೆರೆಯುವುದರಿಂದ ಬಹಳ ಹೆಚ್ಚಿನ ಪ್ರಯೋಜನ ಇದೆ. ಈ ಫಿಷರೀಸ್ ಟ್ರೈನಿಂಗ್ ಕಾಲೇಜು ಇಂಡಿಯಾದಲ್ಲೇ ಏತಕ್ಕೆ ಜಪಾನ್ ಹೊರತು ಇದು ಒಂದೇ ಇರುವುದು. ಅದು ಬೇರೆ ಕಡೆಗಳಲ್ಲಿ ಇಲ್ಲ. ಇವರಿಂದ ಜಪಾನ್ ದೇಶವು ಕೂಡ ಅಭಿವೃದ್ಧಿ ಪಡೆದಿದೆ. ಈಗ ಆ ವಿಚಾರಕ್ಕೆ ಹೋಗುವುದು ಬೇಡ.

ಇನ್ನು ಫಿಷರೀಸ್ ಹಾರ್ಬರ್‌ನ್ನು ಅಭಿವೃದ್ಧಿ ಪಡಿಸುವ ವಿಷಯದಲ್ಲಿ ಸರ್ಕಾರದವರು ಈ ವರ್ಷ ನವೆಂಬರ್ ತಿಂಗಳಲ್ಲಿ ೨೫ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಈ ಒಂದು ಅಲಾಟ್‌ಮೆಂಟ್ ನಮಗೆ ಬಂದಿದೆ. ಆ ವೇಳೆಗೆ ನಾವು ಫಿಷರೀಸ್ ಹಾರ್ಬರ್ಸ್‌ನ್ನು ಕಾರವಾರ, ಮುಲ್ಕಿ, ಭಟ್ಕಳ ಮತ್ತು ಹೊನ್ನಾವರ ಕುಂದಾಪುರ, ಮುಂತಾದ ಕಡೆಗಳಲ್ಲಿ ಯೋಜನೆ ಹಾಕಿ ಅದಕ್ಕೆ ಸೌಕರ್ಯಗಳನ್ನು ಒದಗಿಸತಕ್ಕಂಥ ಒಂದು ಏರ್ಪಾಡನ್ನು ಮಾಡಿದ್ದೇವೆ ಮಲ್ಪೆ ಮತ್ತು ಹೊನ್ನಾವರ ಈ ಎರಡು ಕಡೆಗಳಲ್ಲೂ ಫಿಷರೀಸ್ ಹಾರ್ಬರ್ಸ್‌ನ್ನು ಮಾಡಬೇಕು ಅಂತ ಹೇಳಿ ಇಂಡೋಪೋಲ್ ಸಂಸ್ಥೆಯವರು ಕೊಟ್ಟಿರತಕ್ಕಂಥ ವರದಿಯ ಮೇಲೆ ಹೊನ್ನಾವರ ಮೀನುಗಾರಿಕೆ ಬಂದರು ಮತ್ತು ಇಂಪೋರ್ಟಿಂಗ್ ಇನ್‌ವೆಸ್ಟ್‌ಮೆಂಟ್ ಸಂಸ್ಥೆಯವರು ಕೊಟ್ಟಿರುವ ವರದಿಯ ಮೇಲೆ ಮಲ್ಪೆ ಬಳಿ ಕಟ್ಟಿರತಕ್ಕಂಥ ಮೀನುಗಾರಿಕೆ ಬಂದರನ್ನು ಅಭಿವೃದ್ಧಿ ಪಡಿಸುವ ವಿಚಾರದಲ್ಲಿ ತೀರ್ಮಾನ ಮಾಡಿ ಕೇಂದ್ರ ಸರ್ಕಾರಕ್ಕೆ ಬರೆದಿದ್ದೇವೆ ಕೇಂದ್ರ ಸರ್ಕಾರದವರು ಯು. ಎನ್. ಡಿ. ಪಿ. ಸಂಸ್ಥೆಯವರ ಮುಖಾಂತರ ಅದನ್ನು ಈಗಾಗಲೇ ಸರ್ವೆ ಮಾಡಿಸಿ ಪ್ರಾಜೆಕ್ಟ್ ರಿಪೋರ್ಟ್ ಪೂರ್ತಿ ಆಗಿವೆ ಎನ್ನತಕ್ಕಂಥ ವಿಷಯದಲ್ಲಿ ನನಗೆ ವರದಿ ಬಂದಿದೆ. ಅವುಗಳನ್ನು ಮಂಜೂರ್ ಮಾಡಿ ಮಲ್ಪೆ ಮತು ಹೊನ್ನಾವರದಲ್ಲಿ ಫಿಷರೀಸ್ ಹಾರ್ಬರ್ಸ್‌ನ್ನು ಮಾಡಬೇಕು ಎನ್ನುವ ಕಾರ್ಯ ತೀವ್ರವಾಗಿ ನಡೆದಿದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಈ ವಿಷಯದಲ್ಲಿ ಶ್ರೀಮಾನ್ ಭಾಸ್ಕರಶೆಟ್ಟರು ಮಾತನಾಡಿದಾಗ ನಾನು ಬಹಳವಾಗಿ ಹೆದರುವಂತೆ ಮಾತನಾಡಿದರು. ಇದು ಹೇಗೆ ಎಂದರೆ ಅಹದ್ದಕ್ಕೆ ಏನಪ್ಪಣೆ ಎಂದರೆ ಬಾಯಿಗೆ ಬಂದದ್ದೇ ಎಂಬ ನಾಣ್ಣುಡಿಯಂತೆ ಇಲ್ಲಿ ಬಹಳವಾಗಿ ಶ್ರೀ ಭಾಸ್ಕರಶೆಟ್ಟರು ಹೇಳಿದರು. ನಮ್ಮ ಮೀನುಗಾರಿಕೆ ಬಾಬುಗಳಿಗಾಗಿ ಸುಮಾರು ೩೫ ಲಕ್ಷ ಕೊಟ್ಟಿದ್ದರದಲ್ಲಿ ಐದು ಲಕ್ಷದಷ್ಟು ಮಾತ್ರ ಖರ್ಚುಮಾಡಿದ್ದಾರೆ ಎಂದು ಇಲ್ಲಿ ಹೇಳಿದರು. ಸೆಂಟ್ರಲ್ ಸ್ಟಾನ್‌ಡರ್ಡ್ ಸ್ಕೀಮ್‌ಗಳಿಗಾಗಿ ಕೇಂದ್ರ ಸರ್ಕಾರದಿಂದ ಸುಮಾರು ೩೫ ಲಕ್ಷ ಬರಬೇಕಾಗಿದ್ದರಲ್ಲಿ ಇದುವರೆಗೆ ಮೀನುಗಾರರ ಸಹಾಯಕ್ಕಾಗಿ ೨೫ ಲಕ್ಷ ಬಂದಿದೆ, ಅದರಲ್ಲಿ ಇದುವರೆಗೆ ಹತ್ತು ಲಕ್ಷ ಖರ್ಚಾಗಿದೆ ಎನ್ನುವ ಲೆಕ್ಕ ಬಂದಿದೆ. ಒಟ್ಟು ಎಷ್ಟು ಖರ್ಚಾಗಿದೆ ಮತ್ತು ಎಷ್ಟು ಉಳಿದಿದೆ ಎಂದು ಹೇಳಬೇಕಾದರೆ ಈ ತಿಂಗಳಲ್ಲಿ ಆಖೈರು ಲೆಕ್ಕ ಬರುತ್ತದೆ. ಇದು ಬಂದ ಮೇಲೆ ಎಷ್ಟು ಖರ್ಚಾಗಿದೆ ಎನ್ನುವುದು ಗೊತ್ತಾಗುತ್ತವೆ. ಈ ಮಧ್ಯದಲ್ಲಿ ಕೇಂದ್ರ ಸರ್ಕಾರದ ಮೀನುಗಾರಿಕೆ ಮಂತ್ರಿಗಳಾದ ಶ್ರೀಮಾನ್ ಸಿಂಧೆಯವರು ನಮ್ಮ ರಾಜ್ಯದ ಮೇಲೆ ಬಹಳ ಕರುಣೆ ಇಟ್ಟು ನಮ್ಮ ರಾಜ್ಯದಲ್ಲಿ ಮೀನುಗಾರರ ಸಹಾಯಕ್ಕಾಗಿ ಮತ್ತು ಬಂದರುಗಳ ಏರ್ಪಾಡುಗಳಿಗಾಗಿ ಆಸಕ್ತಿವಹಿಸಿ ಒಳ್ಳೆಯ ಕೆಲಸಗಳನ್ನು ಮಾಡುತ್ತಿದ್ದಾರೆ ಎಂದು ನಮಗೆ ಇನ್ನು ಹೆಚ್ಚು ಹಣ ಬೇಕಾದರೆ ಕೇಳಿಕೊಡುತ್ತೇವೆಂದು ಹೇಳಿದ್ದರು. ಇದಕ್ಕಾಗಿ ನಾವು ಒಂದು ಕ್ರಾಷ್ ಪ್ರೋಗ್ರಾಂ ಎಂದು ಹಾಕಿಕೊಂಡು ಸುಮಾರು ೨೨ ಲಕ್ಷ ರೂಪಾಯಿಗಳ ಒಂದು ಯೋಜನೆಯನ್ನು ಕೇಂದ್ರಕ್ಕೆ ಕಳುಹಿಸಿದ್ದೇವೆ. ಇದರಲ್ಲಿ ಷಿಪ್ ಆಕ್ಷನ್ ಸಲುವಾಗಿ, ಎಲೆಕ್ಟ್ರಿಕ್‌ಸಿಟಿ ಸಲುವಾಗಿ, ವಾಟರ್ ಸಪ್ಲೈ ಸಲುವಾಗಿ ಮತ್ತು ಜೆಟ್ಟಿಸ್ಕೀಂಗಾಗಿ ಸುಮಾರು ೧.೫೨ ಲಕ್ಷ ಇರುವ ಒಂದು ಯೋಜನೆ ಮಾಡಿ ಕಳುಹಿಸಲಾಗಿದೆ, ಇದನ್ನು ಮಂಗಳೂರಿನಲ್ಲಿ ಮಾಡಬೇಕೆಂದು ಇದೆ. ಮಲ್ಪೆ ಬಂದರಿಗಾಗಿ ೧.೧೪ ಲಕ್ಷ ಕುಂದಾಪುರದಲ್ಲಿ ಸುಮಾರು ನಾಲ್ಕು ಲಕ್ಷ ರೂಪಾಯಿಗಳ ಯೋಜನೆ, ಭಟ್ಕಲ್, ಹೊನ್ನಾವರ ಹಾಗೂ ಕದಿರಿ ಇಲ್ಲೆಲ್ಲಾ ಸೇರಿ ಒಟ್ಟು ಸುಮಾರು ೨೨ ಲಕ್ಷ ರೂಪಾಯಿಗಳ ಸ್ಕೀಂನಲ್ಲಿ ಕೆಲವು ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಇದಕ್ಕೆ ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ಇದರಲ್ಲಿ ಕೇಂದ್ರದವರು ಸುಮಾರು ಹತ್ತು ಲಕ್ಷ ರೂಪಾಯಿಗಳ ಕೆಲಸಗಳನ್ನು ತೆಗೆದುಕೊಳ್ಳಲು ಸಹಾಯ ಮಾಡುತ್ತಾರೆ ಎನ್ನುವ ಭರವಸೆಯೂ ನಮಗೆ ಇದೆ. ಕೇಂದ್ರದ ಮಂತ್ರಿಗಳು ಇಲ್ಲಿಗೆ ಬಂದಿದ್ದಾಗ ಈಚೆಗೆ ಇಂತಹ ಭರವಸೆಯನ್ನು ನಮಗೆ ಕೊಟ್ಟಿದ್ದಾರೆ. ಅವರೇ ಹೇಳಿದಂತೆ ನಮ್ಮ ರಾಜ್ಯದ ಸಮುದ್ರದಲ್ಲಿ ಹೇರಳವಾದ ಮೀನುಗಳಿವೆ, ಇವನ್ನು ಹಿಡಿಯಲು ಅನುಕೂಲವಾಗುವಂತೆ ಮೆಕನೈಸ್ಡ್ ಬೋಟ್ಸ್‌ಗಳನ್ನು ಕೊಳ್ಳಲು ಮತ್ತು ಡೀಪ್‌ಸೀ ಫಿಷಿಂಗ್‌ಗಾಗಿ ಬೋಟುಗಳನ್ನು ತೆಗೆದುಕೊಳ್ಳಲು ಸುಮಾರು ೭೫೦ ದೋಣಿಗಳನ್ನು ತೆಗೆದುಕೊಳ್ಳಬೇಕು ಎಂದು ಹೇಳಿದ್ದಾರೆ ಮತ್ತು ಇಂತಹ ಕೆಲಸಗಳನ್ನು ಹೆಚ್ಚಾಗಿ ಮಾಡಬೇಕು ಎಂದು ನಾಲ್ಕನೇ ಯೋಜನೆಯಲ್ಲಿ ೭೫೦ ದೋಣಿಗಳನ್ನು ಕೊಳ್ಳಲು ವ್ಯವಸ್ಥೆ ಮಾಡಬೇಕೆಂದೂ ಇದೆ. ಇವೆಲ್ಲಾ ಆಲ್ ಇಂಡಿಯಾ ಸ್ಟಾನ್ಸ್‌ಡರ್ಡ್ ಸ್ಕೀಂಗಳ ಮೂಲಕ ತೆಗೆದುಕೊಳ್ಳಲು ಹೆಚ್ಚು ಹಣ ಕೊಟ್ಟು ಸುಮಾರು ೧೦೦೦ ಯಾಂತ್ರಿಕ ದೋಣಿಗಳು ಎಂದು ಇರುವುದನ್ನು ಇನ್ನು ಮುಂದೆ ೨೦೦೦ ದೋಣಿಗಳವರೆಗೆ ಹೆಚ್ಚು ಮಾಡಿಕೊಳ್ಳಬೇಕೆಂದು ಕೇಂದ್ರದವರು ಸೌಕರ್ಯಗಳನ್ನು ಮಾಡಿಕೊಡುತ್ತಿದ್ದಾರೆ, ಇದರ ಜೊತೆಗೆ ಮೈನರು ಪೋರ್ಟುಗಳ ಅಭಿವೃದ್ಧಿ, ಜೆಟ್ಟೀ ಸ್ಕೀಂ, ಡೀಪ್ ಸೀ ಫಿಷಿಂಗ್ ಯಂತ್ರಗಳು ಇವೆಲ್ಲ ಸೌಕರ್ಯಗಳನ್ನು ಒದಗಿಸಿ ಇನ್ನೂ ಹೆಚ್ಚು ಮೀನುಗಳನ್ನು ಹಿಡಿಯಬೇಕೆಂದು ಅನುಕೂಲ ಮಾಡಿಕೊಡಲಾಗಿದೆ. ಡೀಪ್ ಸೀ ಫಿಷಿಂಗಿಗೆ ಟ್ರಾಲಿಗಳನ್ನು ತೆಗೆದುಕೊಳ್ಳಬೇಕೆಂದು ಪ್ರಯತ್ನ ಮಾಡಿ ಸರ್ಕಾರದವರೇ ಪರದೇಶಗಳಿಂದ ಬಂದಿದ್ದ ಎರಡು ಟ್ರಾಲಿಗಳನ್ನು ಸುಮಾರು ೧೭ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಪಡೆದುಕೊಂಡಿದ್ದೇವೆ. ಇದರಲ್ಲಿ ಒಂದು ಟ್ರಾಲಿ ಬಂದಿದೆ. ಇನ್ನೊಂದು ಬರುವುದರಲ್ಲಿದೆ. ಇಂಡಿಯಾ ಸರ್ಕಾರದವರು ಈಚೀಗೆ ೩೦೦ ಇಂತಹ ಮೆಕನೈಸ್ಡ್ ಟ್ರಾಲಿಗಳನು ತರಿಸಿದ್ದಾರೆ. ಇವುಗಳ ಪೈಕಿ ನಮ್ಮ ರಾಜ್ಯಕ್ಕೆ ಸುಮಾರು ೩೫ ಟ್ರಾಲರ್‌ಗಳನ್ನು ನಾಲ್ಕನೇ ಯೋಜನೆ ಅವಧಿಯೊಳಗೆ ತರಿಸಲು ಪ್ರಯತ್ನ ಮಾಡುತ್ತಿದ್ದೇವೆ, ಆದರೆ ಇವುಗಳನ್ನು ನಡೆಸಬೇಕಾಗಿದ್ದರೆ ಸಾಕಷ್ಟು ತರಬೇತಿ ಪಡೆದ ಸಿಬ್ಬಂದಿ ವರ್ಗಬೇಕು. ಇದಕ್ಕಾಗಿ ಈ ಜನ ಶಿಕ್ಷಣದಲ್ಲಿ ಹಿಂದುಳಿದಿದ್ದಾರೆ ಎಂದು ಇವರುಗಳಿಗೆ ಸೂಕ್ತವಾದ ಶಿಕ್ಷಣಕೊಡಲು ಆದಷ್ಟು ಜಾಗ್ರತೆಯಾಗಿ ಉಪಾಧ್ಯಾಯರುಗಳನ್ನು ನೇಮಿಸಿ ಶಿಕ್ಷಣ ಕೊಡಲು ಪ್ರಯತ್ನಕೂಡ ಮಾಡಲಾಗುತ್ತಿದೆ. ಇದರ ಬಗ್ಗೆ ಯಾವ ರೀತಿ ಪ್ರಗತಿಯಾಗಿದೆ ಎನ್ನುವುದರ ನಿಜಾಂಶವನ್ನು ಸ್ವಲ್ಪ ಪರಿಶೀಲನೆ ಮಾಡಿದ್ದರೆ ಮಾನ್ಯ ಸದಸ್ಯರು ಇಷ್ಟು ಟೀಕೆಮಾಡಲು ಅವಕಾಶವೇ ಇರುತ್ತಿರಲಿಲ್ಲ. ಸರ್ಕಾರದವರು ಇದುವರಗೆ ಮೀನುಗಾರಿಕೆ ಇಲಾಖೆಯಲ್ಲಿ ಏನೇನು ಮಾಡಿದ್ದಾರೆ ಎನ್ನುವುದು ತಮಗೆಲ್ಲರಿಗೂ ಗೊತ್ತೇ ಇದೆ. ಈ ವಿಷಯದಲ್ಲಿ ಡೆವಲಪ್‌ಮೆಂಟ್ ಬಹಳ ನಿಧಾನವಾಗಿದೆ ಎಂದು ಹೇಳಿದರೆ ಅದಕ್ಕೆ ಕಾರಣಗಳೇ ಬೇರೆ. ಕೆಲವು ಕಾಲದಿಂದ ಬಹಳ ಹಿಂದುಳಿದಿದ್ದ ನಮ್ಮ ಜನಕ್ಕೆ ಈಗ ಹೆಚ್ಚು ಸೌಕರ್ಯಗಳನ್ನು ಮಾಡಿಕೊಡುತ್ತಿದ್ದೇವೆ. ನಮ್ಮ ರಾಜ್ಯವನ್ನು ಕೊಚ್ಚಿನ್ ಹಾಗೂ ಇನ್ನಿತರ ರಾಜ್ಯಗಳೊಡನೆ ಹೋಲಿಸಿ ಅಲ್ಲಿ ಕೆಲಸಗಳು ಹೇಗೆ ನಡೆಯುತ್ತಿವೆ ಮತ್ತು ಇಲ್ಲಿ ಹೇಗೆ ನಡೆಯುತ್ತಿವೆ ಎನ್ನುವುದನ್ನು ಸ್ವಲ್ಪ ವಿಮರ್ಶೆಮಾಡಿ ನೋಡಿದರೆ, ಮೆಕನೈಸ್ಡ್ ಬೋಟ್ಸ್‌ಗಳನ್ನು ಉಪಯೋಗ ಮಾಡುವುದರಲ್ಲಿ ಹಾಗೂ ಇನ್ನಿತರ ಕೆಲಸಗಳನ್ನು ಮಾಡುವುದರಲ್ಲಿ ನಮ್ಮ ರಾಜ್ಯದ

(ಶ್ರೀ ಎಚ್. ಸಿ. ಲಿಂಗಾರೆಡ್ಡಿ)

ಕ್ಯಾಬಿನೆಟ್‌ನವರು ಬಹಳ ಸಹಾಯ ಮಾಡುತ್ತಿದ್ದಾರೆ ಎಂದು ತಮಗೆ ತಿಳಿಸಲು ನನಗೆ ಬಹಳ ಸಂತೋಷವಾಗುತ್ತದೆ. ನಮ್ಮ ಕರಾವಳಿಯಲ್ಲಿ ಸುಮಾರು ಒಂದೂಕಾಲು ಲಕ್ಷ ಟನ್‌ಗಳಷ್ಟು ಮೀನುಗಳು ಇದುವರೆಗೆ ಸಿಕ್ಕಿವೆ. ಇದನ್ನು ನಾಲ್ಕನೆ ಯೋಜನೆ ಮುಗಿಯುವುದರೊಳಗೆ ಸುಮಾರು ಆರು ಲಕ್ಷ ಟನ್‌ಗಳಷ್ಟು ಮೀನುಗಳನ್ನು ತೆಗೆಯಬೇಕೆಂದು ಏರ್ಪಾಡು ಇದೆ. ಇದಕ್ಕೆ ಬೇಕಾದಷ್ಟು ರಸ್ತೆಗಳನ್ನು ಫಿಷರಿ ರೋಡುಗಳೆಂದು ಮಾಡಬೇಕಾಗಿದೆ. ಈಗಾಗಲೇ ಸುಮಾರು ೭೫ ಮೈಲಿಗಳ ಉದ್ದ ರಸ್ತೆಗಳನ್ನು ದಕ್ಷಿಣ ಕನಡ್ನ ಜಿಲ್ಲೆಯಲ್ಲಿ ನಿರ್ಮಾಣ ಮಾಡಲಾಗಿದೆ, ಇಂತಹ ರಸ್ತೆಗಳನ್ನು ಇನ್ನೂ ಹೆಚ್ಚು ಮಾಡಬೇಕೆಂದು ಆಯಾ ತಾಲ್ಲೂಕು ಅಭಿವೃದ್ಧಿ ಮಂಡಲಿಯಲ್ಲಿ ಮಾಡಬೇಕೆಂದು ಸರ್ಕಾರ ೫೦೦ ರೂಪಾಯಿ ಕೊಟ್ಟು ತಾಲ್ಲೂಕ್ ಬೋರ್ಡ್‌ಗಳವರು ೨೫೦ ರೂಪಾಯಿಗಳು ಕೊಡುವುದು ಎಂದು ಮಾಡಿ ಇಲ್ಲಿ ರಸ್ತೆಗಳನ್ನು ಮಾಡಿಸಬೇಕೆಂದು ಪ್ರಯತ್ನ ನಡೆದಿದೆ. ಆದರೆ ಇಂತಹ ರಸ್ತೆಗಳನ್ನು ಮಾಡುವುದರಲ್ಲಿ ತಾಲ್ಲೂಕು ಬೋರ್ಡ್‌ಗಳವರು ಹೆಚ್ಚು ಆಸಕ್ತಿ ವಹಿಸುತ್ತಿಲ್ಲ. ನಾವು ಇಂತಹ ರಸ್ತೆಗಳನ್ನು ಪಿಡಬ್ಲ್ಯೂಡಿ.ಯವರೇ ತೆಗೆದುಕೊಂಡು ಮಾಡುವುದು ಒಳ್ಳೆಯದು ಎಂದು ಸಲಹೆ ಮಾಡಿದ್ದೇವೆ. ಇದನ್ನು ಇಲ್ಲಿರುವ ಫಿಷರಿ ಅಡ್ವೈಸರಿ ಬೋರ್ಡಿನವರೂ ಒಪ್ಪಿ ಸರ್ಕಾರಕ್ಕೆ ಕಳುಹಿಸಿದ್ದಾರೆ. ಇದು ಇನ್ನೂ ಸರ್ಕಾರದವರ ಪರಿಶೀಲನೆಯಲ್ಲಿದೆ ಎಂದು ಈ ಸಂದರ್ಭದಲ್ಲಿ ತಿಳಿಸಬಯಸುತ್ತೇನೆ.

ಒಳನಾಡಿನ ಮೀನುಗಳನ್ನು ಅಭಿವೃದ್ಧಿ ಪಡಿಸಬೇಕೆಂದು ಇಲ್ಲಿ ಅನೇಕ ಸ್ನೇಹಿತರು ಸಲಹೆಮಾಡಿದ್ದಾರೆ. ಇದಕ್ಕಾಗಿ ಈಗ ಇರತಕ್ಕ ಸೌಕರ್ಯಗಳನ್ನು ಹಾರ್ನೆಸ್ ಮಾಡಿ ಇನ್ನೂ ಇದರ ಬಗ್ಗೆ ಅನೇಕ ವಿಧವಾದ ಕಾರ್ಯಕ್ರಮಗಳನ್ನು ಹಾಕಿಕೊಂಡು ಮಾಡುತ್ತಿದ್ದೇವೆ. ಒಳನಾಡಿನ ಮೀನನ್ನು ಬೆಳೆಸುವ ಕಾರ್ಯಕ್ರಮದಲ್ಲಿ ಮೊದಲಿಗೆ ಮೀನಿನ ಮರಿಗಳನ್ನು ಹೆಚ್ಚು ಮಾಡಬೇಕು ಮತ್ತು ಇದನ್ನು ಪೋಷಿಸಬೇಕಾದರೆ ನೀರಿರತಕ್ಕ ಕಡೆಗಳಲ್ಲಿ ಮರಿಗಳನ್ನು ಬಿಡಬೇಕು ಇದು ಒಂದು ದೊಡ್ಡ ಸಮಸ್ಯೆಯಾಗಿದೆ. ನಮ್ಮ ಸಂಸ್ಥಾನದಲ್ಲಿ ದೇವರ ಸುಯೋಗದಿಂದಲೋ ಏನೋ ಸುಮಾರು ೪೦ ಲಕ್ಷ ಎಕರೆಯಷ್ಟು ನೀರಿರುವ ಪ್ರದೇಶಗಳಿವೆ. ಇದರಲ್ಲಿ ಹತ್ತು ಲಕ್ಷ ಎಕರೆಯಷ್ಟು ನೀರಿರುವ ಪ್ರದೇಶ ನಮ್ಮ ಮೈಸೂರಿನಲ್ಲೇ ಇವೆ. ಇಪ್ಪತ್ತು ಸಾವಿರ ಸಣ್ಣ ಸಣ್ಣ ಕೆರೆಗಳಿವೆ ಸುಮಾರು ಮೂರು ಸಾವಿರ ಎಕರೆ ಪ್ರದೇಶಿಗಳಿಗೆ ರಿಸರ್ವಾಯರುಗಳಿವೆ, ಇದಲ್ಲದೆ ನದಿ ನೀರಿನ ಪ್ರದೇಶಗಳು, ಡೊಂಡಗಳು ಹಾಗೂ ಬಾವಿಗಳು ಇವೆ. ಸುಮಾರು ಎರಡೂವರೆ ಲಕ್ಷ ಎಕರೆ ನೀರಿರುವ ಪ್ರದೇಶಗಳಲ್ಲಿ ಮೀನಿನ ಮರಿಗಳನ್ನು ಬೆಳೆಸಲು ಸಾಧ್ಯವಿದೆ. ಇದಕ್ಕೆ ಸುಮಾರು ೨೦ ಕೋಟಿಯಷ್ಟು ಮರಿಗಳು ಬೇಕಾಗುತ್ತದೆ ಎಂದು ಇದಕ್ಕೆ ಒಂದು ಪ್ರೋಗ್ರಾಂ ತಯಾರು ಮಾಡಿದ್ದೇವೆ, ಇದರಂತೆ ಮಾಡಿದರೆ ಹೆಚ್ಚು ಮೀನಿನ ಮರಿಗಳನ್ನು ಒಳನಾಡಿನಲ್ಲಿ ಮಾಡಲು ಸಾಧ್ಯವಾಗುತ್ತದೆ. ನಮ್ಮಲ್ಲಿ ಇದುವರೆಗೆ ಮೀನಿನ ಮರಿಗಳ ಉತ್ಪಾದನೆ ಯಾವ ರೀತಿ ಇದೆ ಎಂದು ನೋಡಿದರೆ, ೧೯೬೭-೬೮ರಲ್ಲಿ ೨.೨೨ ಲಕ್ಷ ಮರಿಗಳಾದವು, ೧೯೬೮-೬೯ರಲ್ಲಿ ೧.೮೦ ಲಕ್ಷ ಮರಿಗಳಾದವು, ಈ ವರ್ಷ ಎಂದರೆ ೧೯೬೯-೭೦ರಲ್ಲಿ ೩.೫೫ ಲಕ್ಷ ಮರಿಗಳು ಉತ್ಪಾದನೆಯಾದವು. ಇಷ್ಟು ಮೀನಿನ ಮರಿಗಳನ್ನು ಇಲ್ಲಿ ತಯಾರು ಮಾಡಿದ್ದೇವೆ. ಇಂತಹ ಮೀನು ಮರಿಗಳನ್ನು ಇನ್ನೂ ಹೆಚ್ಚಿಸಬೇಕಾದರೆ ಬೇರೆ ಕಡೆಗಳಿಂದಲೂ ತರಿಸಬೇಕಾಗುತ್ತದೆ. ಕಲ್ಕತ್ತಾ ಹಾಗೂ ಮದ್ರಾಸ್ ಕಡೆಗಳಿಂದ ತರಿಸುತ್ತಿದ್ದೇವೆ ಮತ್ತು ಈ ಮೂಲಕ ಮೀನಿನ ಮರಿಗಳನ್ನು ಹೆಚ್ಚು ಮಾಡಬೇಕೆಂದು ಇದೆ. ಮೀನಿನ ಮರಿಗಳಲ್ಲಿ ನಮ್ಮ ರಾಜ್ಯದಲ್ಲಿ ಸ್ವಯಂ ಪರಿಪೂರ್ಣತೆ ಪಡೆಯಬೇಕಾದರೆ ಸುಮಾರು ೧.೩೦ ಲಕ್ಷ ಎಕರೆಗಳಷ್ಟು ಪ್ರದೇಶದಲ್ಲಿ ಅಂದರೆ ವಾಣಿವಿಲಾಸ ಸಾಗರದಲ್ಲಿ, ಶಾಂತಿಸಾಗರ, ತುಂಗಭದ್ರಾ, ಕೃಷ್ಣರಾಜಸಾಗರ ಮತ್ತು ಗಂಗಾವತಿ ಇಲ್ಲೆಲ್ಲ ಫಿಷ್ ಫಾರಂ ಎಂದು ಮಾಡಬೇಕಾಗಿದೆ. ಗಾಯತ್ರೀ ಜಲಾಶಯ ಎಂದು ಹೊಸದಾಗಿ ಇದೆ. ಇಲ್ಲೆಲ್ಲಾ ಮರಿಗಳನ್ನು ಹೇಗೆ ಮಾಡಬಹುದು ಎನ್ನುವುದಕ್ಕೆ ಒಂದು ಮಾಸ್ಟರು ಪ್ಲಾನು ತಯಾರುಮಾಡಿ ಇದರಿಂದ ಹೆಚ್ಚು ಮರಿಗಳನ್ನು ಉತ್ಪಾದನೆ ಮಾಡಿ ಎಲ್ಲ ಕಡೆಗಳಿಗೂ ಹಂಚುವ ಕಾರ್ಯಕ್ರಮ ಇಟ್ಟುಕೊಂಡಿದ್ದೇವೆ, ಗ್ರೋಮೋರ್ ಫುಡ್ ಕ್ಯಾಂಪೇನ್ ಎಂದು ಆಹಾರದ ಸಮಸ್ಯೆಯನ್ನು ಪರಿಹಾರ ಮಾಡುವಾಗ ಮೀನು ಮರಿಗಳನ್ನು ಹೆಚ್ಚು ಮಾಡಲು ತಾಲ್ಲೂಕು ಮಟ್ಟದಲ್ಲಿ ಪಂಚಾಯತಿಗಳ ಮಟ್ಟದಲ್ಲಿ ನೀರಾವರಿ ಮಾಡುವ ಪ್ರದೇಶಗಳಲ್ಲಿ ಮರಿಗಳ ಉತ್ಪಾದನೆ ಮಾಡಬೇಕಾಗಿದೆ. ನಮಗೆ ಈಗ ಮೀನು ಮರಿಗಳು ಬೇಕು ಎನ್ನುವ ಬೇಡಿಕೆ ಬರಬರುತ್ತಾ ಜಾಸ್ತಿಯಾಗುತ್ತಾ ಬರುತ್ತಿದೆ. ಇಂತಹ ಜನರ ಅಪೇಕ್ಷೆಯನ್ನು ಪೂರೈಸುವುದಕ್ಕೆ ಆಗುತ್ತಿಲ್ಲ. ಇದಕ್ಕಾಗಿ ದೇಶದಲ್ಲಿ ಇನ್ನೂ ಹೆಚ್ಚು ಮೀನಿನ ಮರಿಗಳನ್ನು ತಯಾರು ಮಾಡಬೇಕಾಗಿದೆ ಮತ್ತು ಇದಕ್ಕಾಗಿ ಇನ್ನೂ ಹೆಚ್ಚು ಹಣ ಕೊಡಬೇಕಾಗುತ್ತದೆ. ಮತ್ತು ಮೀನಿನ ಮರಿಗಳನ್ನು ಜಾಸ್ತಿ ಮಾಡಿಕೊಂಡ ಮೇಲೆ ಅವುಗಳನ್ನು ಪಾಲನೆ ಮಾಡಲು ಪ್ರತಿ ತಾಲ್ಲೂಕ್‌ನಲ್ಲಿಯೂ ಒಂದೊಂದು ಫಿಷ್ ನರ್ಸರಿ ಕೇಂದ್ರಗಳನ್ನು ಮಾಡಬೇಕೆಂದಿದ್ದೇವೆ. ಒಂದು ತಿಂಗಳು ಮರಿಗಳನ್ನು ಹಿಡಿದು ಮೂರು ತಿಂಗಳವರೆಗೆ ಬೆಳೆಸಿ ನಂತರ ನೀರಿನಲ್ಲಿ ಬಿಡುವುದಕ್ಕೆ ಸಾಧ್ಯ ಎಂದು ತಿಳಿದು

ಕೊಂಡು ಎಲ್ಲಾ ತಾಲ್ಲೂಕ್‌ಗಳಲ್ಲಿಯೂ ಫಿಷ್ ನರ್ಸರಿಗಳನ್ನು ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಉತ್ತರ ಕನ್ನಡ ಜಿಲ್ಲೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಐಸ್ ಪ್ಲಾಂಟ ಮತು ಕೋಲ್ಡ್ ಸ್ಟೋರೇಜ್ ಪ್ಲಾಂಟ್‌ಗಳು ಇವೆ. ಕೊಡಗಿನಲ್ಲಿಯೂ ಸಹ ಇದೆ. ಇನ್ನು ಮುಂದೆ ಬೆಂಗಳೂರಿನಲ್ಲಿರುವ ನಾಗರೀಕರಿಗೆ ಅಂದರೆ ಪ್ರತಿಯೊಂದು ಮನೆಗೂ ಕೂಡ ಮೀನನ್ನು ಒದಗಿಸುವುದಕ್ಕೆ ಏರ್ಪಾಡು ಮಾಡಬೇಕೆಂದಿದ್ದೇವೆ. ಅದರಂತೆ ಅಸೆಂಬ್ಲಿ ಮೆಂಬರ್‌ಗಳಿಗೂ ಕೂಡ ಅಸೆಂಬ್ಲಿ ನಡೆಯುವ ಕಾಲದಲ್ಲಿ ಒಂದು ಫಿಷ್ ಬೂತನ ಓಪನ್ ಮಾಡಿ ಮೀನನ್ನು ಆಹಾರವನ್ನು ಒದಗಿಸಬೇಕೆಂದು ತೀರ್ಮಾನ ಮಾಡಿಕೊಂಡಿದ್ದೇವೆ. ಇಷ್ಟು ವಿಷಯಗಳನ್ನು ಹೇಳಿದರೆ ಸಾಕು ಎಂದು ಕಾಣುತ್ತದೆ.

7-30 P.M. :

ಶ್ರೀ ಬಾಪುಗೌಡ ;—ಹೈದರಾಬಾದ್ ಕರ್ನಾಟಕದಲ್ಲಿ ಹರಿಯುತ್ತಿರುವ ಕೃಷ್ಣಾ ಮತ್ತು ಭೀಮಾ ನದಿಗಳಲ್ಲಿಯೂ ಕೂಡ ಮೀನನ್ನು ಬೆಳಸುವುದಕ್ಕೆ ಏರ್ಪಾಡು ಮಾಡಲಾಗುತ್ತದೇಯೋ

ಶ್ರೀ ಎಚ್. ಸಿ. ಲಿಂಗಾರೆಡ್ಡಿ ;—ಎಲ್ಲಾ ರಿಜರ್‌ವಾಯರ್‌ಗಳಲ್ಲಿಯೂ ಮೀನನ್ನು ಬೆಳೆಸಬೇಕೆಂದು ತೀರ್ಮಾನ ಮಾಡಿದ್ದೇವೆ. ಬಿಜಾಪುರ ಜಿಲ್ಲೆಯಲ್ಲಿ ೮ ಮೀನು ಅಭಿವೃದ್ಧಿ ಸಹಕಾರ ಸಂಘಗಳು ಇವೆ ಎಂದು ಗೊತ್ತಾಗಿದೆ. ಅದರಂತೆ ಬೆಂಗಳೂರಿನಲ್ಲಿಯೂ ಕೂಡ ೮ ಮೀನುಗಾರಿಕೆಗೆ ಸಂಬಂಧಪಟ್ಟಂತೆ ಸಹಕಾರ ಸಂಘಗಳು ಇವೆ ಎಂದು ಗೋತ್ತಾಗಿದೆ. ಒಳನಾಡಿನಲ್ಲಿರತಕ್ಕಂಥ ನದಿಗಳು, ಕೆರೆಗಳು, ಬಾವಿಗಳು ಮತ್ತು ಹೊಂಡಗಳಲ್ಲಿ ಮೀನನ್ನು ಬಿಟ್ಟು ಅವುಗಳನ್ನು ಅಭಿವೃದ್ಧಿ ಪಡಿಸಬೇಕೆಂದಿರುವಂತೆ ಕೃಷ್ಣಾ ಮತ್ತು ಭೀಮಾ ನದಿಗಳಿಗೆ ಸಂಬಂಧಪಟ್ಟಂತೆ ಇರುವ ರಿಜರ್‌ವಾಯರ್‌ಗಳಲ್ಲಿಯೂ ಕೂಡ ಮೀನಿನ ಅಭಿವೃದ್ಧಿ ಮಾಡ ಬೇಕೆಂದು ಇದ್ದೇವೆ. ಮೀನನ್ನು ಬೆಳೆಸತಕ್ಕಂಥ ಆಸಕ್ತಿ ಇರುವ ಬೆಸ್ತರಿಗೆ ಕೂಡ ಮೀನಿನ ಮರಿಗಳನು ಒದಗಿಸುವ ಏರ್ಪಾಡು ಮಾಡುವವರಿದ್ದೇವೆ. ಮಾನ್ಯ ಸದಸ್ಯರು ಕೊಟ್ಟಿರತಕ್ಕಂಥ ಸಲಹೆಗಳಿಗಾಗಿ ಅವರನ್ನು ಮತ್ತೊಮ್ಮೆ ವಂದಿಸಿ ಈ ಬೆಡಿಕೆಯನ್ನು ಎಲ್ಲರೂ ಯುನಾನಿಮಸ್ ಆಗಿ ಒಪ್ಪಬೇಕೆಂದು ಕೇಳಿ ಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ :—೭ ವರ್ಷಗಳ ಹಿಂದೆ ಯಾಂತ್ರೀಕೃತ ದೋಣಿಗಳು ಇರಲಿಲ್ಲ ಈಗ ಸುಮಾರು ೭೫೦ ಯಾಂತ್ರೀಕೃತ ದೋಣಿಗಳನ್ನು ಒದಗಿಸಲಾಗಿದೆ ಮತ್ತು ಮುಂದೆ ಮತ್ತೆ ೭೫೩ ಯಾಂತ್ರೀಕೃತ ದೋಣಿಗಳನ್ನು ಒದಗಿಸಲಾಗುತ್ತದೆ ಎಂದು ಹೇಳಿದಿರಿ ಆ ರೀತಿ ಒದಗಿಸುವಾಗ ಬಡ ಮೀನು ಗಾರರಿಗೆ ಒದಗಿಸುವುದಕ್ಕೆ ಏರ್ಪಾಡು ಮಾಡುತ್ತಿರಾ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ ;—ಮಾಡೋಣ.

ಶ್ರೀ ಜಿ. ಬಿ. ಶಂಕರರಾವ್ (ಪಶುಸಂಗೋಪನ ಶಾಖೆಯ ರಾಜ್ಯ ಮಂತ್ರಿಗಳು) :—ಮಾನ್ಯ ಅಧ್ಯಕ್ಷರೇ, ಪಶುಪಾಲನೆ, ಪಶುವೈದ್ಯಕೀಯ ಮತ್ತು ಹೈನು ಅಭಿವೃದ್ಧಿ ಯೋಜನೆ ಬಗ್ಗೆ ಮಂಡಿಸುವ ಬೇಡಿಕೆಗಳ ಮೇಲೆ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಾ ಉಪಯುಕ್ತವಾದಂಥ ಸಲಹೆಗಳನ್ನು ಕೊಟ್ಟಿದ್ದಾರೆ. ಅದಕ್ಕೋಸ್ಕರವಾಗಿ ನಾನು ಮಾನ್ಯ ಸದಸ್ಯರಿಗೆ ಧನ್ಯವಾದಗಳನ್ನು ಅರ್ಪಿಸಲು ಇಚ್ಛೆಪಡುತ್ತೇನೆ. ನನಗೆ ಕೊಟ್ಟಿರುವ ಸಮಯ ಕಡಿಮೆ ಇರುವುದರಿಂದ ಮಾನ್ಯ ಸದಸ್ಯರು ಎತ್ತಿದಂಥ ಸಲಹೆಗಳಿಗೆಲ್ಲಾ ವಿವರವಾಗಿ ಉತ್ತರ ಕೊಡುವುದಕ್ಕೆ ಕಷ್ಟವಾಗುತ್ತದೆ. ಸಾಧ್ಯವಾದಮಟ್ಟಿಗೂ ಮಾನ್ಯ ಸದಸ್ಯರು ಕೇಳಿದಂತಹ ಸಮಸ್ಯೆಗಳಿಗೆಲ್ಲಾ ಸಂಕ್ಷಿಪ್ತವಾಗಿ ಉತ್ತರ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಇಲಾಖೆಗೆ ಸಂಬಂಧಪಟ್ಟಂತೆ ಮಾನ್ಯ ಸದಸ್ಯರು ತಳಿ ಅಭಿವೃದ್ಧಿ ಯೋಜನೆ ಬಗ್ಗೆ ಪಶು ಸಂಪತ್ತಿನ ಬಗ್ಗೆ ಪಶುಗಳಿಗೆ ಬರುವ ರೋಗವನ್ನು ತಡೆಗಟ್ಟುವ ಬಗ್ಗೆ, ಕೋಳಿ ಸಾಕುವ ವಿಚಾರದ ಬಗ್ಗೆ, ಅಮಡ ಮಹಲ್ ಜಮೀನಿನ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಮಾನ್ಯ ಸದಸ್ಯರಾದ ಶ್ರೀ ರಾಮೇಗೌಡರು, ಶ್ರೀ ಗುರೆಡಿ. ಯವರು ಶ್ರೀ ಮಲ್ಲಪ್ಪನವರು ತಳಿ ಅಭಿವೃದ್ಧಿ ವಿಚಾರದಲ್ಲಿ ಇಲಾಖೆಯವರು ಸಾಕಷ್ಟು ಕ್ರಮ ಕೈಗೊಂದಿ ದೇಶದಲ್ಲಿರತಕ್ಕಂಥ ತಳಿಗಳನ್ನು ತೀವ್ರತರವಾಗಿ ಅಭಿವೃದ್ಧಿ ಪಡಿಸಬೇಕೆಂದು ಹೇಳಿದ್ದಾರೆ. ತಳಿ ಅಭಿವೃದ್ಧಿ ಯೋಜನೆ ವಿಚಾರದಲ್ಲಿ ನಾವು ಎರಡು ಕಾರ್ಯಕ್ರಮಗಳನ್ನು ಹೊಂದಿದ್ದೇವೆ. ಒಂದನೆಯದಾಗಿ ವ್ಯವಸಾ ಯಕ್ಕೆ ಯೋಗ್ಯವಾದಂಥ ಕರಗಳನ್ನ ಉತ್ಪಾದನೆ ಮಾಡುವ ಸಲುವಾಗಿ ಹಳ್ಳಿಕಾರ್, ಕೃಷ್ಣಾತೀರಾ ದೇವಣಿ, ಅಮೃತಮಹಲ್ ಮತ್ತು ಕಿಲಾರ್ ಜಾತಿಯ ತಳಿಗಳನ್ನು ಉಳಿಸಿಕೊಂಡು ಬಂದಿದ್ದೇವೆ. ಎರಡ

(ಶ್ರೀ ಜಿ. ಬಿ. ಶಂಕರರಾವ್)

ನೆಯದಾಗಿ ಒಳ್ಳೆಯ ತಳಿಗಳನ್ನು ರೈತರಿಗೆ ಒದಗಿಸುವ ಸಲುವಾಗಿ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಸೆಲೆಕ್ಟಿವ್ ಬ್ರೀಡ್ ಯೋಜನೆಯ ಮುಖಾಂತರ ಈ ಕಾರ್ಯಕ್ರಮವನ್ನು ಅಭಿವೃದ್ಧಿ ಪಡಿಸುತ್ತಿದ್ದೇವೆ. ಈ ಕಾರ್ಯಕ್ರಮದ ಅಂಗವಾಗಿ ಅಮೃತಮಹಲ್, ಹಳ್ಳಿಕಾರ್, ಕೃಷ್ಣಾತೀರ್, ದೇವಣಿ ಮತ್ತು ಕಿಲಾರಾ ನಂತಹ ಶ್ರೇಷ್ಠವಾದ ತಳಿಗಳಿಂದ ವೀರ್ಯವನ್ನು ಪಡೆದುಕೊಂಡು ಅದನ್ನು ಕೃತಕ ವೀರ್ಯ ಕೇಂದ್ರದ ಮುಖಾಂತರ ಯಾವ ಯಾವ ರೈತರಿಗೆ ಈ ಜಾತಿಯ ತಳಿಗಳ ವೀರ್ಯದ ಅವಶ್ಯಕತೆ ಇದೆಯೋ ಅವರಿಗೆಲ್ಲಾ ಒದಗಿಸುವುದಕ್ಕೆ ಏರ್ಪಾಡು ಮಾಡಿದ್ದೇವೆ. ಇದರಿಂದ ಸ್ವಾಭಾವಿಕವಾಗಿ ರೈತರೇ ಉಪಯೋಗ ಮಾಡಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಇದರ ಜೊತೆಗೆ ನಮ್ಮ ಫಾರಮ್‌ಗಳಿಂದ ಒಳ್ಳೆಯ ಬೀಜದ ಹೋರಿಗಳನ್ನು ತಾಲ್ಲೂಕ್ ಬೋರ್ಡಿನ ಮೂಲಕ ರೈತರಿಗೆ ಸಬ್ಸಿಡಿ ರೂಪದಲ್ಲಿ ಹಂಚುವ ವ್ಯವಸ್ಥೆ ಮಾಡಿರುವುದರ ಜೊತೆಗೆ ಅಜ್ಜಂಪುರದ ಫಾರಮ್‌ನಿಂದ ಕೂಡ ಒಳ್ಳೆಯ ತಳಿಗಳನ್ನು ರೈತರಿಗೆ ಕೊಡುವುದಕ್ಕೆ ಯೋಜನೆ ಇಟ್ಟುಕೊಂಡಿದ್ದೇವೆ. ನಮ್ಮ ದೇಶದಲ್ಲಿರತಕ್ಕಂಥ ಶ್ರೇಷ್ಠವಾದಂಥ ತಳಿಗಳು ಏನಿವೆ ಅವುಗಳನ್ನು ಉಳಿಸಿಕೊಳ್ಳುವಂತಹ ಕೆಲಸವನ್ನು ಯಶಸ್ವಿಯಾಗಿ ಮಾಡಿದ್ದೇವೆ. ಈ ಒಂದು ಕೆಲಸ ಇವತ್ತು ಪ್ರಾರಂಭವಾಗಿಲ್ಲ. ಶತಮಾನಗಳ ಕಾಲದಿಂದಲೂ ಕೂಡ ಅಮೃತಮಹಲ್, ಹಳ್ಳಿಕಾರೆ, ಕೃಷ್ಣಾತೀರೆ, ದೇವಣಿ ಮತ್ತು ಕಿಲಾರ್ ಜಾತಿಯ ತಳಿಗಳನ್ನು ಉಳಿಸಿಕೊಂಡು ಬರಲಾಗಿದೆ. ಈ ರೀತಿ ಉಳಿಸಿಕೊಂಡು ಬರುವುದಕ್ಕೆ ರೈತರು ಕೂಡ ಸಹಕಾರ ಮಾಡಿದ್ದಾರೆ, ನಾವು ಎಷ್ಟು ನಿರೀ ಮಾಡಿದ್ದೆವೋ ಅಷ್ಟರವರೆಗೆ ನಾವು ಈ ತಳಿಗಳನ್ನು ಉಳಿಸಿಕೊಂಡಿದ್ದೇವೆ ಮತ್ತು ಬೆಳೆಸಿದ್ದೇವೆ. ಅದಕ್ಕಾಗಿ ನಮ್ಮ ಮಾನ್ಯ ಸ್ನೇಹಿತರು ಈ ಬಗ್ಗೆ ಕಳವಳ ಪಡುವ ಸಂದರ್ಭ ಏನಿಲ್ಲ. ಅಮೃತಮಹಲ್ ದನಗಳ ವಿಚಾರದಲ್ಲಿ ಶ್ರೀ ರಾಮೇಗೌಡರು ಕೆಲವು ವಿಚಾರಗಳನ್ನು ಹೇಳಿದರು. ಈ ತಳಿಯನ್ನು ಉಳಿಸಿಕೊಳ್ಳುವುದಕ್ಕೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಎಂದು ಕೇಳಿದರು. ನಮ್ಮಲ್ಲಿ ಇರತಕ್ಕಂಥ ಕೃತಕ ವೀರ್ಯ ಕೇಂದ್ರಗಳ ಮುಖಾಂತರ ಈ ತಳಿಯ ವೀರ್ಯವನ್ನು ಶೇಖರಣೆ ಮಾಡಿ, ನಂತರ ಅದನ್ನು ಬೇಕಾದಂತಹ ರೈತರಿಗೆ ಒದಗಿಸಲಾಗುತ್ತಿದೆ. ಮತ್ತು ದನಗಳನ್ನು ಯಾವ ರೀತಿ ಆರ್ಥಿಕವಾಗಿ ಅಭಿವೃದ್ಧಿ ಪಡಿಸಬೇಕು ಎಂಬುದನ್ನು ರೈತರಿಗೆ ಅಧಿಕಾರಿಗಳ ಮೂಲಕ ಹೇಳಿಕೊಡಲಾಗುತ್ತಿದೆ.

ತಳಿಯನ್ನು ಸಾಕಷ್ಟು ಉತ್ತಮ ಪಡಿಸುವ ವಿಚಾರದಲ್ಲಿ ೫ ಕಾರ್ಯಕ್ರಮಗಳನ್ನು ನಾವು ಹಾಕಿಕೊಂಡಿದ್ದೇವೆ. ಒಂದು ಸೆಲೆಕ್ಟಿವ್ ಬ್ರೀಡಿಂಗ್ ಮುಖಾಂತರ ೨. Castration of calves, 3. Supply of breading bulls of these breeds, 4. Opening of additional centres, and 5. Better amenities and care. ಈ ಯೋಜನೆ ಮುಖಾಂತರ ತಳಿ ಉತ್ತಮ ಪಡಿಸುವ ಕಾರ್ಯ ರಾಜ್ಯಾದ್ಯಂತ ನಡೆಯುತ್ತಿದೆ. ಅಮೃತಮಹಲ್ ಬಹಳ ಶ್ರೇಷ್ಠವಾಗ ತಳಿ, ಇದು ಬಹಳ ಭಯಂಕರ ಜಾತಿ. ಇದನ್ನು ಡೆಮಾನ್‌ಸ್ಟ್ರೇಟ್ ಮಾಡಬೇಕಾಗುತ್ತದೆ, ರೇಂಜಿಂಗ್ ಬ್ರೀಡಿಗೆ ಸ್ವಲ್ಪ ವಿಸ್ತಾರವಾದ ಕ್ಷೇತ್ರ ಬೇಕು. ಅಲ್ಲಿ ಇದನ್ನು ಡೆಮಾನ್‌ಸ್ಟ್ರೇಟ್ ಮಾಡಬೇಕಾಗುತ್ತದೆ. ಅಮೃತಮಹಲ್ ಕಾವಲು ಜಮೀನು ನಮ್ಮ ರಾಜ್ಯದಲ್ಲಿ ಮೊದಲಿನಿಂದಲೂ ಸಾಕಷ್ಟು ಪ್ರಮಾಣದಲ್ಲಿ ಇತ್ತು, ಈಗ ಅದು ಕಡಿಮೆಯಾಗುತ್ತಿದೆ, ಯಾವ ಉದ್ದೇಶಕ್ಕೋಸ್ಕರ ಈ ಇಲಾಖೆಯಲ್ಲಿ ೪ ಲಕ್ಷ ಎಕರೆ ಜಮೀನನ್ನು ಮೀಸಲಾಗಿಟ್ಟಿತ್ತೋ, ಅದು ಈ ಹೊತ್ತು ೭೫ ಸಾವಿರ ಎಕರೆಗೆ ಇಳಿದಿದೆ. ರೈತರೇ ಇವೊತ್ತು ಸಾಗಿಗೋಸ್ಕರ ಆ ಜಮೀನು ಕೊಡಿ ಎಂದು ಕೇಳುತ್ತಿದ್ದಾರೆ. ಅಂಥ ಒಂದು ಪರಿಸ್ಥಿತಿ ಬಂದಿದೆ. ರೇಂಜಿಂಗ್ ಬ್ರೀಡಿಗೆ ಸಾಕಷ್ಟು ಜಮೀನು ಬೇಕು. ಗ್ರೇಜಿಂಗ್ ಏರಿಯಾ ಇದ್ದರೆ ಅವುಗಳಿಗೆ ಬೇಕಾಗಿರತಕ್ಕಂಥ ಹೊಸ ಹೊಸ ಯೋಜನೆಗಳನ್ನು ಹಾಕಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಇದಕ್ಕೆ ಸಾಕಷ್ಟು ಜಮೀನು ಬೇಕಾಗುತ್ತದೆ. ಈಗ ಉದಾಹರಣೆಗೆ ಹೇಳುವುದಾದರೆ ಕೇಂದ್ರ ಸರ್ಕಾರದವರು ಲಾರ್ಜ್ ಸೈಜ್ ಶೀಫ್ ಫಾರಂ ಯೋಜನೆ ನಮ್ಮ ರಾಜ್ಯಕ್ಕೆ ಕೊಟ್ಟಿದ್ದಾರೆ. ಅದಕ್ಕೆ ೧೦ ಸಾವಿರ ಎಕರೆ ಜಮೀನನ್ನು ಒದಗಿಸುವುದಕ್ಕೆ ಸಾಧ್ಯವಿದೆಯೇ ಎಂದು ಕೇಳಿದ್ದಕ್ಕೆ ನಾವು ಆ ೧೦ ಸಾವಿರ ಎಕರೆ ಜಮೀನನ್ನು ಅದಕ್ಕೆ ಒದಗಿಸುತ್ತೇವೆ ಎಂದು ಹೇಳಿದ್ದಕ್ಕೆ ಆ ಯೋಜನೆ ನಮಗೆ ಬಂದಿದೆ. ಇವೊತ್ತು ಅದಕ್ಕಾಗಿ ನಮಗೆ ಕೇಂದ್ರ ಸರ್ಕಾರದಿಂದ ೧೮ ಲಕ್ಷ ರೂಪಾಯಿ ಸಹಾಯ ಬರುತ್ತಿದೆ.

ಇದೇ ರೀತಿ ಡೆನ್ಮಾರ್ಕ್‌ನ ತಾಂತ್ರಿಕ ನೆರವಿನಿಂದ ಸ್ಥಾಪನೆ ಮಾಡತಕ್ಕಂಥ ೩ ಕ್ಯಾಟಲ್ ಫಾರಂ, ಮತ್ತು ಡೈರಿ ಫಾರಂಗೋಸ್ಕರ ಒಂದು ಸಾವಿರ ಎಕರೆ ಜಮೀನು ಬೇಕಾಗಿದೆ ನಮ್ಮ ಫಾರಮ್ಮಿನ ದನಗಳನ್ನು ಮೇಯಿಸುವುದಕ್ಕೋಸ್ಕರ ನಮಗೆ ಜಮೀನು ಬೇಕಾಗಿದೆ. ಈ ಕಾರಣಕೋಸ್ಕರ ಜಮೀನನ್ನು ಒದಗಿಸಿಕೊಳ್ಳತಕ್ಕ ಅವಶ್ಯಕತೆ ಇದೆ. ಈ ಜಮೀನನ್ನು ಆದಷ್ಟು ಎಕನಾಮಿಕ್ ಆಗಿ ಅಭಿವೃದ್ಧಿ ಪಡಿಸತಕ್ಕ ಯೋಜನೆ ಸರ್ಕಾರದ ಪರಿಶೀಲನೆಯಲ್ಲಿದೆ. ಆದ್ದರಿಂದ ಇದ್ದ ಜಮೀನನ್ನು ಎಷ್ಟರಮಟ್ಟಿಗೆ ಸಾರ್ಥಕ ಮಾಡಿಕೊಂಡು ಉಪಯೋಗ ಮಾಡಿಕೊಳ್ಳುವುದಕ್ಕೆ ಸಾಧ್ಯವಿದೆ ಅದನ್ನು ಸರ್ಕಾರ ಮಾಡುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಎರಡನೆಯದಾಗಿ ನಮ್ಮ ಇಲಾಖೆಯಲ್ಲಿ ಸುಮಾರು ೭೦೫೭ ಜಾನುವಾರು ಆಸ್ಪತ್ರೆಗಳನ್ನು ನಡೆಸುತ್ತಿದ್ದೇವೆ. ಈ ಸಾಲಿನಲ್ಲಿ ೭೫೭ ಆಸ್ಪತ್ರೆಗಳನ್ನು ಸ್ಥಾಪನೆಮಾಡಿದ್ದೇವೆ. ಅದು ಈ ವರ್ಷದ ಅಂತ್ಯದಲ್ಲಿ ೮೦೦ಕ್ಕೆ ಸಂಖ್ಯೆ ಹೆಚ್ಚಬಹುದು, ಅಂಥಾ ಒಂದು ಸಂದರ್ಭ ಇದೆ. ಈ ಆಸ್ಪತ್ರೆಗಳಿಗೆ ಬೇಕಾದಂತಹ ಔಷಧಿ ವ್ಯವಸ್ಥೆಯು ಬಹಳ ತೃಪ್ತಿಕರವಾಗಿದೆ. ಸಾಕಷ್ಟು ಪ್ರಮಾಣದಲ್ಲಿ ಔಷಧಿ ಸಿಕ್ಕುತ್ತಿದೆ. ಈ ವರ್ಷ ಜಾನುವಾರುಗಳ ಆಸ್ಪತ್ರೆ ಸಂಖ್ಯೆ ಎಷ್ಟಾಗುತ್ತದೆ ಎಂದು ನಿರೀಕ್ಷಿಸಿ ಅದಕ್ಕೆ ೬೦ ಲಕ್ಷ ರೂಪಾಯಿಗಳನ್ನು ಒದಗಿಸಿದೆ, ಈ ಆಸ್ಪತ್ರೆಗಳು ಇನ್ನೂ ತೃಪ್ತಿಕರವಾಗಿ ಕೆಲಸ ಮಾಡಬೇಕಾಗಿದ್ದರೆ ೧೦-೧೨ ಲಕ್ಷ ರೂಪಾಯಿಗಳ ಕೊರತೆಯಾಗುತ್ತದೆ. ಸಾಧ್ಯವಾದ ಮಟ್ಟಿಗೆ ಔಷಧಿಯನ್ನು ತರಿಸಿ ಒದಗಿಸುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ, ನಾವು ಬಡ್ಜೆಟ್ಟಿನಲ್ಲಿ ಒದಗಿಸಿರತಕ್ಕ ಹಣಕ್ಕೆ ಸಾಕಷ್ಟು ಔಷಧಿಯನ್ನು ಕೊಂಡು ಹಂಚುವುದಕ್ಕೆ ಒಂದು ಅನಾನುಕೂಲತೆ ಇತ್ತು ಅದನ್ನು ಸರಿಪಡಿಸಬೇಕು ಎಂದು ನಮ್ಮ ಇಲಾಖೆಗೆ ಸಂಬಂಧಪಟ್ಟ ಹಾಗೆ ಒಂದು ಮೆಡಿಸಿನ್ ಸ್ಟೋರ್ಸನ್ನು ಹೊಸದಾಗಿ ಈ ಇಲಾಖೆಗೆ ಪ್ರತ್ಯೇಕವಾಗಿ ಇಟ್ಟುಕೊಳ್ಳಬೇಕು ಎಂದು ಸರ್ಕಾರ ಆಲೋಚನೆ ಮಾಡುತ್ತಿದೆ ಆದ್ದರಿಂದ ಈಗ ಔಷಧಿಗಳ ವಿಚಾರದಲ್ಲಿ ಅದರ ವಿತರಣೆಯ ವಿಚಾರದಲ್ಲಿ ಸಾಕಷ್ಟು ಅನುಕೂಲ ಮತ್ತು ತೃಪ್ತಿಕರವಾದ ವ್ಯವಸ್ಥೆ ಆಗುತ್ತದೆ ಎಂದು ನಾನು ಮಾನ್ಯ ಸದಸ್ಯರಿಗೆ ಭರವಸೆಯನ್ನು ಕೊಡುತ್ತೇನೆ.

ದನಗಳ ಖಾಯಿಲೆ ವಿಚಾರದಲ್ಲಿ, ಅದರ ಕಂಟ್ರೋಲ್ ವಿಚಾರದಲ್ಲಿ ಮಾನ್ಯ ಸದಸ್ಯರಾದ ಶ್ರೀ ರಾಮೇಗೌಡರು ಮಾತನಾಡುತ್ತಾ ನಮ್ಮ ದೇಶದಲ್ಲಿ ದೊಡ್ಡ ಪ್ರಮಾಣದಲ್ಲಿ ಹಬ್ಬಿರತಕ್ಕ ಕಾಲು ಜ್ವರ, ಬಾಯಿ-ಜ್ವರ ಖಾಯಿಲೆಗೆ ಸಾಕಷ್ಟು ಪ್ರಮಾಣದಲ್ಲಿ ವ್ಯಾಕ್ಸೀನ ಉತ್ಪತ್ತಿಯಾಗುತ್ತಿಲ್ಲ, ಇದರಿಂದ ರೈತರಿಗೆ ಕಷ್ಟನಷ್ಟಗಳಾಗುತ್ತಿವೆಯೆಂದು ಹೇಳಿದ್ದಾರೆ. ಅದಕ್ಕಾಗಿ ವ್ಯಾಕ್ಸೀನ ತಯಾರು ಮಾಡತಕ್ಕಂಥ ಒಂದು ಯೂನಿಟ್ಟನ್ನು ಸ್ಥಾಪನೆ ಮಾಡುವುದಕ್ಕೆ ಪರ್ಮಿಷನ್ ಕೊಡಬೇಕೆಂದು ನಾವು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದೇವೆ. ಅವರು ಒಂದು ವರ್ಷಕ್ಕೆ ಮಾತ್ರ ಪರ್ಮಿಷನ್ ಕೊಟ್ಟಿದ್ದಾರು. ಈಗ ನಾವು ಪ್ರತ್ಯೇಕವಾಗಿ ಸ್ವಂತವಾಗಿ ಡೆನ್ಮಾರ್ಕಿನವರ ಸಹಾಯದಿಂದ ಭಾರತದಲ್ಲೇ ಎರಡನೇ ದೊಡ್ಡ ಫುಟ್ ಅಂಡ್ ಮೌತ್ ವ್ಯಾಕ್ಸೀನ ತಯಾರು ಮಾಡತಕ್ಕ ಯೂನಿಟ್ಟನ್ನು ಸ್ಥಾಪನೆ ಮಾಡುವುದಕ್ಕೆ ಸರ್ಕಾರದವರು ಕಾರ್ಯಕ್ರಮ ಕೈಕೊಂಡಿದ್ದಾರೆ. ರಿಂಡರ್‌ಪೆಸ್ಟ್ ದನಗಳ ದೊಡ್ಡ ಬೇನೆ ರೋಗ ಬಾರದ ಹಾಗೆ ತಡೆಗಟ್ಟಬೇಕು ಎಂದು ಶ್ರೀಮಾನ್ ರಾಮೇಗೌಡರು ಹೇಳಿದ್ದಾರೆ. ಈ ರೋಗವನ್ನು ಸಂಪೂರ್ಣವಾಗಿ ನಿರ್ಮೂಲ ಮಾಡಬೇಕು ಎನ್ನುವ ಉದ್ದೇಶದಿಂದ ೩ ವರ್ಷಗಳ ಒಂದು ಕಾರ್ಯಕ್ರಮವನ್ನು ಹಾಕಿ-ಕೊಂಡು ಈಗಾಗಲೇ ೯ ಜಿಲ್ಲೆಗಳಲ್ಲಿ ಕೆಲಸ ಮಾಡಿದ್ದೇವೆ. ಈಗ ೪ ಜಿಲ್ಲೆಗಳಲ್ಲಿ ಕೆಲಸ ನಡೆಯುತ್ತಿದೆ. ಇನ್ನು ೬ ಜಿಲ್ಲೆಗಳಲ್ಲಿ ಒಂದು ವರ್ಷದಲ್ಲಿ ಆ ಕೆಲಸ ಪೂರೈಸಿ ಆ ರೋಗ ನಮ್ಮ ರಾಜ್ಯದಲ್ಲಿ ಸಂಪೂರ್ಣವಾಗಿ ನಿರ್ಮೂಲವಾಗುತ್ತದೆ. ಮತ್ತು ವ್ಯಾಕ್ಸೀನ್‌ನ್ನು ಕೂಡ ಸಾಕಷ್ಟು ಪ್ರಮಾಣದಲ್ಲಿ ಮದ್ರಾಸಿನಿಂದ ತರಿಸು-ವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಈ ಕಾರ್ಯವನ್ನು ಮಾಡುವುದಕ್ಕೆ ನಾವು ಹಿಂದೆ ಮುಂದೆ ನೋಡುವುದಿಲ್ಲ.

ಹಾಲಿನ ಡೈರಿ ಫೌಲ್ಟ್ರಿ ಮತ್ತು ಕುರಿ ಅಭಿವೃದ್ಧಿಯ ವಿಚಾರದಲ್ಲಿ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಮಂಗಳೂರಿನ ಹಾಲು ಸರಬರಾಜು ಯೋಜನೆಯನ್ನು ಇಷ್ಟರಲ್ಲೇ ಪೂರೈಸಿ ಆ ಕಾರ್ಯ-ವನ್ನು ಪ್ರಾರಂಭ ಮಾಡುತ್ತೇವೆ ಎನ್ನುವ ಮಾತನ್ನು ನಾನು ಹೇಳುತ್ತೇನೆ. ಇದರ ಜೊತೆಗೆ ಪ್ರಾರಂಭ ಆಗಬೇಕಾದ ಬೆಳಗಾವ್, ಗುಲ್ಬರ್ಗಾ, ಧಾರವಾಡ, ಭದ್ರಾವತಿ, ಮೈಸೂರು ಮತ್ತು ಛಳ್ಳಿ ಈ ಹಾಲು ಸರಬರಾಜು ಯೋಜನೆಗಳ ಕೆಲಸವನ್ನು ಮೇ ಅಥವಾ ಜೂನ್ ಅಂತ್ಯದಲ್ಲಿ ಪ್ರಾರಂಭ ಮಾಡುತ್ತೇವೆ ಎನ್ನುವ ಮಾತನೂ ನಾನು ಹೇಳುತ್ತೇನೆ. ಆ ಡೈರಿಗಳ ಯಂತ್ರೋಪಕರಣಗಳ ಕೆಲಸ ಬಹಳ ಭರದಿಂದ ನಡೆಯುತ್ತಿದೆ. ಈ ಹಾಲು ಸರಬರಾಜು ಯೋಜನೆಯ ಕೆಲಸ ಮುಗಿಗು ಅವು ಪ್ರಾರಂಭವಾದ ಮೇಲೆ ಆ ಪ್ರದೇಶಗಳ ಸುತ್ತಮುತ್ತಲಿನ ರೈತರು ಹಾಲನು ಡೈರಿಗಳಿಗೆ ಮಾರಿ ಆಸ್ತಿಪಾಸ್ತಿಗಳನೂ ಮಾಡಿಕೊಳ್ಳು-ವುದಕ್ಕೆ ಅನುಕೂಲವಾಗುತ್ತದೆ, ಮಾನ್ಯ ಸದಸ್ಯರಾದ ಶ್ರೀ ಎಚ್, ಡಿ, ದೇವೇಗೌಡರು ಈ ಯೋಜನೆಗೆ ರಾಷ್ಟ್ರೀಕರಣವಾದ ಬ್ಯಾಂಕುಗಳಿಂದ ಹಣ ಸಹಾಯವನ್ನು ಪಡೆಯುವುದಕ್ಕೆ ಯಾವ ಪ್ರಯತ್ನ ಮಾಡಿದ್ದೀರಿ ಎನ್ನುವ ಮಾತನ್ನು ಕೇಳಿದರು, ಬ್ಯಾಂಕುಗಳ ರಾಷ್ಟ್ರೀಕರಣ ಪೂರ್ವದಲ್ಲಿಯೇ ಈ ಬ್ಯಾಂಕುಗಳ ಮ್ಯಾನೇಜ್‌ಮೆಂಟಿನವರನ್ನು ನಾನು ಕರೆಸಿ ಇಲಾಖೆಯ ಕಾರ್ಯಕ್ರಮ ಚಟುವಟಿಕೆಗಳಿಗೋಸ್ಕರ ಹಣ ಸಹಾಯವನ್ನು ಒದಗಿಸಬೇಕೆಂದು ಕೇಳಿದಾಗ ಈ ಯೋಜನೆಗಳಿಗೆ ಹಣಸಹಾಯ ಮಾಡಲು ಸಂತೋಷದಿಂದ ಮುಂದೆ ಬಂದು ಈ ಯೋಜನೆಗಳಿಗೆ ಸಾಲವನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ, ಮತ್ತು ಈ ಬ್ಯಾಂಕುಗಳ ಮೇಲಿನ ಹತೋಟಿ ಏನು, ಎಂಬುದು ಸ್ಪಷ್ಟವಾಗಿ ಗೊತ್ತಿಲ್ಲ, ಮತ್ತು ಅವರು ಸಾಲ ಕೊಡತಕ್ಕ ನೀತಿ ಒಂದು ಧೋರಣೆ ಇನ್ನು ಸರಿಯಾಗಿಗೊತ್ತಿಲ್ಲ, ರೈತರೂ ಕೂಡ ಬ್ಯಾಂಕುಗಳೊಡನೆ ಸಹಕರಿಸಿ ಅವರಿಗೆ ಬೇಕಾದಂತಹ ಸಾಲವನ್ನು ಪಡೆಯಬಹುದು ಎಂದು ನಾನು ಸಲಹೆ ಮಾಡುತ್ತೇನೆ.

(ಶ್ರೀ ಜಿ. ಬಿ. ಶಂಕರರಾವ್)

ಈ ಕಾರ್ಯಕ್ರಮಗಳಿಗಾಗಿ ಈಗಾಗಲೇ ಬ್ಯಾಂಕುಗಳಿಂದ ಸಾಕಷ್ಟು ಹಣ ದೊರೆತಿದೆ. ಒಂದು ವರ್ಷದ ಅವಧಿಯಲ್ಲಿ ಡೈರಿ, ಪೌಲ್ಟ್ರಿ ಮತ್ತು ಪಿಗ್ಗರಿ, ಶೀಪಿಂಗ್ ಮುಂತಾದ ಎಲ್ಲಾ ಯೋಜನೆಗಳಿಗೆ ಸುಮಾರು ೫೫ ಲಕ್ಷ ರೂಪಾಯಿಗಳನ್ನು ಬ್ಯಾಂಕಿನವರು ಕೊಟ್ಟಿದ್ದಾರೆ. ಇಷ್ಟು ಹಣ ನಮ್ಮ ಕಾರ್ಯಕ್ರಮಗಳಿಗೆ ಬ್ಯಾಂಕಿನಿಂದ ದೊರಕಿದೆ.

ಇನ್ನು ಬೆಂಗಳೂರು ಡೈರಿಯ ವಿಚಾರದಲ್ಲಿ ಮಾನ್ಯ ವೆಂಕಟಗಿರಿಯಪ್ಪನವರು, ಚಿಕ್ಕೆಗೌಡರು ಮತ್ತು ನಂಜಪ್ಪನವರು ಪ್ರಸ್ತಾಪ ಮಾಡಿದ್ದಾರೆ. ಆದರೆ ಡೈರಿಯ ಆಡಳಿತ ಚೆನ್ನಾಗಿ ನಡೆಯುತ್ತದೆ ಎಂಬುದನ್ನು ಮಾನ್ಯ ಸದಸ್ಯರುಗಳು ಒಪ್ಪಿಕೊಂಡಿದ್ದಾರೆ. ಅದು ಸಂತೋಷದ ವಿಚಾರ. ಮಾನ್ಯ ನಂಜಪ್ಪನವರು, ಈಗ ದನಗಳಿಗೆ ಲೈಸೆನ್ಸ್ ತೆಗೆದು ಕೊಳ್ಳುವ ಪದ್ಧತಿಯನ್ನು ಜಾರಿಗೆ ತಂದಿರುವ ಬಗ್ಗೆ ಹೇಳುತ್ತಾ ಅದರಿಂದ ಹಸುಗಳನ್ನು ಇಟ್ಟುಕೊಂಡಿರುವ ಬಡ ಜನರಿಗೆ ತಮ್ಮ ಹಾಲನ್ನು ಬೆಂಗಳೂರು ಡೈರಿಗೆ ಮಾರಾಟ ಮಾಡುವುದಕ್ಕೆ ತೊಂದರೆಯಾಗುತ್ತದೆ ಮತ್ತು ಅವರಿಗೆ ಇದರಿಂದ ನಷ್ಟವೂ ಆಗುತ್ತದೆ ಎಂದು ಹೇಳಿದರು. ಇದರ ಬಗ್ಗೆ ಕೇಂದ್ರಸರ್ಕಾರದವರು ೧೯೬೩ನೇ ಇಸವಿಯಲ್ಲಿ ರಾಜ್ಯಸರ್ಕಾರಕ್ಕೆ ಒಂದು ಸಲಹೆಯನ್ನು ನೀಡಿದ್ದರು. ಅದೇನೆಂದರೆ, ಬೆಂಗಳೂರು ಡೈರಿ ಸ್ಥಾಪನೆ ಮಾಡುವ ಸಂದರ್ಭದಲ್ಲಿ, ಬೆಂಗಳೂರು ನಾಗರೀಕರಿಗೆ ಒಳ್ಳೆಯ ಹಾಲನ್ನು ಸರಬರಾಜು ಮಾಡಬೇಕಾದರೆ, ಮೊದಲು ಅಲ್ಲಿರುವ ದನಗಳನ್ನು ಹೊರಗಡೆ ಕಳಿಸಬೇಕು. ಇದು ಅವರು ನಗರ ನೈರ್ಮಲ್ಯ ದೃಷ್ಟಿಯಿಂದ, ನಾಗರೀಕರ ಆರೋಗ್ಯ ದೃಷ್ಟಿಯಿಂದ ಹೇಳಿದ್ದಾರೆ. ಅದಕ್ಕಾಗಿ ಒಂದು ಬಿಲ್ಲನ್ನು ಮಾನ್ಯ ಪುಟ್ಟಸ್ವಾಮಿಯವರು ೧೯೬೪ನೇ ಇಸವಿಯಲ್ಲಿ ಈ ಸಭೆಯ ಮುಂದೆ ತಂದಾಗ ಈ ಮನೆಯ ಎಲ್ಲಾ ಸದಸ್ಯರೂ ಒಪ್ಪಿಗೆಯನ್ನು ಕೊಟ್ಟಿದ್ದಾರೆ ಅದನ್ನು ಕಾರ್ಪೊರೇಶನ್ ಇಲಾಖೆಯವರು ಜಾರಿಗೆ ಕೊಟ್ಟಿದ್ದಾರೆ ಅದಲ್ಲದೆ ಬೆಂಗಳೂರಿನಲ್ಲಿ ಸ್ಥಾಪನೆಯಾಗುವ ಕಾಲಕ್ಕೆ ಡೈರಿ ಯೂನಿಸಿಫ್‌ನ-ರೊಡನೆ ಒಂದು ಒಪ್ಪಂದವನು ಮಾಡಿಕೊಳ್ಳಬೇಕಾಗಿತ್ತು. ಅವರು ಕರಾರಿನಲ್ಲಿ ಒಂದು ಉದ್ದೇಶವನ್ನು ಹೇಳಿದ್ದಾರೆ. ನಾವು ಕೊಡುತ್ತಿದ್ದ ಉಪಕರಣ, ಮತ್ತು ಇತರ ಸಲಕರಣೆಗಳು ಬೆಂಗಳೂರು ಡೈರಿಗೆ ಕೊಡುವಾಗ ಎರಡು ಕೆಲಸವನಮಾಡಬೇಕೆಂದು ಹೇಳಿದರು. ಒಂದು ಬೆಂಗಳೂರಿನಲ್ಲಿದ್ದಂತಹ ದನಗಳನ್ನು ಹೊರಗೆ ಕಳಿಸಬೇಕು ಮತ್ತು ಹೊರಗಡೆಯಿಂದ ಬರತಕ್ಕದ್ದನ್ನು ತಡೆಯಬೇಕೆಂದು ಹೇಳಿದ್ದಾರೆ. ಇದು ಆರು ವರ್ಷದಿಂದಜಾರಿಗೆ ಬರದೆ ಇದೆ. ಇದು ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಮಂತ್ರಿಯವರಿಗೆ ಗೊತ್ತಿದೆ, ಇಲ್ಲಿಯ ದನಗಳು ಬೀದಿಯಲ್ಲಿ ಪ್ಲಾಟ್‌ಫಾರ್ಮುಗಳಲ್ಲಿ ತಿರುಗಾಡುತ್ತಿರುತ್ತವೆ ಮತ್ತು ವಾಹನ ಸಂಚಾರಕ್ಕೆ ಎಲ್ಲಾ ಅಡ್ಡಿಮಾಡುತ್ತಿವೆಯೆಂದು ಅವರು ಹೇಳುತ್ತಿದ್ದಾರೆ. ಇದನ್ನು ಗಮನದಲ್ಲಿಟ್ಟುಕೊಂಡು ನಮ್ಮ ಆರೋಗ್ಯದ ದೃಷ್ಟಿಯಿಂದ, ಬೆಂಗಳೂರು ಡೈರಿಯ ಹಿತದೃಷ್ಟಿಯಿಂದ ಈ ಕಾನೂನನ್ನು ಜಾರಿಗೆ ಕೊಡಬೇಕೆಂದು ಹೇಳಿಕೊಂಡಿದ್ದೇವೆ. ಅದು ಜಾರಿಗೆ ಬಂದಿದೆ. ನಗರದಲ್ಲಿ ಆರೋಗ್ಯ ದೃಷ್ಟಿಯಿಂದ ಜನ ಮತ್ತು ದನಗಳು ಜೊತೆ ಜೊತೆಯಾಗಿ ವಾಸ ಮಾಡುವುದಕ್ಕೆ ಸಾಧ್ಯವಿಲ್ಲ. ಆದರೆ ಹಳ್ಳಿಗಾಡಿನಲ್ಲಿ ದನ ಮತ್ತು ಜನಗಳು ಜೊತೆಯಾಗಿ ಬಾಳಬೇಕಾಗುತ್ತದೆ. ಬೆಂಗಳೂರು ಒಂದು ದೊಡ್ಡ ನಗರ. ಇಲ್ಲಿನ ಆರೋಗ್ಯ ದೃಷ್ಟಿಯಿಂದ ಮತ್ತು ನಗರದ ಸೌಂದರ್ಯ ದೃಷ್ಟಿಯಿಂದ ಈ ಕಾನೂನನ್ನು ಜಾರಿಗೆ ತಂದಿದ್ದೇವೆ. ಕೆಲವರು ಬೆಂಗಳೂರು ಡೈರಿ ಲಾಭದಾಯಕವಾಗಿ ನಡೆಯಬೇಕೆಂದು ಹೇಳುತ್ತಿದ್ದಾರೆ. ರೈತರು ಬೆಂಗಳೂರು ಡೈರಿಗೆ ನಾಲ್ಕರಿಂದ ನಾಲ್ಕೂವರೆ ಲಕ್ಷ ಲೀಟರ್ ಹಾಲು ಮಾರಬೇಕಾಗಿತ್ತು. ಆದರೆ ಇವತ್ತು ೨೭-೩೦ ಸಾವಿರ ಲೀಟರ್ ಮಾರುವುದಕ್ಕೆ ಕೂಡ ಅವರಿಗೆ ಸಾಧ್ಯವಾಗುತ್ತಾ ಇಲ್ಲ. ಕಾರಣವೇನೆಂದರೆ, ಖಾಸಗೀ ಜನರು ಅಲ್ಲಲ್ಲಿ ಹಾಲಿನ ಕೇಂದ್ರಗಳನ್ನು ಮಾಡಿಕೊಂಡು ಮಾರುತ್ತಿದ್ದಾರೆ. ಇದರಿಂದ ಡೈರಿಗೆ ಹೆಚ್ಚು ಮಾರಲು ಅವಕಾಶ ಸಿಗಲಿಲ್ಲ. ಯುನಿಸೆಫ್‌ನವರು ಹೇಳಿದರು, ಬೆಂಗಳೂರಿನ ಸುತ್ತುಮುತ್ತಲು ಹಾಲು ಮಾರುವುದನ್ನು ಪ್ರೊಹಿಬಿಟೆಡ್ ಏರಿಯಾ ಎಂದು ಮಾಡಬೇಕು, ಮತ್ತು ಈ ಪ್ರದೇಶದಲ್ಲಿರುವ ಹಾಲನ್ನು ಡೈರಿಯು ಕೊಂಡು ಪರಿಶುದ್ಧವಾದ ಹಾಲನ್ನು ಜನರಿಗೆ ಒದಗಿಸಬೇಕು ಎಂದು. ರಾಷ್ಟ್ರಾದ್ಯಂತ ಈ ಒಂದು ಧೋರಣೆಯನ್ನು ಅನುಸರಿಸಬೇಕೆಂದು ಹೇಳಿದ್ದಾರೆ. ಆ ಕಾರಣಗಳಿಂದ ಈ ರೀತಿ ಪರಿಶುದ್ಧ ಹೊರ ಡೆ ಹಾಲನ್ನು ಬೆಂಗಳೂರಿ ನಾಗರೀಕರಿಗೆ ಒದಗಿಬೇಕೆಂಬ ದೃಷ್ಟಿಯಿಂದ ಇಲ್ಲಿಯ ದನಗಳನ್ನು ಹೊರಗಡೆ ಕಳಿಸಬೇಕು ಮತ್ತು ಬೆಂಗಳೂರಿನ ಸುತ್ತು ಮುತ್ತಲಿನ ಹಾಲನ್ನು ಡೈರಿ ಕೊಳ್ಳಬೇಕಾಗುತ್ತದೆ. ಇವತ್ತು ಹಾಲಿನ ಸಹಕಾರಿ ಸಂಘಗಳನು ಮಾಡಿಕೊಂಡರೆ, ಬ್ಯಾಂಕಿನ ಮುಖಾಂತರವೂ ಸಾಲ ತೆಗೆದುಕೊಂಡು ಅನುಕೂಲ ಪಡೆಯಬಹುದು. ಅಂತೂ ಇದರ ಪ್ರಕೃತಿಗೆ ಕುಂಠಿತ ಬರಬಾರದು ಎಂದು ಡೈರಿಯವರು ಕೊಂಡುಕೊಳ್ಳಬೇಕಾಗುತ್ತದೆ. ಇಲ್ಲಿ ಎರಡನ್ನೂ ಇಟ್ಟು ಕೆಲಸ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಬೆಂಗಳೂರು ಡೈರಿ ಬಂದ ಮೇಲೆ ದನ-ಗಳ ಸಂಖ್ಯೆ ಹೆಚ್ಚಾಗಿದೆ. ಒಂದು ಸಾರಿ ಕಾಲೋನಿಗಳನ್ನು ಮಾಡಿ ಎಂದು ಹೇಳುತ್ತಿದಾರೆ. ಮೊದಲು ಕೇಂದ್ರ ಸರ್ಕಾರದವರು ಈ ಯೋಜನೆಗಳಿಗಾಗಿ ಸಹಾಯ ಮಾಡುತ್ತಿದ್ದರು. ನಂತರ ಕೇಂದ್ರ ಸರ್ಕಾರದವರು ಇಂಥ ಯೋಜನೆಗಳಿಗಾಗಿ ಸಹಾಯ ಕೊಡುವುದನ್ನು ಕಡಿಮೆ ಮಾಡುವುದರಿಂದ ಹೊರಗಿನಿಂದ ಬರುವುದನ್ನು

ತಡೆಹಿಡಿಯುವುದಕ್ಕಾಗಲಿಲ್ಲ. ಬೆಂಗಳೂರಿನಲ್ಲಿರತಕ್ಕಂತಹ ಹಾಲು ಕರೆಯುವ ಜನಗಳನ್ನು ಕರೆಸಿ, ನಿಮಗೆ ಸಾಕಷ್ಟು ಹಣ ಸಿಗುತ್ತದೆ, ನೀವು ಒಂದು ಸಂಘವನ್ನು ಮಾಡಿ, ಕ್ಯಾಟ್ಲ್ ಕಾಲೋನಿಯನ್ನು ಮಾಡಿಕೊಂಡರೆ ಅನುಕೂಲ ಮಾಡಿಕೊಡುತ್ತೇವೆ. ಹಸಿರು, ನೀರು ಮತ್ತು ಷೆಡ್ಡುಗಳನ್ನು ಕಟ್ಟಿಕೊಳ್ಳುವುದಕ್ಕೆ ಮಾಡಿ ಕೊಡುತ್ತೇವೆ ಎಂದು ಹಿಂದೆ ಹೇಳಿದ್ದೆವು.

8-00 P. M

ಮಾನ್ಯ ಸದಸ್ಯರು ತಾಳ್ಮೆ ವಹಿಸಬೇಕು, ಇಲ್ಲಿ ಸಾಕಷ್ಟು ಮಾನ್ಯ ಸದಸ್ಯರು ಟೀಕೆ ಮಾಡಿದ್ದಾರೆ. ಅವಕ್ಕೆಲ್ಲಾ ಉತ್ತರ ಕೊಡದಿದ್ದರೆ ತಪ್ಪಾಗುತ್ತದೆ. ಇವತ್ತು ಅವರಿಗೆ ಬ್ಯಾಂಕುಗಳಿಂದ ಸಹಾಯ ಕೊಡಿಸುತ್ತೇವೆ. ಸಹಕಾರ ಸಂಘಗಳನ್ನು ಮಾಡಿಕೊಂಡು ಬಂದರೆ ಅವರಿಗೂ ಸಹಾಯ ಕೊಡುತ್ತೇವೆ. ಅವರು ಸಂಘಟಿತರಾಗಿ ಗುಂಪಾಗಿ ಬಂದರೆ ಅವರಿಗೆ ತಕ್ಕ ಸೌಕರ್ಯಗಳನ್ನು ಒದಗಿಸಿಕೊಡುತ್ತೇವೆ. ಆದರೆ ಕಾನೂನನ್ನು ಮುಂಚಿತವಾಗಿಯೇ ಜಾರಿಗೆ ಕೊಡಬೇಕಾಗುತ್ತದೆ.

ಶ್ರೀ ಎ ಸಂಜಪ್ಪ:—ಇವತ್ತಿನ ದಿವಸ ಕಾರ್ಪೊರೇಶನ್ನಿನಿಂದ ಲೈಸನ್ಸ್ ತೆಗೆದುಕೊಂಡರೆ ಎಲ್ಲಾ ಸರಿ ಹೋಗುತ್ತದೆಂದು ಹೇಳುತ್ತಾರೆ.

ಶ್ರೀ ಜಿ. ಬಿ. ಶಂಕರರಾವ್:—ಲೈಸನ್ಸ್ ತೆಗೆದುಕೊಳ್ಳುವ ವಿಷಯವೇನೋ ಕಾನೂನಿನಲ್ಲಿದೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ್:—ಲೈಸನ್ಸ್ ತೆಗೆದುಕೊಳ್ಳಬೇಕೆಂದು ಕಡ್ಡಾಯಮಾಡುವವರೇ ನೀವು. ಅವರಿಗೆ ಮೊದಲೇ ಲೈಸನ್ಸ್ ತೆಗೆದುಕೊಳ್ಳಬೇಕೆಂದು ಏಕೆ ಹೇಳಲಿಲ್ಲ? ಆರು ವರ್ಷಗಳಿಂದಲೂ ಏಕೆ ಸುಮ್ಮನಿದ್ದಿರಿ? ಈಗ ಕಾನೂನು ಜಾರಿಮಾಡುತ್ತೇವೆಂದು ಹೇಳುವವರೂ ನೀವೇ.

ಶ್ರೀ ಜಿ. ಬಿ. ಶಂಕರರಾವ್:—ಡೆನ್‌ಮಾರ್ಕ್ ಪ್ರದೇಶದ ಡೈರಿ ಕ್ಯಾಟಲ್ ಫಾರಂ ಯೋಜನೆಯ ವಿಷಯವಾಗಿ ಮಾನ್ಯ ಶ್ರೀ ಪುಟ್ಟಸ್ವಾಮಿಯವರು ಪ್ರಸ್ತಾಪಮಾಡಿದರು. ಈ ಯೋಜನೆಯಲ್ಲಿ ಖರ್ಚಾದ ಹಣದ ಬಗ್ಗೆ ಅವರು ಪ್ರಸ್ತಾಪಮಾಡಿದರು. ನಾನು ಇವತ್ತು ಆ ವಿಚಾರವನ್ನು ಮಾನ್ಯ ಸದಸ್ಯರಿಗೆ ಸ್ಪಷ್ಟಪಡಿಸುತ್ತೇನೆ. ಅದರ ಲೆಕ್ಕ ತನಿಖೆಯಾಗಿದೆ. ಲೆಕ್ಕವನ್ನು ಇಡುವ ಪದ್ಧತಿ ಇದೆ. ಆದ್ದರಿಂದ ಅಲ್ಲಿ ಯಾವ ಅವ್ಯವಹಾರವಾಗಿಲ್ಲ. ಒಂದು ೧೯೬೩ರಲ್ಲಿ ಅವರ ಜೊತೆಯಲ್ಲಿ ಒಪ್ಪಂದಮಾಡಿಕೊಂಡಾಗ ಈ ಯೋಜನೆ ಚೆನ್ನಾಗಿ ಕೆಲಸಮಾಡಬೇಕು, ತಾಂತ್ರಿಕ ಉಪಕರಣಗಳನ್ನು ಕೊಡಬೇಕು, ಒಳ್ಳೆಯ ಜಾತಿಯ ತಳಿಗಳನ್ನು ಕೊಡಬೇಕೆಂದು ನಾನಾ ವಿಧದಲ್ಲಿ ಹೇಳಿದ್ದು ಆಗಿದೆ. ಅದು ಈ ವರ್ಷ ಮಾರ್ಚ್ ೩೧ಕ್ಕೆ ಮುಗಿಯುತ್ತದೆ. ಆದ್ದರಿಂದ ಏಪ್ರಿಲ್ ಒಂದನೇ ತಾರೀಖಿನಿಂದ ಇದರ ಆಡಳಿತ ವ್ಯವಸ್ಥೆಯನ್ನು ಸರ್ಕಾರದವರು ತೆಗೆದುಕೊಳ್ಳಬೇಕೆಂದು ಒಂದು ನಿರ್ಣಯವನ್ನು ತೆಗೆದುಕೊಂಡಿದ್ದಾರೆ. ಆರ್ಡರ್ ಸಹ ಅದರ ಬಗ್ಗೆ ಇಷ್ಯೂ ಆಗಿದೆ. ಆ ದೇಶದ ತಾಂತ್ರಿಕ ನೆರವಿನ ವಿಚಾರದಲ್ಲಿ ಅವರ ಸಹಾಯ ಬೇಕೆನ್ನುವುದನ್ನು ವಿಚಾರದಲ್ಲಿ ಅರಿತು ಕೇಂದ್ರ ಸರ್ಕಾರದವರೇ ಡೆನ್‌ಮಾರ್ಕ್ ಸರ್ಕಾರದ ಜೊತೆಯಲ್ಲಿ ಒಂದು ಒಪ್ಪಂದವನ್ನು ಮಾಡಿಕೊಳ್ಳುತ್ತಿದ್ದಾರೆ. ಇದರಿಂದಾಗಿ ಮಿಶ್ರತಳಿಯ ಯೋಜನೆಯಿಂದ ಲಾಭವಾಗಬೇಕು. ಈ ಯೋಜನೆಯಿಂದ ಉತ್ತಮವಾದಂಥ ತಳಿಯನ್ನು ಉಳಿಸಬೇಕೆಂದು ಹೇಳುತ್ತೇನೆ. ಮಿಶ್ರ ತಳಿ ಯೋಜನಾ ಕಾರ್ಯಕ್ರಮದ ಪ್ರಕಾರ ಹೊರಗಡೆಯ ದೇಶಗಳಲ್ಲಿ ಹೆಚ್ಚು ಹೆಚ್ಚಿಗೆ ಹಾಲು ಕೊಡುವ ಶ್ರೇಷ್ಠಕರವಾದ ದನಗಳ ವೀರ್ಯವನ್ನು ಸೇರಿಸಿಡತಕ್ಕ ಒಂದು ಯೋಜನೆ ಈಗಾಗಲೇ ತಯಾರು ಆಗಿದೆ. ಡೆನ್ಮಾರ್ಕ್ ರೀತಿಯಲ್ಲಿ ದೇಶದ್ಯಾಂತ ಕ್ಯಾಟಲ್ ಫಾರಂಗಳನ್ನು ಮಾಡುವ ಯೋಜನೆ ಇದೆ. ಈಗಾಗಲೇ ನಮ್ಮಲ್ಲಿರತಕ್ಕ ಅಮೃತ ಮಹಲ್ ಜಾತಿಯ ೪ ಸಾವಿರ ದನಗಳನ್ನು ಕಾದಿರಿಸಲಾಗಿದೆ. ಇಂತಹ ಲಾಭದಾಯಕವಾದ ಯೋಜನೆಯನ್ನು ನಾವೇ ಸ್ವತಃ ಇಟ್ಟು ಕೊಂಡು ನಾವೇ ನಡೆಸಬಹುದು.

ಇನ್ನೂ ಕೆಲವರು ವೈಯಕ್ತಿಕವಾಗಿ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಶ್ರೀ ನಂಜೇಗೌಡರು ಮಾತನಾಡುತ್ತ ಫ್ರೀ ಬುಲ್ ಸ್ಕೀಮುಗಳನ್ನು ಕೊಡುವುದರಲ್ಲಿ ಅಪವ್ಯಯವಾಗಿದೆ, ಇದು ಬಹಳ ಉಪಯುಕ್ತ ಯೋಜನೆ, ರೈತರುಬೀಜದ ಹೋರಿಗಳನ್ನು ಪಡೆಯಬೇಕು ಎಂಬುದಾಗಿ ಹೇಳಿದರು. ಮಾನ್ಯ ಸದಸ್ಯರ ಸಲಹೆಯನ್ನು ಗಮನದಲ್ಲಿಟ್ಟು ಕೊಂಡು ಸಾಧ್ಯವಾದಷ್ಟು ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಸಿದ್ಧರಿದ್ದೇವೆಂದು ಹೇಳುತ್ತೇನೆ.

ಶ್ರೀ ಎ. ನಂಜಪ್ಪ :—ಮಾನ್ಯ ಮಂತ್ರಿಗಳು ಕಾರ್ಪೊರೇಷನ್ ಅಧಿಕಾರಿಗಳನ್ನು ಕರೆಸಿ ಅವರಿಗೆ ಈ ವಿಚಾರಗಳನು ಹೇಳಲಿಲ್ಲವೇ?

ಶ್ರೀ ಜಿ. ಬಿ. ಶಂಕರರಾವ್:—ಮಾನ್ಯ ಸದಸ್ಯರಲ್ಲಿ ಕೆಲವರು ಉತ್ತೇಜಕವಾಗಿ ಕೆಲವು ವಿಚಾರಗಳನ್ನು ಪ್ರಶಂಸೆ ಮಾಡಿದ್ದಾರೆ. ಮತ್ತು ಇನ್ನೂ ಚೆನ್ನಾಗಿ ಕೆಲಸಗಳನ್ನು ಮಾಡಬೇಕಾಗಿದೆಯೆಂದು. ಅವರಿಗೆ ವೈಯುಕ್ತಿಕವಾಗಿ ನನ್ನ ಅಭಿನಂದನೆಗಳನ್ನು ಸಲ್ಲಿಸಿ ಈ ವರ್ಷದಲ್ಲಿ ೨ ಕೋಟಿ ೫ ಲಕ್ಷದ ೭೬ ಸಾವಿರ ರೂಪಾಯಿಗಳ ಹಣದ ಖರ್ಚಿಗಾಗಿ ಈ ಮಾನ್ಯ ಸಭೆ ಒಪ್ಪಿಗೆ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎ. ಮುನಿಯಪ್ಪ —ಇದುವರೆಗೆ ಮಾತನಾಡದೇ ಇರುವವರಿಗೆ ಕ್ಲಾರಿಫಿಕೇಷನ್ ಕೇಳುವುದಕ್ಕೆ ತಾವು ದಯವಿಟ್ಟು ಅವಕಾಶ ಕೊಡಿ.

ಉಪಾಧ್ಯಕ್ಷರು:—ಆಗಲಿ ನೋಡೋಣ.

ಶ್ರೀ ಎ. ನಂಜಪ್ಪ:—ಮಿಲ್ಕ್ ಕಾಲೊನಿ ಕಟ್ಟಬೇಕು, ಹೊಸದಾಗಿ ಷಿಫ್ಟ್ ಯಾರೂ ಮಾಡಬೇಡಿ ಎಂದು ಒಂದು ಕಡೆ ನೀವು ಹೇಳುತ್ತೀರಿ? ಇನ್ನೊಂದು ಕಡೆ ಲೈಸನ್ಸ್ ತೆಗೆದುಕೊಳ್ಳದೆ ಹೋದರೆ ಬೆಂಗಳೂರಿನ ದನಗಳನ್ನು ಆಚೆಗೆ ಸಾಗಿಸುತ್ತೇವೆ ಎಂದು ಹೇಳುತ್ತೀರಿ !

ಶ್ರೀ ಜಿ. ಬಿ. ಶಂಕರರಾವ್:—ಲೈಸನ್ಸ್ ತೆಗೆದುಕೊಳ್ಳಬೇಕು, ಇಲ್ಲದಿದ್ದರೆ ದನಗಳನು ಹೊರಗೆ ಹಾಕಬೇಕು ಎಂಬುದಾಗಿ ನಾನು ಹೇಳುತ್ತಾ ಇಲ್ಲ. ಲೈಸನ್ಸ್ ತೆಗೆದಕೊಂಡಮೇಲೆ ಅಲ್ಲಿ ಯಾವ ರೀತಿಯಾಗಿ ಷೆಡ್ ಇರಬೇಕು, ನೀರು ವ್ಯವಸ್ಥೆ ಹೇಗೆ ಎಂಬ ಬಗ್ಗೆ ಒಂದು ಕರಾರು ಇದೆ. ಲೈಸನ್ಸ್ ತಗೆದುಕೊಂಡು ಮನೆಯ ಹಾಲಿನ ಖರ್ಚಿಗಾಗಿ ಒಂದೆರಡು ದನಗಳನ್ನು ಇಟ್ಟುಕೊಳ್ಳಬಹುದು.

ಶ್ರೀ ಎ. ಮುನಿಯಪ್ಪ:—ಲೈಸನ್ಸ್ ತೆಗೆದುಕೊಳ್ಳಬೇಕಾದರೆ ಕೆಲವು ಷರತ್ತುಗಳನ್ನು ಹಾಕುತ್ತಾರೆ. ಆ ಕಂಡೀಷನ್ಸ್ ಪ್ರಕಾರ ನಡೆಯುತ್ತಿದೆಯೇ ಎಂದು ನೋಡಬೇಕಾದರೆ, ಅಲ್ಲಿಗೆ ಒಬ್ಬ ಆಫೀಸರನ್ನು ಇನ್ಸ್‌ಪೆಕ್ಷನಿಗೆ ಹಾಕುತ್ತಾರೆ. ಆತ ಬಂದಕೂಡಲೇ ಲಂಚ ರುಷುವತ್ತು ಶುರುವಾಗುತ್ತದೆ. ಅದಕ್ಕೇನು ಮಾಡುತ್ತೀರಿ?

ಶ್ರೀ ಜಿ. ಬಿ ಶಂಕರರಾವ್:—ಲಂಚವನ್ನು ಕೊಡುವವರು ಲಂಚವನ್ನು ಕೊಡುವುದಿಲ್ಲವೆಂದು ನಿರ್ಧಾರ ಮಾಡಿದರೆ ಸಾಕು. ಆಗ ಅಧಿಕಾರಿಗಳಿಗೆ ಅಂತಹ ಧೈರ್ಯ ಬರುವುದಿಲ್ಲ.

ಶ್ರೀ ಎ. ನಂಜಪ್ಪ:—ಮಾನ್ಯ ಮಂತ್ರಿಗಳು ಅಲ್ಲಿ ಹೋಗಿ ವರದಿಮಾಡುವ ಅಧಿಕಾರಿಗಳು ಲಂಚ ತೆಗೆದುಕೊಳ್ಳುವುದಿಲ್ಲವೆಂದು ಅವರೇ ಹೇಳಿದರೆ, ಆಗ ನಾನು ಇದನ್ನು ಒಪ್ಪುತ್ತೇನೆ.

ಹಳ್ಳಿಕಾರ್ ಬ್ರೀಡ್‌ಗಳನ್ನು ಹೆಚ್ಚಿಸಬೇಕು. ಇನ್‌ಸಮಿನೇಷನ್ ಸೆಂಟರುಗಳನ್ನು ತೆಗೆಯಬೇಕು ಹೆಚ್ಚು ಹಾಲು ಕೊಡುವ ಹಸುಗಳನ್ನು ಸಾಕಿದರೆ ಅವು ಹೆಚ್ಚು ಹಾಲು ಕೊಡುತ್ತವೆ ಆಗ ಆ ಹಾಲನ್ನು ತೆಗೆದು ಕೊಂಡು ಹೋಗಿ ಹಾಲಿನ ಕೇಂದ್ರಗಳಿಗೆ ಕೊಡುತ್ತಾರೆ. ಎರಡನೆಯದು ಅಮೃತ-ಮಹಲ್ ದನಗಳನ್ನು ಸರ್ಕಾರದವರು ಖಾಸಗಿಯವರಿಗೆ ಏಕೆ ಕೊಡಬಾರದು? ಅವರಿಗೆ ಇದರಿಂದ ಅನುಕೂಲವಾಗುತ್ತದೆ.

ಶ್ರೀ ಬಿ. ಗಂಗಣ್ಣ:—ಕೇಂದ್ರ ಸರ್ಕಾರದ ಆದೇಶದಂತೆ ಡೈರಿ ಫಾರಂಗೆ ಲೋನ್ ಕೊಡಬಾರದು ಎಂದು ಹೇಳುತ್ತಾ ಇದ್ದಾರೆ, ಗ್ರಾಮಾಂತರ ಪ್ರದೇಶದಲ್ಲಿ ದನಕರುಗಳ ಅಭಿವೃದ್ಧಿಗಾಗಿ ಬೇರೆ ಏನಾದರೂ ಯೋಜನೆ ಮಾಡುತ್ತೀರಾ?

ಶ್ರೀ ಜಿ. ಬಿ. ಶಂಕರರಾವ್:—ಶ್ರೀಮತಿ. ನಾಗರತ್ನಮ್ಮನವರು ಕೋಳಿಗೆ ಬದಲಾಗಿ ಕುರಿ ಕೊಡಿ ಎಂದು ಹೇಳಿದರು, ಕುರಿ ಕೊಡತಕ್ಕ ಯೋಜನೆ ಇಲ್ಲ. ಕಟ್ಟಡದ ವಿಚಾರ ಹೇಳಿದರು, ಪಂಚಾಯ್ತಿ ಕಾನೂನು ಪ್ರಕಾರ ತಾಲ್ಲೂಕು ಬೋರ್ಡಿನವರೇ ಕಟ್ಟಡ ಕಟ್ಟಬೇಕೆಂದು ಇದ್ದುದರಿಂದ ಅವರು ರೆಸಲ್ಯೂಷನ್

ಪಾಸ್ ಮಾಡಿ ನಂತರ ಕಟ್ಟಡ ಕಟ್ಟಬೇಕಾಗುತ್ತದೆ. ಕಟ್ಟಡ ಇರಲಿ ಇಲ್ಲದೇ ಹೋಗಲಿ, ಜಾನುವಾರುಗಳಿಗೆ ಆಸ್ಪತ್ರೆ ಬೇಕು, ಮೊದಲು ಅದನ್ನು ಮಂಜೂರುಮಾಡಿ ಕೊಡಿ ಅಂತ ಹೇಳಿದ್ದರಿಂದ ಮಂಜೂರು ಮಾಡ-ಲಾಗಿದೆ. ಆಸ್ಪತ್ರೆಗಳನ್ನು ಸರ್ಕಾರದವರು ನಡಸುತ್ತಾರೆ ಆದ್ದರಿಂದ ಕಟ್ಟಡವನ್ನು ಅವರೇ ಕಟ್ಟಿಸಿಕೊಡ-ಬೇಕೆಂದು ಅವರು ಹೇಳುತ್ತಾರೆ. ಆದ್ದರಿಂದ ಕಟ್ಟಡ ಕಟ್ಟತಕ್ಕ ಜವಾಬ್ದಾರಿ ಹೊತ್ತುಕೊಂಡರೆ ಆಸ್ಪತ್ರೆ ಕೊಡಬೇಕಾಗುತ್ತದೆ.

ಶ್ರೀಮತಿ ನಾಗರತ್ನಮ್ಮ:—ಜೀಪು ಕೊಡಬೇಕು.

ಶ್ರೀ ಜಿ. ಬಿ. ಶಂಕರರಾವ್:—ಅದು ಆಗುವುದಿಲ್ಲ.

ಅಮೃತ ಮಹಲ್ ವಿಚಾರ ಹೇಳಿದರು. ಸರ್ಕಾರದ ಇಲಾಖೆಯ ಮುಖಾಂತರ ದೊಡ ಫಾರಂ ನಡೆಸಿ ಅದು ಲಾಭದಾಯಕವಾಗಿ ನಡೆಯುತ್ತಾ ಇದೆ. ಶ್ರೀಮಾನ್ ಗಂಗಣ್ಣನವರು ರಿಸರ್ವ್ ಬ್ಯಾಂಕಿನಿಂದ ಆದೇಶ ಬಂದಿದೆ, ಡೈರಿ ಫಾರಂ ಮಾಡುವುದಕ್ಕೆ ಸಾಲ ಕೊಡಕೂಡದು ಎಂಬುದಾಗಿ, ಎಂದು ಹೇಳಿದರು, ಬ್ಯಾಂಕಿನ ಮೇಲೆ ನಮಗೆ ಹತೋಟಿ ಇಲ್ಲ. ಸಾಧ್ಯವಾದರೆ ಆ ನಿಯಮ ಸಡಲಿಸಿ ಕೊಡಲಿಕ್ಕೆ ಪ್ರಯತ್ನ ಮಾಡಿರಿ ಎಂದು ಹೇಳುತ್ತೇನೆ. ಅದು ಬೇರೆ ವಿಷಯ. ಹಾಸನದ ಡೈರಿ ವಿಚಾರ ದೇವೇಗೌಡರು ಹೇಳಿದರು, ಈಗಿರತಕ್ಕ ೯ ಡೈರಿಗಳ ಜೊತೆಗೆ ಇನ್ನು ೪ ಡೈರಿ ಸೆಂಟರ್ಸ್‌ನ್ನು ೪ನೇ ಪಂಚವಾರ್ಷಿಕ ಯೋಜನೆಯಲ್ಲಿ ತೆರೆಯಬೇಕೆಂದು ಅಳವಡಿಸಿಕೊಂಡಿದ್ದೇವೆ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ,

ಶ್ರೀ ಆಲೂರು ಹನುಮಂತಪ್ಪ (ಅರಣ್ಯ ಶಾಖೆಯ ರಾಜ್ಯ ಮಂತ್ರಿಗಳು):—ಸ್ವಾಮಿ, ಅರಣ್ಯ ಇಲಾಖೆ ಮೇಲೆ ಉಪಯುಕ್ತವಾದ ಸಲಹೆಗಳನ್ನು ಮಾನ್ಯ ಸದಸ್ಯರು ಕೊಟ್ಟಿದ್ದಾರೆ. ಅರಣ್ಯವನ್ನು ಅನಾವಶ್ಯಕವಾಗಿ ಕಡಿಯುತ್ತಾ ಇದ್ದಾರೆ, ಕಾಡು ನಾಶವಾಗುತ್ತಾ ಇದೆ, ಅದರ ಪರಿಣಾಮವಾಗಿ ಮಳೆ ಕಡಿಮೆಯಾಗುತ್ತಾ ಇದೆ ಎಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ದೊಡ್ಡ ದೊಡ್ಡ ಪಟ್ಟಣಗಳಿಗೆ ಮತ್ತು ಭದ್ರಾವತಿ ಐರನ್ ವರ್ಕ್ಸ್ ಮುಂತಾದ ಕಡೆಗಳಿಗೆ ಇದ್ದಲು ಮತ್ತು ಸೌದೆ ಬೇಕಾಗುತ್ತದೆ, ಅಂತ ಸಂದರ್ಭದಲ್ಲಿ ಮಾತ್ರ ವರ್ಕಿಂಗ್ ಪ್ಲಾನ್ ಪ್ರಕಾರ ಕಾಡನ್ನು ಕಡಿಯ ಬೇಕಾಗುತ್ತದೆ, ಕಾಡಿನಲ್ಲಿ ಕಡಿದಂತಹ ಮರಗಳ ಜಾಗದಲ್ಲಿ ಪ್ಲಾಂಟೇಷನ್ ಪುನಃ ಮಾಡುತ್ತಾರೆ. ಕಾಡನ್ನು ಕಡಿಯುವುದನ್ನು ಕಡಿಮೆ ಮಾಡಿದರೆ ಒಳ್ಳೆಯದು ಎಂದು ಹೇಳುವುದನ್ನು ನಾನು ಒಪ್ಪುತ್ತೇನೆ. ನಮ್ಮಲ್ಲಿ ವಿದ್ಯುಚ್ಛಕ್ತಿ ಬೇಕಾದಷ್ಟು ಸಿಕ್ಕುತ್ತದೆ, ಅದನ್ನು ಕಾರ್ಖಾನೆ ಹೊಟೇಲು ಮತ್ತು ಮನೆಯಲ್ಲಿ ಸೌದೆಗೆ ಬದಲಾಗಿ ಉಪಯೋಗ ಮಾಡಬೇಕೆಂದು ಹೆಚ್ಚಾಗಿ ಪ್ರಯತ್ನ ಮಾಡಿದಲ್ಲಿ ಅನಾವಶ್ಯಕವಾಗಿ ಕಾಡು ಕಡಿಯುವುದು ನಿಲ್ಲಬಹುದು ಎಂಬುದು ನನ್ನ ಅಭಿಪ್ರಾಯ. ನಮ್ಮ ಕಾಡಿನ ಸಂಪತ್ತು ೧೮ ಪರ್ಸೆಂಟ್ ಇದೆ. ಆಲ್ ಇಂಡಿಯಾ ಪಾಲಿಸಿ ಪ್ರಕಾರ ೩೩ ಪರ್ಸೆಂಟ್ ಆಗಬೇಕು, ಈ ಬಗ್ಗೆ ಏನು ಕಾರ್ಯಕ್ರಮ ತೆಗೆದು ಕೊಂಡಿದ್ದೀರಿ ಎಂದು ಕೇಳಿದರು. ನಮ್ಮಲ್ಲಿ ೪೨ ಲಕ್ಷ ಎಕರೆ ಗೋಮಾಳ ಪ್ರದೇಶ ಇದೆ, ಸುಮಾರು ೨೧ ಲಕ್ಷ ಎಕರೆ ಖರಾಬು ಜಮೀನು ಇದೆ. ಇದರಲ್ಲಿ ಫಾರಂ ಫಾರೆಸ್ಟ್ ಮಾಡಬೇಕೆಂದು ಬಹಳ ಹಿಂದಿನಿಂದ ಕಾರ್ಯಕ್ರಮ ನಡೆಸಿಕೊಂಡು ಬರುತ್ತಾ ಇದ್ದೇವೆ. ೮ ಸಾವಿರಕ್ಕೂ ಮೇಲ್ಪಟ್ಟು ಇರತಕ್ಕ ಗ್ರಾಮ ಪಂಚಾಯಿತ್ತಿಗಳಲ್ಲಿ ದಟ್ಟವಾದ ಕಾಡುಗಳು ಇರತಕ್ಕ ಗ್ರಾಮ ಪಂಚಾಯಿತ್ತಿಗಳನ್ನು ಬಿಟ್ಟು ಮೈದಾನ ಪ್ರದೇಶವಾಗಿರತಕ್ಕ ಕೋಲಾರ, ಬೆಂಗಳೂರು, ಚಿತ್ರದುರ್ಗ, ಹಾಸನದ ಕೆಲವು ಭಾಗ, ರಾಯಚೂರು, ಧಾರವಾಡ, ಗುಲ್ಬರ್ಗ, ಬಿಜಾಪುರ, ಬೆಳಗಾಂನ ಕೆಲವು ಭಾಗ ಬಳ್ಳಾರಿಯ ಕೆಲವು ಭಾಗ, ಮೈಸೂರು, ಮಂಡ್ಯ ಕೆಲವು ಭಾಗ ಹೀಗೆ ಮೈದಾನ ಪ್ರದೇಶ ಎಲ್ಲಿ ಇದೆ ಅಂತಹ ಪ್ರದೇಶದಲ್ಲಿ ಫಾರಂ ಫಾರೆಸ್ಟ್ ಮಾಡಿ, ಸಸಿಗಳನ್ನು ನೆಡಿಸಿ ಅರಣ್ಯ ಇಲಾಖೆಯ ಅಧಿಕಾರಿಗಳ ಮತ್ತು ಜಿಲ್ಲಾ ಅಧಿಕಾರಿಗಳ ಕಾರ್ಯಚಟುವಟಿಕೆಯಿಂದಲೂ ಮತ್ತು ಖಾಸಗಿ ಮುಖಂಡರ ಕಾರ್ಯಚಟುವಟಿಕೆಯಿಂದಲೂ ಕೂಡ ಈ ಕಾರ್ಯ ಯಶಸ್ವಿಯಾಗಿ ಆಗಬೇಕಾಗಿದೆ.

೧೯೭೦–೭೧ಕ್ಕೆ ೩೫ ಲಕ್ಷ ರೂಪಾಯಿ ಬರುವುದರಲ್ಲಿ, ಹೆಚ್ಚು ಭಾಗ ಫಾರಂ ಫಾರೆಸ್ಟಿಗೆ, ಅಫಾರ ಸ್ಟೇಷನ್ನಿಗೆ ಕೊಡುವ ಅಭಿಪ್ರಾಯವಿದೆ, ಇದಕ್ಕೆ ಮುಖ್ಯ ಮಂತ್ರಿಗಳು ಮತ್ತು ವ್ಯವಸಾಯ ಇಲಾಖೆ ಮಂತ್ರಿಗಳು ಸಮ್ಮತಿ ಕೊಟ್ಟಿದ್ದಾರೆ ಎಂದು ಹೇಳಲು ಸಂತೋಷವಾಗುವುದು. ಸರಕಾರಿ ಜಮೀನಿನಲ್ಲಿ ಬೆಟ್ಟಗುಡ್ಡದ ಜಮೀನು ೯೬ ಲಕ್ಷ ಇದೆ, ಅದರಲ್ಲಿ ೨೫ ಲಕ್ಷ ಸ್ಕ್ರಬ್ ಫಾರೆಸ್ಟಿದೆ, ಸುಮಾರು ೧೬ ಲಕ್ಷ ಡೆಸಿಡ್ಯುಯಸ್ ಫಾರೆಸ್ಟಿದೆ. ಅದರಲ್ಲಿ ಪ್ಲಾನ್‌ಮಾಡಿ ಸರಿಯಾದ ಕ್ರಮವಹಿಸಿ ಮರ ಬೆಳೆಸಬೇಕೆಂದಿದ್ದೇವೆ. ಎಂಥ ಮರ ಬೆಳೆಸಬೇಕೆಂಬುದನ್ನು ಯೋಚನೆಮಾಡುತ್ತಿದ್ದೇವೆ, ಯೂಕಲಿಪ್ಟಸ್ ಮರ ಬೆಳೆಸಬೇಕೆಂಬ ಯೋಚನೆ ಇದೆ, ಈಗ ವರ್ಷಕ್ಕೆ ಒಂದೂವರೆ ಲಕ್ಷ ಟನ್ ಯೂಕಲಿಪ್ಟಸ್ ಬೇಕು.

(ಶ್ರೀ ಆಲೂರು ಹನುಮಂತಪ್ಪ)

ಅದು ಸಾಲದು, ನಾಲ್ಕೂವರೆ ಲಕ್ಷ ಟನ್ ಬೇಕು ಎಂದು ಹೇಳುತ್ತಿದ್ದಾರೆ. ಆದುದರಿಂದ ಒಂದು ಲಕ್ಷ ೪ ಸಾವಿರ ಎಕರೆಯಲ್ಲಿ ಯೂಕಲಿಪ್ಟಸ್ ಮರ ಬೆಳೆಯುವುದು ಸಾಲದು. ಕೇಂದ್ರ ಸರಕಾರ ೬೮-೬೯ ರವರೆಗೆ ಕೊಡುತ್ತಿದ್ದ ಹಣವನ್ನು ಸಂಪೂರ್ಣವಾಗಿ ನಿಲ್ಲಿಸಿರುವುದರಿಂದ ಫಾರೆಸ್ಟ್ ಕಾರ್ಪೊರೇಷನ್ ಮಾಡಬೇಕೆಂಬ ಅಭಿಪ್ರಾಯ ಬಂದಿದೆ. ಈಗ ಸ್ಕ್ರಬ್ ಫಾರೆಸ್ಟಿನಲ್ಲಿರುವ ಜಮೀನಿನಲ್ಲಿ, ಬೆಟ್ಟಗುಡ್ಡಗಳಲ್ಲಿ ಮರಹಾಕುವುದಕ್ಕೆ ಸಾಧ್ಯವಿಲ್ಲದಿರುವ ಕಡೆ ೮ ಲಕ್ಷ ಎಕರೆಯಲ್ಲಿ ಮೊದಲು ಮರ ಬೆಳೆಸಿ ನಂತರ ಡ್ರೈ ಡೆಸಿಡ್ಯುಯಸ್ ಫಾರೆಸ್ಟ್ ನಾಲ್ಕೂವರೆ ಲಕ್ಷ ಎಕರೆಯಲ್ಲಿ ಬೆಳೆಸಬೇಕು, ಹೀಗೆ ಹನ್ನೆರಡೂವರೆ ಲಕ್ಷ ಎಕರೆಯಲ್ಲಿ ಮರ ಬೆಳೆಸುವ ಯೋಜನೆ ಇದೆ. ಗಂಧದ ಮರ, ಹುಣಿಸೆ, ಬೇವು, ಸಿಲ್ವರ್ ಓಕ್ ಮತ್ತು ಬೀಡಿ ಎಲೆಗೆ ಬೇಕಾದ ಮರ ಬೆಳೆಸುವ ಯೋಚನೆ ಇದೆ. ಮಧ್ಯಪ್ರದೇಶದಲ್ಲಿ ಒಂದು ಕೋಟಿಗಿಂತ ಹೆಚ್ಚು ವರಮಾನ ಬೀಡಿಯಿಂದ ಬರುವುದು. ಅದು ಎಕನಾಮಿಕಲ್ ಎಂದು ಹೇಳುವುದುಂಟು, ಅಂಥ ಮರ ಬೆಳೆಸುವ ಯೋಜನೆ ಇದೆ. ಇಂದು ಜಂಗಲ್ ಮರ ಮತ್ತು ಸ್ಕ್ರಬ್ ಫಾರೆಸ್ಟ್ ಹೆಚ್ಚಾಗಿದೆ, ಅದನ್ನು ತೆಗೆದು ಸರಿಯಾದ ವ್ಯವಸ್ಥೆ ಮಾಡುವ ಕಾರ್ಯಕ್ರಮ ಕಾರ್ಪೊರೇಷನ್ನಿನಲ್ಲಿದೆ. ೧೬ ಲಕ್ಷ ಎಕರೆ ಇರುವ ಡ್ರೈ ಡೆಸಿಡ್ಯುಯಸ್ ಫಾರೆಸ್ಟಿನಲ್ಲಿ ಬೊಂಬು ಬೆಳೆಸಬೇಕೆಂದು ಹೇಳಿದ್ದಾರೆ, ಅದನ್ನು ಬೆಳೆಸಬೇಕಾಗಿಲ್ಲ, ಅದೇ ಬೆಳೆಯುವುದು, ಬೊಂಬು ೬೦ ವರ್ಷಗಳಿಗೊಂದು ಸಲ ಹೂ ಬಿಡುವುದು. ಇಂದು ಎಲ್ಲಾ ಕಡೆ ಬೊಂಬು ಬೇಕು, ಕೈಗಾರಿಕೆಗಳಿಗೆ, ಕಾಗದದ ಕಾರ್ಖಾನೆ ಮುಂತಾದವುಗಳಿಗೆ ಬೇಕು. ಈಗ ಇರುವುದು ಸಾಕಾಗುವುದಿಲ್ಲ ಎಂದು ಒಂದು ವರ್ಷದಿಂದ ಅದನ್ನು ಬೆಳೆಸುವ ಯೋಜನೆ ಇದೆ. ಕೆಲವರು ಟೀಕೆ ಮಾಡುತ್ತಾರೆ. ಅದಕ್ಕೆ ಅವಕಾಶ ಕೊಡದಂತೆ ಕ್ರಮ ತೆಗೆದುಕೊಳ್ಳುತ್ತೇವೆ. ಕ್ಯಾಷ್ಯೂ ಬೆಳೆಸಬೇಕು, ತೆಂಗು ಬೆಳೆಯಬೇಕು ಎಂಬ ಯೋಜನೆ ಇದೆ, ಬನಾನಾಸ್ ಸಹ ಬೆಳೆಸಬೇಕು. ಸ್ಕ್ರಬ್ ಫಾರೆಸ್ಟಿನಲ್ಲಿ ಹುಲ್ಲು ಬೆಳೆಯಲು ವ್ಯವಸ್ಥೆ ಮಾಡಬೇಕು, ಅದರಿಂದ ಕಾರ್ಖಾನೆ ಪ್ರಾರಂಭಿಸಲು ಅವಕಾಶವಾಗುವುದು ಎಂಬ ಅಭಿಪ್ರಾಯವಿದೆ. ಹುಣಿಸೆಮರ ಹೆಚ್ಚು ಬೆಳೆದರೆ ಅದರಿಂದ ಆಸಿಡ್ ತಯಾರಿಸುವ ಕಾರ್ಖಾನೆ ಸ್ಥಾಪಿಸಬಹುದು. ಇಂದು ಫಾರಿನ್ ಎಕ್ಸ್‌ಛೇಂಜಿಗಾಗಿ ನಮ್ಮಿಂದ ೨ ಕೋಟಿ ರೂಪಾಯಿ ಹೋಗುವುದು. ಕೆಲವು ಕಡೆ ರಸ್ತೆಗಳ ಪಕ್ಕದಲ್ಲಿ ಸಾಲುಮರಗಳಿಲ್ಲ, ಬಿಜಾಪುರ ಬಾಗಲಕೋಟೆ ಮುಂತಾದ ಕಡೆ ಅವುಗಳಿಲ್ಲ, ಚಿತ್ರದುರ್ಗ-ತುಮಕೂರು ರಸ್ತೆಯಲ್ಲಿ ಸಾಕಷ್ಟಿಲ್ಲ, ಸಾಲು ಮರಗಳು ಬೇಕು, ಬೆಳೆಸಬೇಕು ಎಂದು ಲೋಕೋಪಯೋಗಿ ಇಲಾಖೆ ಅಧಿಕಾರಿಗಳ ಜೊತೆ ಮಾತನಾಡಿದ್ದೇವೆ. ಹೊಂಗೆ ಗಿಡ ಹಿಂಡಿ, ಗೊಬ್ಬರ ಮುಂತಾದ್ದಕ್ಕೆ ಉಪಯೋಗವಾಗುವುದರಿಂದ ಅದನ್ನು ಬೆಳೆಸುವ ಯೋಜನೆ ಸಹ ಇದೆ. ಗ್ರಾಮಗಳಿಗೆ ಹೋಗುವ ಅಪ್ರೋಚ್ ರಸ್ತೆಯಲ್ಲಿ ಮರ ನೆಡಬೇಕೆಂದಿದೆ, ಅವನ್ನು ಜಮೀನುದಾರರೇ ನಡಬೇಕು, ಆದರೆ ಅವರು ಅವನ್ನು ಕಡಿಯಲು ಅಧಿಕಾರವಿಲ್ಲ.

ಇನ್ನು ೧ ಲಕ್ಷ ೫೦ ಸಾವಿರ ಎಕರೆಯನ್ನು ರೆವೆನ್ಯೂ ಇಲಾಖೆಯಿಂದ ತೆಗೆದುಕೊಳ್ಳಲಾಗಿದೆ ಎಂದು ಸೋಮಶೇಖರಪ್ಪನವರು ಟೀಕೆಮಾಡಿದರು. ಅದನ್ನು ತೆಗೆದುಕೊಳ್ಳಬಾರದು ಎಂದು ತಿಳಿಸಿದ್ದಾರೆ. ಆದಷ್ಟು ತೀವ್ರವಾಗಿ ಸೆಟ್ಲ್‌ಮೆಂಟ್ ಆಫೀಸರನ್ನು ನೇಮಕಮಾಡುವ ಜವಾಬ್ದಾರಿಯನ್ನು ಬಹಳ ಸಂತೋಷದಿಂದ ಸರಕಾರ ಒಪ್ಪಿಕೊಳ್ಳುವುದು. ಅದನ್ನು ಮಾಡುವ ಉದ್ದೇಶ ಸರಕಾರಕ್ಕಿದೆ. ಭದ್ರಾವತಿ ಕಾರ್ಖಾನೆಯಲ್ಲಿ ದುರ್ವ್ಯಯವಾಗಿದೆ ಎಂದು ಹೇಳಿದ್ದಾರೆ. ಕಂಟ್ರಾಕ್ಟರು ಮತ್ತು ಅರಣ್ಯ ಇಲಾಖೆ ಅಧಿಕಾರಿಗಳು ಸೇರಿಕೊಂಡು ಮರಗಳು, ಇದ್ದಿಲುಮೂಟೆ, ಬೊಂಬು ಮುಂತಾದವನ್ನು ಅರಣ್ಯದಿಂದ ಸಾಗಿಸಿ ನಷ್ಟಮಾಡಿದ್ದಾರೆ ಎಂದು ಆಪಾದಿಸಿದ್ದಾರೆ, ಇದು ಬಹಳ ಗಹನವಾದ ವಿಷಯ. ಇದರ ಬಗ್ಗೆ ಒಂದು ತನಿಖೆ ನಡೆಸುತ್ತೇನೆ. ಸಂದರ್ಭ ಬಂದಾಗ ಈ ಸಭೆಗೆ ಆ ವಿಚಾರದಲ್ಲಿ ಮಾಹಿತಿ ಕೊಡುತ್ತೇನೆ. ಅಲ್ಲದೆ ತೀವ್ರವಾಗಿ ಈ ವಿಚಾರಕ್ಕೆ ಗಮನ ಕೊಡುತ್ತೇನೆ ಎಂದು ಹೇಳುತ್ತೇನೆ. ಇಂದು ಕಾಡಿನಲ್ಲಿ ಬೀಟೆ ಮರ ಮತ್ತು ಗಂಧದ ಮರ ಸ್ಮಗಲ್ ಆಗುತ್ತಿದೆ, ಕಾರುಗಳಲ್ಲಿ ಅವನ್ನು ಸಾಗಿಸುತ್ತಿದ್ದಾರೆ ಎಂದು ಮಾನ್ಯ ಸದಸ್ಯರು ಹೇಳಿದರು. ಪತ್ರಿಕೆಯಲ್ಲಿ ಕೂಡ ಅದು ಬಂದಿದೆ, ಎಷ್ಟೋ ಕೇಸುಗಳಾಗಿವೆ, ಅಂಕಿ ಅಂಶ ಇದೆ, ಅದರ ವಿಚಾರವನ್ನು ಪೋಲೀಸು ಇಲಾಖೆಗೆ ವಹಿಸಿದಾಗ ತನಿಖೆ ಮಾಡಬೇಕು, ಮಹಜರು ಮಾಡಬೇಕು, ಸಾಕ್ಷಿಗಳನ್ನು ಕೋರ್ಟಿಗೆ ಹಾಜರುಪಡಿಸಬೇಕು. ಕೋರ್ಟಿನಲ್ಲಿ ರುಜುವಾತು ಆಗದಿದ್ದರೆ ಕೇಸು ವಜಾ ಆಗುವುದು. ಕೆಲವು ಸಂದರ್ಭಗಳಲ್ಲಿ ತಪ್ಪಿತಸ್ಥರಿಗೆ ಶಿಕ್ಷೆಯಾಗುವುದು. ಗಂಧದ ಮರದ ಬಗ್ಗೆ ಸರಕಾರ ತೀವ್ರವಾಗಿ ಯೋಚನೆಮಾಡಿದೆ, ಸ್ಪೈಕ್ ರೋಗದಿಂದ ಅದು ನಷ್ಟವಾಗುತ್ತಿದೆ, ಬೆಲೆ ಬಾಳುವ ಆ ಮರವನ್ನು ರಕ್ಷಣೆ ಮಾಡಬೇಕು ಎಂದು ಇಲಾಖೆ ಯೋಚನೆ ಮಾಡುತ್ತಿದೆ.

ಇಂದು ಫೈಲುಗಳ ಇತ್ಯರ್ಥವಾಗುವುದರಲ್ಲಿ ಕಾಲವಿಳಂಬವಾಗುತ್ತಿದೆ ಎಂದು ಸದಸ್ಯರು ಆಪಾದಿಸಿದ್ದಾರೆ. ಅರ್ಜಿ ಬಂದರೆ ಎಷ್ಟು ಬೇಗ ವಿಲೇ ಮಾಡಲು ಸಾಧ್ಯವೋ ಅಷ್ಟು ಬೇಗ ಮಾಡಲು ಪ್ರಯತ್ನ

ಮಾಡುತ್ತಿದ್ದೇವೆ, ಸೆಕ್ರೆಟೇರಿಯಟ್ ಲೆವಲ್‌ನಲ್ಲಿ ಇಲಾಖೆ ಲೆವಲ್‌ನಲ್ಲಿ ಬೇಗನೇ ಇತ್ಯರ್ಥ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ. ಎಷ್ಟು ಅರ್ಜಿ ಬಂದಿವೆ, ಎಷ್ಟು ಪೆಂಡಿಂಗಿನಲ್ಲಿವೆ ಎಂದು ನೋಡಿ ಬೇಗನೆ ತೀರ್ಮಾನಮಾಡುವಂತೆ ಅಧಿಕಾರಿಗಳಿಗೆ ತಿಳಿಸಲಾಗಿದೆ. ಎಲ್ಲಿ ಅನಾವಶ್ಯಕವಾಗಿ ಕಾಲಹರಣ ವಾಗುವುದೋ ಅದನ್ನರಿತು ಕ್ರಮಪಡಿಸಬೇಕು, ಎಂದು ಅದಕ್ಕೆ ಚೀಫ್ ಕನ್‌ಸರ್ವೇಟರುಗಳ ಮೀಟಿಂಗನ್ನು ತಿಂಗಳಿಗೊಂದು ಸಲ ಕರೆಯಬೇಕು, ಕನ್‌ಸರ್ವೇಟರು ಡಿ ಎಫ್ ಓ ಗಳ ಮೀಟಿಂಗನು ತಿಂಗಳಿಗೊಂದು ಸಲ ಕರೆದು ಬೇಕಾದ ವಿಚಾರಗಳ ಬಗ್ಗೆ ಚರ್ಚೆಮಾಡಬೇಕು, ಹಾಗೆಯೇ ರೇಂಜ್ ಆಫೀಸರುಗಳ ಮೀಟಿಂಗ್ ಕರೆದು ಚರ್ಚೆಮಾಡಿ ತೀವ್ರವಾಗಿ ಅರ್ಜಿ ಮುಂತಾದ್ದನ್ನು ಇತ್ಯರ್ಥ ಮಾಡಬೇಕು ಎಂದು ಏರ್ಪಾಡು ಮಾಡಿದ್ದೇವೆ,

ಇಂಟರ್-ಸ್ಟೇಟ್ ಸೀನಿಯಾರಿಟಿ ಪಟ್ಟಿ ಬಗ್ಗೆ ನನಗೆ ಹೇಳುವಂಥದ್ದೇನೂ ಇಲ್ಲ. ಹೈಕೋರ್ಟಿನಲ್ಲಿ ರಿಟ್ ಅರ್ಜಿ ಇತ್ಯರ್ಥವಾಗದೆ ಇರುವುದರಿಂದ ಅದರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ.

೮-೩೦ P.M.

ಕೆಲವು ಸಂದರ್ಭಗಳಲ್ಲಿ ಫೈಲು ಡಿಸ್ಪೋಸ್ ಆಗುವುದಿಲ್ಲ, ಪೆಂಡಿಂಗ್ ಇರುತ್ತದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಕೆಲವು ಕಠಿಣ ಸಮಸ್ಯೆಗಳಿದ್ದಾಗ ಸ್ವಲ್ಪಮಟ್ಟಿಗೆ ನಿಧಾನವಾಗುತ್ತದೆ. ಅನಾವಶ್ಯಕವಾಗಿ ನಿಧಾನ ಮಾಡುವಂಥ ಪರಿಸ್ಥಿತಿ ಬರುವುದಿಲ್ಲ.

೧ನೇ ಜೂನ್ ೧೯೬೯ರಿಂದೀಚೆಗೆ ಫಾರೆಸ್ಟ್ ರೂಲ್ಸ್ ಬಂದಿದೆ. ಯೂನಿಫಾರಂ ಫಾರೆಸ್ಟ್ ರೂಲ್ಸ್ ಪಬ್ಲಿಷ್ ಮಾಡಿದ್ದೇವೆ. ಅದು ಜಾರಿಗೆ ಬಂದ ಮೇಲೆ ಕೆಲವು ಕಡೆಗಳಲ್ಲಿ ಸ್ವಲ್ಪಮಟ್ಟಿಗೆ ಕಠಿಣವಾದ ಪರಿಸ್ಥಿತಿಯುಂಟಾಗಿದೆ ಎನ್ನುವುದನ್ನು ಮಾನ್ಯ ಸದಸ್ಯರು ನನ್ನ ಗಮನಕ್ಕೆ ಈಗಾಗಲೇ ತಂದಿದ್ದಾರೆ. ಮನೆಗಳಿಗೋಸ್ಕರ, ಸ್ವಂತ ಉಪಯೋಗಕ್ಕೆ ಅರಣ್ಯದಿಂದ ಸೌದೆ ಮುಂತಾದುವನ್ನು ತೆಗೆದುಕೊಳ್ಳುವುದರಲ್ಲಿ ಹಿಂದಿನಿಂದ ಏನು ರೈಟ್ಸ್ ಮತ್ತು ಪ್ರಿವಿಲೆಜಸ್ ಇತ್ತು ಅದರ ಬಗ್ಗೆ ಸರಿಯಾದ ವ್ಯವಸ್ಥೆಮಾಡಿಕೊಂಡು ಅವರಿಗೆ ಅನ್ವಯಿಸತಕ್ಕ ಹಾಗೆ ಕೆಲವು ರಿಯಾಯಿತಿಗಳನ್ನು ಕೊಡಬೇಕು ಎಂದು ಇದ್ದೇವೆ. ತೀರ್ಥಹಳ್ಳಿ, ಶಿವಮೊಗ್ಗ ಭಾಗಗಳಿಗೆ ಪ್ರವಾಸ ಹೋದ ಕಾಲದಲ್ಲಿ ಈ ವಿಚಾರವನ್ನು ನನ್ನ ಗಮನಕ್ಕೆ ತಂದಿದ್ದಾರೆ. ಮ್ಯಾನ್ಯುಯಲ್‌ನಲ್ಲಿ ಏನು ಪ್ರಿವಿಲೆಜಸ್ ಇವೆ ಅದನ್ನು ಮುಂದುವರಿಸಿ ಕೊಡುತ್ತೇವೆ. ಮಲೆನಾಡಿನ ರೈತರಿಗೆ ಅನಾವಶ್ಯಕವಾದ ತೊಂದರೆ ಕೊಡಬೇಕೆಂಬ ಉದ್ದೇಶವಿಲ್ಲ. ಕೆಲವರು ಪರ್ಮಿಟ್‌ಗಳನ್ನು ಸಾ ಮಿಲ್‌ಗಳಿಗೆ ಮಾರಿ ದುರ್ವ್ಯವಹಾರ ಮಾಡತಕ್ಕ ಸನ್ನಿವೇಶ ಸರ್ಕಾರದ ಗಮನಕ್ಕೆ ಬಂದಾಗ ಅದನ್ನು ತಡೆಗಟ್ಟಬೇಕೆಂಬ ದೃಷ್ಟಿಯಿಂದ ಕೆಲವು ನಿರ್ಬಂಧಗಳನ್ನು ಮಾಡಲಾಯಿತೇ ಹೊರತು ಬೇರೆ ಯಾವ ಉದ್ದೇಶವೂ ಇಲ್ಲ. ಮಲೆನಾಡಿನ ರೈತರಿಂದ ಕಾಡಿನ ರಕ್ಷಣೆಯಾಗುತ್ತಿದೆ ಎಂದು ನಾನು ತಿಳಿದು ಕೊಂಡಿದ್ದೇನೆ. ನಮಗೆ ಇರತಕ್ಕ ಸಿಬ್ಬಂದಿ ಕಾಡನ್ನು ರಕ್ಷಣೆ ಮಾಡುತ್ತಿದ್ದರೂ ಕೂಡ, ರಾತ್ರಿ ಕಾಲದಲ್ಲಿ ರೈತರು ಕಾಡನ್ನು ರಕ್ಷಣೆ ಮಾಡುತ್ತಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಪೋಲೀಸ್ ಮತ್ತು ರೆವೆನ್ಯೂ ಇಲಾಖೆಯವರ ಸಹಕಾರ ಹಾಗೂ ಗ್ರಾಮಸ್ಥರ ಸಹಕಾರ ನಮಗೆ ಬೇಕು. ದೊಡ್ಡದಾಗಿರುವ ಕಾಡಿನಲ್ಲಿ ಯಾವ ಕಡೆಯಿಂದ ಯಾವ ಕಡೆಗೆ ದುರ್ವ್ಯವಹಾರಗಳು ನಡೆಯುತ್ತವೆಯೋ ಅವನ್ನು ಕಂಡು ಹಿಡಿದು ಇನ್‌ವೆಸ್ಟಿಗೇಷನ್‌ನಲ್ಲಿ ಸಹಾಯ ಮಾಡಿದ್ದಾರೆ. ರೈತರಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ತೀವ್ರವಾದ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರ ಹಿಂದೆ ಹೋಗುವುದಿಲ್ಲ ಎನ್ನುವುದನ್ನು ನಾನು ಈ ಮಾನ್ಯ ಸಭೆಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಈ ವರ್ಷ ಕೆಲವು ಡೆವಲಪ್‌ಮೆಂಟಲ್ ಆಕ್ಟಿವಿಟೀಸ್ ಮಾಡಿದ್ದೇವೆ ಎನ್ನುವುದರ ಬಗ್ಗೆ ವಿವರ ಗಳನ್ನು ಈಗಾಗಲೇ ಕೊಟ್ಟಿರುವ ಪುಸ್ತಕದಲ್ಲಿ ತಿಳಿಸಲಾಗಿದೆ. ೧೯೭೦-೭೧ನೇ ಸಾಲಿನಲ್ಲಿ, ಮಾನ್ಯ ಸದಸ್ಯರು ಏನು ವಿಷಯಗಳನ್ನು ಹೇಳಿದ್ದಾರೆ ಅವುಗಳ ಬಗ್ಗೆ ತೀವ್ರತೆಯಿಂದ ಯೋಚನೆಮಾಡಿ ಎಷ್ಟು ವೇಗವಾಗಿ ಕಾರ್ಯ ಮಾಡಬಹುದೋ ಮತ್ತು ಅನಾವಶ್ಯಕವಾಗಿ ಕಾಲ ಕಳೆಯುವುದನ್ನು ತಪ್ಪಿಸಿ, ವರ್ಕಿಂಗ್ ಪ್ಲಾನ್ ಮಾಡಿಕೊಂಡು ಕೆಲಸ ಮಾಡುತ್ತೇವೆ. ದಟ್ಟವಾದ ಕಾಡಿನಲ್ಲಿ ಕೆಲವು ಭಾಗಗಳಲ್ಲಿ ಕೆಲವು ಮರಗಳು ನೂರಾರು ವರ್ಷಗಳಿಂದ ಇವೆ. ಆ ಭಾಗದಲ್ಲಿ ಸಣ್ಣ ಮರಗಳು ಅಭಿವೃದ್ಧಿಯಾಗ ಬೇಕಾಗಿದ್ದರೆ, ಅಂಥ ದೊಡ್ಡ ಮರಗಳನ್ನು ಕಡಿದರೆ, ಸಣ್ಣ ಮರಗಳು ಗಾತ್ರವಾಗಿ ಬೆಳೆಯುವುದು ಮಾತ್ರವಲ್ಲ, ಆದರಿಂದ ಹೆಚ್ಚಿನ ಪ್ರಯೋಜನ ಸರ್ಕಾರಕ್ಕೆ ಆಗುತ್ತದೆ. ಮುಂಡಗೋಡು ಮುಂತಾದ ಕೆಲವು ಕಡೆಗಳಲ್ಲಿ ಸಿಲೋನ್ ರೀಪ್ಯಾಟ್ರಿಯಾಟ್ಸ್‌ಗಾಗಿ ಕೆಲವು ಪ್ರಾಜೆಕ್ಟ್‌ಗಳನ್ನು ಮಾಡಲು ಜಮೀನನ್ನು ಕೊಡಲಾಗಿದೆ. ಅದೇ ರೀತಿಯಲ್ಲಿ ವಿದ್ಯಾವಂತ ನಿರುದ್ಯೋಗಿಗಳಿಗೋಸ್ಕರ ಒಂದೊಂದು ಡಿವಿಜನ್‌ನಲ್ಲಿ

(ಶ್ರೀ ಆಲೂರು ಹನುಮಂತಪ್ಪ)

ಒಂದೊಂದು ಕ್ಷೇತ್ರವನ್ನು ವ್ಯವಸಾಯಕ್ಕೆ ತೆಗೆದುಕೊಳ್ಳಬೇಕೆಂದು ಅದಕ್ಕೆ ಬೇಕಾದ ಪ್ರಪೋಸಲ್ಸ್ ತಯಾರಿಸಿ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಈಗಾಗಲೇ ಒಂದು ಪ್ರಾರಂಭ ಮಾಡಿದ್ದೇವೆ. ಅದೇ ರೀತಿಯಲ್ಲಿ ಎಲ್ಲ ಡಿವಿಜನ್‌ಗಳಲ್ಲಿ, ವಿದ್ಯಾವಂತ ನಿರುದ್ಯೋಗಿ ಯುವಕರಿಗೆ ಪ್ರೋತ್ಸಾಹ ಕೊಡಬೇಕು ಎನ್ನುವ ದೃಷ್ಟಿಯಿಂದ ಜಮೀನನ್ನು ರಿಲೀಸ್ ಮಾಡಿ, ವ್ಯವಸಾಯ ಇಲಾಖೆಯಿಂದಲೂ ಸಹಕಾರ ಇಲಾಖೆಯಿಂದಲೂ ಹೆಚ್ಚಿನ ನೆರವನ್ನು ಕೊಟ್ಟು ಅವರಿಗೆ ಉತ್ತೇಜನ ಕೊಡಬೇಕು ಎನ್ನುವುದು ಸರ್ಕಾರದ ನೀತಿ ಮತ್ತು ಧೋರಣೆಯಾಗಿದೆ.

ಅರಣ್ಯ ಜಮೀನು ಕೊಡಬೇಕು ಎಂದು ನನಗೆ ಷೆಡ್ಯೂಲ್ ಕ್ಯಾಸ್ಟ್‌ನವರಿಂದ, ಪೊಲಿಟಿಕಲ್ ಸಫರರ್ಸ್‌ನಿಂದ, ಮಿಲಿಟರಿಯವರಿಂದ, ಕೋ ಆಪರೇಟಿವ್-ಫಾರ್ಮಿಂಗ್ ಮಾಡಲು ಜಮೀನು ಬೇಕೆಂದು ಬಂದಿರುವಂಥ ಅರ್ಜಿಗಳು ಸಾವಿರಾರು ಇವೆ ಎಂದು ಕಾಣಿಸುತ್ತದೆ. ಸಾಧ್ಯವಾದಷ್ಟು ಬಡವರ ಬಗ್ಗೆ ಅನುಕಂಪ ತೋರಿಸಿ, ಎಲ್ಲೆಲ್ಲಿ ವ್ಯವಸಾಯಕ್ಕೆ ಯೋಗ್ಯವಾದ ಜಮೀನುಗಳಿವೆ ಅದನ್ನು ಬಿಟ್ಟು ಕೊಡತಕ್ಕ ವ್ಯವಸ್ಥೆಯನ್ನು ಹಿಂದಿನಿಂದಲೂ ಮಾಡಿಕೊಂಡು ಬರುತ್ತಿದ್ದೇವೆ. ಆ ಪ್ರಕಾರ ೧೯೬೪ನೇ ಸಾಲಿನಲ್ಲಿ ೧,೨೪,೦೦೦ ಎಕರೆ ಜಮೀನನ್ನು ಅರಣ್ಯ ಇಲಾಖೆಯಿಂದ ರೆವೆನ್ಯೂ ಇಲಾಖೆಗೆ ವರ್ಗ ಮಾಡಲಾಗಿದೆ. ೮ ಲಕ್ಷ ಎಕರೆಯಷ್ಟು ಜಮೀನು ರೆವೆನ್ಯೂ ಇಲಾಖೆಗೆ ಬರತಕ್ಕದ್ದು ಇದೆ ಎಂದು ಸರ್ಕಾರದ ಹುಕುಂ ಕೂಡ ಆಗಿದೆ. ಈ ಬಗ್ಗೆ ಸೆಟಲ್‌ಮೆಂಟ್ ಆಫೀಸರ್ಸ್ ಮತ್ತು ಸಿಬ್ಬಂದಿ ನೇಮಕವಾಗದೆ ಎಷ್ಟು ಜಮೀನಿದೆ, ಎಷ್ಟು ಜಮೀನನ್ನು ಯಾರಿಗೆ ಕೊಡಬೇಕು ಎಂಬುದು ತೀರ್ಮಾನವಾಗದೆ ಅರ್ಜಿದಾರರಿಗೆ ಜಮೀನು ಮಂಜೂರಾಗಿಲ್ಲ, ಸರ್ವೆ ಮತ್ತು ಕನ್‌ಸಾಲಿಡೇಷನ್ ಕೆಲಸ ನಡೆದಿಲ್ಲ. ಸರ್ವೆ ಕೆಲಸ ನಡೆದು ಡೀ ಮಾರ್ಕೇಷನ್ ಆಗುವವರೆಗೂ ಜಮೀನು ಅವರ ಕೈ ಸೇರುವುದಿಲ್ಲ. ಆದಷ್ಟು ತೀವ್ರತೆಯಿಂದ ಮತ್ತು ಯಾವ ಘನ ಉದ್ದೇಶದಿಂದ ಸರ್ಕಾರ ಒಂದು ಹುಕುಂ ಮಾಡಿತೋ ಅದನ್ನು ಕಾರ್ಯಗತ ಮಾಡಿ ಜಮೀನಿಲ್ಲದೆ ಇರತಕ್ಕ ನಿರುದ್ಯೋಗಿಗಳಿಗೆ ಸಾಧ್ಯವಾದ ಮಟ್ಟಿಗೆ ಜಮೀನನ್ನು ಕೊಡಲು ರೆವೆನ್ಯೂ ಇಲಾಖೆ ಈಗಾಗಲೇ ಎಲ್ಲ ಪ್ರಯತ್ನಗಳನ್ನೂ ಮಾಡುತ್ತಿದೆ ಎಂದು ಹೇಳುತ್ತೇನೆ.

ಎನ್‌ಕ್ರೋಚ್‌ಮೆಂಟ್ ನಾನಾ ಕಡೆಗಳಲ್ಲಿ ನಡೆಯುತ್ತಿದೆ. ಯಾರು ಸ್ವಲ್ಪಮಟ್ಟಿಗೆ ಅನುಕೂಲಸ್ಥರೋ ಅವರೇ ಎನ್‌ಕ್ರೋಚ್ ಮಾಡುತ್ತಿದ್ದಾರೆ. ಅದರ ಬಗ್ಗೆ ಈಗಾಗಲೇ ಸರ್ಕಾರ ಕ್ರಮ ತೆಗೆದುಕೊಳ್ಳುತ್ತಿದೆ. ಮುಂದೆ ಸಾಧ್ಯವಾದಷ್ಟುಮಟ್ಟಿಗೆ ಎನ್‌ಕ್ರೋಚ್‌ಮೆಂಟಿಗೆ ಅವಕಾಶವಿಲ್ಲದ ರೀತಿಯಲ್ಲಿ ನೋಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

೧೯೬೯-೭೦ನೇ ಇಸವಿಯಲ್ಲಿ ಏನು ಅಂದಾಜು ಮಾಡಿದ್ದೆವೋ, ಅದಕ್ಕಿಂತ ಎರಡೂವರೆ ಕೋಟಿ ರೂಪಾಯಿ ಹೆಚ್ಚಿಗೆ ಅರಣ್ಯ ಇಲಾಖೆಯಿಂದ ಒದಗಿಸಬೇಕೆಂದು ಸಂಪನ್ಮೂಲ ಸಮಿತಿಯವರು ಹೇಳಿದ ಮೇಲೆ, ಆ ವರ್ಷದಲ್ಲಿನ ಆದಾಯ ೧೪ ಕೋಟಿ ರೂಪಾಯಿಗಳಿಗೆ ಬಂದಿದೆ. ಸಾಧ್ಯವಾದಷ್ಟು ಇರತಕ್ಕ ಮರಗಳನ್ನು ಕಡಿದು ಸಂಪನ್ಮೂಲಗಳನ್ನು ಹೆಚ್ಚು ಮಾಡುವುದಲ್ಲ. ಸಾಧ್ಯವಾದ ಮಟ್ಟಿಗೂ ಏನು ಲೋಪದೋಷಗಳಿವೆ ಅವನ್ನು ಕಂಡು ಹಿಡಿದು, ಹೆಚ್ಚು ಹಣ ಬರತಕ್ಕ ವ್ಯವಸ್ಥೆಯನ್ನು ಮಾಡಲಾಗಿದೆ. ಗಂಧದ ಮರದಿಂದ ಹೆಚ್ಚು ಹಣ ಬರುತ್ತದೆ. ಎಷ್ಟು ಮೆಚೂರ್ ಆದ ಗಂಧದ ಮರಗಳಿವೆ, ಅದರಿಂದ ಎಣ್ಣೆಯನ್ನು ತೆಗೆದು ಸೋಪ್ ಫ್ಯಾಕ್ಟರಿಗೆ ಕೊಡತಕ್ಕ ವ್ಯವಸ್ಥೆ ಈಗಾಗಲೇ ನಡೆಯುತ್ತಿದೆ. ಅದರಿಂದ ಹೆಚ್ಚು ಹಣ ಬರುತ್ತದೆ. ಅದೇ ರೀತಿಯಲ್ಲಿ ಟಿಂಬರ್ ಹರಾಜು ಮಾರಾಟದಲ್ಲಿ ಹೆಚ್ಚು ವರಮಾನ ಬಂದಿದೆ. ಹೊರ ರಾಷ್ಟ್ರಗಳಿಗೆ ಮರವನ್ನು ಕಳುಹಿಸಿಕೊಡತಕ್ಕ ವ್ಯವಸ್ಥೆಯನ್ನು ಕೂಡ ಸಾಧ್ಯವಾದ ಮಟ್ಟಿಗೆ ಮಾಡುತ್ತಿದ್ದೇವೆ. ಕೆಲವು ಜಾತಿಯ ಮರಗಳನ್ನು ಅರಣ್ಯದಲ್ಲಿ ಬೆಳೆಸತಕ್ಕ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಒಂದು ಲಕ್ಷ ಎಕರೆ ಅರಣ್ಯ ಭೂಮಿಯನ್ನು ವ್ಯವಸಾಯಕ್ಕೆ ಕೊಡಬೇಕು ಎಂದು ತೀರ್ಮಾನಮಾಡಿ ಮೊದಲನೆ ಹಂತವಾಗಿ ಈ ವರ್ಷ ೧೦ ಸಾವಿರ ಎಕರೆಯನ್ನು ಬಿಡುಗಡೆ ಮಾಡಲಾಗಿದೆ. ಇದರಲ್ಲಿ ಏಳು ಸಾವಿರ ಎಕರೆಯನ್ನು ಈಗಾಗಲೇ ಮಾರಾಟ ಮಾಡಲಾಗಿದೆ. ಅದಕ್ಕಾಗಿ ಮಾಡಿರುವ ಹೈ ಪವರ್ ಕಮಿಟಿಯಲ್ಲಿ ಜಿಲ್ಲಾಧಿಕಾರಿಗಳು ಇದ್ದು ಅವರ ಜೊತೆಗೆ ಅರಣ್ಯ ಇಲಾಖೆಯಿಂದ ಕನ್‌ಸರ್ವೇಟರು ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರಿರುತ್ತಾರೆ. ಅವರು ಆದಷ್ಟು ತೀವ್ರತೆಯಿಂದ ಕೆಲಸ ಮಾಡುತ್ತಿದ್ದಾರೆ.

ಎಲ್ಲ ಜಿಲ್ಲೆಯ ಸದಸ್ಯರನ್ನೂ ಬೇರೆ ಬೇರೆ ದಿವಸದಲ್ಲಿ ಕರೆದು, ಅವರ ಜೊತೆಯಲ್ಲಿ ಚರ್ಚೆಮಾಡಿ ಅವರು ಕೊಡತಕ್ಕ ಉಪಯುಕ್ತವಾದ ಸಲಹೆಗಳನ್ನು, ಅರಣ್ಯ ಇಲಾಖೆಯ ಪ್ರಗತಿಗೋಸ್ಕರ ಮತ್ತು

ರಾಜ್ಯದ ಪ್ರಗತಿಗೋಸ್ಕರ, ರಾಷ್ಟ್ರದ ಪ್ರಗತಿಗೋಸ್ಕರ ಅನುಷ್ಠಾನಕ್ಕೆ ತರುವುದಕ್ಕೆ ಶ್ರಮಿಸುತ್ತೇನೆಂದು ಹೇಳುತ್ತೇನೆ.

ಫಾರೆಸ್ಟ್ರಿ ಫಾರಂ ಮಾಡಲು ಪಂಚಾಯಿತಿಯು ಕೆಲವು ಜಮೀನುಗಳನ್ನು ತೆಗೆದುಕೊಳ್ಳಬೇಕೆಂಬ ಉದ್ದೇಶವಿದೆ. ಅಲ್ಲಿ ಮರಗಳನ್ನು ಬೆಳೆಸಿ ಅವುಗಳ ರಕ್ಷಣೆಯನ್ನು ಮಾಡಬೇಕಾಗಿದೆ. ಇಡೀ ರಾಜ್ಯದಲ್ಲಿ ಇದಕ್ಕಾಗಿ ಒಂದು ಸೆಮಿನಾರ್ ಮಾಡಬೇಕಾಗಿ ಬಂತು. ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ, ರಾಜ್ಯ ಮಟ್ಟದಲ್ಲಿ ಒಂದು ಸೆಮಿನಾರ್ ಮಾಡಲಾಯಿತು. ಮಾನ್ಯ ಮುಖ್ಯ ಮಂತ್ರಿಗಳು ಅಧ್ಯಕ್ಷತೆಯನ್ನು ವಹಿಸಿದ್ದರು. ಈಗಿನ ಕೇಂದ್ರದ ವ್ಯವಸಾಯ ಮಂತ್ರಿಗಳು ಅದನ್ನು ಉದ್ಘಾಟನೆ ಮಾಡಿದರು. ಅದರ ವಿವರಗಳು ನನ್ನ ಹತ್ತಿರ ಇವೆ. ಒಂದಿರತಕ್ಕ ರೆಸಲ್ಯೂಷನ್‌ಗಳಲ್ಲಿ ಒಂದೊಂದನ್ನೂ ಅನುಷ್ಠಾನಕ್ಕೆ ತರುವುದಕ್ಕೆ ಪ್ರಯತ್ನಪಡುತ್ತೇನೆ.

ಅದೇ ರೀತಿ ಜನತೆಯಲ್ಲಿ ಉತ್ಸಾಹ ಬರಬೇಕು. ಒಂದು ಮಗು ಹುಟ್ಟಿದಾಗ ಎರಡು ಸಸಿ ನೆಡಬೇಕು ಎನ್ನುವ ಉತ್ಸಾಹ ಜನರಲ್ಲಿ ಬರಬೇಕು. ಅಂದರೆ ಆದಷ್ಟು ಹೆಚ್ಚು ಸಸಿಗಳನ್ನು ನೆಡಬೇಕು ಎಂದು ಹೇಳುತ್ತೇನೆ. ಕುಟುಂಬ ಯೋಜನೆಯಲ್ಲಿ ಮಕ್ಕಳು ಜಾಸ್ತಿ ಆಗಬಾರದು ಎಂದು ಹೇಳಿದರೆ, ಅರಣ್ಯ ಬೆಳೆಸಲು ಹೆಚ್ಚು ಮರಗಳನ್ನು ಬೆಳೆಸಬೇಕು ಹೆಚ್ಚು ಸಸಿಗಳನ್ನು ನೆಡಬೇಕು ಎಂದು ನಾನು ಹೇಳುತ್ತೇನೆ. ಈ ರೀತಿ ಸಾರ್ವಜನಿಕರೂ ಸಹ ಪ್ರಯತ್ನಿಸಿ ಸಹಕರಿಸಿದರೆ ಇದು ಯಶಸ್ವಿಯಾಗುತ್ತದೆ. ಅಲ್ಲದೆ ಇರತಕ್ಕಂಥ ಮರಗಳನ್ನು ರಕ್ಷಣೆ ಮಾಡುವುದು ಕೂಡ ಅಗತ್ಯ. ಮರಗಳನ್ನು ಬೆಳೆದರೆ ಗ್ರೀನ್ ರೆವಲ್ಯೂಷನ್ ಅಂದರೆ ಹಸಿರು ಕ್ರಾಂತಿ ಆಗುತ್ತದೆ. ಶಾಸ್ತ್ರೀಯವಾಗಿ ಇದನ್ನು ಕಂಡು ಹಿಡಿದಿದ್ದಾರೆ. ರಸ್ತೆಗಳ ಅಕ್ಕಪಕ್ಕದಲ್ಲಿ ಗೋಮಾಳದಲ್ಲಿ ಮರಬೆಳೆಸುವಂಥಾದ್ದು ಶಾಸ್ತ್ರೀಯವಾಗಿದೆ. ಈ ಬಗ್ಗೆ ವಿವರ ಸಂಗ್ರಹಿಸಲು ಒಂದು ಪ್ರೋ-ಫಾರ್ಮಾವನ್ನು ಜಿಲ್ಲಾಧಿಕಾರಿಗಳಿಗೆ ಕಳಿಸಿದ್ದೇವೆ. ಎಲ್ಲಾ ಇಲಾಖೆಯ ಅಧಿಕಾರಿಗಳು ಇದನ್ನು ತೀವ್ರವಾಗಿ ಪರಿಶೀಲಿಸಬೇಕು. ಯಾಕಂದರೆ ಇದಕ್ಕಾಗಿ ಲಕ್ಷಾಂತರ ರೂಪಾಯಿ ಖರ್ಚು ಮಾಡಿದ್ದೇವೆ. ಅರಣ್ಯ ಇಲಾಖೆಯ ಸಿಬ್ಬಂದಿಯ ಸಹಕಾರದಿಂದ ಈ ಕಾರ್ಯ ಯಶಸ್ವಿಯಾಗಿ ಮಾಡಿದರೆ ವನ ಸಂಪತ್ತು ಹೆಚ್ಚು ಮಾಡಲು ಅನುಕೂಲವಾಗುತ್ತದೆ. ನಮ್ಮಲ್ಲಿ ಈಗ ಶೇಕಡ ೧೮ ಪರ್ಸೆಂಟ್ ಕಾಡು ಇದೆ. ಆದರೆ ಅಖಿಲ ಭಾರತ ಮಟ್ಟಕ್ಕೆ ಅಂದರೆ ೩೩ ಪರ್ಸೆಂಟಿಗೆ ನಾವು ಹೋಗಬೇಕು ಎಂಬುದರ ಕಡೆ ಗಮನ ಕೊಡಬೇಕಾಗಿದೆ. ಇದಕ್ಕಾಗಿ ಮಾನ್ಯ ಸದಸ್ಯರನ್ನೂ ಉಳಿದವರನ್ನೂ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಹಾಗೆ ಈ ಬೇಡಿಕೆಯನ್ನು ಸಂತೋಷದಿಂದ ಮಂಜೂರು ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

MR. DEPUTY SPEAKER : The question is ;

"That the respective sums not exceeding the amounts mentioned in the Demands Nos 20,22 38 and 51 be granted to the Government to defray the charges which will come in course of payment during the year for the period ending 31st March 1971."

The motion was adopted

As directed by the chair the motion for demands for grants adopted by the House are reproduced below.

DEMAND No 20—AGRICULTURE, HORTICULTURE AND FISHERIES.

31. Agriculture.

"That a sum not exceeding Rs. 11,19 54,000 be granted to the Government to defray the charges which will come in course of payment during the financial year for the period ending 31st day of March 1971, in respect of 'Agriculture,."

DEMAND No. 22—ANIMAL HUSBANDARY

33. Animal Husbandry.

"That a sum not exceeding Rs. 2,05,76,000 be granted to the Government to defray the charges which will come in course of payment during the financial year for the period ending 31st day of March 1971, in respect of 'Animal Husbandry'."

DEMAND No. 38—FOREST.

70. Forest

"That a sum not exceeding Rs.7,55,95,000 be granted to the Government to defray the charges which will come in course of payment during the financial year for the period ending 31st day of March 1971, in respect of "Forest'."

DEMAND No. 51—CAPITAL OUTLAY ON FORESTS.

119. Capital Outlay on Forests.

"That a sum not exceeding Rs.24,00,000 be granted to the Government to defray the charges which will come in course of payment during the financial year for the period ending 31st day of March 1971, in respect of Capital Outlay on Forests'."

MR. DEPUTY SPEAKER: The House will now adjorn and meet again to-morrow at 1 P.M.

The House adjourned at Forty-five Minutes past Eight of the Clock to meet again at One of the Clock on Wednesday the 11th March 1970.

WD 14650—GPB—520—25-7-70